ಬೆಲೆ: ಎರಡು ಆಣೆ

— ಶ್ರೀ. ಹುಕ್ಕೇರಿಕರರ ಷಷ್ಟ್ಯಬ್ದಪೂರ್ತಿ ಸಂಚಿಕೆ —

೨೪ ಪುಟಗಳು

ಕರ್ಮವೀರ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

)——ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ——(

Editor:
H. R. Purohit, M. A.

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೨೭—೧೦—೧೯೪೭ —(ಸಂಚಿಕೆ ೨೯)—

ಶ್ರೀ ರಾ. ಶ್ರೀ. ಹುಕ್ಕೇರಿಕರ
ಎಂ. ಎ., ಎಂ. ಎಲ್. ಎ.

(ಇವರ ಷಷ್ಟ್ಯಬ್ದ ಸಮಾರಂಭ ಇದೇ ೨೨ ಕ್ಕೆ ಧಾರವಾಡದಲ್ಲಿ ವಿಜೃಂಭಣೆಯಿಂದ ಸಾಂಗವಾಯಿತು.)



೧

ಅರಿವನಬಲ ತ್ರಾಣ,
ಕಲಿಕಾಲ ದ್ರೋಣ?
ಕನ್ನಡ ಹಗೆಗಳ ಕೆಡಹಿದ
ರಘುನಂದನ ಬಾಣ!

೨

ನಾಡಿನ ಬಿಡುಗಡೆಗಾಗಿಯೆ
ಹೋರಾಡಿದ ಜೀವ
ಅರುವತ್ತನು ಮೀರಿದರೂ
ತಳೆದಿದೆ ಹೊಸ ಕಾವ!

೩

'ಹುಕ್ಕೇರೀಕರ' ಶಬ್ದವ
ಕೇಳಿದ ಜನರೆಲ್ಲ
ಉಕ್ಕೇರುವುದುತ್ಸಾಹ ಜ-
ಳಕ್ಕನೆ ಜುಳ್ಳಲ್ಲ!

—ಬ. ಹೆ. ಶ್ರೀ.

ಈ ವಾರದ ಕತೆ



ಆಹಲಂನ ಪಾಕಸ್ತಾನದ ಕನಸು

ಶ್ರೀ ಮಧು ಜೋಶಿ, ಅನುವಾದಕರು

ಅಂದು ಸಂಜೆ, ಆಹ್‌ಲಂನು ಅಂಬರ ಕ್ರಿಸ್ಪ ಮನ್‌ನ ಅಟ್ಟ ಮೇಲಿರುವ ಚಹದ ಅಂಗಡಿಯಲ್ಲಿ ಹಾಲಗಲ್ಲಿನ ಟೇಬಲ್ಲುಗಳನ್ನು ವರಿಸುತ್ತ ಹಾಡುತಿದ್ದನು. ಆ ಹಾಡು ತನ್ನನ್ನು ಯಾವ ಮನಸ್ಥಿತಿಗೆ ಒಯ್ಯುವುದೆಂಬುದರ ಅರಿವಿಲ್ಲದೆ ಹಾಡುತ್ತಿದ್ದನು.

ತನ್ನ ಹೃದಯವು, ಪಂಜರದ ಸರಳುಗಳನ್ನು ಎರಡೂ ಪಕ್ಕಗಳಿಂದ ಬಡಿಯುತ್ತಿರುವ ಪಕ್ಷಿಯೋ ಏನೋ ಎಂಬಂತೆ ಹಾಡುತ್ತಿದ್ದ. ತನ್ನ ದೇಶವನ್ನೇ ಕುರಿತು ಹಾಡಿದ. ಒಂದು ಹಾಡಿನ ವೇಳೆ ಮತ್ತೊಂದು ಹಾಡು ಹೇಳುತ್ತ ಎಲ್ಲ ಹಾಡುಗಳ ತುಂಡುಗಳನ್ನು ಜೋಡಿಸುತ್ತಿದ್ದ. ಲಂಡನ್‌ದ ನೀಲ ಆಕಾಶವನ್ನು ನೋಡಿ, ಸಮುದ್ರಗಳನ್ನು, ಮನೆ ತೋಟಗಳನ್ನು, ಉದ್ದಕ್ಕೂ ಹರಡಿದ ಹೊಲಗಳನ್ನು ಬಣ್ಣಬಣ್ಣದ ಹೂವುಗಳನ್ನು, ಎಳೆಬಿಸಿಲನ್ನು ದೀಪಗಳಿಂದ ಶೋಭಿಸುವ ರಾತ್ರಿಯನ್ನು, ಸಾಯಂಕಾಲ ಪಟ್ಟಣದಲ್ಲಿಯ ಮಂದ ಉಷ್ಣತೆಯನ್ನು, ಯುದ್ಧಗಳನ್ನು, ತರತರದ ಪಕ್ವಾನ್ನಗಳನ್ನು ವರ್ಣಿಸುತ್ತಿದ್ದ. ತನ್ನ ದೇಶದ ಜನರು ಯಾವ ವಸ್ತುಗಳನ್ನು ಕುರಿತು ಕವನಗಳನ್ನು ಕಟ್ಟಿದರೋ ಅವೆಲ್ಲವನ್ನೂ ವರ್ಣಿಸಿದ— ಹಾಡಿದ.

ಆ ಚಹದ ಅಂಗಡಿ ಬಹಳ ಜನಪ್ರಿಯವಾಗಿತ್ತು. ಅದೆಂದೂ ಜನರನ್ನು ಕರೆಯುತ್ತಿದ್ದಿಲ್ಲ. ಬಾಗಿಲು ಯಾವಾಗಲೂ ಮುಚ್ಚಿದ್ದು. ಆಹ್‌ಲಂನು ಅದರ ಸುದ್ದಿಯನ್ನು ಆಕಸ್ಮಾತ್ ತಿರುಗಾಡಲು ಬರುವ ಕೆಲವು ಬಿಳಿಯರಿಗೆ ಪಸರಿಸುತ್ತಿದ್ದ. ಅಲ್ಲದೆ ಅವರು ಕೂಡ ಇವನ್ನು ಇನ್ನೂ ದೂರ ಹಬ್ಬಿಸುತ್ತಿದ್ದರು. ತಾವಷ್ಟೇ ಅವನ್ನು ಬಲ್ಲವರೆಂಬುದು ಅವರಿಗೆ ಆನಂದದಾಯಕವಾಗಿತ್ತು. ಇನ್ನೊಬ್ಬರಿಗೆ ಹೇಳಬೇಕಾದರೆ ಅವರು ಹೊಸ ಶೋಧ ಮಾಡಿದವರಂತೆ ಕೊಚ್ಚಿಕೊಳ್ಳುತ್ತಿದ್ದರು. ಅಂಗಡಿಯ ಮಾಲಕನಾದ ಹಿಂಗಪೂನಿಗೆ ಮಾನವ ಹೃದಯದ ದುಬಲೆಗಳು ಗೊತ್ತಿದ್ದರಿಂದ (ಸಾಧಾರಣವಾಗಿ ಎಲ್ಲ ಚಹದ ಅಂಗಡಿಯ ಮಾಲಕರಿಗೂ ಗೊತ್ತೇ ಇರುತ್ತದೆ) ಅವರಿಗೆ ಕರೆಯ ಹೋಗದೆ ಸೂಕ್ಷ್ಮ ಶಿಕ್ಷಣ ಕೊಡುತ್ತಿದ್ದನು.

ಒಮ್ಮೆ ಒಬ್ಬ ದಾರಿಹೋಕ ಅಂಬರ ಕ್ರಿಸ್ಸವರ್‌ನ ಅಂಗಡಿಯನ್ನು ಕುತೂಹಲದಿಂದ ಹೊಕ್ಕ. ಅಲ್ಲದೆ ಹಿಂಗಪೂನಖಾದ್ಯ ತಿಂದು, ಇನ್ನೊಮ್ಮೆ ಒಬ್ಬ ಗೆಳೆಯನ ಸಂಗಡ ಬಂದ ಈ ಸಾರೆ ಅದಾಗಿನ ಮನೆಯಕಿಂತ ಆಹಲಂನ್ನು ಹೆಚ್ಚಾಗಿ ಆಕರ್ಷಿಸಿದ. ಆಹ್‌ಲಂನ ತನ್ನ ಬಿಡುವಿನ ವೇಳೆಯಲ್ಲಿ ಎಲ್ಲಿಯೋ ಯಾರಿಗೂ ಕಾಣದ ಹಾಗೆ ಸಿತಾರನ್ನು ಹಿಡಿದುಕೊಂಡು, ತನ್ನ ಮನೆಯ ಚಿತ್ರವನ್ನು ಮನಸ್ಸಿನ ಮೇಲೆ ಮೂಡಿಸುತ್ತಿದ್ದ.

ಅವನೊಬ್ಬ ಸಂಪೂರ್ಣ ಸಮಾಜ ಬಾಹಿರ. ಅವನ ದೇಹ ವಿಚಿತ್ರ ದೇಶದಲ್ಲಿ, ಮನಸ್ಸು ತನ್ನೂರಿನ ವಿಸ್ತಾರವಾದ ಹೊಲಗಳಲ್ಲಿ. ಮತ್ತು ದೇವಾಲಯಗಳಲ್ಲಿ, ಪಶ್ಚಿಮದ ಗಡಿಬಿಡಿಯಿಂದಲೆ ಗಳಿಸಿದ ದೂರವಿದ್ದ, ಕಿರಿದಾದ ಬೀದಿಯಲ್ಲಿಯ ಒಂದು ಚಿಕ್ಕ ಕೋಣೆಯಲ್ಲಿ ಅವನು ತನ್ನ ಮನೆಯ ಪ್ರತಿಧ್ವನಿಯನ್ನು ಕೇಳುತ್ತಿದ್ದನು— ಏಕಾಂತದಲ್ಲಿ ತನ್ನ ಕನಸುಗಳನ್ನು ಕಟ್ಟುತ್ತಿದ್ದನು—

ಅವನೇನೂ ಅಷ್ಟು ಸುಂದರನಲ್ಲ. ಅವನ ದನಿಯನ್ನು ಅನುಸರಿಸಿ ಬಂದ ದಾರಿಹೋಕರು, ವಿಚಿತ್ರ ವೇಷದಲ್ಲಿಯ ಈ ಮೂರ್ತಿಯನ್ನು ಕಂಡ ಕೂಡಲೆ ನಿರಾಶರಾಗುತ್ತಿದ್ದರು. ಆದರೆ ಕೆಲವು ಸೂಕ್ಷ್ಮ ದೃಷ್ಟಿಯವರು, ಅವನ ಕಣ್ಣುಗಳು ಯಾವುದೋ ಒಂದು ಸುಂದರ ದೃಶ್ಯವನ್ನು ನೋಡುತ್ತಿರುವುದನ್ನು ಕಂಡು ಹಿಡಿಯುತ್ತಿದ್ದರು.

ಚಹದ ಅಂಗಡಿಯ ಎದುರಿಗಲ್ಲ ಕಾಂಗಲೀಯ ಒಂದು ಸಣ್ಣ ಪಖಾರವಿತ್ತು. ಅವನೂ ಒಬ್ಬ ದೇಶಭ್ರಷ್ಟ. ಆದರೆ ಅವನು ಕನಸುಗಳನ್ನು ಕಂಡರೆ ಎಂದೂ ಅವನ್ನೇ ಹಾಡುತ್ತ ಅಳುತ್ತಿರಲಿಲ್ಲ. ಅವನಿಗೆ ಸಂಗೀತದ ಕೊಡುಗೆ ಇರಲಿಲ್ಲ— ಆದರೆ ಮಾನವು ಅವನ ಸೊತ್ತಾಗಿತ್ತು. ಆಹ್‌ಲಂನು ಕೆಲಸ ಮುಗಿಸಿಕೊಂಡು ದಿನಾಲು ರಾತ್ರಿ ಆ ವೃದ್ಧನ ಹತ್ತಿರ ಬಂದು, ಅವನ ಎದುರು ತನ್ನ ದೇಶದ ದೃಷ್ಟಿ ಸೌಂದರ್ಯವನ್ನು ವರ್ಣಿಸಿ, ಮಸುಕಾದ ಗೋಡೆಗಳನ್ನೂ, ಮುಸುಕಿದ ಮಳೆಯನ್ನು ನೋಡಿ ನಿಟ್ಟುಸಿರು ಬಿಡುತ್ತಿದ್ದನು.

ಬಿಡಿಸು ಅಂಗಡಿಯಲ್ಲಿರುವಾಗ ಗಿರಾಕಿಗಳಿಗೆ ಹೇಳಬೇಕಾದರೆ ಲೀಯು "ಓ ಅವನೊಬ್ಬ ತರುಣ ಮುಸಲ್ಮಾನ ತನ್ನ ದೇಶವನ್ನು ಕುರಿತು ಹಾಡು ಹೇಳುತ್ತಿರುತ್ತಾನೆ. ಅವನಿಲ್ಲಿ ಸುಖಿಯಿಲ್ಲ. ಸ್ವದೇಶಕ್ಕೆ ಹೋಗಲು ಹಾತೊರೆಯುತ್ತಾನೆ. ಅದು ಅಸಾಧ್ಯ ಮಾತು. ಸ್ವದೇಶವನ್ನು ನೆನೆಯುತ್ತ ಮತ್ತಿಷ್ಟು ದುಃಖಿಯಾಗುತ್ತಿರುವನು" ಪ್ರತಿಯಾಗಿ ಇಂಗ್ಲೀಷನು "ಏಕೆ ಅವನ ತನ್ನ ಸಂಬಳವನ್ನು ಉಳಿಸಿ ಹಡಗ ಹತ್ತಲಾರನೇ ?"

"ಉಳಿಸುವುದೇ ? ಅವನ ಹತ್ತಿರ ಸಾಕಷ್ಟು ದುಡ್ಡು ಇರುತ್ತದೆ. ಆದರೆ ಒಮ್ಮೆಲೇ ಬಹಳ ದುಡ್ಡು ಕೊಡಬೇಕೆಂದು ಜೂಜಾಡುತ್ತಾನೆ ಅವನೆಂದೂ ಗೆದೆಯುವುದಿಲ್ಲ. "ಮೂರ್ಖ! ಹೀಗೆ ಇವನೆಂದೂ ದುಡ್ಡು ಮಾಡಲಾರ"

ಕಾಂಗಲಿಯ ಮಾತು ಬೆಳೆಸದೆ ಅವನು ಕೊಂಡ ಸಾಮಾನುಗಳನ್ನು ಕಟ್ಟಿದುವ ಅಹ್‌ಲನ್ನು ಮೂರ್ಖನೋ— ಜಾಣನೋ ಅವನಿಗೇನಾಗಬೇಕಾಗಿದೆ? ನಿಜವಾಗಿಯೂ ಬೇಗ ಆಹ್‌ಲಂನು ಹೋಗುವುದು ಬೇಡವಾಗಿತ್ತು. ಏಕೆಂದರೆ ಅವನ ಹಾಡಿನಿಂದಲೇ ಎಷ್ಟೋ ಹೊಸ ಗಿರಾಕಿಗಳಾಗುತ್ತಿದ್ದರು. ಅಲ್ಲದೆ ಅವನು ಹಾಡಿನಲ್ಲಷ್ಟೇ ದುಃಖಿಯಾಗಿದ್ದನು. ತನ್ನ ಕೆಲಸದಲ್ಲಿ ದಕ್ಷನೂ, ಇಂಗ್ಲೀಷನ್ನು ಚೆನ್ನಾಗಿ ಬಲ್ಲವನೂ ಆಗಿದ್ದನು. ಜನರ ಸಂಗಡ ಆನಂದದಿಂದ ಕೆಲೆದು ಸಿನೇಮಾನೋಡಿ, ಬಸ್ಸಿನಿಂದ ಲಂಡನ್ ಎಲ್ಲ ಸುತ್ತಾಡಿ ಉಳಿದ ಹಣವನ್ನೆಲ್ಲ ಜೂಜಿಗೆ ಹಾಕಿ ತಿರುಗುತಿದ್ದನು.

ನೀವು ಅವನ ಹಾಡುಗಳನ್ನು ಕೇಳದಿದ್ದರೆ, ಅವನು ಸುಖಿಯೆಂದೇ ನಿಶ್ಚಯವಾಗಿ ಹೇಳುತಿದ್ದಿರಿ. ಅವನು ಮೊದಲು ಬಂದಾಗ ಯಾರೂ ಅವನ ಗೊಡವೆಗೇ ಹೋಗುತ್ತಿದ್ದಿಲ್ಲ. ಅವನು ಬಂದುದು ಹತ್ತು ವರ್ಷಗಳ ಹಿಂದೆ ಕಾರ್ಡಿಫ್‌ನಿಂದ, ಅವಾಗಿನಿಂದಲೂ ಈ ನೌಕರಿಯಲ್ಲಿಯೇ ಇದ್ದಾನೆ. ಅಂದಿನಿಂದ ಮನೆಗೆ ಹೋಗುವ ಹಂಬಲಕ್ಕೂ ಜೂಜಾಡುವ ಮೋಹಕ್ಕೂ ಒಂದು ಕಾಳಗವಾಗಿದೆ.

ದೈವದ ಸಹಾಯ ಅವನಿಗಾಗದಿದ್ದರೂ ಕಡೆಗೆ ಸ್ನೇಹದ ಸಹಾಯವಾಯಿತು. ಅದಕ್ಕೆ ಸಹಾಯವೆನ್ನುವಂತಿದ್ದರೆ, ಏತಕ್ಕಾಗಿ ಅವನು ಹಂಬಲಿಸುತ್ತಿದ್ದನೋ ಅದು ಅವನಿಗೆ ಸಿಕ್ಕಿತು. ಎಷ್ಟೋ ಸಾರೆ ಮನಸ್ಸು, ಹೃದಯವು, ಹಾಲುಗಲ್ಲಿನಲ್ಲಿ ಕಡೆದ ಸುಂದರ ಪೆಟ್ಟಿಗೆಯನ್ನು ಬೀಸಾಕಿ ಗಟಾರಿನಲ್ಲಿ ಬಿದ್ದಿರುವ ಕಲ್ಲನ್ನು ಜೋಕೆಯಿಂದ ಇಟ್ಟುಕೊಳ್ಳುತ್ತವೆ. ಆದರೆ ನಡೆದ ಸಂಗತಿಯಲ್ಲಿ ಸ್ನೇಹಕ್ಕಿಂತ ದೈವವು ಅವನಿಗೆ ಹೆಚ್ಚು ಕರುಣೆಯನ್ನು ತೋರಿತು.

ಫಾನಿ ಫ್ರೇನಳು ಈ ಚಹದ ಅಂಗಡಿಯನ್ನು ಮೆಚ್ಚಿ ಚಹ, ಜಿಂಜರ, ಅಲಕೂಟ ಹೂವುಗಳನ್ನು ಕೊಳ್ಳುತ್ತಿದ್ದಳು. ಅಲ್ಲದೆ ಗೆಳೆಯರ ಸಂಗಡ ಹಿಂಗಪೂನಲ್ಲಿ ಊಟಕ್ಕೆ ಬರುತ್ತಿದ್ದಳು. ಅಲ್ಲಿ ಆಹ್‌ಲಂನ ಪರಿಚಯವಾಯಿತು. ಅವನ ಸಂಗೀತವನ್ನು ಕೇಳಿ ನಕ್ಕಳು ಕೆಲದಿನಗಳ ಮೇಲೆ ಅದರ ಕಾರಣವನ್ನೂ ತಿಳಿದಳು. ಅವನ ಸ್ವಚ್ಛ ಉಡುಗೆ ಮತ್ತು ಮಕ್ಕಳ ಹಾಗಿರುವ ತಿಳಿ ನಗೆ ಅವಳಿಗೆ ಹೆಚ್ಚಾಗಿ ಸೇರಹತ್ತಿದವು. ಅಲ್ಲದೆ ತನ್ನ ಕತೆಯನ್ನು ಕೇಳುವ ಕುತೂಹಲವುಳ್ಳ ಒಬ್ಬ ಸುಂದರ ಹೆಣ್ಣು ಮಗಳನ್ನು ನೋಡಿ ಅವನಿಗೂ ಆದರವುಂಟಾಯಿತು.

ಒಂದು ದಿನ ಮಧ್ಯಾಹ್ನ, ಸ್ವಲ್ಪೇ ಜನರು ಅಂಗಡಿಯಲ್ಲಿದ್ದಾಗ, ಅವನು ತನ್ನ ಹೃದಯದಲ್ಲಿ ಹುದುಗಿದುದನ್ನೆಲ್ಲ ಹೇಳಿದನು. ನದೀ ತೀರದ ಮೇಲಿನ ತನ್ನೂರನ್ನೂ ವರ್ಣಿಸಿದನು. ತನ್ನ ಹದಿನಾರನೆಯ ವಯಸ್ಸಿನಲ್ಲಿ ತಂದೆಯ ಸಂಗಡ ಸ್ವದೇಶವನ್ನು ಬಿಟ್ಟು ಇಂಗ್ಲಂಡಕ್ಕೆ ಬಂದುದನ್ನು ಹೇಳಿದ. ಎಲ್ಲಿಲ್ಲಿ ಹೋದರೂ ತನ್ನ ದೇಶದ ನೆನಪು ಆಗುವುದನ್ನು ಹೇಳಿದ, ತನ್ನ ದೇಶದಲ್ಲಿರುವ ಒಂದು ನದೀ ತೀರದಲ್ಲಿ ಹೊಲವನ್ನು ಕೊಂಡು, ಸಂಸಾರ ಸಾಗಿಸುವುದಕ್ಕಾಗಿಯೇ ಜೀವಿಸಿರುವುದಾಗಿ ತಿಳಿಸಿದ.

ಒಬ್ಬ ತರುಣನನ್ನು, ಅದೂ ಚೀನೀ ತರುಣನನ್ನು ವಿಶ್ವಾಸದಲ್ಲಿ ತೆಗೆದುಕೊಂಡುದಕ್ಕೆ ಎಲ್ಲ ಹೆಣ್ಣುಮಕ್ಕಳಂತೆಯೇ, ಅವಳಿಗೆ ಅವನಲ್ಲಿ ಆಸಕ್ತಿ ಉಂಟಾಯಿತು. ಆ ಕೀಳು ಚೀನಿಯ ದುಃಖವು ಅವಳಿಗೆ ಸಂಬಂಧಿಸದಿದ್ದರೂ ಸಹಾಯ ನೀಡಲು ನಿರ್ಧರಿಸಿದಳು. ಅವಳಿಗೆ ಯಾವತರಹದ ಮನಸ್ಸಿನ ಅಸ್ವಾಸ್ಥ್ಯವೂ ಇರಲಿಲ್ಲ. ಅದ್ದರಿಂದಲೇ ಅವಳಿಗೆ ಒಬ್ಬ ಹತಭಾಗ್ಯ ಚೀನಿಯನ್ನು ಅವನ ಮನಸ್ಸಿನ ಒಲುವಿನತ್ತ ನೂಕಲು ಸಂತೋಷವಾಯಿತು.

ಒಂದು ದಿನ ತಂದೆಯ ಹತ್ತಿರ ಇದರ ವಿಷಯವನ್ನೆತ್ತಿದಳು. ಬಡಜನರನ್ನು ಅವರ ದೇಶಕ್ಕೆ ಅವರ ಮನೆಯವರೆಗೂ ಕಳಿಸಲು ಕೆಲವು ಸಂಸ್ಥೆಗಳಿವೆಯೆಂದೂ ಮತ್ತು ಅದರ ವಿಷಯಕ್ಕೆ ಮೇಲಧಿಕಾರಿಗೆ ಹೇಳಿದ. ಅವನು ಸ್ವತಃ ಚಹದ ಅಂಗಡಿಗೆ ಹೋಗಿ ಆಹ್‌ಲಂನ ಹಾಡನ್ನು ಕೇಳಿಕೊಂಡು ಪ್ರತಿಯಾಗಿ ತನ್ನ ಮೇಲಧಿಕಾರಿಗೆ ತಿಳಿಸಿದ. ಅವನುಕೂಡ ಆರೆಂಟು ಜನರನ್ನು ಕೂಡಿಕೊಂಡು ಆ ಪರದೇಶಿಯನ್ನು ನೋಡಲು ಹಿಂಗಪೂನ ಅಂಗಡಿಗೆ ಯಾತ್ರೆಮಾಡಿದ. ಇಂಗ್ಲೀಷರು ತಮ್ಮ ಮನಸ್ಸಿಗೆ ಸರಿ ಎನಿಸಿದಕೂಡಲೇ ಸಹಾಯಮಾಡಲು ಯಾವಾಗಲೂ ಸಿದ್ಧ. ಅದರಂತೆ ಅವರು ಮಾಡಿದರು. ಫಾನಿಯ ರಾಯಭಾರ ಅವಳು ತಿಳಿದುಕೊಂಡುದರಕಿಂತಲೂ ಹೆಚ್ಚು ಫಲಕಾರಿಯಾಯಿತು.

ಫಾನಿಯು ತನ್ನ ತಂದೆಗೆ ತಿಳಿಸಿ ಎರಡು ತಿಂಗಳಾಗುವುದರಲ್ಲಿಯೇ 'ಅವಳು ಒಂದು ದಿನ ಮಧ್ಯಾಹ್ನ ಹಿಂಗಪೂನಲ್ಲಿ ಉತ್ಸಾಹದಿಂದ ಬಂದಳು. ಆಹ್‌ಲಂನು ಚಹ ತಂದಕೂಡಲೆ ಅವನಿಗೆ ಕೇಳಿದಳು "ನಾನು ನಿನ್ನ ಸಲುವಾಗಿ ಕೆಲಸ ಮಾಡುತ್ತಿದ್ದೆ. ಸ್ವಲ್ಪ ಸಿಧಾನವಾದರೂ ಮಾಡಿದ್ದೇನೆ. ಯಾವುದು ಗೊತ್ತೊ ?"

ಆಹ್‌ಲಂನು ಮುಗುಳ್‌ನಗೆ ನಕ್ಕು ಸುಮ್ಮನಾದ.

"ಮುಂದಿನ ವಾರ ನೀನು ನಿನ್ನ ಪ್ರಿಯ ದೇಶಕ್ಕೆಹೋಗುವಿ! ಚೀನಾಕ್ಕೆ ಹೋಗುವಿ! ಹೇಗಾದೀತು ?"

ಆಹ್‌ಲಂನು "ಅ- - -ಇ- - -" ಎಂದು ಗಟ್ಟಿಯಾಗಿ ಚೀರಿಬಿಟ್ಟ.

" ನೀನು ಹೇಳುತ್ತಿದ್ದೆಯಲ್ಲ, ತರತರದ ಹೂವುಗಳು— ಪ್ರತಿದಿನದ ಸೂರ್ಯಪ್ರಕಾಶ— ಎಷ್ಟೋ ವರುಷಗಳವರೆಗೆ ನೀನು ನೋಡದೆ ಇರುವ ಕಟ್ಟಡಗಳು— ಆಹಾ ಸರಿಯಾದೀತಲ್ಲವೇ'' ?

'ಅ- - - ಇ- - -' ಅವನು ಕಿಟಕಿಯ ಹೊರಗೆ ಇಣಿಕಿನೋಡಿದ- ಕಿರಿದಾದ ಬೀದಿಯನ್ನು —ಕಾಂಗಲೀಯ ಪಖಾರವನ್ನು ನೋಡಿದ ಆಕಾಶಕ್ಕೆ ದೃಷ್ಟಿ ಪಸರಿಸಿದ.

" ಆಹಾ! ಅದೆಂತು ಸುಖ! ನಾನು ಚೀನಕ್ಕೆ ಹೋಗಲಾರೆ! ಇಲ್ಲ - - ಸಾಧ್ಯವಿಲ್ಲ. "

" ನೀನು ತಪ್ಪುವುದು ಇಲ್ಲಯೇ. ಖಂಡಿತ ಹೋಗುವಿ. ಮುಂದಿನವಾರವೇ ಹೋಗುವಿ. ನಾನು ನಿನ್ನ ವಿಷಯ ಜನರಿಗೆ ತಿಳಿಸುತ್ತಲೇ ಇದ್ದೆ. ನಾಳೆ ಕಾಗದ ಬರುವುದು—ಸರಕಾರೀ ಕಾಗದ ಅದು ನಿನ್ನನ್ನು ಮನೆಯವರೆಗೂ ಕಳಿಸುವುದು. ಅದನ್ನು ನಾನು ಅಥವಾ ಮತ್ತಾರಾದರೂ ತಂದು ಕೊಡುವರು. ನಾಳಿನ ಬುಧವಾರವೇ ನೀನು ಹಡಗ ಹತ್ತುವೆ. ಸಂತೋಷವಷ್ಟೇ ? "

" ಸಂತೋಷ! - - - ನಾನು ನಿಜವಾಗಿಯೂ ಚೀನಕ್ಕೆ ಹೋಗುತ್ತೇನೆಯೇ ? ನಿಶ್ಚಯವೇ ನಾನು ಹೋಗುವುದು ? ಇಲ್ಲ - - ನೀನು ನಗೆಯಾಡುವಿ. ಇಷ್ಟು ಮೇಲೆ - - ? ಛೀ ನನಗೆ ವಿಶ್ವಾಸವಾಗದು.

" ನಿಜವಾಗಿಯೂ ಹೇಳುವೆ. ನನ್ನಾಣೆ "

" ನೀನು ಬಹಳ ಒಳ್ಳೆಯವಳು. ಕಟ್ಟಕಡೆಗೊಮ್ಮೆ ಚೀನಾಕ್ಕೆ ಹೋಗುವುದು ನಿಜವಾಗಿಯೂ ನನ್ನ ಭಾಗ್ಯವು. ನನ್ನ ಭಾ- - -" ಅವನು ತನ್ನ ಮುಖವನ್ನು ತಿರುಗಿಸಿ, ಗಟ್ಟಿಯಾಗಿ ಹಿಡಿದ ಕೈಗಳನ್ನು ಬಿಡಿಸಿದನು.

" ನೀನು ಖರ್ಚು ಮಾಡಬೇಕಾದುದೇನೂ ಇಲ್ಲ. ಆ ಕಾಗದಗಳು ನೀನೆಲ್ಲಿ ಹೋಗಬೇಕೆನ್ನುವಿಯೋ" ಅಲ್ಲಿ ಮುಟ್ಟಿಸುವವು. ಬರುವ ಬುಧವಾರ ಎಲ್ಲವೂ ಸರಿಯಾಗುವುದು. "

" ಅಮ್ಮಾ, ಒಬ್ಬ ಕ್ಷುದ್ರ ವ್ಯಕ್ತಿಯಾದ ನನ್ನ ಮೇಲೆ ಬಹಳ ಉಪಕಾರಮಾಡಿದೆ, ಆದರೆ ನನ್ನ ಮೇಲೆಯೇ ಏಕೆ? ಚೀನಾಕ್ಕೆ ಹೋಗಲು ಅದೆಷ್ಟು ಜನರು ಹಾತೊರೆಯುತ್ತಾರಲ್ಲ ? "

" ಏಕೆಂದರೆ ಅದು ನೀನಿರುವಿಯೆಂದೇ. ಅವರಿಗೆ ನಿನ್ನ ಹಾಡಿನಮೇಲೆ ಪ್ರೀತಿ. ಅಲ್ಲದೆ ಅವರು ಉಚ್ಚ ಅಧಿಕಾರಿಗಳು ನಿನ್ನ ಕೆಲಸವಾಗಿದೆಯೆಂದೇ ತಿಳಿ. "

" ಅಮ್ಮಾ ಇದು - - - ಅ-ಇ - - - " ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದನು. ಅವನ ಮುಖ ಯಾವ ತರಹದ ಆಂತರಿಕ ಭಾವನೆಯನ್ನೂ ತೋರ್ಪಡಿಸಲಿಲ್ಲ. ಅವನ ಕಣ್ಣುಗಳು ಕಿಟಕಿಯ ಹೊರಗೆ ಸೃಷ್ಟಿಸೌಂದರ್ಯವನ್ನು ನೋಡುತ್ತಿರುವಂತೆ ನೆಟ್ಟದೃಷ್ಟಿಯಿಂದ ನೋಡುತ್ತಿದ್ದವು. ಅಲ್ಲದೆ ಅವನ ಮುಖದಿಂದ ಅಸ್ಪಷ್ಟ ಶಬ್ದಗಳು ಪ್ರವಹಿಸುತ್ತಿದ್ದವು.

ಅವನೇನು ಹೇಳುತ್ತಿದ್ದನೋ ಫಾನಿಗೆ ಅರ್ಥವಾಗಲಿಲ್ಲ. ಆದರೆ ಅವಳು ಸಮಾಧಾನದಿಂದ್ದಳು. ದಿನಾಲು ಕೆಲಸಮಾಡುವಾಗ ಇರುತ್ತಿದ್ದ ಅವನ ತಿಳಿನಗೆಯು ಓಡಿಹೋಯಿತು. ಹಸಿವೆಯನ್ನು ಮರೆಯಿಸುವ ಅವನ ಮುಗುಳ್‌ನಗೆ ಮಾಯವಾಯಿತು. ಆತನು ಆನಂದವಾದಾಗ ಯಾರೂ ನಗುವುದಿಲ್ಲ. ಅದರ ಬದಲಾಗಿ, ಪ್ರೇಯಸಿಯು ತನಗೆ ಭೆಟ್ಟಿಯಾಗಲು ಬರುವಳೆಂಬುದನ್ನು ಕನಸಿನಲ್ಲಿಯೂ ವಿಚಾರಿಸದ ಪ್ರಿಯತಮನು, ಅವಳು ಅಕಸ್ಮಾತ್ ಬಂದುದನ್ನು ಕಂಡು ಯಾವ ಭಾವವನ್ನು ವ್ಯಕ್ತಮಾಡುವನೋ ಅದೇ ಅವನದೂ ಇತ್ತು.

" ನೀನು ತುಂಬಾ ಕರುಣಾಳು ನನ್ನ ಸಲುವಾಗಿ ಕಷ್ಟಪಟ್ಟೆ. ಕೆಲವು ಹಾಡುಗಳನ್ನು ಹೇಳಲೇ ? "

ಫಾನಿ ನಸುನಕ್ಕಳು. ಅಟ್ಟದಮೇಲಿನ ಕೋಣೆಯಲ್ಲಿ ಅವರಿಬ್ಬರ ಹೊರತು ಮತ್ತಾರೂ ಇದ್ದಿಲ್ಲ. ಒಬ್ಬಳಿಗಾಗಿಯೇ ಅವನು ಹಾಡುವುದು ಮೋಹಕವಾಗಿತ್ತು. ಅವನು ತನ್ನ ಸಿತಾರಿನ ಸಂಗಡ ಹಾಡಿದ. ಇದಕ್ಕೂ ಮೊದಲು ಅವಳೆಂದೂ ಇಷ್ಟು ಸ್ಫೂರ್ತಿಯುಕ್ತ ಹಾಡನ್ನು ಕೇಳಿದ್ದಿಲ್ಲ. ಎಷ್ಟೋ ವರುಷಗಳವರೆಗೆ ಅಗಲಿ ಹೋದಂತೆ ಆತ್ಮವು ತಿರುಗಿ ಮನೆಗೆ ಬಂದಂತೆ ಆತ ಮೈಮರೆತು ಹಾಡಿದ. ಬರಿ ಮಾತಿನಿಂದಲೇ ಇವನ ಹೃದಯವನ್ನು ಇಷ್ಟು ಸ್ಪರ್ಶಿಸಿದೆನೆಂಬುದು ಅವಳಿಗೆ ರೋಮಾಂಚನವನ್ನುಂಟುಮಾಡಿತು. ತಾನು ಮಾಡಿದ ವ್ಯವಸ್ಥೆಯಲ್ಲಿ ಏನೂ ಬದಲಾಗಲಿಕ್ಕಿಲ್ಲವೆಂದು ಅವಳು ನಂಬಿದಳು. ಆ ಹಾಳೆಗಳಲ್ಲಿ ಏನಾದರೂ ತಪ್ಪಾದರೆ — ಏನು ಅನರ್ಥವೆಸಗೀತು! ಒಮ್ಮೆಲೇ ಅವಳಿಗೆ ಭಯವುಂಟಾಯಿತು. ಅವು ಬಾರದೇ ಇದ್ದರೆ! - - ಈ ಸುದ್ದಿಯನ್ನು ತಿಳಿಸಿದ ಮೇಲಿನ ಆಹ್‌ಲಂನ ಚಿತ್ರವನ್ನು ಕಣ್ಣೆದುರಿಗೆ ತಂದಳು. ಅವನು ಎಂಥ ಭಯಂಕರ ಕೆಲಸವನ್ನು ಎಸಗಬಹುದು! ಅಥವಾ ಹಡಗವೇ ಇವನನ್ನು ಒಯ್ಯಲಿಕ್ಕಿಲ್ಲ. ಅಥವಾ ಕಾಗದಗಳು ಅವ್ಯವಸ್ಥಿತವಾಗಿ ಬರಬಹುದು. ಅಥವಾ ಹಡಗೆ ಬರುವಾಗ ನಡುಹಾದಿಯಲ್ಲೇ ಒಡೆಯಬಹುದು? ಆದರೆ ಬರುವುದು ನಿಶ್ಚಿತ. ಎಲ್ಲವೂ ಸರಿಹೋಗುವುದು ಖಂಡಿತ. ಏಕೆಂದರೆ ತಂದೆಯ ಮೇಲಧಿಕಾರಿಯು ಅದು ಬರುತ್ತಿರುವದಾಗಿ ಪತ್ರಹಾಕಿದ್ದನು. ಸರಿ ಬಂದೇತೀರುವುದು.

ಆಹ್‌ಲಂನ ಅಭೂತಪೂರ್ವ ಸಂಗೀತವನ್ನು ಕೇಳಿ ಎಷ್ಟೋ ಜನರು ಚಹದ ಅಂಗಡಿಗೆ ಬರಹತ್ತಿದರು. ಕೂಡಲೇ ಆಹ್‌ಲಂ ಸುಮ್ಮನಾದ. ಅವರ ಪ್ರಶ್ನೆಗಳಿಗೆ ಉತ್ತರಿಸದೆ ತನ್ನ ಕೆಲಸಕ್ಕೆ ತೊಡಗಿದ. ಫಾನಿ ಹೊರಗೆ ಹೋದಳು. ಸ್ವರ್ಗವನ್ನು ಕೊಡಿಸುವೆನೆಂದು ಹೇಳಿ ಕೊಡಿಸಲಾರದೇ ಹೋದರೆ ಏನು ಮಾಡಬೇಕೆಂಬುದು ತಿಳಿಯದೆ ಹೋದಳು.

ಅದನ್ನು ಕೊಡಿಸಿದಳು— ಕಾಗದಗಳು ಬಂದವು. ಆಹ್‌ಲಂನನ್ನು ಮೊದಲೆಂದೂ ನೋಡದ ಮಾನವನು ಬಂದನು. ಹಿಂಗಪೂನು ಅವನನ್ನು ಮೇಲೆ ಕರೆದುಕೊಂಡು ಹೋಗಿ ಆಹ್‌ಲಂನನ್ನು ಒಂದು ಅಡುಗೆಯ ಪದಾರ್ಥವೇನೋ ಎಂಬಂತೆ ಅವನನ್ನು ತೋರಿಸಿದನು. ಆಹ್‌ಲಂ ಬಾಗಿ ನಮಸ್ಕರಿಸಿದ. ಅವರು ಹಡಗದ ಮತ್ತು ಹೊರಡುವ ದಿನದ ನೆನಪನ್ನು ಕೊಟ್ಟು ಕಾಗದಗಳನ್ನು ಅವನ ಕೈಗಿತ್ತರು. ಹಿಂಗಪೂ ಕೇಳಿದ "ಇವನಿಗೆ ರೊಕ್ಕವಿಲ್ಲವಷ್ಟೇ ? "

—೨೪ನೇ ಪುಟಕ್ಕೆ

ಸಂಪಾದಕೀಯ ಟೀಕೆ ಟಿಪ್ಪಣಿಗಳು

ಮಾಸ್ತರರು ಚಿರಾಯುಗಳಾಗಲಿ

"ಕರ್ಮವೀರ"ಸಂಸ್ಥಾಪಕರಲ್ಲೊಬ್ಬರೂ ಅದರ ಪ್ರಗತಿಗಾಗಿ ಇಂದಿನವರೆಗೆ ಒಂದೇಸಮನೆ ಹಂಬಲಿಸುವವರೂ ಆಗಿರುವ ಶ್ರೀಮಾನ್ ಹುಕ್ಕೇರಿಕರ ರಾಮರಾಯರ ಅರವತ್ತೊಂದನೆಯ ವರ್ಧಂತಿ ಇದೇ ೨೨ ನೇ ತಾರೀಕಿಗೆ ಜರುಗಿತು. ಅವರ ಮಿತ್ರರು,ಶಿಷ್ಯರು ಮತ್ತು ಹಿತಚಿಂತಕರು ಆ ದಿನ ಅವರನ್ನು ಪ್ರೇಮಾದರಗಳಿಂದ ಸತ್ಕರಿಸಿದರು. ಈ ಸಮಯದಲ್ಲಿ ನಮ್ಮ ಅಲ್ಪ ಕಾಣಿಕೆಯೆಂದು ಈ ವಿಶೇಷ ಸಂಚಿಕೆಯನ್ನು ಅವರಿಗೆ ಸಮರ್ಪಿಸಲು ನಮಗೆ ಸಂತೋಷವಾಗುತ್ತಿದೆ. ಅಲ್ಪಾವಧಿಯಲ್ಲಿಯೇ ಈ ಸಂಚಿಕೆಯನ್ನು ಹೊರಡಿಸಬೇಕಾದುದರಿಂದ ಬಯಸಿದಷ್ಟು ಇದು ಪರಿಪೂರ್ಣವಾಗಿಲ್ಲವೆಂಬುದು ನಮಗೆ ಗೊತ್ತು. ಆದರೂ ಶ್ರೀ ರಾಮರಾಯರು "ಅಳಿಲುಸೇವೆ, ಮಳಲುಭಕ್ತಿ" ಎಂಬಂತೆ ಇದನ್ನು ಸ್ವೀಕರಿಸುವರೆಂದು ನಂಬುತ್ತೇವೆ. ಇರಲಿ.ಶ್ರೀ ರಾಮರಾಯರು ವಿದ್ಯಾಭ್ಯಾಸವನ್ನು ಮುಗಿಸಿಕೊಂಡ ಬಳಿಕ ಯಾವುದೊಂದು ಸರಕಾರೀ ನೌಕರಿಯ ಆಸೆಗೆ ಬೀಳದೆ ಸಾರ್ವಜನಿಕ ಸೇವೆಯೆ ತಮ್ಮ ಕರ್ತವ್ಯವೆಂದು ತಿಳಿದುಕೊಂಡು ಅದರಲ್ಲಿಯೇ ತಮ್ಮ ಆಯುಷ್ಯವನ್ನು ಸವೆಸುತ್ತಿರುವರು. ವಿಕ್ಟೋರಿಯಾ ಹಾಯಸ್ಕೂಲಿನ ಪ್ರಿನ್ಸಿಪಾಲರೆಂದು ಅವರು ಮಾಡಿದ ಶಿಕ್ಷಣಪ್ರಸಾರ ಅಪಾರವಾಗಿದೆ. ಮಹಾತ್ಮರ ಅಸಹಕಾರದ ಕಹಳೆ ಕೇಳಿದ ಕೂಡಲೆ ದಾಸ್ಯಕ್ಕೆ ಕಾರಣವಾದ ಶಿಕ್ಷಣ ಕಾರ್ಯವನ್ನು ಬಿಟ್ಟುಕೊಡುವುದು ಅವಶ್ಯವೆಂದು ಭಾವಿಸಿ ಅವರು ತಮ್ಮ ವೃತ್ತಿಗೆ ರಾಜೀನಾಮೆ ಕೊಟ್ಟು ಅಸಹಕಾರ ಚಳವಳಿಯಲ್ಲಿ ಧುಮುಕಿದರು. ಅಂದಿನಿಂದ ಇಂದಿನವರೆಗೆ ಅವರು ದೇಶದ ಸ್ವಾತಂತ್ರ್ಯ ಸಂಪಾದನೆಗಾಗಿ ವಿವಿಧ ರೀತಿಯಿಂದ ಕೆಲಸಮಾಡುತಿರುವರು. ಕಷ್ಟನಷ್ಟಗಳನ್ನನುಭವಿಸಿರುವರು.ಸೆರೆಮನೆವಾಸವನ್ನು ಭೋಗಿಸಿರುವರು. ಅದೆಲ್ಲದರ ಫಲವನ್ನು ಸವಿಯುವ ಮಹದ್ಭಾಗ್ಯ ಎಲ್ಲ ಭಾರತೀಯರಂತೆ ಅವರಿಗೂ ಒದಗಿ ಬಂದುದಕ್ಕಾಗಿ ಅತ್ಯಂತ ಆನಂದ. ಶ್ರೀ ಹುಕ್ಕೇರಿಕರರು ಶಿಕ್ಷಕ ವೃತ್ತಿಯನ್ನು ಬಿಟ್ಟುಕೊಟ್ಟು ೨೮ ವರುಷಗಳಾಗಿ ಹೋಗಿದ್ದರೂ ಮಾಸ್ತರರೆಂದೇ ಇನ್ನೂ ಕರೆಯಲ್ಪಡುವರು. ಅಷ್ಟೊಂದು ಲೋಕಪ್ರಿಯರಾಗಿರುವರು ಅವರು. ತರುಣರಿಗೆ ಸಲಹೆ ಸೂಚನೆಗಳನ್ನು ಕೊಡುವಲ್ಲಿ ಅವರನ್ನು ಕಾರ್ಯಕ್ಕೆ ಹಚ್ಚುವಲ್ಲಿ ಇವರಿಗೊಳ್ಳೆ ಆಸ್ಥೆ, ದೇಶದ ಸಾರ್ವಾಂಗಿಕ ಉನ್ನತಿಗೆ ಅವಶ್ಯವಾಗಿರುವ ವಿವಿಧ ವಿಷಯಗಳನ್ನು ಇವರು ತಿಳಿದುಕೊಂಡವರಾಗಿರುವದರಿಂದ ಯಾರು ಬೇಕಾದವರು ಇವರಲ್ಲಿಗೆ ಹೋದರೂ ಸೂಕ್ತ ಸಲಹೆಯನ್ನು ಕೊಟ್ಟು ಕಳುಹುವದು ಇವರ ಸ್ವಭಾವ. ಆದರೂ ಕರ್ನಾಟಕದ ವಿಶಿಷ್ಟ ಪರಿಸ್ಥಿತಿಯ ಮೂಲಕ ನಮ್ಮ ನಾಡು ಹರಿದು ಹಂಚಲ್ಪಟ್ಟದ್ದರಿಂದ ಇಂಥ ನಾಡ ಧುರೀಣರಿಗೆ ಸಲ್ಲಬೇಕಾದಷ್ಟು ಮನ್ನಣೆ ಸಲ್ಲಲಿಲ್ಲೆಂದು ವಿಷಾದಪಡಬೇಕಾಗಿದೆ. ಇದೀಗ ಅವರು ಮುಂಬಯಿ ಶಾಸನಸಭೆಯ ಸದಸ್ಯರೆಂದು ಪ್ರಾಂತದ ಸರ್ವಾಂಗೀಣ ಉನ್ನತಿಯ ಕಾರ್ಯದಲ್ಲಿ ನಿರತರಾಗಿರುವರು. ಇಲ್ಲಿಯ.ವರ ಬೇಡಿಕೆಗಳನ್ನು ಸರಕಾರದವರ ಮುಂದಿಟ್ಟು ಸಾಧ್ಯವಿದ್ದುದರ ಮಟ್ಟಿಗೆ ಅವನ್ನು ಸಾಧಿಸಿಕೊಳ್ಳುತ್ತಿರುವರು. ಮಾಸ್ತರರು ಚಿರಾಯುಗಳಾಗಿ ಸ್ವತಂತ್ರಕರ್ನಾಟಕದ ಸರ್ವಾಂಗೀಣ ಉನ್ನತಿಯಲ್ಲಿ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸುವಂತೆ ಪರಮಾತ್ಮನು ಅನುಗ್ರಹಿಸಲೆಂದು ಅವನನ್ನು ಪ್ರಾರ್ಥಿಸಿಕೊಂಡು ಈ ಸಂಚಿಕೆಗೆ ಬರೆದು ಕಳಿಸಿಕೊಟ್ಟವರಿಗೆಲ್ಲ ಅಭಿವಂದನೆಗಳನ್ನು ಸಮರ್ಪಿಸುತ್ತೇವೆ.

ಆಹಾರ ಸಮಸ್ಯೆ

ಹಿಂದುಸ್ತಾನದ ಆಹಾರ ಸಮಸ್ಯೆ ದಿನ ದಿನವೂ ಬಿಕ್ಕಟ್ಟಾಗಲಿಯಹತ್ತಿದೆ. ಈ ಸಮಸ್ಯೆಯ ಸಂಬಂಧದಲ್ಲಿ ವಿಚಾರ ಮಾಡಿ ವರದಿಯನ್ನೊಪ್ಪಿಸಲು ಕೇಂದ್ರ ಸರಕಾರದವರು ನೇಮಿಸಿದ್ದ ಪುರುಷೋತ್ತಮದಾಸ ಸಮಿತಿಯವರು ತಮ್ಮ ವರದಿಯನ್ನೀಗ ಒಪ್ಪಿಸಿರುವರು. ಇವು ತಾತ್ಪೂರ್ತಿಕ ಸೂಚನೆಗಳೆಂದು ಅವರು ಹೇಳಿದ್ದಾರೆ. ಅವರು ಮಾಡಿದ ಮೊದಲನೆಯ ಮತ್ತು ಮಹತ್ವದ ಸೂಚನೆಯೆಂದರೆ ನಿರ್ಯಾತವನ್ನು ಆದಷ್ಟು ಕಡಿಮೆ ಮಾಡುವದು. ಹಿಂದುಸ್ತಾನದಿಂದ ಪರದೇಶಗಳಿಗೆ ಹೋಗುತ್ತಿರುವ ಆಹಾರ ಪದಾರ್ಥಗಳ ನಿರ್ಯಾತವನ್ನು ಕಡಿಮೆ ಮಾಡಿದರೆ ಆಹಾರ ಪರಿಸ್ಥಿತಿಯ ಬಿಕ್ಕಟ್ಟು ಎಷ್ಟೋಮಟ್ಟಿಗೆ ಕಡಿಮೆಯಾಗಬಹುದು. ಆಹಾರ ಪದಾರ್ಥಗಳಿಗಾಗಿಯೆ ವಿನಿಮಯವೆಂದು ನಿರ್ಯಾತಮಾಡಿದರೆ ಒಂದೊಪ್ಪತ್ತು ಇಷ್ಟವಾಗಬಹುದು, ಆದರೆ ಆಹಾರೇತರ ಪದಾರ್ಥಗಳಿಗಾಗಿ ಆಹಾರ ಪದಾರ್ಥಗಳನ್ನು ನಿರ್ಯಾತ ಮಾಡುವದು ಯಾವ ರೀತಿಯಿಂದಲೂ ಸಮಂಜಸವಲ್ಲ. ಈ ಪರಿಗೆ ಪರಕೀಯ ಸರಕಾರ ಹಾಗೆ ಅನಿರ್ಬಂಧ ನಿರ್ಯಾತ ಧೋರಣವನ್ನಿಟ್ಟುಕೊಂಡದ್ದರಿಂದಲೆ ಇಂದು ನಮ್ಮ ಪರಿಸ್ಥಿತಿ ಇಷ್ಟೊಂದು ನಿಕೃಷ್ಟಕ್ಕೆ ಮುಟ್ಟಿದೆ. ಪರದೇಶಗಳನ್ನು ಆದಷ್ಟು ಕಡಿಮೆಮಾಡುತ್ತ ಹೋಗಿ ಕೇಂದ್ರ ಸರಕಾರದವರು ಆಹಾರ ಪೂರೈಕೆಯ ತಮ್ಮ ಹೊಣೆಯನ್ನು ಕಡಿಮೆಮಾಡಿಕೊಳ್ಳುತ್ತ ನಡೆಯಬೇಕೆಂದು ಸಮಿತಿಯವರು ಸೂಚಿಸಿರುತ್ತಾರೆ. ಮತ್ತು ಆಹಾರ ವಿಷಯವನ್ನು ಪ್ರಾಂತಿಕ ಸರಕಾರಗಳಿಗೆ ವಹಿಸಿಕೊಡಬೇಕು ಅಂದರೆ ಅವುಗಳು ಹೆಚ್ಚು ಜಾಗ್ರತವಾಗಿ ತಮ್ಮ ಕರ್ತವ್ಯವನ್ನು ಹೆಚ್ಚು ದಕ್ಷತೆಯಿಂದ ಮಾಡಬಲ್ಲವು. ಕಠಿನ ಪ್ರಸಂಗದಲ್ಲಿ ಕೇಂದ್ರ ಸರಕಾರವು ಪ್ರಾಂತಸರಕಾರಗಳಿಗೆ ನೆರವಾಗತಕ್ಕದ್ದೆಂದು ಸೂಚಿಸಲಾಗಿದೆ. ಅಕ್ಕಿ ಜೋಳ ಮತ್ತು ಗೋದಿ ಈ ಮೂರು ಮುಖ್ಯ ಆಹಾರ ಧಾನ್ಯಗಳನ್ನು ಬಿಟ್ಟು ಉಳಿದೆಲ್ಲ ಪದಾರ್ಥಗಳ ಮೇಲಿನ ನಿಯಂತ್ರಣಗಳನ್ನೆಲ್ಲ ತೆಗೆದುಹಾಕಬೇಕೆಂದು ಸಮಿತಿಯವರು ಸೂಚಿಸಿದ್ದಾರೆ ಅಲ್ಲದೆ ಆಹಾರಧಾನ್ಯಗಳನ್ನು ಹೆಚ್ಚಾಗಿ ಆಯಾತಮಾಡಿಕೊಳ್ಳುವುದರಿಂದ ಪರದೇಶಗಳಿಗೆವಿಶೇಷ ಹಣಬಳಿದುಹೋಗುವುದು; ಆದ್ದರಿಂದ ಆಯಾತವನ್ನು ಕಡಿಮೆಮಾಡಬೇಕೆಂದು ಸೂಚಿಸಲಾಗಿದೆ. ಇಲ್ಲಿನ ಉತ್ಪಾದನೆಯನ್ನು ಹೆಚ್ಚು ಮಾಡುವುದರಿಂದಲೆ ಇದು ಸಾಧ್ಯವೆಂದು ಬೇರೆ ಹೇಳಬೇಕಿಲ್ಲ. ಈ ಸಮಿತಿಯವರು ಸೂಚಿಸಿದ ಸೂಚನೆಗಳನ್ನು ಸರಕಾರದವರು ಬೇಗ ಪರ್ಯಾಲೋಚಿಸಿ ಆವಶ್ಯಕ ಉಪಾಯಗಳನ್ನು ಕೈಕೊಂಡು ಸದ್ಯದ ಗಂಭೀರ ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸುವರೆಂದು ನಂಬುತ್ತೇವೆ.

ಸಹಾಯ ಆವಶ್ಯಕ

ಸರಕಾರದ ಯಾವುದೊಂದು ಯೋಜನೆಯು ಕಾರ್ಯಕಾರಿಯಾಗಬೇಕಾದರೆ ಜನತೆಯ ಸಹಾಯ-ಸಕ್ರಿಯ ಸಹಾಯ ಅತ್ಯವಶ್ಯವಾಗಿದೆ. ಜನತೆಯ ಸಹಾಯ ಸಹಕಾರಗಳಿಲ್ಲದಿದ್ದರೆ ಎಂಥ ಬಲಿಷ್ಠ ಸರಕಾರವಾದರೂ ಆಡಳಿತವನ್ನು ಸಾಗಿಸಿಕೊಂಡು ಹೋಗಲಾರದೆಂಬುದು ಸಿದ್ಧಾಂತ. ಬ್ರಿಟಿಶರ ಅಧಿಕಾರತ್ಯಾಗದಿಂದಲೂ ಇದು ಸಿದ್ಧವಾಗುತಿದೆ. ಈ ಮಾತು ಸತ್ಯಪೂರ್ಣವಾಗಿರುವುದರಿಂದಲೆ ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಸರಕಾರಕ್ಕೆ ಸಹಾಯ ಸಲ್ಲಿಸಲು ಜನತೆಯನ್ನು ಕೇಳಿಕೊಂಡಿದ್ದಾರೆ. ಶಾಂತಿಪ್ರಸ್ಥಾಪನೆಯಲ್ಲಿ ಆಹಾರ ಸಮಸ್ಯೆಯನ್ನು ಎದುರಿಸುವಲ್ಲಿ ಮತ್ತು ಸಾಮಾನ್ಯವಾಗಿ ದೇಶದ ಆಡಳಿತದಲ್ಲೆಲ್ಲ ಸಾರ್ವಜನಿಕರು ಸಹಾಯ ಮಾಡಬೇಕೆಂದು ಪಂಡಿತ ಜವಾಹರಲಾಲರು ಬಿನ್ನವಿಸಿಕೊಂಡಿದ್ದಾರೆ. ತಾವೇ ಆರಿಸಿ ಕಳಿಸಿದ ಪ್ರಜಾಪ್ರಮುಖರಿಗೆ ಪ್ರಜೆಗಳು ಸಹಾಯ ಸಲ್ಲಿಸದಿದ್ದರೆ ಆಡಳಿತ ಸರಾಗವಾಗಿ ಎಂತು ಸಾಗಬಲ್ಲುದು? ಪರಕೀಯ ದಾಸ್ಯದಿಂದ ಮುಕ್ತವಾದ ಹಿಂದುಸ್ತಾನದಲ್ಲಿ ಇದೀಗ ಗಂಭೀರ ಸಮಸ್ಯೆಗಳು ಉದ್ಭವವಾಗಿವೆ ಪುಂಡರ ಪುಂಡಾಟಿಕೆಗೆ ಮಿತಿಯಿಲ್ಲದಾಗಿದೆ. ದೇಶದ ಶಾಂತಿಯನ್ನು ನೆನೆದು ದೇಶದ ವಿಭಜನೆಗೂ ಒಪ್ಪಿಗೆ ಕೊಟ್ಟರೂ ಶಾಂತಿಯೇನು ಪ್ರಸ್ಥಾಪಿತವಾಗಲೊಲ್ಲದು. ಶಾಂತಿ ಪ್ರಸ್ಥಾಪನೆಯ ಮೊದಲನೆಯ ಕೆಲಸದಲ್ಲಿ ಎಲ್ಲರೂ ಸಹಾಯಮಾಡುವದವಶ್ಯವಾಗಿದೆ. ಇಲ್ಲಿನ ಆಡಳಿತಕ್ಕೆ ಸರಕಾರಕ್ಕೆ ವಿಧೇಯರಾಗಿ ಉಳಿವುದು ಇಲ್ಲಿನ ಪ್ರತಿಯೊಂದು ಜಾತಿ ಮತ ಪಂಥದವರ ಕರ್ತವ್ಯವಾಗಿದೆ, ಇದಕ್ಕೊಪ್ಪದಿದ್ದವರಿಗೆ ಇಲ್ಲಿರಲು ಅಧಿಕಾರವೆ ಇಲ್ಲ. ಹಿಂದುಸ್ತಾನದಲ್ಲಿದ್ದುಕೊಂಡು ಅದರ ಶಾಂತಿ ಸಮೃದ್ಧಿಗಾಗಿ ಪ್ರಯತ್ನಿಸದವರು ದೇಶದ ದ್ರೋಹಿಗಳು. ಅಂಥವರನ್ನು ಹುಡುಕುವದು ಜನರ ಮತ್ತು ಸರಕಾರದ ಕರ್ತವ್ಯವಾಗಿದೆ. ಆಹಾರ ಸಮಸ್ಯೆಯೂ ಅತ್ಯಂತ ಭೀಕರವಾಗಿದೆ. ರೈತರು ಮತ್ತು ವ್ಯಾಪಾರಸ್ಥರು ಇದರಲ್ಲಿ ಸರಕಾರಕ್ಕೆ ಹೆಚ್ಚು ಸಹಾಯ ಮಾಡಬೇಕಾಗಿದೆ. ಲಾಭಬಡಕತನದಿಂದ, ಕಳ್ಳಪೇಟೆಯ ಮೋಹಕ್ಕೊಳಗಾಗಿ ಸರಕಾರಕ್ಕೆ ಸಾಕಷ್ಟು ಕಾಳನ್ನೊದಗಿಸದಿದ್ದರೆ ಅವರು ಆಹಾರಸಮಸ್ಯೆಯನ್ನು ಬಿಡಿಸುವುದೆಂತು? ನಿಯಂತ್ರಣಗಳನ್ನು ತೆಗೆದುಹಾಕುವದರಿಂದ ಈ ಸಮಸ್ಯೆ ಬಿಡಲಾರದು. ಅದು ಮತ್ತಷ್ಟು ಕಠಿಣವಾಗುವದು. ರೈತರು ತಾವು ಬೆಳೆದ, ತಮ್ಮಲ್ಲಿದ್ದ ಕಾಳುಕಡಿಗಳಲ್ಲಿ, ತಮಗೆ ಬೇಕಾದಷ್ಟನ್ನಿಟ್ಟುಕೊಂಡು ಉಳಿದುದನ್ನೆಲ್ಲ ಸರಕಾರಕ್ಕೆ ಮಾರಿದ್ದಾದರೆ ಸರಿಯಾದ ಪ್ರಮಾಣದಲ್ಲಿ ಹಂಚಲು ಅನುಕೂಲವಾಗುವದು. ಜನತೆಯು ತನ್ನ ಕರ್ತವ್ಯವನ್ನು ದಕ್ಷತೆಯಿಂದ ಮಾಡಿ ದೇಶದ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಪಾಲುಗಾರವಾಗಬೇಕೆಂದು ಕೇಳಿಕೊಳ್ಳುತ್ತೇವೆ.

ಅಧಿಕಾರಿಗಳ ಕರ್ತವ್ಯ

ಆಹಾರಸಮಸ್ಯೆಯನ್ನು ಯಶಸ್ವಿಯಾಗಿ ಎದುರಿಸುವಲ್ಲಿ ಜನತೆಯ ಸಹಾಯ ಅವಶ್ಯವಿದ್ದಷ್ಟೇ ಅಧಿಕಾರಿಗಳ ಕಾರ್ಯಕ್ಷಮತೆಯೂ ಅವಶ್ಯವಾಗಿದೆ. ರೈತರಿಂದ ಕಾಳನ್ನು ಎತ್ತುವಲ್ಲಿ ಅದನ್ನು ಸಕಾಲದಲ್ಲಿ ಸರಕಾರೀ ವಖಾರಗಳಿಗೆ ಕಳಿಸುವಲ್ಲಿ ಮತ್ತು ಯೋಗ್ಯರೀತಿಯಿಂದ ಆಯಾಸ್ಥಳಗಳ ಅವಶ್ಯಕತೆಗಳಂತೆ ಸಾಗಿಸುವದರಲ್ಲಿ ಅಧಿಕಾರಿಗಳು ಅತ್ಯಂತ ದಕ್ಷತೆ ವಹಿಸುವದು ಅವಶ್ಯವಾಗಿದೆ. ಕಾಳುಗಳ ಸಾಗಾಟ ಸರಿಯಾದ ರೀತಿಯಲ್ಲಿ ಆಗದಿದ್ದರೆ ರೈತರು ಎಷ್ಟೊಂದು ಕಾಳುಕೊಟ್ಟರೂ ಪರಿಸ್ಥಿತಿ ಸುಧಾರಿಸಲಾರದು. ಅದೇರೀತಿಯಲ್ಲಿ ಕಾಳುಗಳು ಕೆಡದಂತೆ ನೋಡಿಕೊಳ್ಳುವದೂ ಅಧಿಕಾರಿಗಳ ಕರ್ತವ್ಯವಾಗಿದೆ. ಸರಕಾರದವರ ಆಸೆ. ಆಕಾಂಕ್ಷೆ, ವಿಧಿ ನಿಯಮುಗಳು ಕಾರ್ಯರೂಪದಲ್ಲಿ ಬರಬೇಕಾದರೆ ಅವುಗಳ ಉದ್ದೇಶ ಸಫಲವಾಗಬೇಕಾದರೆ ಅಧಿಕಾರವರ್ಗ ಹೆಚ್ಚು ಕಾರ್ಯಕ್ಷಮ ಮತ್ತು ದಕ್ಷವಾಗಬೇಕಾದುದು ಅತ್ಯವಶ್ಯವಾಗಿದೆ. ಹಿಂದೆ ಹಾಗಾಗದಿರಲು ಏನೇ ಕಾರಣಗಳಿರಬಹುದಾದರೂ ಈಗ ಸ್ವಕೀಯರೆ ಆಡಳಿತ ಸೂತ್ರಗಳನ್ನು ವಹಿಸಿಕೊಂಡಿರುವದರಿಂದ ಅಧಿಕಾರಿಗಳು ಅವರಿಗೆ ಎಲ್ಲಬಗೆಯ ಸಹಕಾರ ಸಹಾಯವನ್ನು ಸಲ್ಲಿಸತಕ್ಕದ್ದು. ಲಂಚಗುಳಿತನಕ್ಕೆ ಇಲ್ಲವೆ ಮತ್ತಾವುದಾದರೂ ದುರಾಸೆಗಳಿಗಾಗಿ ಕರ್ತವ್ಯ ಪಾಲನೆಯಲ್ಲಿ ತಪ್ಪಿದರೆ ಅವರ. ರಾಷ್ಟ್ರದ್ರೋಹ ಬಗೆದಂತಾಗವದು. ಸದ್ಯದ ಪರಿಸ್ಥಿತಿಯಲ್ಲಿಯಂತೂ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ಸ್ವಲ್ಪವೂ ಲೋಪವಿರದಂತೆ ನೋಡಿಕೊಳ್ಳುವುದು ಅತ್ಯವಶ್ಯವಾಗಿದೆ. ಹೀಗೆ ಜನತೆ ಮತ್ತು ಅಧಿಕಾರಿಗಳು ಸರಕಾರಕ್ಕೆ ಅವಶ್ಯಕ ನೆರವನ್ನು ನೀಡಿದ್ದಾದರೆ ಸದ್ಯದ ವಿಷಮಸ್ಥಿತಿ ಕ್ಷಣಾರ್ಧದಲ್ಲಿ ಮಾಯವಾಗಿ ಎಲ್ಲೆಲ್ಲಿಯೂ ಶಾಂತಿ, ಸಮೃದ್ಧಿ, ಸುವ್ಯವಸ್ಥೆಯುಂಟಾಗುವಲ್ಲಿ ಸಂದೇಹವಿಲ್ಲ.

ಅಭಿನಂದನೆಗಳು

ಇದೇ ದಿಸೆಂಬರ ಕೊನೆಯ ವಾರದಲ್ಲಿ ಕಾಸರಗೋಡಿನಲ್ಲಿ ಕೂಡಲಿರುವ ಕನ್ನಡ ಸಾಹಿತ್ಯಸಮ್ಮೇಲನದ ೩೧ನೇ ಅಧಿವೇಶನಕ್ಕೆ ಬೆಂಗಳೂರಿನ ಶ್ರೀ ತಾತಾಚಾರ್ಯ ಶರ್ಮರು ಅಧ್ಯಕ್ಷರಾಗಿ ಆರಿಸಿ ಬಂದುದಕ್ಕೆ ನಾವವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ ಶ್ರೀ ತಾತಾಚಾರ್ಯರು ವಿವಿಧ ರೀತಿಯಿಂದ ಕನ್ನಡ ಮಾತೆಯ, ಸಾಹಿತ್ಯ ದೇವಿಯ ಸೇವೆಯನ್ನು ಮಾಡಿರುವರು. ಮೊದಲು ಸಂಶೋಧಕರೆಂದು ಕೆಲಕಾಲ ಪ್ರಾಚೀನ ಕರ್ನಾಟಕ ವೈಭವವನ್ನು ಬೆಳಕಿಗೆ ತರುವಲ್ಲಿ ಇವರು ಅವಿಶ್ರಾಂತ ಕಾರ್ಯ ಮಾಡಿದ್ದುಂಟು. ಮುಂದೆ ಅದಕ್ಕೂ ವಿಶಾಲವಾದ ಪತ್ರಿಕಾ ಪ್ರಪಂಚದಲ್ಲಿ ಅವರು ಅಡಿಯಿಟ್ಟು ಒಳ್ಳೆ ದಕ್ಷತೆಯಿಂದ ಅದನ್ನು ಈವರೆಗೆ ನಡೆಸಿಕೊಂಡು ಬಂದಿರುವರು. ಇವರು ಒಳ್ಳೆ ಚುರುಕಾದ ಲೇಖಕರು. ಭಿಡೆ ಮುರುವತ್ತುಗಳಿಗೊಳಗಾಗದೆ ಸ್ಪಷ್ಟ ಶಬ್ದಗಳಲ್ಲಿ ಅನ್ಯಾಯದ ಪ್ರತಿಭಟನೆ ಮಾಡುವವರು. ಅಧಿಕಾರಿಗಳನ್ನು ಟೀಕಿಸುವವರು. ಇದಕ್ಕಾಗಿ ಅನೇಕ ಸಲ ಇವರು ಬಗೆ ಬಗೆಯ ಕಷ್ಟ ನಿಷ್ಠುರಗಳಿಗೆ ಒಳಗಾಗಬೇಕಾಯಿತು. ಆದರೂ ಶರ್ಮರು ಧ್ಯೇಯವನ್ನು ಬಿಟ್ಟುಗೊಡದೆ ಇಂದಿನವರೆಗೆ ತಮ್ಮ ವಿಶ್ವಕರ್ನಾಟಕ ಪತ್ರಿಕೆಯನ್ನು ನಡೆಸಿಕೊಂಡು ಬಂದಿರುವರು. ಇದೀಗ ಮೈಸೂರು ಸಂಸ್ಥಾನದಲ್ಲಿ ಹೊಣೆಗಾರ ಸರಕಾರ ಸ್ಥಾಪನವಾಗಲಿರುವ ಶುಭ ಸಮಯದಲ್ಲಿ ಕನ್ನಡಿಗರು ಶ್ರೀ ಶರ್ಮರನ್ನು ಕನ್ನಡ ಸಾಹಿತ್ಯದೇವಿಯ ಪೀಠದಲ್ಲಿ ಕುಳ್ಳಿರಿಸಿ ಗೌರವಿಸಿದ್ದಾರೆ. ತಪಮಾಡಿಯಾದರೂ ಚಿಂತೆಯಿಲ್ಲ; ಶ್ರೀ ಶರ್ಮರಿಗೆ ಈ ಸ್ಥಾನ ದೊರೆತದ್ದಕ್ಕಾಗಿ ನಾವು ಮತ್ತೊಮ್ಮೆ ಅವರನ್ನು ಅಭಿನಂದಿಸುತ್ತೇವೆ. ಪತ್ರಿಕಾ ಸಂಪಾದಕನಿಯಲ್ಲಿಯೇ ಜೀವ ಸವೆಸಿದ ತಾತಾಚಾರ್ಯರಿಗೆ ಈ ಮರ್ಯಾದೆ ಸಿಕ್ಕದಕ್ಕಾಗಿ ನಮಗೆ ಹೆಚ್ಚಿನ ಸಂತೋಷ. ಅವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನ ಯಶಸ್ವಿಯಾಗಿ ಜರುಗಿ ಭಾವೀ ಅಖಂಡ ಕರ್ನಾಟಕದ ಅಡಿಗಲ್ಲು ಹಾಕಲ್ಪಡುವದೆಂದು ನಂಬುತ್ತೇವೆ.

ದಿವಂಗತ ತಾತ್ಯಾಸಾಹೇಬರು

ಪ್ರಸಿದ್ಧ ಪತ್ರಿಕೋದ್ಯೋಗಿಗಳೂ ರಾಜಕಾರಣಿಗಳೂ ಆಗಿದ್ದ ಪುಣೆಯ ಶ್ರೀ ನರಸಿಂಹ ಚಿಂತಾಮಣಿ ಕೇಳಕರರು ವಯಸ್ಸಿನ ೭೫ನೇವರ್ಷದಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತ ಕೇಳಕರರು ಮಹಾರಾಷ್ಟ್ರದ ಮುಂದಾಳುಗಳಲ್ಲೊಬ್ಬರು, ಲೋಕಮಾನ್ಯ ತಿಳಕರ ಬಲಗೈಯಂತಿದ್ದರು. ಅಸಹಕಾರ ಯುಗವು ಪ್ರಾರಂಭವಾಗುವ ಮೊದಲು ಹಿಂದುಸ್ತಾನದ ರಾಜಕಾರಣದಲ್ಲಿ ಅಗ್ರಣಿಗಳಾಗಿ ಕಾರ್ಯ ಮಾಡಿದವರು. ಆದರೆ ಮುಂದೆ ಅಸಹಕಾರ ಧೋರಣವು ಅವರಿಗೆ ರುಚಿಸದ್ದರಿಂದ ಅವರು ಕಾಂಗ್ರೆಸ್ಸಿನ ಕಾರ್ಯದಲ್ಲಿ ಅಷ್ಟೊಂದು ಉತ್ಸಾಹಿಗಳಾಗಿರಲಿಲ್ಲ ಪ್ರತಿಯೋಗಿ ಸಹಕಾರಿ ಪಕ್ಷದವರಿಂದರ ಶಾಸನಸಭೆ ಮೊದಲಾದವುಗಳಲ್ಲಿ ಸೇರಿ ಸಿಕ್ಕಷ್ಟನ್ನು ಕಿಸೆಯಲ್ಲಿ ಹಾಕಿಕೊಂಡು ಹೆಚ್ಚಿನ ಹಕ್ಕುಬಾಧ್ಯತೆಗಳಿಗಾಗಿ ಹೊಡೆದಾಡಬೇಕೆಂಬುದು ಅವರ ಧೋರಣ. ಅಂತೆಯೆ ಸ್ವರಾಜ್ಯ ಪಕ್ಷದ ಊರ್ಜಿತ ಕಾಲದಲ್ಲಿ ಅವರು ಕೇಂದ್ರ ಶಾಸನ ಸಭೆಯನ್ನು ಸೇರಿ ಪಂಡಿತ ಮೋತೀಲಾಲರಗೂಡ ಕೆಲಸಮಾಡಿದ್ದುಂಟು. ಆದರೆ ಮುಂದೆ ೧೯೩೦ರ ನಂತರ ಅವರು ಕಾಂಗ್ರೆಸ್ಸಿನ ಸಂಬಂಧವನ್ನು ಹೆಚ್ಚಾಗಿ ಇಟ್ಟುಕೊಳ್ಳಲಿಲ್ಲ. ಇವರು ಪ್ರಸಿದ್ಧ ಸಾಹಿತಿಗಳಾಗಿದ್ದರು. ಕೇಸರಿ ಮರಾಠಾ ಪತ್ರಿಕೆಗಳ ಸಂಪಾದಕರೂ ಸಂಚಾಲಕರೂ ಆಗಿ ಪತ್ರಿಕಾವ್ಯವಸಾಯವನ್ನು ಒಳ್ಳೆ ಯಶಸ್ವಿಯಾಗಿ ಮಾಡಿದ್ದುಂಟು ಮರಾಠಿಯಲ್ಲಿ ನುರಿತ ಕಾದಂಬರಿಕಾರರು, ನಾಟಕಕಾರರು, ಲೇಖಕರು ಎಂದು ಇವರು ಖ್ಯಾತಿಯನ್ನು ಪಡೆದಿದ್ದರು. ಇವರ ನಿಧನದಿಂದ ಮಹಾರಾಷ್ಟ್ರಕ್ಕೆ, ಭಾರತಕ್ಕೆ ವಿಶೇಷ ಹಾನಿಯಾಯಿತು. ಪರಮಾತ್ಮನು ಇವರ ಆತ್ಮಕ್ಕೆ ಚಿರ ಶಾಂತಿಯನ್ನೀಯಲಿ.

ಆವಶ್ಯಕ ಮಾರ್ಪಾಡು

ನ್ಯಾಯ ಹಾಗು ಕಾರ್ಯನಿರ್ವಾಹಕ ಶಾಖೆಗಳ ಆಡಳಿತವೆಂತಿರಬೇಕೆಂದು ಮುಂತಾದ್ದನ್ನು ವಿಚಾರಿಸಿ ವರದಿಯನ್ನೊಪ್ಪಿಸಲು ಮುಂಬಯಿ ಸರಕಾರದವರು ನೇಮಿಸಿದ್ದ ಲೋಕೂರ ಸಮಿತಿಯವರು ಇವೆರಡೂ ಶಾಖೆಗಳು ಪ್ರತ್ಯೇಕವಾಗಿರತಕ್ಕದ್ದೆಂದು ಅಭಿಪ್ರಾಯ ಪಟ್ಟಿದ್ದನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಎಂದೋ ಆಗಬೇಕಿದ್ದ ಈ ಮಾರ್ಪಾಡು ಸ್ವತಂತ್ರ ಹಿಂದುಸ್ತಾನದಲ್ಲಿ ಆಗುತ್ತಿರುವದು ಹಿಂದು ರೀತಿಯಿಂದ ಯೋಗ್ಯವೆ. ಮ್ಯಾಜಿಸ್ಟ್ರೇಟರಲ್ಲಿ ಕಾರ್ಯನಿರ್ವಾಹಕ ಹಾಗು ನ್ಯಾಯ ನಿರ್ವಾಹಕ ಹೀಗೆ ಎರಡು ವರ್ಗಗಳಿರಬೇಕು. ಮೊದಲನೆಯುವರು ಜಿಲ್ಹಾ ಮ್ಯಾಜಿಸ್ಟ್ರೇಟರಿಗೂ ಎರಡನೆಯವರು ಹಾಯಕೋರ್ಟ ನ್ಯಾಯಾಧೀಶರಿಗೂ ಅಧೀನರಾಗಿರಬೇಕು. ಖಟ್ಲೆಗಳನ್ನು ನಡೆಸುವ ಅಧಿಕಾರ ಎರಡನೆ ವರ್ಗದ ಮ್ಯಾಜಿಸ್ಟ್ರೇಟರಿಗೆ ಮಾತ್ರ ಇರತಕ್ಕದ್ದು ಕಲೆಕ್ಟರರು ಕಾಯದೆ ಸುವ್ಯವಸ್ಥೆಯ ಹೊಣೆಯನ್ನು ಮಾತ್ರ ನಿರ್ವಹಿಸಬೇಕಲ್ಲದೆ ಈಗಿನಂತೆ ಖಟ್ಲೆ ಅಪೀಲುಗಳ ವಿಚಾರಗಳನ್ನು ನಡೆಸತಕ್ಕದ್ದಲ್ಲ ಎಂದು ಈ ಸಮಿತಿಯವರು ಸೂಚಿಸಿರುವರು. ಈ ಶಾಖೆಗಳನ್ನು ಪ್ರತ್ಯೇಕಿಸಬೇಕೆಂದು ಕಾಂಗ್ರೆಸ್ಸು ತನ್ನ ಜನ್ಮದ ಎರಡನೆ ವರ್ಷದಿಂದಲೆ ಸರಕಾರಕ್ಕೆ ಕೇಳಿಕೊಳ್ಳುತ್ತ ಬಂದುದುಂಟು. ಆದರೆ ನಿರಂಕುಶ ಆಳರಸರು ಈ ವರೆಗೆ ಈ ಸಮಂಜಸ ಬೇಡಿಕೆಯನ್ನು ಮೂಲೆಗೊತ್ತುತ್ತಲೆ ಬಂದುದುಂಟು. ಮ್ಯಾಜಿಸ್ಟ್ರೇಟರಲ್ಲಿಯೆ ಎರಡೂ ಅಧಿಕಾರಗಳು ಕೇಂದ್ರೀಕೃತವಾಗಿರುವದರಿಂದ ತಮ್ಮ ಸ್ವಚ್ಛಂದವೃತ್ತಿಗೆ ಬೆಂಬಲಸಿಕ್ಕುವದೆಂದು ಆಳರಸರು ಇತ್ತ ಗಮನಿಸಲಿಲ್ಲವೆಂದು ಹೇಳಲಭ್ಯಂತರವಿಲ್ಲ. ಖಟ್ಲೆ ಹಾಕುವವನೆ ಅದರ ವಿಚಾರಣೆಯನ್ನು ನಡಿಸಿದರೆ ಅದರಲ್ಲಿ ಎಷ್ಟರ ಮಟ್ಟಿಗೆ ನ್ಯಾಯ ಸಿಕ್ಕಬಹುದೆಂಬುದನ್ನು ಪ್ರತ್ಯೇಕ ಹೇಳಬೇಕಿಲ್ಲ. ಅನೇಕ ಸಂದರ್ಭಗಳಲ್ಲಿ ನ್ಯಾಯದೇವತೆಯ ಕೊಲೆಯಾದುದನ್ನು ನೋಡಿದ್ದುಂಟು. ಇದನ್ನೆಲ್ಲ ಮನದಂದು ಲೋಕೂರ ಸಮಿತಿಯವರು ತಜ್ಞರ ಅಭಿಪ್ರಾಯವನ್ನು ಕೇಳಿಕೊಂಡು ಸಮಂಜಸ ಅಭಿಪ್ರಾಯ ಕೊಟ್ಟಿದ್ದಾರೆ. ಮುಂಬಯಿ ಸರಕಾರದವರು ವಿಲಂಬ ಮಾಡದೆ ಕೂಡಲೆ ಈ ಸುಧಾರಣೆಯನ್ನು ಜಾರಿಯಲ್ಲಿ ತರಬೇಕೆಂದು ಸೂಚಿಸುತ್ತೇವೆ.

ನಾಡಿನ ರಾಜಕೀಯ ರಂಗದಲ್ಲಿ ಹೊಂಚು ಸಂಚುಗಳು

ನಿಜಾಮರ ಶಿಷ್ಟಮಂಡಲದ ಮೆಲ್ನಡೆ-- ಪಾಕಿಸ್ತಾನದ ಹುಸಿಹೊಲೆ— ಪಂ. ನೆಹರೂರವರ ನೀತಿ— ದಕ್ಷಿಣದ ದೊರೆಗಳ ದುಷ್ಟಬುದ್ಧಿ—

ಜವಾಹರರ ಎಚ್ಚರಿಕೆ

ಲಖನೌವಿನ ಅಮೀನುದ್ದೌಲ ಪಾರ್ಕಿನಲ್ಲಿ ಸೇರಿದ್ದ ೧ ಲಕ್ಷ ಜನರ ಪ್ರಚಂಡ ಸಭೆಯಲ್ಲಿ ಮಾತನಾಡುತ್ತ— 'ಇಡೀ ಜಗತ್ತು ನಮ್ಮನ್ನು ಸೂಕ್ಷ್ಮದೃಷ್ಟಿಯಿಂದ ನೋಡುತ್ತಿರುವಾಗ, ಏಶಿಯದ ಆಳುನಾಡುಗಳು ಆಶಾಪೂರ್ಣದೃಷ್ಟಿಯಿಂದ ನಮ್ಮನ್ನು ನಿರೀಕ್ಷಿಸುತ್ತಿರುವಾಗ ನಾವು ಈ ಸೂಕ್ಷ್ಮ ಸಂದರ್ಭದಲ್ಲಿ ಕಾಲು ಜಾರಬಾರದು—ಎಂಬ ಮಾತಿನಲ್ಲಿ ಹಿಂದುಸ್ತಾನದ ಇಂದಿನ ಪರರಾಷ್ಟ್ರ ಧೋರಣವನ್ನೂ "ಕಾಂಗ್ರೆಸ್ಸು ಜಾತಿಲಿಂಗಭೇದವನ್ನೆಣಿಸದೆ ಸರ್ವರ ಸಮಾನ ಸ್ವಾತಂತ್ರ್ಯಕ್ಕಾಗಿ ಹೆಣಸಿದೆ; ಸಾಮ್ಯವಾದಿ ಪ್ರಜಾರಾಜ್ಯ ಸ್ಥಾಪಿಸುವುದೇ ಕಾಂಗ್ರೆಸಿನ ಧ್ಯೇಯ, ಕೆಲವೇ ಜನರು ಉನ್ನತಾಧಿಕಾರದಲ್ಲಿದ್ದುಕೊಂಡು ಸುಖಲೋಲರಾಗಿರುವುದೂ ಬಹು ಸಂಖ್ಯಾಕರು ಕಷ್ಟದ ಕಡಲಿನಲ್ಲಿ ಮುಳುಗಿರುವುದೂ ಕಾಂಗ್ರೆಸ್ಸು ತನ್ನ ಗುರಿಯೆಂದೆಣಿಸಿಲ್ಲ" ಎಂಬ ಮಾತಿನಲ್ಲಿ ಕೇಂದ್ರ ಸರಕಾರದ ಒಳನಾಡಿನಾಡಳಿತದ ದೃಷ್ಟಿಯನ್ನೂ ಸ್ಪಷ್ಟಪಡಿಸಿದರು. ಈ ಮಾತುಗಳು ಸರ್ವರಿಗೂ ಸವಿದುತ್ತೆನಿಸದಿರಲಾರವು.

ಅನಂತರ ಪಂಡಿತರು ಈಗ ದೇಶದಲ್ಲಿ ಹಬ್ಬಿರುವ ಕೊಲೆ ಸುಲಿಗೆ ಕೊಳುಗುಳಗಳತ್ತ ಹರಿದು – "ಭಾರತಕ್ಕೆ ಸ್ವಾತಂತ್ರ್ಯದೊಡನೆ ಜಾತೀಯ ದಂಗೆಯ ಭೂತವು ಬಡಿದುಕೊಂಡದ್ದರಿಂದ ನಾಡಿನ ಮುನ್ನಡೆ ನಿಂತು ಹೋಗಿದೆ. ನಿರಾಶ್ರಿತರ ಭಯಂಕರ ಸಮಸ್ಯೆಯನ್ನೆದುರಿಸಬೇಕಾಗಿದೆ. ಈ ಪರಿಸ್ಥಿತಿಯಿಂದ ಕಂಗೆಟ್ಟವರು ಹಿಂದುರಾಜ್ಯ ಸ್ಥಾಪಿಸಬೇಕೆನ್ನುತ್ತಾರೆ. ಅದು ಸರ್ವಥಾ ಶಕ್ಯವಿಲ್ಲ. ಅಲ್ಲದೆ, ನಾಡಿನಲ್ಲಿ ಗೊಂದಲವೆಬ್ಬಿಸುವವರೆಲ್ಲ ನಾಡಹಗೆಗಳೆಂದು ತಿಳಿಯಲಾಗುವುದು" ಎಂದು ತಮ್ಮ ಗಂಡು ದನಿಯಿಂದ ಎಚ್ಚರಿಕೆಯಿತ್ತರು. ಮಹಾತ್ಮಾ ಗಾಂಧಿಯವರು ಇದೇ ಎಚ್ಚರಿಕೆಯನ್ನು ಅನೇಕ ಸಾರಿ ತಮ್ಮ ಪ್ರಾರ್ಥನೋತ್ತರ ಭಾಷಣಗಳಲ್ಲಿ ಒಕ್ಕೂಟದ ಪ್ರಜೆಗಳಿಗೆ ಕೊಟ್ಟಿದ್ದಾರೆ. ನಾಡಿನೇಳಿಗೆಯಲ್ಲಿ ಆಸೆಯುಳ್ಳ ಪ್ರತಿಯೊಬ್ಬ ನಾಡಿಗನೂ ಮೇಲಿನ ಎಚ್ಚರಿಕೆಯನ್ನು ಲಕ್ಷ್ಯಪೂರ್ವಕ ಗ್ರಹಿಸಬೇಕು. ನಾಡಿನ ಉನ್ನತಿಗೆ ಸಾಧಕನಾಗಿ ತಾನು ದುಡಿಯಬೇಕಾದರೆ ಪ್ರತಿಯೊಬ್ಬ ಪ್ರಜೆಯೂ ತನ್ನ ನಂಬಿಕೆಯ ಮುಂದಾಳುಗಳ ಮಾತಿನಲ್ಲಿ ಭರವಸೆಯಿಟ್ಟು ಆ ರೀತಿ ತನ್ನ ನಡತೆಯನ್ನು ತಿದ್ದಿಕೊಳ್ಳಬೇಕು. ಇಂದು ಭಾರತದಲ್ಲಿ ಜಾತೀಯತೆಯ ಕಿಡುಬಗೆಯು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಹಬ್ಬಿದೆ. ಇದರಿಂದ ಬಿಡಗಡೆ ಹೊಂದಲು ಪ್ರತಿಯೊಬ್ಬನೂ ತನ್ನ ಬಗೆಯ ಮಡಿತನಕ್ಕಾಗಿ ಅದನ್ನು ಆಳವಾಗಿ ಶೋಧಿಸಬೇಕು. ಮೇಲಿನ ಎಚ್ಚರಿಕೆಯು ಕೇವಲ ಒಬ್ಬನ ಒಳ್ಳೆಯತನಕ್ಕಾಗಿ ಕೊಟ್ಟದ್ದಲ್ಲ. ಇಡೀ ನಾಡಿನ ಮೇಲ್ಮೆಗಾಗಿ ಎಲ್ಲ ನಾಡಿಗರಿಗೂ ಕೊಟ್ಟದ್ದು—ಎಂಬುದೇ ಈ ಎಚ್ಚರಿಕೆಯ ಮಹತ್ವ. ಇದು ಕೇವಲ ಸದುಪದೇಶವಲ್ಲ, ರಾಜತಂತ್ರದ ಮೂಲಮಂತ್ರವೂ ಹೌದು—ಎಂಬುದನ್ನು ಪ್ರತಿಯೊಬ್ಬನೂ ತಿಳಿದುಕೊಳ್ಳಬೇಕು.

ಹೈದರಾಬಾದಿನ ಹೊಯ್ದಾಟ

ಮುಖ್ಯ ಮಂತ್ರಿಗಳಾದ ಛತ್ತಾರಿ ನವಾಬರ ನೇತೃತ್ವದಲ್ಲ ಹೊಸ ಕಂಡಿಕೆಗಳನ್ನು ತಯಾರಿಸಿಕೊಂಡು ಹೈದರಾಬಾದಿನ ಶಿಷ್ಟಮಂಡಲವು ಪುನಃ ದಿಲ್ಲಿಗೆ ಹೋದ ಸುದ್ದಿ ಆಗಲೆ ಪ್ರಸಿದ್ಧವಾಗಿದೆ. ಆ ಕರಡು ಮೊದಲಿನ ಕಂಡಿಗಿಂತ ಯಾವ ವಿಧದಲ್ಲೂ ಬೇರೆಯಾಗಿಲ್ಲವಾಗಿ ಸಂಧಾನದ ಮಾತುಕತೆ ಮುಂದುವರಿಯದಾಯಿತು. ಇದರ ನಂತರ ನಿಜಾಮರ ಶಿಷ್ಟಮಂಡಲವು ಮತ್ತೆ ತನ್ನ ಕರಾರುಗಳಲ್ಲಿ ಬದಲಾವಣೆ ಮಾಡಿದ ಸುದ್ದಿಯೆದ್ದಿದೆ; ಅಲ್ಲದೆ ಪುನಃ ಹೈದರಾಬಾದಿಗೆ ಹೋಗಿ ಬಂದ ಹಿಂದೀ ಸರಕಾರದ ಸಂಸ್ಥಾನ ಶಾಖೆಯ ಕಾರ್ಯದರ್ಶಿಗಳಾದ ಶ್ರೀ.ವಿ.ಪಿ. ಮೆನನ್ನರನ್ನು ಕಾಣಲಿದೆಯೆಂದು ತಿಳಿದು ಬರುತ್ತದೆ. ಇದರಿಂದ ಉಭಯ ಸರಕಾರಗಳ ಮನಸ್ಸಿನಲ್ಲಿಯೂ ಒಪ್ಪಂದವಾಗಲೇಬೇಕೆಂಬ ಹೆಚ್ಚಿನ ಬಯಕೆಯಿದೆಯೆಂದು ಸ್ಪಷ್ಟವಾಗುತ್ತದೆ. ಇದು ಶುಭ ಸಂಗತಿಯೆಂದು ಹೇಳಬಹುದು. ಸರ್ ಮಿರ್ಜಾ ಇಸ್ಮಾಯಿಲರ ಪ್ರಕರಣದಲ್ಲಿ ಪಾಕಿಸ್ತಾನ ಭಕ್ತರು ಕೈವಾತ ನಡೆಸಿದಂತೆ ಇಂದಾದರೂ ನಡೆಸುತ್ತಿದ್ದಾರೆಂಬುದಕ್ಕೆ ಇತ್ತಿಹಾದುಲ್ ಸಂಸ್ಥೆಯ ಉದ್ಧಟ ಮಾತುಗಳೇ ಸಾಕ್ಷಿಯಾಗಿವೆ. ಆದರೆ ನಿಜಾಮು ಸಾಹೇಬರು ಹಿಂದೀ ಒಕ್ಕೂಟದ ನಡುವಿರುವ ತನ್ನ ಸಂಸ್ಥಾನದ ಸ್ಥಿತಿಗತಿಗಳನ್ನು ಸ್ವಲ್ಪ ಕಂಡೆರೆದು ನೋಡಿದಂತಿದೆ. ಅದರಿಂದಲೇ ಒಪ್ಪಂದವತ್ತ ಮನಸ್ಸಿಲ್ಲದ ಮನಸ್ಸಿನಿಂದಾದರೂ ಭಗೀರಥ ಯತ್ನ ನಡೆಸುತ್ತಿರುವಂತೆ ಕಾಣುತ್ತದೆ. ನಡೆಯಲಿ ಸಾಹೇಬರ ಅಳೆದಾಟ, ಹೊಯ್ದಾಟ!

ಪಾಕಿಸ್ತಾನೀಕ್ರಮದಲ್ಲಿ ಹೇಳಿದ್ದಾಗಿರಲಿ ಇಲ್ಲವೆ ನಿಜ ಸಂಗತಿಯೇ ಆಗಿರಲಿ, ಅಂತೂ ಹೈದರಾಬಾದು ಅತ್ಯಾಧುನಿಕ ಸೈನ್ಯವನ್ನು ಸಾಕಿಟ್ಟುಕೊಳ್ಳಲು ಅಸಮರ್ಥವೆಂದೂ ಕೇವಲ ಆಂತರಿಕ ಅರಾಜಕತೆಯನ್ನು ಅಡಗಿಸುವುದರ ಸಲುವಾಗಿ ಸಂಸ್ಥಾನದ ಸೈನ್ಯವನ್ನು ೨೦ಸಾವಿರಕ್ಕೆ ಏರಿಸಲಾಗಿದೆಯೆಂದೂ ನಿಜಾಮು ಸರಕಾರದ ವಕ್ತಾರನೊಬ್ಬನು ಪ್ರಕಟಿಸಿರುವುದು ಸರಕಾರದ ಸದ್ಬುದ್ಧಿಯನ್ನು ಇಲ್ಲವೆ ಜಾಣ್ಮೆಯನ್ನು ತೋರಿಸುತ್ತದೆ. ಆ ವಕ್ತಾರನು ನಿರಾಶ್ರಿತರೆಂದು ಕೊಂಡು ಹೊಕ್ಕ ಮುಸಲ್ಮಾನರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿರುವುದು ನಿಜವಲ್ಲೆಂದೂ ಗುಪ್ತ ಮಾರ್ಗದಿಂದ ಹೊಸ ಆಯುಧಗಳನ್ನು ತರಿಸಿಕೊಳ್ಳುತ್ತಿರುವುದು ಸುಳ್ಳೆಂದು ಸಾರಿದ್ದಾನೆ. ಆದರೆ ಈ ಸಾರಿಕೆಯ ವಿವರಗಳೆಲ್ಲ ಸತ್ಯವೆಂದು ನಂಬಲು ಸಾಧ್ಯವಿಲ್ಲ. ಏಕೆಂದರೆ ಸತ್ಯಾಗ್ರಹ ಕಾಲದಲ್ಲಿ ಪೋಲೀಸರು ಬಹಳ ಕಡೆ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ್ದರೂ ಅವೆಲ್ಲ ಸುಳ್ಳೆಂದು ನಿಜಾಮು ಸರಕಾರ ಹಿಂದುಸ್ತಾನ ಸರಕಾರಕ್ಕೆ ತಿಳಿಸಿ ತನ್ನಾಗೆ ಕುಳಿತನ್ನನ್ನು ಇಷ್ಟು ಬೇಗ ಓದುಗರು ಮರೆಯಲಾರರು. ಆದುದರಿಂದ ಹಿಂದೀ ಒಕ್ಕೂಟವು ತಕ್ಕ ಪೋಲೀಸು ಮತ್ತು ಗುಪ್ತಚಾರ ವ್ಯವಸ್ಥೆಯನ್ನು ಇಂತಹ ಕಡೆಗಳಲ್ಲಿ ಮಾಡುವುದು ರಾಜತಂತ್ರದ ಜೀವನಾಡಿಯಾಗಿದೆ. ಅತ್ತ ಲಕ್ಷವಿತ್ತು ಹೈದರಾಬಾದಿಗೆ ಮಣಿಯದೆ ಉಳಿದ ಸಂಸ್ಥಾನಿಕರಿಗೆ ಕೊಟ್ಟ ಸವಲತ್ತುಗಳಷ್ಟನ್ನೇ ನಿಜಾಮರಿಗೆ ಕೊಟ್ಟು ಅವರನ್ನು ದಾರಿಗೆ ಹಚ್ಚಬೇಕಾದುದು ಒಕ್ಕೂಟ ಸರಕಾರದ ಕರ್ತವ್ಯ.

ಕಾಶ್ಮೀರದ ಪ್ರಕರಣ

ಪಾಕಿಸ್ತಾನಿಗಳು ಕಾಶ್ಮೀರವನ್ನು ಹೊಕ್ಕು ಅಲ್ಲಿಯ ಜನತೆಯಲ್ಲಿ ಪಾಕಿಸ್ತಾನಕ್ಕೆ ಕಾಶ್ಮೀರ ಸೇರಬೇಕೆಂಬುದನ್ನು ಪ್ರಚಾರ ಮಾಡಲು ನಾನಾ ಮುಖದಿಂದ ಪ್ರಯತ್ನಿಸುತ್ತಿದ್ದಾರೆಂಬುದು ಮೊನ್ನೆಮೊನ್ನಿನ ಸುದ್ದಿ. ಕಾಶ್ಮೀರದಲ್ಲಿ ನೂರಕ್ಕೆ ೮೦ ಕ್ಕಿಂತ ಹೆಚ್ಚು ಜನ ಮುಸಲ್ಮಾನ ಪ್ರಜೆಗಳಿದ್ದು ಹಿಂದು ಅರಸನು ಆಳುತ್ತಿದ್ದಾನೆ. ಪಾಕಿಸ್ತಾನದ ಕಿಡುಗಣ್ಣಿನ ಕೆಲವರು ಅದು ಹಿಂದೀ ಒಕ್ಕೂಟಕ್ಕೆ ಸೇರಬಹುದುದೆಂದು ತರ್ಕಿಸಿ, ಅದನ್ನು ತಡೆಗಟ್ಟಲು ಕಿಡಿಗೇಡಿತನ ಪ್ರಾರಂಭಿಸಿ ಸಂಸ್ಥಾನದ ಹಳ್ಳಿಹಳ್ಳಿಗಳಲ್ಲಿ ಕಾಶ್ಮೀರದಲ್ಲಿ ಮುಸಲ್ಮಾನರ ಜೀವನ ಸರಳವಾಗಿ ನಡೆಯುಗೊತಲಾಗುತ್ತಿಲ್ಲವೆಂದು ಜಗಳದ ಬೀಜ ಬಿತ್ತುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಕಾಶ್ಮೀರವು ಪಾಕಿಸ್ತಾನವನ್ನು ಸೇರಬೇಕೆಂದು ಪ್ರಚಾರ ಮಾಡಲು ಯತ್ನಿಸಿದ ಕಾಶ್ಮೀರ ಟೈಮ್ಸ್ ಎಂಬ ಪತ್ರಿಕೆಯ ಮೇಲೆ ಸಂಸ್ಥಾನ ಸರಕಾರ ಪ್ರತಿಬಂಧ ಹೇರಿದ್ದೂ ಆ ಕಾರಣದಿಂದ ಅದರ ಸಂಪಾದಕನು ಆ ಪತ್ರಿಕೆಯನ್ನು ನಿಲ್ಲಿಸಿದ್ದೂ ಆಗಲೇ ಬಯಲಾದ ಸುದ್ದಿ. ಈ ವಿಷಯದಲ್ಲಿ ಗಡಿಯಲ್ಲಿದ್ದ ಪಾಕಿಸ್ತಾನಿಗಳು ಸಂಸ್ಥಾನದಲ್ಲಿ ಅತಿಕ್ರಮಣ ಮಾಡುತ್ತಿರುವುದನ್ನು ಖಂಡಿಸಿ ಕಾಶ್ಮೀರ ಸರಕಾರವು ಪಾಕಿಸ್ತಾನಕ್ಕೆ ತಂತಿ ಕಳುಹಿತು. ಆ ತಂತಿಯಲ್ಲಿ ಪಾಕಿಸ್ತಾನದ ಪುಂಡರು ಸಂಸ್ಥಾನದ ಒಳಗಡೆ ನುಗ್ಗಿ ಅಲ್ಲಲ್ಲಿ ಆಸ್ತಿ ಪಾಸ್ತಿಗಳನ್ನು ದೋಚಿಕೊಂಡು ಹೋಗುತ್ತಿರುವದಲ್ಲದೆ ಸ್ವತಃ ಪಶ್ಚಿಮ ಪಂಜಾಬಿನ ಸರಕಾರವೇ ಪೆಟ್ರೋಲು, ಆಹಾರ ಬಟ್ಟೆ ಮುಂತಾದವುಗಳ ಪೂರೈಕೆಯನ್ನು ನಿಲ್ಲಿಸಿದೆಯೆಂದೂ ಕಾಶ್ಮೀರದ ದಿವಾನರು ತಿಳಿಸಿದ್ದಾರೆ. ಈ ತಂತಿಗೆ ಪ್ರತ್ಯುತ್ತರವಾಗಿ ತಾವು ಮೊದಲೇ ತಂತಿಯ ಮೂಲಕ ತಿಳಿಸಲಾದ ದೂರುಗಳನ್ನು ಪರಿಹರಿಸದೆ ಪುನಃ ತಮ್ಮ ಮೇಲೇ ಇಂತಹ ಆರೋಪ ಹೊರಿಸಿ ಕಾಶ್ಮೀರವು ತಂತಿ ಕೊಟ್ಟಿರುವುದು ಆಶ್ಚರ್ಯಕರವಿದೆಯೆಂದೂ ಸಶಸ್ತ್ರ ಜನರು ಕಾಶ್ಮೀರ ಪ್ರದೇಶ ಸೇರುತ್ತಿದ್ದಾರೆ. ಶಸ್ತ್ರಾಸ್ತ್ರಗಳನ್ನು ಅವ್ಯಾಹತವಾಗಿ ಹಂಚಲಾಗುತ್ತಿದೆ. ಮುಂತಾಗಿ ತಂತಿಯ ಕೊನೆಯಲ್ಲಿ ಹೇಳಿರುವ ದೂರು ಸುಳ್ಳೆಂದೂ ಪಾಕಿಸ್ತಾನ ಸರಕಾರವು ಕಾಶ್ಮೀರಕ್ಕೆ ತಂತಿಕೊಟ್ಟಿದೆ. ಪಾಕಿಸ್ತಾನದ ಈ ತಂತಿಯಲ್ಲಿ ಕಾಶ್ಮೀರದ ಮುಸಲ್ಮಾನ ಪ್ರಜೆಗಳ ಮತದ ವಿರುದ್ಧ ಸಂಸ್ಥಾನಿಕರು ಹಿಂದೀ ಒಕ್ಕೂಟ ಸೇರಬೇಕೆಂದಿರುವರೆಂದು ಆರೋಪಿಸಲಾಗಿದೆ ಮತ್ತು ಪರಿಸ್ಥಿತಿಯನ್ನು ಪರಾಂಬರಿಸಲು ತಾನು ಒಬ್ಬ ವಿಶೇಷಾಧಿಕಾರಿಯನ್ನು ಕಾಶ್ಮೀರಕ್ಕೆ ಕಳುಹಿರುವದಾಗಿಯೂ ಹೇಳಿದೆ.

ಮೇಲಿನ ಸಂಗತಿಯಿಂದ ಜುನಾಗಡದಲ್ಲಿ ಹೇಗೆ ಸಾಮ್ರಾಜ್ಯಶಾಹಿಯ ಕಾರ್ಯವನ್ನು ಪಾಕಿಸ್ತಾನ ಪ್ರಾರಂಭಿಸಿತೋ ಅದೇ ರೀತಿ ಕಾಶ್ಮೀರದಲ್ಲೂ ಪ್ರಾರಂಭಿಸಿದೆಯೆಂಬುದು ಸ್ಪಷ್ಟವಾಗುತ್ತಿದೆ. ಕಾಶ್ಮೀರದ ಅರಸರು ಪ್ರಜೆಗಳ ಮತದ ವಿರುದ್ಧ ತಾವು ಹೋಗುವುದಿಲ್ಲವೆಂದು ಆಶ್ವಾಸನವಿತ್ತಿದ್ದಾರೆ. ಅದರ ಮೇಲೆ ಪಾಕಿಸ್ತಾನಿಗಳು ಸಂಸ್ಥಾನದಲ್ಲಿ ಅಪಪ್ರಚಾರ ನಡೆಸಲು ಬಂದರೆ, ಅದನ್ನು ಹತ್ತಿಕ್ಕಲು ಗೆಳೆಯರಾದ ಅನ್ಯ ಸರಕಾರದವರ ಸಹಾಯವನ್ನು ತೆಗೆದುಕೊಳ್ಳಲಾಗುವುದೆಂದು ಪಾಕಿಸ್ತಾನಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ನಾರದನಿಗೆ ಕಲಹಪ್ರಿಯನೆಂದು ಬಿರುದಿದ್ದಂತೆ ಪಾಕಿಸ್ತಾನದ ಮುತ್ಸದ್ದಿಗಳು ಇಂದು ಕಾಲು ಕೆರೆದು ಜಗಳ ತೆಗೆದು ತಾವೂ ಮೇಲಿನ ಬಿರುದನ್ನು ಪಡೆಯಲು ಯತ್ನ ನಡೆಸಿದಂತೆ ತೋರುತ್ತದೆ. ಅಲ್ಲದಿದ್ದರೆ ತಟಸ್ಥವೂ ಶಾಂತವೂ ಆಗಿದ್ದ ಕಾಶ್ಮೀರವನ್ನು ಈ ರೀತಿ ಛಲಿಸಲು ಕಾರಣವೇ ಇಲ್ಲ. ಇತ್ತೀಚೆಗೆ ಹಿಂದೀ ಸಂಸ್ಥಾನ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಕಾಶ್ಮೀರದ ಶೇಕ ಅಬ್ದುಲ್ಲಾರವರು ಹಿಂದೀ ಮುಖ್ಯ ಪ್ರಧಾನರಾದ ಜವಾಹರರನ್ನು ನೋಡಿದ್ದಾರೆ. ಹಿಂದೀ ಒಕ್ಕೂಟ ಸರಕಾರದ ಸಂಸ್ಥಾನ ಶಾಖೆಯು ಕಾಶ್ಮೀರ ಸರಕಾರಕ್ಕೆ ತಕ್ಕ ಹಿತೋಪದೇಶ ಮಾಡಿದೆ. ಈ ಎಲ್ಲದರಿಂದ ಕಾಶ್ಮೀರದ ಪ್ರಜೆಗಳೂ ಸರಕಾರವೂ ಶಾಂತತೆಯಿಂದ ಯಾವ ಒಕ್ಕೂಟವನ್ನು ಸೇರಬೇಕು, ಏನು ಮಾಡಬೇಕು ಎಂಬುದನ್ನು ಪರ್ಯಾಲೋಚಿಸುತ್ತಿದ್ದಾರೆ. ಇಂತಹ ಕಾಲದಲ್ಲಿ ಪಾಕಿಸ್ತಾನ ಸರಕಾರವು ವಿನಾಕಾರಣ ತನ್ನ ಪುಂಡರ ಕಿಡಿಗೇಡಿತನವನ್ನು ಲಕ್ಷಿಸದೆ ಕಾಶ್ಮೀರದ ಡೋಗ್ರಾ ತಂಡಗಳು ಅಲ್ಲಿಯ ಮುಸಲ್ಮಾನರ ಮೇಲೆ ಅತ್ಯಾಚಾರ ಮಾಡಿದವೆಂದು ಮುಂತಾಗಿ ಪ್ರತ್ಯಾರೋಪ ಮಾಡುತ್ತ ಕುಂಯೊಡನೆ ನೆವದ ಮೇಲೆ ನೆವವೊಡ್ಡಿ ಜಗಳ ಹೂಡಿದ ತೋಳದಂತೆ ಮೇಲೇರಿಬರುತ್ತಿರುವುದು ಶುಭ ಚಿಹ್ನವಾಗಿ ಕಂಡುಬರುವುದಿಲ್ಲ. ಅಂತರ್ರಾಷ್ಟ್ರೀಯ ಜಗತ್ತಿನಲ್ಲಿ ರಶಿಯ ಮತ್ತು ಅಮೇರಿಕೆಗಳ ನಡುವೆ ಭಿನ್ನಾಭಿಪ್ರಾಯವು ದಿನೇ ದಿನೇ ದೊಡ್ಡದಾಗುತ್ತ ಹೋದಂತ ಈ ರೀತಿಯ ಸುಳ್ಳು ಆರೋಪ ಮತ್ತು ಚಂಗೇಸಖಾನ ಚಟುವಟಿಕೆಗಳಿಂದ ಪಾಕಿಸ್ತಾನವು ಹಿಂದುಸ್ತಾನದ ಗೆಳೆತನ ಕಳೆದುಕೊಂಡು ದೂರ ದೂರ ಸಾರುತ್ತಿರುವುದು ಒಳ್ಳೆಯದಕ್ಕೆಂದು ಯಾರೂ ಹೇಳಲಾರರು. ಪಾಕಿಸ್ತಾನದ ದುರ್ಬುದ್ಧಿ ಈ ಪ್ರಕಾರ ಹೆಚ್ಚುತ್ತ ಹೋದರೆ ಹಿಂದೀ ಒಕ್ಕೂಟವು ಅನಿವಾರ್ಯವಾಗಿ ಉಗ್ರಕ್ರಮ ಕೈಕೊಳ್ಳಬೇಕಾಗಿ ಬರದಿರದು.

ಸಂಯುಕ್ತ ದಕ್ಷಿಣ ಸಂಸ್ಥಾನ

ಕೆಲವು ದಿನಗಳಿಂದ ದಕ್ಷಿಣ ಸಂಸ್ಥಾನಗಳ ಒಕ್ಕೂಟದ ಸುದ್ದಿ ಎಲ್ಲೆಲ್ಲೂ ಕೇಳಿ ಬರುತ್ತಿದೆ. ಕೆಲವು ಜನನಾಯಕರು ಅದನ್ನು ಹೀಗಳೆದರು, ಕೆಲವರು ಹೊಗಳಿದರು. ಪ್ರಜೆಗಳ ಮತಕ್ಕೆ ಎದುರಾಗಿ ನಡೆದುಕೊಳ್ಳುವುದಿಲ್ಲವೆಂದು ಮೊದಲು ಅರಸರು ಅಪ್ಪಣೆಕೊಡಿಸಿದರು. ಯೋಜನೆ ಸಿದ್ಧವಾದ ನಂತರ ನೋಡುವಲ್ಲಿ ಪ್ರಜೆಗಳ ಮತಕ್ಕೆ ಅದರಲ್ಲಿ ಸ್ಥಾನವೇ ಇಲ್ಲವೆಂದು ಕಂಡು ಬಂದುದಾಗಿ ಕೆಲವು ಮುಖಂಡರು ಅಭಿಪ್ರಾಯಪಟ್ಟರು. ಇಷ್ಟೆಲ್ಲ ಆಗುತ್ತಿರುವಾಗಲೆ ದ. ಸಂಸ್ಥಾನಗಳ ಒಕ್ಕೂಟ ಕಾರ್ಯರೂಪಕ್ಕೆ ಬಂದೇ ಬಿಟ್ಟಿತೆಂದು ತಿಳಿಯುತ್ತದೆ. ಅದರಲ್ಲಿ ಸಾಂಗಲಿ, ಹಿರಿ ಮಿರಜ' ಕಿರಿ ಮಿರಜ, ಫಲ್ಟನ, ಭೋರ, ಔಂಧ, ರಾಮದುರ್ಗ ಮತ್ತು ಹಿರಿ ಕುರಂದವಾಡ ಸಂಸ್ಥಾನಗಳು ಸೇರಿವೆ. ಸಂಯುಕ್ತ ದಕ್ಷಿಣ ಸಂಸ್ಥಾನವು ಅಸ್ತಿತ್ವದಲ್ಲಿ ಬಂದುದರ ನೆನಪಿಗಾಗಿ ತಾ. ೨೩ ರ ದಿನ ಮೇಲೆ ಹೇಳಿದ ಸಂಸ್ಥಾನಗಳಲ್ಲಿ ಬಿಡುವನ್ನು ಕೊಡಲಾಗಿದೆ.

"ಈ ಚಿಕ್ಕ ಸಂಸ್ಥಾನಗಳ ಒಕ್ಕೂಟದ ಮುಖಾಂತರ ಪ್ರಾಂತೀಕರಣ ಪ್ರಶ್ನೆ ಸುಲಭವಾದೀತೆಂದು ಪ್ರಾರಂಭದಲ್ಲಿ ಅದಕ್ಕೆ ಪುರಸ್ಕಾರವನ್ನು ಕೊಡಲಾಯಿತಲ್ಲದೆ ಅದಕ್ಕೆ ವೇಗವೂ ಬಂದಿತು. ಆದರೆ ದಿನಗಳೆದಂತೆ ಮೊದಲೊಪ್ಪಿದ ಮಾತುಗಳಲ್ಲಿ ಅರಸರು ಬದಲಾವಣೆ ಮಾಡತೊಡಗಿದರು. ಸತ್ತಾಂತರದ ನಿಜವಾದ ತಿರುಳು ಮತ್ತು ಆತುರತೆ ಅದರಿಂದ ಮಾಯವಾಗತೊಡಗಿತು. ಜನರ ಸಾರ್ವಭೌಮತ್ವವನ್ನು ಒಪ್ಪುವಲ್ಲಿ ಕೂಡ ಕಾಯದೆಯ ಕಸರತ್ತನ್ನು ಮಾಡಲಾಗುತ್ತಿದೆ. ಕನ್ನಡ ಜನತೆಯಲ್ಲಿ ಸಾಶಂಕ ದೃಷ್ಟಿ ಬರುವಂತೆ ೨೩ ಬಹುಮತದ ಕರಾರನ್ನೇ ಹಾಕುವ ಪ್ರಯತ್ನ ನಡೆದಿದೆ— ಎಂದು ಶ್ರಿ. ಶ್ರೀ.ಹ. ಪಾಟೀಲರು ಬರೆದಿರುವುದನ್ನು ಗಮನಿಸಿದರೆ ಅವರು ಹೇಳುವಂತೆ ಒಕ್ಕೂಟದ ಪುರಸ್ಕರ್ತರೇ ಇಂದು ತಮ್ಮ ವಿಚಾರವನ್ನು ಬದಲಿಸಬೇಕೋ ಹೇಗೆ ಎಂಬ ಪ್ರಶ್ನೆ ಏಳತೊಡಗಿದೆ.

ಮೈಸೂರು ತಿರುವಾಂಕೂರುಗಳಂತಹ ದೊಡ್ಡ ಸಂಸ್ಥಾನಗಳೇ ಹೊಣೆಗಾರ ಸರಕಾರವನ್ನು ಜನರಿಗಿತ್ತಿರುವಾಗ ಈ ಚಿಕ್ಕ ಪುಟ್ಟ ಅರಸು ಮರಿಗಳು ಎಷ್ಟೋ ಒಕ್ಕಟ್ಟಿನಿಂದ ತಲೆ ಖರ್ಚುಮಾಡಿದರೂ ಎಚ್ಚೆತ್ತ ನಾಗರಿಕರ ಕಡುನನ್ನಿಗತನದ ಬೇಡಿಕೆಗಳನ್ನು ಹತ್ತಿಕ್ಕುವುದು ಅಸಾಧ್ಯವೆಂಬುದನ್ನು ಅರಿಯದಿದ್ದರೆ ಒಕ್ಕೂಟದ ಒಡೆಯರ ಕೂಟವೇ ಕುಸಿದುಹೋಗುವಂತಾಗದಿರದು.

ಅಂತರರಾಷ್ಟ್ರೀಯ

...ದ ಎಣ್ಣೆಯ ಕತೆ

...ಅಮೇರಿಕ ಮತ್ತು ರಶಿಯಗಳ ... ಸ್ಪರ್ಧೆಗೆ, ಕೆಲವೊಮ್ಮೆ ಮತ್ಸ... ...ರ್ಜ ಎಣ್ಣೆಯ ಗಣಿಗಳೇ ಕಾರ... ರಾಜಕಾರಣಿಗಳು ಬಲ್ಲರು. ಹೋದ ೨೨ ... ಕಾಯರ ಪಕ್ಷ... ಯಿತು. ಅದ...ು ಸಂಘದಲ್ಲಿ ಮೇಲಿನ ದೇಶ ... ವಾರಪತ್ರ... ...ನಿಧಿಗಳ ಧೋರಣಗಳಾದರೂ ಈ ...ಹಲಿದೆ. ...ಸ್ಥಳಗಳನ್ನೇ ಆಧರಿಸಿ ನಿಂತಿವೆ. ...ದಿಂದ ಟೆಹರಾನಿನ ವರೆಗೆ ಪಡು... ...ಅನೇಕ ಕಂಪೆನಿಗಳು ಮೊದಲಿನಿಂದಲೂ ಎಣ್ಣೆಯನ್ನು ಹೀರಲು ಕಾರಖಾನೆ ಹಾಕಿಕೊಂಡು ಕುಳಿತಿವೆ. ಅವುಗಳಲ್ಲಿ ಬ್ರಿಟಿಶ್ ರಾಯಲ್ ಡಚ್‌ಶೆಲ್ ಮತ್ತು ಅಮೇರಿಕದ ರಾಕ್ ಫೆಲ್ಲರ್ ಗುಂಪುಗಳು ಹೆಚ್ಚಿನವು. ಅವುಗಳಲ್ಲೂ ಬ್ರಿಟಿಶ ಕಂಪೆನಿಗೆ ಸಿಕ್ಕಿದ್ದು ಭೀಮನ ಪಾಲು. ಆಂಗ್ಲೋ—ಇರಾಣೀ ಕಂಪೆನಿಯು ವರ್ಷಕ್ಕೆ ೧ ಕೋಟಿ ಎಂಬತ್ತು ಲಕ್ಷ ಟನ್ ಪೆಟ್ರೋಲನ್ನು ವಾಯವ್ಯ ಇರಾನ ಗಣಿಗಳಿಂದ ತೆಗೆಯುತ್ತ ಬಂದಿದೆ. ಹಿಂದೆ ಹೇಳಿದ ಶೆಲ್ ಕಂಪೆನಿಯು ಉಳಿದ ಅನೇಕ ಕಂಪೆನಿಗಳಿಗೆ ಮಾತೃಸ್ಥಾನದಲ್ಲಿದೆ. ೧೯೨೮ ರಲ್ಲಿ ಗುಂಪಿನ ಒಡಂಬಡಿಕೆಯೊಂದು ನಡೆದು ಅಮೇರಿಕದ ರಾಕ್ ಫೆಲ್ಲರ್ ಕಂಪೆನಿಗೆ ನಷ್ಟವಾಗುವಂತಾಯಿತು. ಅದನ್ನು ನೋಡಿ ೧೯೩೩ ರಲ್ಲಿ ಕ್ಯಾಲಿಫೋರ್ನಿಯದ ಒಂದು ಕಂಪೆನಿಯು ಅದರೊಡನೆ ಸೇರಿ ಸೌದಿ ಅರೇಬಿಯದಲ್ಲಿ ೩ ಲಕ್ಷ ೧೮ ಸಾವಿರ ಚ. ಮೈಲು ಜಾಗವನ್ನು ಪಡೆಯಿತು. ಅನಂತರ ೧೯೩೯ ರಲ್ಲಿ ಅರಬ್ಬಿ-ಅಮೇರಿಕ ಕಂಪೆನಿಯು ಸಂ. ಸಂಸ್ಥಾನದ ೧/೮ ರಷ್ಟಿನಷ್ಟಿರುವ ೧೧ ಸಾವಿರ ಚ. ಪ್ರದೇಶವನ್ನು ೨೦೦೦ ದ ವರೆಗೆ ಎಣ್ಣೆ ತೆಗೆಯಲು ಅನುಕೂಲವಾಗುವಂತೆ ಪಡೆದುಕೊಂಡಿತು. ಆದರೆ ಯುದ್ಧ ಕಾಲದಲ್ಲಿ ಸೌದಿ ಅರೇಬಿಯದ ಅರಸನಿಗೆ ೬೦ ಲಕ್ಷ ಡಾಲರು ಬೇಕಾಗಿ ಅದನ್ನು ಈ ಕಂಪೆನಿ ಕೊಡಲಾರದೆ ಬ್ರಿಟಿಶರಿಗೆ ಶರಣಾಗಲು ಅವರು ಆಗಿಂದಾಗ ಒಪ್ಪಿ ಅಮೇರಿಕದ ಕಂಪೆನಿಯ ಭವಿಷ್ಯವನ್ನು ಅಡವು ಹಿಡಿದರು. ಆದರೂ ಅಮೇರಿಕಕ್ಕೆ ದೊಡ್ಡ ನಷ್ಟವಾಗಲಿಲ್ಲ. ವರ್ಷಕ್ಕೆ ೨೦ ಟನ್ ಲಕ್ಷ ಎಣ್ಣೆ ತೆಗೆದರು. ಅಲ್ಲಿಯೇ ದಹರಾನ ಎಂಬ ಒಂದು ನಗರವನ್ನು ೨೦ ಕೋಟಿ ಡಾಲರನ್ನು ಖರ್ಚು ಮಾಡಿ ಅಮೇರಿಕ ಕಟ್ಟಿತು; ೩೦ ಲಕ್ಷ ಡಾಲರಿನ ವೆಚ್ಚದಿಂದ ಒಂದು ಮಿಲಿಟರಿ ವಿಮಾನ ನಿಲ್ದಾಣ ಕಟ್ಟಿತು.

ರಾಸ್ಟನೂರ ಎಂಬ ಕಾರಖಾನೆ ತೆರೆವಲ್ಲಿ ಇಬನ ಸೌದ ಅರಸನು ಯುರೋಪಿಯನ್ ಮಹಿಳೆಯರ ತೆರೆದ ಮುಖಗಳೆದುರು ನಿಂತು ಎಲ್ಲರೆದುರು ಮಾತನಾಡುವ ಅಪೂರ್ವ ಸುಖವನ್ನನುಭವಿಸಿ ಎಣ್ಣೆಯ ಗಣಿಗಳಿಂದ ಆವನಿಗೆ ಬರುವ ವರ್ಷದ ಆದಾಯವಾದ ೬ ಕೋಟಿ ಡಾಲರುಗಳನ್ನು ಕಳೆದುಕೊಂಡನು. ಹಿಂದುಸ್ತಾನದ ೬೦೦ ಸಂಸ್ಥಾನಿಕರ ಜಾತಿಗೇ ಅವನೂ ಸೇರಿದವನಿರಬೇಕು! ಅಂತೂ ಅಮೇರಿಕದ ಕಂಪೆನಿಗೆ ಅದೊಂದು ಸಂಜೀವನಿ ಪ್ರಯೋಗದಿಂದ ಅನಿರೀಕ್ಷಿತ ಲಾಭವಾದಂತಾಯಿತು. ಆದರೂ ಸಾರಿಗೆಯ ತೊಂದರೆಗಳಿಂದ ಬ್ರಿಟಿಶ ಕಂಪೆನಿಗಳೆದುರು ಅದಕ್ಕೆ ನಿಲ್ಲಲಾಗಲಿಲ್ಲ.

ಕಳೆದ ಡಿಸೆಂಬರಿನಲ್ಲಿ ಆಂಗ್ಲೊ—ಇರಾಣೀ ಕಂಪೆನಿಯು ಯುದ್ಧದ ಪರಿಣಾಮವಾಗಿ ನಷ್ಟಕ್ಕೆ ಬಿದ್ದು ಅಮೇರಿಕದ ರಾಕಫೆಲ್ಲರ್ ಕಂಪೆನಿಗೆ ಕೆಲವು ಹಕ್ಕುಗಳನ್ನು ಮಾರಬೇಕಾಯಿತು. ಎರಡೂ ಸೇರಿ ಇರಾಕಿನಿಂದ ಭೂಮಧ್ಯ ಸಮುದ್ರದ ವರೆಗೆ ೧೬೦೦ ಕಿಲೋಮೀಟರ ಉದ್ದದ ಪಂಪು ಹಾಕಬಯಸಿದವು. ಸದ್ಯ: ಬ್ರಿಟಿಶ ಮತ್ತು ಅಮೇರಿಕ ಕಂಪೆನಿಗಳು ಈ ನಡೆಮಾಡಲ ಎಣ್ಣೆಯ ವ್ಯಾಪಾರದಲ್ಲಿ ಒಮ್ಮತದಿಂದ ನಡೆಯುತ್ತಿವೆಯೆಂದು ಹೇಳಬಹುದು; ಆದರೆ ರಶಿಯವನ್ನು ಗ್ರೀಸು ತುರ್ಕಿಗಳಲ್ಲೇ ಸಿಲ್ಲಿಸಿ ಅಜರಬೈಜಾನಿಗೆ ಬರದಂತೆ ನೋಡಿಕೊಂಡು ತಮ್ಮ ಶೇರುಗಳನ್ನು ಹೆಚ್ಚಿಸಿಕೊಂಡು ಅಮೇರಿಕವು ಮುನ್ನಡೆಯಲಿದೆಯೆಂಬುದನ್ನು ಟ್ರೂಮನ್ನರ ಇತ್ತೀಚಿನ ಭಾಷಣಗಳಿಂದ ತಿಳಿಯಬಹುದು. ಹೀಗೆ ಸಿರಿಯ, ಲೆಬನಾನ, ಅರೇಬಿಯ ಪಾಲಿಸ್ತಾನ ಮುಂತಾದ ಕಡೆಗಳಲ್ಲಿಯ ಎಣ್ಣೆಯ ಮೇಲೆ ಉಣ್ಣೆಯಂತೆ ಅಮೇರಿಕ ಕುಳಿತಿದೆ. ಅದರ ಹಿಡಿತದಿಂದ ಮಧ್ಯಪ್ರಾಚ್ಯ ಇನ್ನು ನೂರಾರು ವರ್ಷಗಳ ವರೆಗೆ ತಪ್ಪಿಸಿಕೊಳ್ಳಲಾರದು. ಮಂಗವು ಕೈಯಲ್ಲಿಯ ಮಾಣಿಕ್ಯವನ್ನು ಬಿಸುಟಂತೆ ಉದ್ಯೋಗ ಕೈಗಾರಿಕೆಗಳಲ್ಲಿ ೫ ಶತಮಾನದಷ್ಟು ಹಿಂದುಳಿದ ಮೇಲೆ ಹೇಳಿದ ನಾಡುಗಳು ಇನ್ನು ಸಿರಿಗಾಲವನ್ನು ಕಾಣಬೇಕಾದರೆ ಅಲ್ಲಾವುದ್ದೀನನ ಇಂದ್ರಜಾಲ ದೀಪವನ್ನೇ ತರಬೇಕಾದೀತೆಂದು ಹೇಳಲಾಗುತ್ತದೆ.

ಅಮೇರಿಕದ ಜಾಲವಿಂದು ಮಧ್ಯ ಪ್ರಾಚ್ಯದಲ್ಲಷ್ಟೇ ಅಲ್ಲ, ಚೀನ ಜಪಾನುಗಳ ವರೆಗೂ ಹರಡಿದೆ. ಏಶಿಯದಲ್ಲಿಯ ಎಣ್ಣೆಯನ್ನು ಹೀರಲು ಅದು ಪಣತೊಟ್ಟಿದೆ. ಬಲೂಚಿಸ್ತಾನದಲ್ಲಿ ಕೂಡ ರಾಕ್ ಫೆಲ್ಲರ ಕಂಪೆನಿಯು ಶಾಖೆಯೊಂದು ತೆರೆಯಲ್ಪಡುವುದೆಂದು ತಿಳಿಯುತ್ತದೆ. ಇದರಿಂದ "ಸರ್ವಂ ಭಕ್ಷಯಾಮಿ, ಸಾಗರಂ ಭಕ್ಷಯಾಮಿ" ಎಂದು ಅಮೇರಿಕವಿಂದು ಬಾಯ್ದೆರೆದು ನಿಂತದ್ದು ಸ್ಪಷ್ಟವಾಗಿ ಕಾಣುತ್ತದೆ!

ಏಶಿಯದ ಪ್ರಾದೇಶಿಕ ಪರಿಷತ್ತು

ಅಕ್ಟೋಬರ ೨೭ ರಿಂದ ಹೊಸದಿಲ್ಲಿಯಲ್ಲಿ ಪ್ರಾರಂಭವಾಗುವ ಏಶಿಯದ ಪ್ರಾದೇಶಿಕ ಪರಿಷತ್ತಿನ ವಿಷಯ ಪಟ್ಟಿಕೆಯಲ್ಲಿ ನಾಲ್ಕು ವಿಷಯಗಳಿವೆಯೆಂದು ತಿಳಿಯುತ್ತದೆ. ಸಾಮಾಜಿಕ ಸುರಕ್ಷಿತತೆಯ ಸಮಸ್ಯೆಗಳು, ಕೂಲಿಕಾರರಿಗೆ ಸಂಬಂಧಿಸಿದ ಸಾಮಾನ್ಯ ಧೋರಣ ಮತ್ತು ಆ ಸಂಬಂಧದ ಕಾಯದೆಯನ್ನು ಅಮಲಿನಲ್ಲಿ ತರುವುದು, ಸಾಮಾಜಿಕ ಧೋರಣದ ಆರ್ಥಿಕ ಹಿನ್ನೆಲೆಯನ್ನಾಧರಿಸಿ ಅಂತರ್ರಾಷ್ಟ್ರೀಯ ಕಾಯದೆಗಳನ್ವಯ ಸಾಮಾಜಿಕ ನೀತಿಗಳನ್ನು ಕಾರ್ಯರೂಪಕ್ಕೆ ತರುವ ವ್ಯವಸ್ಥೆ ಮಾಡುವುದು, ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ಕ್ರಮತೆಗೆದು ಕೊಳ್ಳುವುದು. ಇಷ್ಟಲ್ಲದೆ, ಇದರ ಮೇಲೆ ಡೈರೆಕ್ಟರ ಜನರಲ್ಲರ ಹೇಳಿಕೆಯಿದೆ. ಅದು ಪ್ರಾದೇಶಿಕ ಚಟುವಟಿಕೆಗಳ ವಿಷಯವನ್ನು ವಿವರಿಸುತ್ತದೆ; ಅಂತರ್ರಾಷ್ಟ್ರೀಯ ಸಂಘದೊಡನೆ ಅವುಗಳ ಸಹಕಾರದ ಬಗ್ಗೆ ಹೇಳುತ್ತದೆ—ಎಂಬುದಾಗಿ ತಿಳಿದುಬರುತ್ತದೆ. ಭಾರತದಲ್ಲಿ ರಾಜಕೀಯ ಶಾಂತಿ ನೆಲೆಸುವಂತಾಗಿದ್ದರೆ ಇನ್ನೂ ಹೆಚ್ಚು ಉತ್ಸಾಹದಿಂದ ಏಶಿಯದ ರಾಷ್ಟ್ರಗಳ ಹಿತಕ್ಕಾಗಿ ಅದು ದುಡಿಯಲು ಶಕ್ತವಾಗುತ್ತಿತ್ತು. ಆದರೂ ಇಂದು ಏಶಿಯದ ಚಟುವಟಿಕೆಗಳ ಕೇಂದ್ರವಾಗಿ ನಿಲ್ಲಲು ಎದೆಗೊಟ್ಟು ನಿಂತದ್ದು ಭಾರತದ ಧೀರೋದಾತ್ತತೆಗೆ ಒಪ್ಪತಕ್ಕದ್ದಾಗಿದೆ.

ಜಾರ್ಜಿಯದ ಜೈಲಿನ ದುರಂತ

ಕಳೆದ ಜುಲೈಯಲ್ಲಿ ಜೈಲಿನ ಅಧಿಕಾರಿಯು ಜಾರ್ಜಿಯದ ಜೈಲಿನಲ್ಲಿದ್ದ ೮ ನೀಗ್ರೋಗಳನ್ನು ಕೊಂದದ್ದನ್ನು ಸಮರ್ಥಿಸಿ ನ್ಯಾಯ ಸಮಿತಿಯು ತೀರ್ಪುಕೊಟ್ಟಿತೆಂದು ತಿಳಿಯುತ್ತದೆ.

ಗುಂಪುಕಟ್ಟಿಕೊಂಡು ನಿಗ್ರೋ ಕೈದಿಗಳು ಓಡಿಹೋಗುವುದನ್ನು ತಪ್ಪಿಸಲು ಗುಂಡಿಕ್ಕಿದುದಾಗಿ ಅಧಿಕಾರಿಯ ವಾದ. ಆದರೆ ಸಾಕ್ಷಿಗಳು ಅವನು ಕುಡಿದಿದ್ದನೆಂದೂ ಆ ಕೈದಿಗಳು ಹಾವುಗಳಿರುವ ಕೊಳೆನೆಲದಲ್ಲಿ ಕೆಲಸ ಮಾಡಲೊಲ್ಲೆವೆಂದದ್ದಕ್ಕೆ ಕೆರಳಿ ಅವನು ಗುಂಡಿಕ್ಕಿದನೆಂದೂ ಹೇಳಿದರು. ಮಹಾ ನ್ಯಾಯಮಂಡಲ ಮಾತ್ರ ಕಾಯದೆಯ ಸವಲತ್ತು ಕೊಡದೆ ಅವರನ್ನು ಜೈಲಿನ ಅಧಿಕಾರಿ ಕೊಂದುದು ತಪ್ಪೆಂದು ಹೇಳಿದೆ. ಇದರಿಂದ ಬಿಳಿಯರು, ಎಷ್ಟೇ ಬಳ್ಳೆಯವರು, ನಾಗರಿಕರು ಎಂದರೂ ಬೇರೆಯ ಕುಲದ ಪಕ್ಷಪಾತಿಗಳೆಂದೂ ಕರಿಯರು ಹೀನರೆಂಬ ಭಾವ ಅವರ ರಕ್ತನಾಳದಲ್ಲಿ ಹರಿಯುತ್ತಿದೆಯೆಂದೂ ಗೊತ್ತಾಗುತ್ತದೆ. ಹಾಗಲ್ಲದಿದ್ದರೆ ಜೈಲಧಿಕಾರಿ ಬಿಳಿಯರನ್ನಾಗಿದ್ದರೆ ಒಂದೇ ೮ಲ ಗುಂಡಿಕ್ಕಿಕೊಲ್ಲುತ್ತಲೂ ಇದ್ದಿಲ್ಲ, ಒಂದುವೇಳೆ ಕುಡಿದಿದ್ದು ಕೊಂದರೂ ಯಾವ ನ್ಯಾಯಸಮಿತಿಯೂ ಅಂಥ ಕೃತ್ಯವನ್ನು ... ಸಮರ್ಥಿಸುತ್ತಿದ್ದಿಲ್ಲ. ಏಶಿಯ ಖಂಡ ... ಸಿಲ್ಲಲು, ಮತ್ತು ಹಾಗೆನಿಂತು ಪಡುವಣಿಗರನ್ನು ...ಕ್ಷಿಸಲು ಅವರ ಇಂತಹ ಭಾವನೆಗಳು ಬಲವಾ...ದ ಕಾರಣಗಳೆನ್ನಿಸಿವೆ.

ಜರ್ಮನಿಯ ಪರಿಹಾರ ದ್ರವ್ಯ

ಕಳೆದ ಮಹಾ ಯುದ್ಧದಲ್ಲಿ ಸೋತ ಜರ್ಮನಿ ಅದರ ಹಿಂದಿನ ಮಹಾಯುದ್ಧದಲ್ಲೆಂತೋ ಅಂತೆಯೇ ಗೆದ್ದ ನಾಡಿಗರಿಗೆಲ್ಲ ಪರಿಹಾರದ್ರವ್ಯ ಕೊಡಬೇಕಾಗಿದೆ. ಈ ಪರಿಹಾರ ಕಾರ್ಯದ ಯೋಜನೆಯನ್ನು ಆಂಗ್ಲೋ ಅಮೇರಿಕನ್ನರು ತಯಾರಿಸುತ್ತಿರುವರು. ಅದರಲ್ಲಿ ಭಾಗವಹಿಸಲು ಜರ್ಮನಿಯ ಸಲಹೆಗುಂಪಿಗೆ ಅವಕಾಶ ಕೊಡಲಿಲ್ಲವೆಂದು ಅದು ತನ್ನ ಕೆಲಸವನ್ನು ಸದ್ಯಕ್ಕೆ ನಿಲ್ಲಿಸಿಬಿಟ್ಟದೆಯೆಂದು ತಿಳಿಯುತ್ತದೆ. ಜರ್ಮನರು ಪರಿಹಾರರೂಪವಾಗಿ ಆಂಗ್ಲೋ ಅಮೇರಿಕನ್ನರ ಆಳಿಕೆಗೆ ಒಳಪಟ್ಟ ಭಾಗದಿಂದ ೬೮೨ ಉದ್ಯೋಗಿಗಳ ಯಂತ್ರಸಾಧನಗಳನ್ನು ಆಂಗ್ಲೋ ಅಮೇರಿಕನ್ನರಿಗೆ ಕೊಡಬೇಕೆಂದು ಹೇಳಲಾಯಿತು. ಜರ್ಮನರು ಎಷ್ಟೇ ವಿರೋಧಿಸಿದರೂ ಕೇಳದೆ ಅವುಗಳನ್ನು ಒಯ್ಯಲಾಗುವವೆಂದು ತಿಳಿಯುತ್ತದೆ. ಇದಲ್ಲದೆ ಜರ್ಮನಿಯ ನೌಕಾದಳದ ೩೧ ಹಡಗುಗಳನ್ನು ಫ್ರಾನ್ಸಿಗೆ ಕೊಡಬೇಕೆಂದು ನಿರ್ಧರಿಸಲಾಗಿದೆ. ಅದರ ಜೊತೆಗೊಂದು ೪೦ ಸಾವಿರ ಟನ್ನಿನ ತೇಲು-ಧಕ್ಕೆ, ೩ ವಿನಾಶಿಕೆಗಳು, ಒಂದು ಟ್ಯಾಂಕ ಹೊರುವ ಹಡಗು, ೭ ವಿಶಿಷ್ಟ ನಾವೆಗಳು, ೨ ಟಾರ್ಪೆಡೊ ಹೊರುವ ಹಡಗುಗಳು ಇವನ್ನೂ ಕೊಡಲಾಗುವದು.

ಬ್ರಹ್ಮ ದೇಶದ ಭವಿಷ್ಯ

ಬರ್ಮೀಯರಿಗೆ ಅಧಿಕಾರ ಒಪ್ಪಿಸಿದ ಬಳಿಕ ಅಮಲಿನಲ್ಲಿ ಬರುವ ಒಂದು ಒಪ್ಪಂದಕ್ಕೆ ಬ್ರಿಟನ್ನಿನ ಮುಖ್ಯ ಮಂತ್ರಿ ಅಟ್ಲೀಯವರೂ ಬ್ರಹ್ಮ ದೇಶದ ಮುಖ್ಯ ಮಂತ್ರಿ ಥಾಕಿನನೂ ಅವರೂ ಅಕ್ಟೋಬರ ೧೭ ರಲ್ಲಿ ಸಹಿ ಹಾಕಿದರು.

ಬ್ರಹ್ಮ ದೇಶದ ಪ್ರಾತಿನಿಧಿಕ ಘಟನಾ ಸಮಿತಿಯು ಸ್ವತಂತ್ರ ಬ್ರಹ್ಮದೇಶವು ಬ್ರಿಟಿಶ ಕಾಮನ್‌ವೆಲ್ತಿನ ಹೊರಗೆ ನಿಂತು ತನ್ನ ಭವಿಷ್ಯವನ್ನು ತಾನು ರೂಪಿಸಿಕೊಳ್ಳುವುದೆಂದು ನಿರ್ಣಯಿಸಿದೆ. ಮುಖ್ಯ ಮಂತ್ರಿ ಅಟ್ಲೀಯವರು ತಮ್ಮ ಭಾಷಣದಲ್ಲಿ ಬ್ರಹ್ಮ ದೇಶವು ಕಾಮನವೆಲ್ತಿನಿಂದ ಹೊರ ನಿಲ್ಲಲು ನಿರ್ಣಯಿಸಿದ್ದು ಖೇದಕರವೆನಿಸಿದರೂ ಅದು ಹಗೆತನದ ಭಾವವನ್ನಿಟ್ಟು ಕೊಂಡಲ್ಲನೆಂದು ಅಭಿಪ್ರಾಯಪಟ್ಟರು. ಬ್ರಹ್ಮ ದೇಶದ ಕಡೆಯಿಂದ ಮುಖ್ಯ ಪ್ರಧಾನ ಥಾಕಿನನೂ ಅವರು ಬ್ರಿಟಿಶರ ಗೆಳೆತನ ಎಂದೂ ಉಳಿಯುವಂಥದೆಂದೂ ಅವರ ನೈತಿಕ ಹಾಗೂ ಬೌದ್ಧಿಕ ನೇತೃತ್ವವು ಜಗತ್ತಿಗೊಂದು ಮಾದರಿಯಾಗಿದೆಯೆಂದೂ ಉತ್ತರಿಸಿದರು. ಏಶಿಯವೆಂದರೆ ತನ್ನ ಮನೆಯೆಂದು ತಿಳಿದುಕೊಂಡ ಭಾರತಕ್ಕೆ ಬ್ರಹ್ಮದೇಶ ಸ್ವತಂತ್ರವಾಗುವುದು ಅತ್ಯಂತ ಪ್ರಿಯಕರವಾದ ಸಂಗತಿಯಾಗಿದೆ. ನ್ಯೂಯಾರ್ಕಿನಲ್ಲಿ ಅಮೇರಿಕದ ಪರರಾಷ್ಟ್ರ ಧೋರಣ ಸಂಘದಲ್ಲಿ ಮಾತನಾಡುತ್ತ ಶ್ರೀ ವಿಜಯಲಕ್ಷ್ಮಿ ಪಂಡಿತರು ಏಶಿಯದ ಗಂಡಾಂತರಗಳ ಬಗ್ಗೆ ಅಮೇರಿಕಕ್ಕೆ ತಿಳುವಳಿಕೆ ಕೊಟ್ಟು ಇಲ್ಲಿಯ ಜನಾಂಗಗಳ ಪುನರುದ್ಧಾರವಾಗಬೇಕಾಗಿರುವುದರ ಮಾತೆತ್ತಿದ್ದೇ ಇದಕ್ಕೆ ಸಾಕ್ಷಿಯಾಗಿದೆ. ಕಾಯದೆಯ ಪ್ರಕಾರ ಹಿಂದುಸ್ತಾನವು ೧೯೪೮ ನೆಯ ಜೂನಿನಲ್ಲಿ ಸ್ವತಂತ್ರವಾಗುವ ಹೊತ್ತಿಗೆ ಬ್ರಹ್ಮ ದೇಶವು ಸಂಪೂರ್ಣ ಸ್ವತಂತ್ರವಾಗುವುದರಲ್ಲಿ ಸಂದೇಹವಿಲ್ಲ.

ಚಿಕ್ಕ ಸಭೆಯ ಹುಟ್ಟು

ರಶಿಯದ ವೀಟೋ ಪ್ರಯೋಗ ಬಹಳವಾಗಿ ಅದನ್ನು ಹತ್ತಿಕ್ಕಲು ಅಮೇರಿಕವು "ಚಿಕ್ಕ ಸಭೆ" ಯೊಂದನ್ನು ತಯಾರಿಸಲು ಸದಸ್ಯ ರಾಷ್ಟ್ರಗಳ ಬೆಂಬಲ ಪಡೆಯಿತೆಂದು ತಿಳಿದು ಬಂದಿದೆ. ಅದನ್ನು ಯುಕ್ರೇನಿನ ಪ್ರತಿನಿಧಿಯಾದ ಡಿಮಿತ್ರಿ ಮನ್ವಿಲ್ಸಿಯು ತಿರಸ್ಕರಿಸಿ ಅಮೇರಿಕವು ಜಗಳಗಂಟಿಕವಾಗಿದೆಯೆಂದು ಟೀಕಿಸಿದನು. ರಶಿಯದ ಪಕ್ಷವು ಅದಕ್ಕೆ ಮತಕೊಡಲಿಲ್ಲ. ಇಜಿಪ್ತದಿಂದ ಬ್ರಿಟಿಶ ಸೈನ್ಯ ಹೊರಡಿಸಲು ಅಡ್ಡಬಂತೆಂದೂ ಇಂಡೊನೇಶಿಯದ ಪ್ರಶ್ನೆ ಸರಿಯಾಗಿ ಇತ್ಯರ್ಥವಾಗದಂತೆ ಮಾಡಿತೆಂದೂ ಅಮೇರಿಕವನ್ನು ರಶಿಯದ ಪ್ರತಿನಿಧಿ ಗ್ರಾಮಿಕೋ ದೋಷರಾಗಿ ಹಳಿದನು. ಆದರೂ "ಚಿಕ್ಕ ಸಭೆ" ಉಳಿದವರ ಮತ ಬಲದಿಂದ ಹುಟ್ಟಿಕೊಂಡಿತು. ಅದೊಂದು ಯೋಜನೆಯನ್ನು ಬರೆಯುವುದಂತೆ. ಅದರಿಂದ ವೀಟೋ ಪ್ರಯೋಗ ರೋಗಕ್ಕೆ ಪ್ರತೀಕಾರ ಉಂಟಾಗುತ್ತದಂತೆ; ಅಂದರೆ ರಶಿಯದ ಕೈಕಟ್ಟಿದಂತಾಗಿ ಸಿಟ್ಟು ಹರಿದುಕೊಂಡು ಅದು ಸಂ. ರಾ. ಸಂಘದಿಂದ ಹೊರಬೀಳುವಂತಾಗುವುದೆಂದು ಹೇಳಬಹುದಂತಾಗಿದೆ. ಒಂದೇ ಅಮೇರಿಕ ಗೆಲ್ಲಬೇಕು, ಇಲ್ಲವೆ ರಶಿಯ ಗೆಲ್ಲಬೇಕು—ಅಲ್ಲಿಯ ವರೆಗೆ ಜಗತ್ತಿನಲ್ಲಿ ಶಾಂತಿಯುಂಟಾಗಲಾರದೆಂದು ತೋರುತ್ತದೆ. ಎಣ್ಣೆ ಸೀಗೆಯ ಸಂಬಂಧ ಎಲ್ಲಿಯ ವರೆಗೆ ನಿಂತೀತು?

ಸ್ಪೇಯಿನಿನಲ್ಲಿ ಬಂಡಾಯ

ಸ್ಪೇಯಿನಿನಲ್ಲಿ ಒಂದು ಬಂಡಾಯವೆದ್ದು ಅಲ್ಲಿಯ ಸರ್ವಾಧಿಕಾರಿಯಾದ ಜನರಲ್ ಫ್ರ್ಯಾಂಕೋವಿನ ತಲೆತಿನ್ನುತ್ತಿದೆ. ಕೆಡಿಜ್ ಎಂಬ ಬಂದರಿನಲ್ಲಿ ಹತ್ತು ವರ್ಷಗಳಿಂದ ಕೂಡಿಟ್ಟಿದ್ದ ಸಿಡಿಮದ್ದಿನ ಗುಂಡಿ (Mines) ಒಮ್ಮಿಂದೊಮ್ಮೆ ಸಿಡಿದು ಅನಾಹುತ ಸಂಭವಿಸಿ ೧೫೫ ಜನರು ತೀರಿಕೊಂಡರು; ಸಾವಿರಾರು ಜನರು ಗಾಯಗೊಂಡರು; ಹಡಗಿನ ಧಕ್ಕೆಗಳೆಲ್ಲ ಕಿತ್ತಿದ್ದು ಚೆಲ್ಲಿ ಹೋದವು. ಇದಕ್ಕೆಲ್ಲ ಒಬ್ಬ ಸೈನಿಕನು ಕಾರಣನೆಂದು ಇತ್ತೀಚೆಗೆ ತಿಳಿದು ಬಂದಿದೆಯೆಂದು ಹೇಳಲಾಗುತ್ತದೆ.

ಇದೇ ಪ್ರಕಾರ ಅಲ್ಲಲ್ಲಿ ನಡೆಯಾಗುತ್ತಿರುವ ಕೊಟಯುದ್ಧವನ್ನು ಉಗ್ರರೀತಿಯಿಂದ ಪ್ರತಿಬಂಧಿಸಲು ಸುರಕ್ಷಿತತೆ ಕಾಯ್ದುಕೊಳ್ಳಲು ಮಂತ್ರಿಮಂಡಲವೊಂದನ್ನು ಸ್ಥಾಪಿಸಬಹುದೆಂದು ತಿಳಿಯುತ್ತದೆ. ಅಸ್ಟೂಲವೆಂಬ ಸ್ಥಳದಲ್ಲೂ ಮೇಲೆ ಹೇಳಿದಂತೆಯೇ ಸಿಡಿತವುಂಟಾಯಿತೆಂದು ಸುದ್ದಿ. ಪೀರನೀಸ ಪರ್ವತಕ್ಕೂ ಸರಗೋಸ ಪ್ರದೇಶಕ್ಕೂ ನಡುವಿರುವ ಮೊಸ್ತ್ರಂಜವೆಂಬಲ್ಲಿಗೆ ಅತ್ಯಾಧುನಿಕವಾದ ತನ್ನಿಂದತಾನೇ ಕೆಲಸ ಮಾಡುವ ಆಯುಧಗಳನ್ನು ಧರಿಸಿದ ತರುಣರು ಗುಂಪುಗುಂಪಾಗಿ ಹೋಗುತ್ತಿರುವುದು ಕಂಡುಬಂದಿದೆ. ಲಿಸ್ಟರ್ ಮತ್ತು ಮೊಡೆಸ್ಟೋ ಎಂಬಿಬ್ಬರು ಈ ಕಳ್ಳ ದಂಡಿನ ಒಡೆಯರು. ಇವರು ರೇಡಿಯೋದ ಮೂಲಕ ತಮ್ಮ ಜನರಿಗೆ ಸೈನ್ಯದ ತರಬೇತಿಕೊಡುತ್ತಿದ್ದಾರೆ. ಅಡಗಿಕೊಂಡು ಅಲ್ಲಲ್ಲಿ ಸರಕ್ಕನೆ ದಾಳಿಮಾಡುವ ಇವರ ಕಣ್ಣು ಮುಚ್ಚಾಲೆಯಿಂದ ಸ್ಪೇಯಿನಿನ ಸರಕಾರಕ್ಕೆ ತಲೆನೋವು ಉಂಟಾಗಿದೆ. ಕೊರ್ಡೋವದ ಹತ್ತಿರ ಒಂದು ರೈಲುಹಳಿಯ ಸಾಲನ್ನು ಸಿಡಿಸಿಬಿಸಲಾಯಿತೆಂದು ಸರಕಾರಕ್ಕೆ ಗೊತ್ತಾಯಿತು. ಮೊಸ್ತ್ರಂಜದಲ್ಲಿ ಕಳ್ಳದಂಡಿಗೂ ರೈತರಿಗೂ ಕಡು ಹಗೆತನವಿದೆ. ಸರಕಾರದ ಸೈನಿಕರು ಎಷ್ಟೋ ಸಲ ಹರಿದು ಚೂರಾದ ಹೆಣಗಳು ಮರದ ಕೊಂಬೆಯಿಂದ ಜೋಲಾಡುತ್ತಿರುವದನ್ನು ನೋಡಿದ್ದಾರೆ. ತೆರೂಯಲ ಹತ್ತಿರ ಸೇತುವೆಯೊಂದನ್ನು ನೀರುಪಾಲು ಮಾಡಿದ್ದನ್ನು ಕಂಡರು.

ಮದ್ರಿದ, ಬಾರ್ಸಿಲೋನ ಮುಂತಾದ ನಗರಗಳಲ್ಲಿ ಬಾಂಬು ಬೀಳುವದು ಮೊದಲಾದ ಈ ಕೂಟಯುದ್ಧಕ್ಕೆ ಸಂ. ರಾ ಸಂಘದಲ್ಲಿ ಸ್ಪೇಯಿನಿನ ಪ್ರಶ್ನೆ ಈಗ ಚರ್ಚೆಗೆ ಬಂದಿರುವದು ಕಾರಣವೆಂದು ತಿಳಿಯಲಾಗಿದೆ. ಇದಲ್ಲದೆ ಈ ಕಳ್ಳಬಂಟರ ಫ್ರಾನ್ಸಿನ ಮೇಲೂ ಸಂಶಯ ಉಂಟಾಗುವಂತಿದೆ. ಯುದ್ಧಕಾಲದಲ್ಲಿ ಹೊರಗೋಡಿಸಲ್ಪಟ್ಟ ಸ್ಪೇಯಿನಿನ ಮಂತ್ರಿಮಂಡಲ ಪ್ಯಾರಿಸ್ಸಿನಲ್ಲಿದೆ, ಫ್ರಾನ್ಸು ಸ್ಪೇಯಿನಿನೊಡನೆ ಟಪ್ಪಾಲು ತಂತಿ ಮುಂತಾದ ಎಲ್ಲ ಸಂಪರ್ಕವನ್ನೂ ಆ ಕಾಲದಲ್ಲಿ ಕಡಿದು ಕೊಂಡದ್ದು ಹಾಗೇ ಇದೆ. ಈ ಬಗ್ಗೆ ಎರಡು ತಿಂಗಳಿಂದ ಎರಡೂ ಸರಕಾರಗಳಲ್ಲಿ ಮಾತುಕತೆ ನಡೆದಿದೆ; ಆದರೆ ಇನ್ನೂ ಯಾವ ನಿರ್ಣಯಕ್ಕೂ ಬರಲಾಗಲಿಲ್ಲ. ಸ್ಪೇಯಿನ್ ಸರಕಾರವು ಹೊರಗಟ್ಟಲಾದ ಮಂತ್ರಿಮಂಡಲಕ್ಕೆ ಮಾನ್ಯತೆ ಕೊಡಬಾರದೆಂದೂ ಯಥಾಪೂರ್ವ ಟಪ್ಪಾಲು ಮುಂತಾದ ಸಂಪರ್ಕ ಸ್ಥಾಪಿಸಲ್ಪಡಬೇಕೆಂದೂ ಫ್ರಾನ್ಸ ಸರಕಾರವನ್ನು ಕೇಳಿಕೊಂಡಿದೆ.

ಪಾಲಿಸ್ತಾನದಲ್ಲಿ ಸಿಡಿಮದ್ದು

ಪಾಲಿಸ್ತಾನದ ಯೆಹೂದಿಗಳು ಅಕ್ಟೋಬರ ೧೭ರಲ್ಲಿ ಸಂ. ರಾ. ಸಂಘಕ್ಕೆ ಬ್ರಿಟನ್ನು ಪಾಲಿಸ್ತಾನದಿಂದ ತೊರಟು ಹೋದರೆ ತಾವು ಎಲ್ಲದಕ್ಕೂ ಸಿದ್ಧರಾಗಿದ್ದೇವೆಂದು ನೋಟೀಸು ಕೊಟ್ಟಿದ್ದಾರೆ. ಒಂದಂಗುಲ ಜಾಗವನ್ನೂ ತಾವು ಬಿಡುವವರಲ್ಲವೆಂದು ಪಾಲಿಸ್ತಾನದ ಅರಬ್ಬೀ ಮುಖಂಡನಾದ ಜಮಾಲ ಹುಸ್ಸೇನಿಯು ಸಂ. ರಾ. ಸಂಘದ ಪಾಲಿಸ್ತಾನ ಸಮಿತಿಗೆ ಎಚ್ಚರಿಕೆಯಿತ್ತಿದ್ದಾನೆ. ಜೆರೂಸಲೇಮಿನಲ್ಲಿ ಅರಬ್ಬೀ ಮುಖ್ಯ ಸೇನಾಪತಿಯನ್ನು ನಿಯಮಿಸಲಾಗಿದೆ. ಆತನೆಂದರೆ ಹಿಂದಿನ ಇರಾಕಿ ಮುಖ್ಯ ಮಂತ್ರಿ ಹಾಗೂ ಸೈನ್ಯದ ಮುಖರಿಡನಾದ ತಹಾ ಹಶೀಮಪಾಶಾ ಎಂಬವನು. ಇಂತಹ ಸಂದರ್ಭದಲ್ಲಿ ಸಂ. ರಾ. ಸಂಘದ ಪಾಲಿಸ್ತಾನ ಸಮಿತಿಯು ಯಾವ ತೀರ್ಪು ಕೊಡುವುದೋ ತಿಳಿಯದು. ನಾಡನ್ನು ಒಡೆಯಬೇಕೆಂದು ಕೊಟ್ಟರೆ ಅರಬರು ವಿಷ ಕಾರುವರು; ಒಡೆಯಬಾರದೆಂದರೆ ಯೆಹೂದಿಗಳು ಬೆಂಕಿಯಾಗುವರು. ಅಂತೂ ಪಾಲಿಸ್ತಾನದಲ್ಲಿ ಪ್ರಳಯ ತಾಂಡವ ಪ್ರಾರಂಭಿಸುವದೆಂಬುವರಲ್ಲಿ ಎಳ್ಳಷ್ಟು ಸಂದೇಹವಿಲ್ಲ. ತೀರ್ಪು ಹೊರಬಿದ್ದರೆ ಸಾಕು ಸಿಡಿಮದ್ದು ಹೊತ್ತಿ ಸಿಡಿಯುವುದು!

X X X X

ರಶಿಯ ಮತ್ತು ಪರ್ಶಿಯಗಳ ನಡುವೆ ಎಣ್ಣೆ ಒಪ್ಪಂದ ಪೂರೈಸಲ್ಪಡಬೇಕೆಂಬ ರಶಿಯದ ಒತ್ತಾಯವನ್ನು ಕಂಡು ರಶಿಯ ಹಾಗೂ ತುರ್ಕಿ ಗಡಿಗಳಲ್ಲಿ ಪರ್ಶಿಯದ ರಕ್ಷಣಾ ದಳವು "ಮಾರ್ಶಲ ಲಾ" ಜಾರಿ ಮಾಡಿದೆಯೆಂದು ತಿಳಿಯುತ್ತದೆ. ಇದೇ ಸಮಯದಲ್ಲಿ ಪರ್ಶಿಯದ ಮುಖ್ಯ ಪ್ರಧಾನನಾದ ಗವಾಮುಸ್ ಸುಲ್ತಾನೆಯು ಆ ವಿಷಯದಲ್ಲಿ ಒಂದು ಹೇಳಿಕೆಯನ್ನು ಹೊರಡಿಸುವನೆಂದು ಸುದ್ದಿ.

ನಮ್ಮ ಹುಕ್ಕೇರಿಕರ ಮಾಸ್ತರರು

ಬರೆದವರು— ಶ್ರೀ ಮಾಧವ ಕೌಜಲಗಿ, ಬಿ. ಕಾಂ.

ಆಗಿನ್ನೂ ನನಗೆ ಶ್ರೀ ಹುಕ್ಕೇರಿಕರ ರಾಮರಾಯರ ಪರಿಚಯವು ಆಗಿದ್ದಿಲ್ಲ. ಆದರೆ ನನಗೆ ಗ್ರಾಮೋದ್ಯೋಗ ಸಮಿತಿಯಲ್ಲಿ ಅವರ ಮಾರ್ಗದರ್ಶನದಡಿಯಲ್ಲಿ ಕೆಲಸ ಮಾಡಬೇಕೆಂದು ನಿಯಮಿಸಿದ್ದಕ್ಕಾಗಿ ನನಗೆ ಧಾರವಾಡಕ್ಕೆ ಅವರಿಗೆ ಭೆಟ್ಟಿಯಾಗಲು ಹೋಗಬೇಕಾಗಿತ್ತು. ಒಂದು ದಿನ ಮುಂಜಾನೆಯಲ್ಲಿ ಅವರ ಮಗನಿಗೆ ಭೆಟ್ಟಿಯಾಗಿ "ಏನರಿ ಮಾಸ್ತರರ ಧಾರವಾಡದ ಪತ್ತೆ ಏನು" ನನಗೆ ಅವರಿಗೆ ಹೋಗಿ ಭೆಟ್ಟಿಯಾಗಬೇಕಾಗಿದೆ. ಎಂದು ಕೇಳಿದೆ. ಅದಕ್ಕೆ ಅವನು "ಅದಕ್ಕೇನ್ರಿ ಧಾರವಾಡಕ್ಕೆ ಹೋಗಿ "ಅಕ್ಕಲಕಾ ದುಕಾನ" ಎಲ್ಲಿ ಅದೆ ಎಂದ ಕೇಳ್ರಿ. ಬೇಕಾದವ್ರು ತೋರಸ್ತಾರ. ಅದೇ ಮಾಸ್ತರರ ಮನೆ" ಎಂದು ಹೇಳಿದನು. ನನಗೆ ಸೋಜಿಗವಾಯ್ತು, ಆಗ್ಗೆ ಅವನಿಗೆ ವಿಶೇಷವೇನೂ ಕೇಳದೆ ಹಾಗೆ ಹೊರಟೆ.

ಜನಸೇವೆ

ಧಾರವಾಡದಲ್ಲಿ ಒಂದು ಅರ್ಧ ದಿನವೇ ಅವರ ಮನೆಯಲ್ಲಿದ್ದೆ. ಬೆಳಗಿನ ಸುಮಾರು ೭ ರಿಂದ ೮ ಘಂಟೆಯ ವರೆಗೆ ಕುಳಿತು ಎಣಿಸಿದರೆ ೧೫ ಜನರು ಅವರಲ್ಲಿಗೆ ಬಂದಿದ್ದರು. ಒಬ್ಬರು "ಮಾಸ್ತರ, ಧಾರವಾಡದ ಜೇನುಸಾಕುವ ಉದ್ಯೋಗದ ವಿಚಾರ ಏನಾತ್ರಿ" ಎಂದು ಕೇಳಿದರು. ಮತ್ತೊಬ್ಬರು "ಮಾಸ್ತರ ಆ ಬ್ಯಾಂಕದ್ದು ಏನುಮಾಡೋಣ್ರಿ" ಎಂದು, ಮೂರನೆಯವರು "ಮಾಸ್ತರ ಸರಕಾರದವರು ನಮಗ ಭಾಳ ಅನ್ಯಾಯ ಮಾಡ್ಯಾರಿ. ಅದಕ್ಕೆ ನಮ್ಮದೊಂದು ಅರ್ಜಿ ತಮ್ಮ ಕಡೀಗೆ ತಂದೀವಿ. ಅದರ ಯೋಗ್ಯ ವಿಚಾರಮಾಡರಿ." ಎಂದು, ಇನ್ನೊಬ್ಬರು ಕರ್ನಾಟಕ ವಿದ್ಯಾಪೀಠ ಸಲುವಾಗಿ ಬಂದಿದ್ದರು. ನಂತರ ಕರ್ನಾಟಕ ಏಕೀಕರಣ ಕಾರ್ಯಕರ್ತರು, ಆ ಮೇಲೆ ಕೆಲವರು ತಮ್ಮ ಕೆಲಸ ಅಥವಾ ತಮ್ಮ ಮಕ್ಕಳ ಕೆಲಸಕ್ಕಾಗಿ ಬಂದಿದ್ದರು. ಯಾರೊ ಒಬ್ಬರು ತಮ್ಮ ತಂದೆಗೆ ಬಹಳ ಜಡ್ಡಾಗಿದ್ದರಿಂದ ಒಬ್ಬ ಒಳ್ಳೆ ಡಾಕ್ಟರರಿಗೆ ಪತ್ರ ಬೇಡಲು ಬಂದಿದ್ದರು. ಜಿಲ್ಹಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರು ಏನೊ ಕೇಳಲಿಕ್ಕೆ ಬಂದಿದ್ದರು. ಕೆಲವು ಮುದ್ರಣಾಲಯದವರು ಅಲ್ಲಿದ್ದರು. ಜೆಲ್ಲದ ಕಂಟ್ರೋಲದ ಬಗ್ಗೆ ಏನೊ ಕೇಳಬೇಕೆಂದು ಕೆಲವು ವ್ಯಾಪಾರಸ್ಥರು, ಮಿಂಚಿನ ಬಳ್ಳಿಗಾಗಿ ಏನೊ ಸಲಹೆ ಕೇಳಲಿಕ್ಕೆ ಬಿ.ಜಿ.ಬಂದು ಮಾಧವರು ಆ ಮೇಲೆ ಬಂದರು. ಚರಖಾಸಂಘದ ಏನು ಒಂದು ಯೋಜನೆಯನ್ನು ಶ್ರೀ ಪಡಬಿಯವರು ತಂದಿದ್ದರು. ನಗರದಲ್ಲಿ ಸಾರ್ವಜನಿಕ ಕೆಲಸಕ್ಕಾಗಿ ಒಂದು ಕಟ್ಟಡ ಬೇಕೆಂದೂ ಮತ್ತು ಬರಗಾಲದ ನಿಮಿತ್ತ ಇಂತಿಂಥ ಕೆಲಸ ಮಾಡಬೇಕೆಂದೂ ಶ್ರೀ ಮುದಕಪ್ಪ ಎಂಬ ಒಬ್ಬ ರೈತರು ಬಂದಿದ್ದರು. ಸೇಲ್ಸಟ್ಯಾಕ್ಸ ಹಾಗೂ ಟೆನನ್ಸಿ ಬಿಲ್ಲಿನ ಕೆಲವು ಲೋಪದೋಷ ಹೇಳುವದಕ್ಕೆ ಕೆಲವರು ಆತುರರಾಗಿ ಬಂದಿದ್ದರು.

ಇವರೆಲ್ಲರ ಜೊತೆಗೆ ಗ್ರಾಮೋದ್ಯೋಗ ಕೆಲಸಕ್ಕೆ ಅವರ ಮಾರ್ಗದರ್ಶನ ಕೋರಲು ನಾನು ಬಂದಿದ್ದೆ. ಹೀಗೆ ಬಹಳ ಜನರು ಬಂದ ಹೋಗುವದರಿಂದಲೇ ಮಾಸ್ತರರ ಮನೆಯ ಪಾವಟಿಗೆಗಳು ಮೇಲೆ ಕೆಳಗೆ ಆಗಿಬಿಟ್ಟವೆ! ಅಂತೂ "ಧಾರವಾಡದ ಅಕ್ಕಲಕಾ ದುಕಾನ" ಅಂದರೇನು ಎಂಬುದರ ಅರಿವು ನನಗೆ ಚನ್ನಾಗಿ ಆಯ್ತು. ಅದನ್ನೇ ವಿಚಾರಿಸುತ್ತ ನಾನು ಸ್ನಾನಕ್ಕೆಂದು ಹೋದೆ. ಸ್ನಾನ-ಪೂಜೆ ದಿನಾ ಅರ್ಧ ಗಂಟೆಯಾಗಿ ಒಂದು ಗಂಟೆಯ ತನಕ ನಡೆಯಲಿಲ್ಲವಂತೆ. ಇವೆಲ್ಲಾ ಹ್ಯಾಂಗ ಬರತಾವೊ. ಮನಿಮಕ್ಕಳೆಡೆ ಜೀವ ಕೊಟ್ಟದ್ದೂ ಮಂದಿಮಕ್ಕಳಿಗೆ ಡಾಕ್ಟರನ ಕಳಿಸ್ತಾರೆಂತಲೆ ಈ ಜಗತ್ತಿನದೆಲ್ಲಾ ಕಾರಭಾರ ಮಾಡ್ತೇರೆಂದು ಮನಸ್ಯಾಸ ಮಂದಿ ಆಡಿಕೊಂಡು ಹ್ಯಾಂಗ ಆಡ್ತಾರೆಂಬುದರ ಸುದ್ದಿ ಇವರಿಗಿಲ್ಲಾ ನನ್ನ ಹಣೇಬರಹಾ ಮಾಡಲೇನು" ಎಂದು ಮನೆಯವರು ಗುಣಗುಣಿಸುತ್ತಿದ್ದರು. ಅವರೇ ಮಾಸ್ತರರ ಪತ್ನಿ ಎಂಬುದು ನಂತರ ತಿಳಿಯಿತು.

ಮಾಸ್ತರರ ಜೀವನ ಚರಿತ್ರೆಯೆಂದರೆ ಕರ್ನಾಟಕದ ಚರಿತ್ರೆಯೇ ಸರಿ. ಅವರು ಧಾರವಾಡಕ್ಕೆ ಬರುವದಕ್ಕಿಂತ ಮುಂಚೆ ಕರ್ನಾಟಕಕ್ಕೆ ಅಸ್ತಿತ್ವವೇ ಇದ್ದಿಲ್ಲ. ನಂತರ ಇಂದಿನ ಕರ್ನಾಟಕದ ವಿವಿಧ ಚಟುವಟಿಕೆಗಳ ಬೆಳವಣಿಗೆಯು. ಆಗಿನ ಕಾಲದಲ್ಲಿ ಮಾಸ್ತರರ ಕೈ ಇದ್ದೇ ಇದ್ದದ್ದನ್ನು ನೋಡಿದರೆ ಕರ್ನಾಟಕದ ಜೀವನವೂ ಇವರ ಜೀವನವೂ ಉದಾತ್ತ ಹೊಂದಿವೆ, ಎನ್ನಬಹುದು.

ಮಾಸ್ತರರ ಬಾಲ್ಯ

ಮಾಸ್ತರರ ಜನ್ಮ ಕೊಲ್ಹಾಪುರ ಸಂಸ್ಥಾನದ ಚಿಂಚಲಿ ಎಂಬ ಗ್ರಾಮದಲ್ಲಿ ೧೮೮೯ ರಲ್ಲಿ ಆಯಿತು. ಇವರ ತಂದೆಯವರು ಆ ಗ್ರಾಮದ ಇನಾಮದಾರರ ಹತ್ತಿರ ಕಾರಕೂನ ಇದ್ದರು. ಮಾಸ್ತರರ ಬಾಲ್ಯವೂ ಪ್ರಾಥಮಿಕ ಶಿಕ್ಷಣವೂ ಚಿಂಚಲಿ ರಾಯಬಾಗದಲ್ಲಿಯೇ ಆಯಿತು. ಇವರು ಒಂದು ದಿನ ಶಾಲೆಬಿಟ್ಟು ಮನೆಗೆ ಬಂದಾಗ ಯಾರೋ ಒಬ್ಬರು ಇಂಗ್ಲಿಷ ಇಂಗ್ಲಿಷ ಅಂತ ಮಾತಾಡುತ್ತಿದ್ದರು. ಆಗ ಅವರಿಗೆ ಅದರ ಅರ್ಥವೇ ಆಗಲಿಲ್ಲ. ಬಹಳ ಶ್ರಮಬಟ್ಟು ಇಂಗ್ಲೀಷ ಒಂದು ಭಾಷೆಯೆಂದೂ ಅದನ್ನು ಕಲಿತರೆ ಬಹಳ ಮಾನಸನ್ಮಾನ ಆಗುವದೆಂದೂ ಇವರ ತಲೆಯಲ್ಲಿ ಯಾರೊ ತುಂಬಿದರು. ಆದರೆ ಅಷ್ಟರಲ್ಲಿ ಇವರ ತಂದೆಯವರು ೧೮೯೭ ರಲ್ಲಿ ತೀರಿಕೊಂಡದ್ದರಿಂದ ಇವರಿಗೇನೂ ಹೊಳೆಯದಂತಾಯ್ತು. ಮರಾಠಿ ೪ ನೇ ಇಯತ್ತೆಯ ಮುಂದೆ ಕಲಿಯಲಿಕ್ಕೆ ಅನುಕೂಲವಿಲ್ಲದ್ದರಿಂದ ಅವರಿಗೆ ಒಂದೂವರೆ ವರ್ಷ ಮನೆಯಲ್ಲಿಯೇ ಕೂಡಬೇಕಾಯ್ತು. ಆದರೆ "ಆ ಇಂಗ್ಲೀಷ ಹುಚ್ಚು" ಇತ್ತೆ ಇತ್ತು. ಈ ದೀರ್ಘವಾದ ಏಕಾಂತವಾಸದಲ್ಲಿ ಅದಕ್ಕೆ ಮತ್ತಷ್ಟು ಪುಷ್ಟಿ ಸಿಕ್ಕಿತು. ಒಂದು ರಾತ್ರಿ ಯಾರಿಗೂ ಹೇಳದೆ ಮಾಸ್ತರರು ಇಂಗ್ಲೀಷ ಕಲಿಯಬೇಕೆಂದು ಕೊಲ್ಹಾಪೂರಕ್ಕೆ ಹೊರಟರು ಅಲ್ಲಿ ಕಲಿಸುತ್ತಾರೆಂದು ಯಾರೊ ಅವರಿಗೆ ಹೇಳಿದ್ದರು. ಹತ್ತಿರ ಹಣವಿಲ್ಲ ಏನೂ ಇಲ್ಲ. ಉಟ್ಟ ವಸ್ತ್ರದಲ್ಲಿಯೇ ಚಿಂಚಲಿಯಿಂದ ೪೦ ಮೈಲು ಕಾಲ್ನಡಿಗೆಯಿಂದಲೇ ಕೊಲ್ಹಾಪುರಕ್ಕೆ ತಲ್ಪಿದರು ಕಂಡವರನ್ನು ಕೇಳಿದರು "ಇಂಗ್ಲೀಷ ಕಲಿಸುವಿರೇನೆಂದು". ಅಂಬಾಬಾಯಿ ಗುಡಿಯ ಪೂಜಾರಿಯನ್ನೂ ಬಿಡಲಿಲ್ಲ. ಮಾಸ್ತರರ ಆಗಿನ ಆ ಅವತಾರವನ್ನು ನೋಡಿ ಇವನೊಬ್ಬ ಹುಚ್ಚನೇ ಇರಬಹುದೆಂದು ಎಲ್ಲರೂ ತಪ್ಪಿಸಿಕೊಳ್ಳುತ್ತಿದ್ದರು. ಮಾಸ್ತರರು ಎರಡು ದಿನ ಬರೀ ಚುರಮುರಿ ಪುಠಾಣಿ ತಿಂದು ತಪಶ್ಚರ್ಯ ಮಾಡಿ ನೋಡಿದರು. ಆದರೂ ಇಂಗ್ಲೀಷ ಪ್ರಸನ್ನವಾಗಲಿಲ್ಲ. ನಿರಾಶರಾಗಿ ತಿರುಗಿಬಂದರು.

ವಿದ್ಯಾಭ್ಯಾಸ

"ಹೀಗೆ ಬಿಟ್ಟರೆ ಮಗನು ಕೈಗೆ ಹತ್ತುವದಿಲ್ಲ" ಎಂದು ಇವರ ತಾಯಿಯವರು ತಿಳಿದುಕೊಂಡರು. ಆಪ್ತೇಷ್ಟರ ಸಲಹೆಯಂತೆನಿರುಪಾಯರಾಗಿ ಮಾಸ್ತರರ ಇಂಗ್ಲೀಷಿನ ಸಲುವಾಗಿ ಬೆಳಗಾಂವಿಯ ಹತ್ತರ ಶಹಾಪೂರದಲ್ಲಿ ಅವರಿಗೆ ಮನೆ ಮಾಡಬೇಕಾಯ್ತು. ಶಹಪೂರದಲ್ಲಿ ಇಂಗ್ಲೀಷ ೫ ಇಯತ್ತೆ ಮುಗಿಸಿ ಬೆಳಗಾಂವಿಯ ಮಿಶನ್ ಹಾಯಸ್ಕೂಲ ಸೇರಿದರು. ಮಾಸ್ತರರ ಆಗಿನ ಬುದ್ಧಿಮತ್ತೆಯನ್ನು ನೋಡಿ ಅಧಿಕಾರಿಗಳು ಅವರನ್ನು ಒಮ್ಮೆಲೆ ಮ್ಯಾಟ್ರಿಕಿಗೆ ಕರೆದುಕೊಂಡರು. ೧೯೦೬ ರಲ್ಲಿ ಉತ್ತಮ ತರಗತಿ ಮ್ಯಾಟ್ರಿಕ ಪಾಸಾದರು.

ಆಗ ಹುಕ್ಕೇರಿಕರರಿಗೆ ೧೭ ವರ್ಷ. ಮಾಸ್ತರರಿಗೆ ಆಗಲೇ ರಾಜಕೀಯ ವಿಚಾರದ ಜಾಗೃತಿಯಾಗಿತ್ತು. ಪರದೇಶಿ ಬಟ್ಟೆಗಳ ದೊಡ್ಡ ಹೋಳಿ ಒಂದು ಮಾಡಿದ್ದರು. ಇವರ ಗೆಳೆಯರೆಲ್ಲ ಅದೇ ವಿಚಾರದವರು. ತರುಣರನ್ನು ಸಧೃಢರನ್ನಾಗಿ ಮಾಡಿ ಅವರನ್ನು ರಾಷ್ಟ್ರಕಾರ್ಯಕ್ಕೆ ಅಣಿಮಾಡುವದೇ ಅವರ ಗುರಿ. ಇವರ ಗೆಳೆಯರಾದ ಅಶ್ವತ್ಥಾಮಾ ಚಾರ್ಯರೆಂಬವರು ಶಹಾಪೂರದಿಂದ ಮುಗಟಖಾನ ಹುಬ್ಬಳ್ಳಿಯವರೆಗೆ ಓಡಿಬರುತ್ತಿದ್ದರಂತೆ. ಸುಮಾರು ೪೦ ಮೈಲಿನ ಓಟ! ಇವರ ಜೊತೆಗೆ ಮಾಸ್ತರರೂ ವ್ಯಾಯಾಮ ಮಾಡುವದು ಬೇಲಿನ ಹಾಲು ಕುಡಿಯುವದು ಮಾಡಿ ತಮ್ಮ ಮುಂದಿನ ಹೋರಾಟಕ್ಕೆ ತಮ್ಮ ಮನಸ್ಸಿನಂತೆ ದೇಹವನ್ನೂ ಸಜ್ಜುಗೊಳಿಸಿದರು.

ಮ್ಯಾಟ್ರಿಕಕ್ಕೆ ರಾಮರಾಯರ ಶಿಕ್ಷಣ ತೃಪ್ತಿಯಾಗಲಿಲ್ಲ. ಅವರು ಕಾಲೇಜಕ್ಕೆ ಹೋಗಬೇಕೆಂದು ಮಾಡಿದ್ದರು. ಆದರೆ ಮನೆಯ ಆರ್ಥಿಕ ಪರಿಸ್ಥಿತಿ ಅನುಕೂಲವಿದ್ದಿಲ್ಲ. ಆದರೆ ಮಾಸ್ತರರ ತಲೆಯಲ್ಲಿ ಒಂದು ವಿಚಾರವು ಹೊಕ್ಕರೆ ಅದು ಯಾವ ಪರಿಸ್ಥಿತಿಯಲ್ಲಿಯೂ ಬದಲಾಗುತ್ತಿದ್ದಿಲ್ಲ. ಕಿಸೆಯಲ್ಲಿ ಇಪ್ಪತ್ತೆ ರೂಪಾಯಿ ಹಾಕಿಕೊಂಡು ಕಾಲೇಜಕ್ಕಾಗಿ ಪುಣೆಗೆ ಹೊರಟರು. 'ಮನಸಿದ್ದಲ್ಲಿ ಮಾರ್ಗವಿದ್ದೆ ಇದೆ' ಎಂಬುದು ಅವರ ಬಾಳಿನ ತತ್ವ. ಪುಣೆಯಲ್ಲಿ ಇವರ ಅಣ್ಣಂದಿರೊಬ್ಬರು ಟಿಳಕರ ಒಂದು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಯಾರ ಮುಖಾಂತರವೊ ಟಿಳಕರಿಗೆ ತಮ್ಮ ತಮ್ಮನ ನಿರ್ಧಾರವನ್ನು ತಿಳಿಸಿದರು. ಕೂಡಲೇ ಮಾಸ್ತರರ ಕಾಲೇಜ ಫಿ ವ್ಯವಸ್ಥೆಯು ಆಯಿತು. ಮಾಸ್ತರರ ಕನಸುಮನಸಿನಲ್ಲಿ ಹೀಗೆ ಆಗುವದೆಂದು ಗೊತ್ತಿದ್ದಿಲ್ಲ.

ಕುಟುಂಬದಲ್ಲಿ ಸಾವುನೋವು

೧೯೦೭ ರಿಂದ ೧೯೧೩ ವರೆಗೆ ಮಾಸ್ತರರ ಯಶಸ್ವಿ ಕಾಲೇಜ ಜೀವನವು ಸಾಗಿತು. ಈ ಅವಧಿಯಲ್ಲಿ ಒಮ್ಮೆ ವಿಷಮಜ್ವರದಿಂದ ಒಂದು ತಿಂಗಳು ಹಾಸಿಗೆ ಹಿಡಿದಿದ್ದರು. ಆದರೆ ಅವರ ರಾಷ್ಟ್ರೀಯ ವಿಚಾರಗಳು ಹೆಚ್ಚೆಚ್ಚು ಬಲಗೊಳ್ಳುತ್ತಿದ್ದವು. ೧೯೦೯ ರಲ್ಲಿ ಬೆಳಗಾವಿ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ೧೯೧೧ ರಲ್ಲಿ ಪುಣೆಯ ನ್ಯೂ ಇಂಗ್ಲಿಷ ಸ್ಕೂಲಿನಲ್ಲಿಯೂ ಒಂದು ವರ್ಷ ಮಾಸ್ತರರಿದ್ದರು. ಅಂದಿನಿಂದಲೇ ಇವರ ಮಾಸ್ತರಿಕೆ ಶುರು ಆಯಿತೆನ್ನಬಹುದು. ಇಂದಿಗೂ ಆ ಹೆಸರು ಅವರನ್ನು ಬಿಟ್ಟಿಲ್ಲ. ಆ ಶಾಲೆಯ ಬೋರ್ಡಿನ ಸಹಾಯಕ ವೇಲ್ವಿಚಾರಕರೂ ಇದ್ದರು. ೧೯೧೬ ರಲ್ಲಿ ಘಟಿಸಿದ ಒಂದು ಸಂಗತಿ ಮಾಸ್ತರರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವನ್ನು ಮಾಡಿತು. ಬೆಳಗಾಂವಿ ಶಹಾಪೂರದಲ್ಲಿ ಭೀಕರವಾದ ಪ್ಲೇಗು ಹಬ್ಬಿಕೊಂಡಿತು ಒಂದೇ ತಿಂಗಳಲ್ಲಿ ಮಾಸ್ತರರ ಹಿರಿಯ ಅಕ್ಕನನ್ನೂ ಅವರ ಮಮತೆಯ ತಾಯಿಯನ್ನೂ ನುಂಗಿಬಿಟ್ಟಿತು. ಮಾಸ್ತರರಿಗೆ ತಮ್ಮ ಶಿಕ್ಷಣದ ಅಮೃತಫಲವನ್ನು ಅವರ ಪ್ರೀತಿಯ ತಾಯಿಗೆ ಸಲ್ಲಿಸುವ ಅವಕಾಶ ಸಿಗಲಿಲ್ಲ; ಮುಂದೆ ಎರಡೇ ವರ್ಷಗಳಲ್ಲಿ ಅವರ ಹಿರಿಯ ಅಣ್ಣನ ಮರಣವಾಯ್ತು. ಅದರಿಂದಂತೂ ಶಾಲಾ ಮಾಸ್ತರರು ಕಂಗೆಟ್ಟು ಹೋದರು.

ಮಾಸ್ತರರ ಮಾಸ್ತರಿಕೆ

೧೯೧೩ ಇನ್ನೂ ಇವರ ಎಮ್. ಎ. ಪಾಸಾದ ಸಂಗತಿಯು ಗೊತ್ತಾಗುವದಕ್ಕಿಂತ ಮುಂಚೆಯೇ ಇವರಿಗೆ ಧಾರವಾಡದ ವಿಕ್ಟೋರಿಯಾ ಹಾಯಸ್ಕೂಲಿನ ಹೆಡ್ ಮಾಸ್ತರರಾಗಲು ಕರೆಬಂದಿತು. ಮಾಸ್ತರರೂ ತಮ್ಮ ಪ್ರೀತಿಯ ಕೆಲಸವೇ ಸಿಕ್ಕಿದ್ದರಿಂದ ಕೂಡಲೇ ಅದನ್ನು ಸ್ವೀಕರಿಸಿದರು. ಎರಡು ವರ್ಷಗಳ ವರೆಗೆ ಅವಿಶ್ರಾಂತ ದುಡಿದು ಆ ಶಾಲೆಯ ಆಡಳಿತೆಯನ್ನು ಒಂದು ಮಟ್ಟಕ್ಕೆ ತಂದರು ಮತ್ತು ತಾವು ಶಿಕ್ಷಕನ ವೃತ್ತಿಯಲ್ಲಿ ಹೆಚ್ಚಿನ ಯೋಗ್ಯತೆ ಸಂಪಾದಿಸಲು ೧೯೧೪ ರಲ್ಲಿ ಒಂದು ವರ್ಷ ಪುಣೆಯ ಬಿ. ಟಿ. ಕಾಲೇಜಕ್ಕೆ ಹೋಗಿ ಬಂದರು. ನಂತರ ಏರಿದ ಶಾಲೆಯ ಭರಭರಾಟೆಯು ಧಾರವಾಡ ನಾಗರಿಕರೆಲ್ಲರಿಗೂ ಗೊತ್ತೆ ಇದೆ.

ಧಾರವಾಡಕ್ಕೆ ಬಂದ ನಂತರ ಮಾಸ್ತರರಿಗೆ ಕರ್ನಾಟಕ, ಕನ್ನಡ, ಇದರ ಬೆಳವಣಿಗೆ ಮುಂತಾದ ವಿಷಯಗಳ ಚಿಂತೆಯು ಶುರುವಾಯ್ತು. ಇವರು ಶಾಲೆಯಲ್ಲಿ ಕಲಿತದ್ದು ಮರಾಠಿ. ಆ ವಾತಾವರಣದಲ್ಲಿಯೇ ಬೆಳೆದವರು. ಅವರು ಈಗ ಕಷ್ಟಬಟ್ಟು ಕನ್ನಡ ಕಲಿಯಲು ಸಿದ್ಧರಾದರು. ೧೯೧೫ ರಲ್ಲಿ ಬೆಂಗಳೂರಿನಲ್ಲಿ ಕೂಡಿದ ಮೊದಲನೆ ಕನ್ನಡ ಸಾಹಿತ್ಯಪರಿಷತ್ತಿಗೆ ಹಾಜರಿರಲು ಮಾಸ್ತರರು ತಪ್ಪಲಿಲ್ಲ.

ಆಗ್ಗೆ ವಿಕ್ಟೋರಿಯಾ ಹಾಯಸ್ಕೂಲವು ಒಂದು ಮುರುಕು ಮನೆಯಲ್ಲಿ ನಡೆಯುತ್ತಿತ್ತು. ಅದನ್ನು ಸಹಿಸುವದಾಗಲಿಲ್ಲ. ಮಾಸ್ತರರು ಕೆಲವು ಸಹಾಯಕರೊಂದಿಗೆ ಹಗಲಿರುಳು ದುಡಿದು ಸುಮಾರು ೫೦ ಸಾವಿರ ರೂಪಾಯಿ ಕೂಡಿಸಿ ಈಗ್ಗೆ ಕಾಲೇಜ ಇರುವ ಕಟ್ಟಡವನ್ನು ರಚಿಸಿದರು. ಡ್ಯಾಂಗ್ಯುಲರ ಪರಾಂಜಪೆಯವರನ್ನು ಕರೆತಂದು ಅಂದಿನಿಂದ ಅದರ ಉದ್ಘಾಟನ ಮಾಡಿಸಿದರು. ಆದರೆ ಆ ಕಟ್ಟಡ ನೋಡಿ ಮಾಸ್ತರರಿಗೆ ಕಾಲೇಜ ಮಾಡಬೇಕೆಂಬ ವಿಚಾರ ಬಂದಿತು. ಇದರ ಮೇಲಿಂದ ಅವರ ವಿಚಾರವೂ ಕೃತಿಯೂ ಹೇಗೆ ಏಕತ್ರ ನಡೆದಿದ್ದವೆಂಬುದು ಕಂಡುಬರುತ್ತದೆ. ಡ್ಯಾಂಗ್ಯುಲರ ಕಟ್ಟಿಯವರನ್ನು ಪ್ರಿನ್ಸಿಪಾಲರನ್ನಾಗಿ ಮಾಡಿ ದಿವಾಕರರೂ ಇವರೂ ಕೂಡಿ ೧೯೨೦ರಲ್ಲಿ ಕಾಲೇಜ ಸ್ಥಾಪನೆ ಮಾಡಿಯೇ ಬಿಟ್ಟರು.

"ಕರ್ಮವೀರ"ದ ಸಂಪಾದಕತ್ವ

೧೯೨೦ ರ ಸುಮಾರಕ್ಕೆ ಕರ್ನಾಟಕದಲ್ಲಿ ಹೊಸ ರಾಜಕೀಯ ಚಟುವಟಿಕೆಗಳು ಪ್ರಾರಂಭವಾದವು. ಆಗಿನ್ನೂ ರಾಜಕೀಯ ವಿಚಾರಗಳನ್ನು ಪ್ರಚಾರ ಮಾಡಲಿಕ್ಕೆ ಕರ್ನಾಟಕದಲ್ಲಿ ಒಂದೂ ಕನ್ನಡ ಸ್ವತಂತ್ರ ಪತ್ರವಿರಲಿಲ್ಲ. ಅದರ ಮಹತ್ವವನ್ನರಿತು ಶ್ರೀ ದಿವಾಕರ, ಮುದ್ವೀಡರ ಕಬ್ಬೂರ ಹಾಗೂ ಹುಕ್ಕೇರಿಕರರು ಕೂಡಿಯೇ ನಮ್ಮ ಈ ಲೋಕಪ್ರಿಯ "ಕರ್ಮವೀರ" ಪತ್ರಿಕೆಗೆ ಜನ್ಮ ಕೊಟ್ಟರು. ಕರ್ನಾಟಕ ವಿದ್ಯಾಪೀಠವನ್ನೂ ಅದೇ ಕಾಲಕ್ಕೆ ಸ್ಥಾಪಿಸಿದರು. ನಂತರ ಜಿಲ್ಹಾ ಕಾಂಗ್ರೆಸ ಕಮಿಟಿಯ ಸ್ಥಾಪನೆಯಾಯಿತು. (೧೯೨೦) ಮಾಸ್ತರರೆ ಅದರ ಕಾರ್ಯದರ್ಶಿಗಳು. ಕಾಂಗ್ರೆಸಿನ ಚಟುವಟಿಕೆಗಳು ಭರದಿಂದ ಸಾಗಹತ್ತಿದವು. ಧಾರವಾಡದ ಪ್ರಸಿದ್ಧ ಗೋಳಿಬಾರ ಪ್ರಕರಣವನ್ನು ಯಾರೂ ಮರೆತಿ[illegible] ಬಗ್ಗೆ "ಕರ್ಮವೀರದ"ಲ್ಲಿ ಬರೆದ [illegible] ಮಾಸ್ತರರಿಗೆ ಒಂದು ವರ್ಷ[illegible]ದಲ್ಲಿ ಪಾಕಿಸ್ತಾನ[illegible]ಯಿತು. ಇವರ ಕಾರಾಗೃಹವಾ[illegible] ತನ್ನ ಪುಂಡರ ಇವರಕಿಂತ ಇವರ ಪ್ರಿಯ [illegible]ದೆ ಕಾಶ್ಮೀರದ ಹೆಚ್ಚು ಪರಿಣಾಮವಾಗಿ ಮನೋ[illegible] ಮುಸಲ್ಮಾ ತೀವ್ರವೇ ಬೇನೆಬಿದ್ದು ೧೯೨೪ ರಲ್ಲಿ [illegible] ಕೊಂಡರು. ತಮ್ಮ ಅಪಾರ [illegible] ಎಷ್ಟೂ ತೋರಗೊಡದೆ ತಮ್ಮ ಕಾರ್ಯ[illegible] ಹಾಗೆ ಸಾಗಿಸಿದರು. ೧೯೨೪ ಆಗಸ್ಟದಲ್ಲಿ ದಿವಾಕರ ಹಾಗೂ ಮಜಲಿಯವರ ಜೊತೆಗೆ "ನವಶಕ್ತಿ" ಎಂಬ ಇಂಗ್ಲೀಷ ವಾರಪತ್ರಿಕೆಯನ್ನು ಹೊರಡಿಸಿದರು. ಕರ್ನಾಟಕಕ್ಕೆ ಇದೇ ಮೊದಲನೇ ಇಂಗ್ಲೀಷ ಪತ್ರಿಕೆಯು. ಮುಂದೆ ಬೆಳಗಾವ ಕಾಂಗ್ರೆಸಿನಲ್ಲಿ ಈ ಪತ್ರಿಕೆಯು ಸಲ್ಲಿಸಿದ ಸೇವೆಯಿಂದಲೇ ಕರ್ನಾಟಕದ ಹೆಸರು ಹಿಂದುಸ್ತಾನದ ತುಂಬ ಮೆರೆಯಹತ್ತಿತು.

ಈಗ್ಗೆ ಮದ್ರಾಸದ ಮಂತ್ರಿಮಂಡಳದಲ್ಲಿಯ ಶ್ರೀ ವಿಶ್ವನಾಥರು ಆಗಿನ್ನೂ ತರುಣರಿದ್ದು ಬೆಳಗಾಂವಿ ಕಾಂಗ್ರೆಸ್ಸಿಗೆ ಬಂದಿದ್ದರು. ಅವರಿಗೆ ವೃತ್ತಪತ್ರ ವ್ಯವಸಾಯದ ಹುಚ್ಚು. ಏನೂ ಪ್ರತಿಫಲವನ್ನಪೇಕ್ಷಿಸದೆ "ನವಶಕ್ತಿಗೆ" ಸಹ ಸಂಪಾದಕರಾಗಿ ಎಲ್ಲರೂ ಬೆರಳು ಕಚ್ಚುವಷ್ಟು ತಮ್ಮ ಬರಹ ಶಕ್ತಿಯನ್ನು ಮತ್ತು ಆ ಕೆಲಸದಲ್ಲಿ ಅನ್ವಿತೀಯ ಯೋಗ್ಯತೆಯನ್ನು ತೋರಿಸಿಕೊಟ್ಟರು. ಮಾಸ್ತರರೆ ಅವರನ್ನು ಸೇರಿಸಿಕೊಂಡರು.

ಮುಂದೆ ದಿವಾಕರರು ಜೇಲಿಗೆ ಹೋಗಬೇಕಾದ್ದರಿಂದ "ಕರ್ಮವೀರ" ಹಾಗೂ "ನವಶಕ್ತಿ" ಎರಡೂ ವಾರಪತ್ರಿಕೆಗಳು ಮಾಸ್ತರರೊಬ್ಬರ ಕೊರಳಿಗೆ ಬಿದ್ದವು.

೧೯೩೪-೩೬ ರಲ್ಲಿ ಮಾಸ್ತರರು ತಮ್ಮ ಕಾರ್ಯವನ್ನು ಮುಖ್ಯವಾಗಿ ಕರ್ನಾಟಕ ಏಕೀಕರಣ ಮಹಿಳಾ ಜಾಗೃತಿ, ಹಾಗೂ ಅಲ್ಲಲ್ಲಿಯ ರಾಜಕೀಯ ಪರಿಷತ್ತುಗಳನ್ನು ನೆರವೇರಿಸುವದರಲ್ಲಿ ಕಾಣಿದರು. ಅವರ ಆಗಿನ ಅವಿಶ್ರಾಂತ ಪರಿಶ್ರಮದಿಂದಲೇ ನಾವಿಂದು ಅವುಗಳ ಫಲವನ್ನುಣ್ಣುತ್ತಿದ್ದೇವೆ. ಕೂಡಲೇ ಅವರ ಯೋಗ್ಯತೆಯು ಅವರನ್ನು ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಯನ್ನಾಗಿ ಮಾಡಿತು. ಈ ಹೊಣೆಯನ್ನು ಅವರು ಅಖಂಡವಾಗಿ ೧೯೪೭ ರ ವರೆಗೆ ವಹಿಸಿದರು. ಇಲ್ಲಿಯ ವರೆಗೆ ಇಷ್ಟು ದೀರ್ಘಕಾಲದ ವರೆಗೆ ಯಾರಿಗೂ ಆ ಶ್ರೇಯವು ಸಿಕ್ಕಿಲ್ಲ. ನೆಹರೂ ಕಮಿಟಿಗೆ ೧೯೨೭ ರಲ್ಲಿ ಕರ್ನಾಟಕ ಪ್ರಾಂತೀಕರಣದ ಬೇಡಿಕೆಯನ್ನು ಕಳಿಸುವದರಲ್ಲಿ ಮಾಸ್ತರರ ಮುಖ್ಯಾಂಗವೂ ಇತ್ತು.

ಸ್ವಾತಂತ್ರ್ಯ ಸಮರದಲ್ಲಿ ಮಾಸ್ತರರ ಪಾತ್ರ

ಮುಂದೆ ಹಿಂದುಸ್ತಾನದಲ್ಲಿ ಗಾಂಧೀಜಿಯವರ ಆದೇಶದ ಪ್ರಕಾರ ಬಹಿಷ್ಕಾರದ ಚಳವಳಿ ಪ್ರಾರಂಭವಾಯ್ತು. ಆಗೂ ಮಾಸ್ತರರು ಕರ್ನಾಟಕವನ್ನು ಹಿಂದೆ ಬೀಳಗೊಡಲಿಲ್ಲ. ೧೯೩೦ ರಲ್ಲಿಯೇ ಸ್ವದೇಶಿ ಸಭೆಯ ಸ್ಥಾಪನೆ ಮಾಡಿ ಅದರ ಮುಖಾಂತರ ಕರ್ನಾಟಕದ ತುಂಬೆಲ್ಲ ಬಹಿಷ್ಕಾರ ಚಳವಳಿಯನ್ನು ಹಬ್ಬಿಸಿದರು. ಅದರಲ್ಲಿ ಕರ್ನಾಟಕಕ್ಕೆ ಸಿಕ್ಕ ಯಶಸ್ಸು ಇಡೀ ದೇಶದ ಲಕ್ಷವನ್ನೇ ಸೆಳೆದುಕೊಂಡಿತು. ಅದಕ್ಕಾಗಿ ಬ್ರಿಟಿಶ ಸರಕಾರದವರು ಮಾಸ್ತರರನ್ನು ೧೮ ತಿಂಗಳ ವರೆಗೆ ಬಂಧಿಸಬೇಕಾಯ್ತು. ಜೇಲಿನಿಂದ ಬಿಟ್ಟು ಬಂದ ಕೂಡಲೇ ಸ್ವದೇಶಿ ಸಭೆಯ ಕೆಲಸವನ್ನೇ ಮುಂದೆ ಸಾಗಿಸಿ ಬಳ್ಳಾರಿಯಲ್ಲಿ ಮೂರು ತಿಂಗಳು ತಳ ಊರಿ ಅಖಿಲ ಭಾರತ ಸ್ವದೇಶಿ ಪ್ರದರ್ಶನವನ್ನು ಏರ್ಪಡಿಸಿದರು. ಮತ್ತು ಮುಂದೆ ಶೀಘ್ರದಲ್ಲಿಯೇ ಅದೇ ಉದ್ದೇಶದಿಂದ ವ್ಯಾಪಾರ, ಉದ್ಯೋಗ ವಿಜ್ಞಾನ ವಿಷಯಗಳ ಸಲುವಾಗಿಯೇ 'ಧನಂಜಯ' ಎಂಬ ಕನ್ನಡ ಮಾಸ ಪತ್ರಿಕೆಯನ್ನು ತೆಗೆದರು. ಅಷ್ಟರಲ್ಲಿ ಅಂದರೆ ೧೯೩೪ ರಲ್ಲಿ ಮಹಾತ್ಮಾ ಗಾಂಧಿಯವರು ಕರ್ನಾಟಕದಲ್ಲಿ ಹರಿಜನ ಪ್ರವಾಸಕ್ಕಾಗಿ ಬಂದರು. ಅದರ ವ್ಯವಸ್ಥೆಯು ಮಾಸ್ತರರ ಕೊರಳಿಗೆ ಬಿದ್ದಿತು. ಕೆಲವು ಜನರು ಮಾಸ್ತರರ ಕಡೆಯಿಂದ ಈ ಕೆಲಸವು ಆಗಲಿಕ್ಕಿಲ್ಲೆಂದು ಸಂಶಯ ತಾಳಿದ್ದರು. ಆದರೆ ತಮ್ಮ ಪ್ರವಾಸವು ಅತ್ಯಂತ ಸಫಲವಾಯಿತೆಂದು ಸ್ವತಃ ಗಾಂಧೀಜಿಯವರೇ ಕರ್ನಾಟಕದ ಜಾಗೃತಿಯನ್ನು ಕಂಡು ವ್ಯಕ್ತಪಡಿಸಿದ್ದರಿಂದ ಮಾಸ್ತರರ ಯೋಗ್ಯತೆಯು ಮತ್ತಿಷ್ಟು ಹೆಚ್ಚಿತು. ನಂತರ ರಾಜೇಂದ್ರ ಪ್ರಸಾದರ ಕೂಡ ಮಾಸ್ತರರು ಕರ್ನಾಟಕದ ತುಂಬ ಸಂಚಾರ ಮಾಡಿ ನಂತರ ಕೇಂದ್ರ ಶಾಸನ ಸಭೆಯ ಚುನಾವಣೆ ಸಂಚಾರ ಮಾಡಿ ಆಗಾಗ್ಗೆ ಜನ ಜಾಗೃತಿಗೆ ಕಳೆ ಕೊಡುತ್ತಿದ್ದರು. ಅಂಕೋಲಾ ಸಿರಸಿ ಸತ್ಯಾಗ್ರಹದಲ್ಲಿ ಇವರ ಕೆಲಸದಿಂದ ಕರ್ನಾಟಕದವರೆಲ್ಲರಿಗೂ ಅಪರಿಚಿತರಾಗಿದ್ದ ಕಾರವಾರ ಜಿಲ್ಹೆಯ ಜನರು ವಿಶೇಷತಃ ಅಲ್ಲಿಯ ಬಡ ರೈತರು

— ೨೦ ನೇ ಪುಟಕ್ಕೆ

"ಕರ್ಮವೀರ"ದ ಜನ್ಮಕಥೆ

ಲೇ:- ಶ್ರೀ ರಂಗನಾಥ ದಿವಾಕರ

ಹೋದ ೨೨ ನೇ ತಾರೀಖಿಗೆ ಹುಕ್ಕೇರಿ ರಾಮರಾಯರ ಷಷ್ಟ್ಯಬ್ದಪೂರ್ತಿಯ ಸಮಾರಂಭವಾಯಿತು. ಅದರ ಪ್ರೀತ್ಯರ್ಥವಾಗಿ 'ಕರ್ಮವೀರ' ವಾರಪತ್ರಿಕೆಯ ವಿಶೇಷ ಸಂಚಿಕೆಯು ಈಗ ಹೊರಡಲಿದೆ. ಈ ಸಂದರ್ಭದಲ್ಲಿ ನಾನು 'ಕರ್ಮವೀರ'ದ ಹುಟ್ಟು ಹೇಗಾಯಿತು. ಅದರಲ್ಲಿ ರಾಮರಾಯರು ವಹಿಸಿದ ಪಾತ್ರವೇನು ಎಂಬುದನ್ನು ಉಲ್ಲೇಖಿಸುವದಕ್ಕಾಗಿ ಈ ನಾಲ್ಕು ಮಾತುಗಳನ್ನು ಬರೆಯುತಿರುವೆ.

'ಕರ್ಮವೀರ'ದ ಜನ್ಮವಾಗಲು ಕಾರಣರಾದ ಮೂವರಲ್ಲಿ ರಾಮರಾಯರು ಒಬ್ಬರು. ಕಬ್ಬೂರ ಮಾಧವರಾಯರು ಹಾಗು ನಾನು ಇಬ್ಬರೂ ಅವರೊಡನೆ ಸಹಭಾಗಿಗಳು. ನಮ್ಮ ಮೂವರಲ್ಲಿ ಯಾರು ಹೆಚ್ಚು ಯಾರು ಕಡಿಮೆ ಭಾಗಿಗಳು ಎಂಬುದನ್ನು ಹೇಳುವದು ಬಹಳ ದುಸ್ತರ. ಏಕೆಂದರೆ ನಾವು ಮೂವರೂ ವಹಿಸಿದ ಭಾಗವು ಸಮಸಮಾನವಾಗಿತ್ತೆಂದು ಹೇಳಲು ಅಡ್ಡಿಯಿಲ್ಲ. ರಾಮರಾಯರು ನಮ್ಮಿಬ್ಬರಿಗಿಂತ ಹಿರಿಯರು. ನಾವು ಪದವೀಧರರಾಗುವದರೊಳಗಾಗಿ ಅವರು ಕರ್ನಾಟಕ ಎಜ್ಯುಕೇಶನ್ ಸೊಸಾಯಿಟಿಯನ್ನು ಸೇರಿ ವಿಕ್ಟೋರಿಯಾ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿಬಿಟ್ಟಿದ್ದರು. ಸಾಮಾನ್ಯವಾಗಿ ಆಗಿನ ಕಾಲದಲ್ಲಿ ದೇಶಸೇವೆ ಮಾಡಬೇಕೆಂಬುವರೆಲ್ಲ ಲೋಕಮಾನ್ಯ ಟಿಳಕ, ಚಿಪಳೂಣಕರ, ಆಗರಕರ ಮುಂತಾದವರನ್ನು ಆದರ್ಶರೆಂದು ತಿಳಿಯುತ್ತಿದ್ದರು. ಈ ಮೂವರು ಶಾಲೆ ಕಾಲೇಜುಗಳನ್ನು ಸ್ಥಾಪಿಸಿ ತರುಣರ ಮನಸಿನಲ್ಲಿ ದೇಶಪ್ರೇಮದ ಬೀಜವನ್ನು ಬಿತ್ತಿ ಬೆಳೆಯಿಸುತ್ತಿದ್ದರು. ಅದೇ ರೀತಿ ನಾವಾದರೂ ಮಾಡಬೇಕು ಎಂಬ ಹವಣಿಕೆ ನಮ್ಮಲ್ಲಿತ್ತು. ಅವರಂತೆಯೇ ಮುಂದೆ ವೃತ್ತಪತ್ರಾದಿಗಳನ್ನು ಹೊರಡಿಸಿ ಲೋಕ ಶಿಕ್ಷಣದ ಕೆಲಸವನ್ನು ಕೈಕೊಳ್ಳಬೇಕೆಂಬ ಕನಸು ನಮ್ಮ ಮನಸಿನಲ್ಲಿತ್ತು.

ಹುಕ್ಕೇರಿ ರಾಮರಾಯರು ಸ್ವಭಾವತಃ ಯೋಜಕರು. ಆದುದರಿಂದ ಅವರು ಮುಖ್ಯಾಧ್ಯಾಪಕರಾದೊಡನೆ ದೇಶಸೇವೆ ಮಾಡಬೇಕೆನ್ನುವ ನಮ್ಮಂಥವರನ್ನು ತಮ್ಮ ಸಂಸ್ಥೆಯಲ್ಲಿ ಸೇರಿಸಬೇಕೆನ್ನುವ ಪ್ರಯತ್ನಮಾಡಿ ಅದರಲ್ಲಿ ಯಶಸ್ವಿಯಾದರು. ೧೯೧೬ ರಲ್ಲಿ ನಾನು ಬಿ. ಎ. ಆದೊಡನೆ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಣದ ಕೆಲಸವನ್ನು ಕೈಕೊಂಡೆನು. ಆಗಿನಿಂದ ರಾಮರಾಯರ ಸಹವಾಸವು ನನಗೆ ಹೆಚ್ಚುತ್ತ ಹೋಯಿತು. ಮೊದಲು ಶಾಲೆಯನ್ನು ಬೆಳೆಯಿಸಿ ಕಾಲೇಜನ್ನು ಸ್ಥಾಪಿಸಬೇಕು; ಅದು ಸ್ಥಿರ ಸ್ಥಾವರವಾದ ಬಳಿಕ ವೃತ್ತಪತ್ರ ಹೊರಡಿಸುವ ವಿಚಾರ ಮಾಡಬೇಕು ಎಂದು ಸಾಮಾನ್ಯವಾಗಿ ನಾವು ಮಾತಾಡಿಕೊಂಡಿದ್ದೆವು. ಆದರೆ ಕೂಡಲೆ ಒಂದು ಮಾಸಿಕವನ್ನು ಹೊರಡಿಸಬೇಕೆಂದು ಹಾರನಹಳ್ಳಿ ಅನಂತರಾಯರು, ಕಬ್ಬೂರ ಮಾಧವರಾಯರು ಹಾಗು ನಾನು ಪ್ರಯತ್ನಪಟ್ಟೆವು.

೧೯೨೦ ರಲ್ಲಿ ಕಾಲೇಜೂ ಸ್ಥಾಪನವಾಯಿತು. ಆಗ್ಗೆ ರಲ್ಲಿ ನಾನು ಎಂ. ಎ. ಎಲ್‌ಎಲ್. ಬಿ. ಆಗಿ ಕಾಲೇಜದಲ್ಲಿ ಇಂಗ್ಲೀಶ ಭಾಷೆಯ ಪ್ರೊಫೆಸರನಾದೆನು.—ಎಲ್‌ಎಲ್ ಬಿ ಆದರೂ ವಕೀಲಿ ಮಾಡುವ ವಿಚಾರವು ಎಂದೂ ನನ್ನ ಮನಸ್ಸಿನಲ್ಲಿ ಬಂದಿದ್ದಿಲ್ಲ. ಬಿ. ಎ. ಪಾಸಾದೊಡನೆ ನಾವು ಒಮ್ಮೆ ಲೋಕಮಾನ್ಯರ ಕಡೆಗೆ ಸಲಹೆ ಕೇಳಲು ಹೋಗಿದ್ದೆವು. ಆಗ "ಸಾರ್ವಜನಿಕ ಜೀವನದಲ್ಲಿ ಕಾಲಿಡುವವರಿಗೆ ಕಾಯದೆಯ ಜ್ಞಾನವು ಅವಶ್ಯ. ನೀವು ಎಲ್‌ಎಲ್. ಬಿ. ಆಗಿ ನಂತರ ನನ್ನನ್ನು ಕಾಣಿರಿ" ಎಂದು ಅವರು ಹೇಳಿದರು. ಅದೇ ಮಾತು ನನ್ನನ್ನು ಲಾ ಕಾಲೇಜಿಗೆ ಎಳೆಯಿತು. ಅಷ್ಟರಲ್ಲಿ ಕಬ್ಬೂರ ಮಾಧವರಾಯರೂ ಎಂ. ಎ. ಎಲ್‌ಎಲ್. ಬಿ. ಆಗಿ ವಕೀಲಿಯನ್ನು ಪ್ರಾರಂಭಿಸಿ ವರುಷಾರು ತಿಂಗಳು ಮಾತ್ರ ಆಗಿದ್ದಿತು.

೧೯೨೦ ರ ಅಗಸ್ಟ ತಿಂಗಳಲ್ಲಿ ಕೆಲವೊಂದು ತಾತ್ವಿಕ ಮತಭೇದಗಳು ನನ್ನ ಹಾಗು ಕಾಲೇಜ ಚಾಲಕರಲ್ಲಿ ಉಂಟಾದ್ದರಿಂದ ಕಾಲೇಜಿನೊಡನೆ ಇದ್ದ ನನ್ನ ಸಂಬಂಧವನ್ನು ಕಡಿದುಕೊಂಡೆನು. ರಾಮರಾಯರೂ ನನ್ನ ವಿಚಾರದವರೇ ಇದ್ದುದರಿಂದ ಅವರೂ ಹಾಗೆಯೇ ಮಾಡಬೇಕಾಯಿತು. ಆದರೆ ಶಾಲೆಯಲ್ಲಿ ದುಡಿಯುವದನ್ನು ನಾನು ಬಿಡಲಿಲ್ಲ. ರಾಮರಾಯರೂ ಶಾಲೆಯ ಮುಖ್ಯಾಧ್ಯಾಪಕರಾಗಿ ಹಾಗೆಯೇ ಕೆಲಸ ನಡೆಸಿದ್ದರು.

ಅಷ್ಟರಲ್ಲಿ ದೇಶದಲ್ಲಿಯ ವಾತಾವರಣವು ಮಹಾತ್ಮಾ ಗಾಂಧಿಯವರ ಚಳವಳಿಯ ಮೂಲಕ ಪ್ರಕ್ಷುಬ್ಧವಾಗತೊಡಗಿತು. ಪಂಜಾಬ ಹಾಗು ಖಿಲಾಫತ ಅನ್ಯಾಯಗಳ ವಿರುದ್ಧ ಅಸಹಕಾರದ ಶಸ್ತ್ರವನ್ನು ಹಿರಿಯಲು ಅವರು ದೇಶಕ್ಕೆ ಉಪದೇಶ ಮಾಡತೊಡಗಿದರು. ಆಗ ರಾಮರಾಯರು ಕಬ್ಬೂರ ಮಾಧವರಾಯರು ಹಾಗು ನಾನು ಇನ್ನು ವೃತ್ತಪತ್ರ ಹೊರಡಿಸುವ ವಿಚಾರವನ್ನು ಮುಂದೆ ಹಾಕದೆ ಕೂಡಲೇ ಅದಕ್ಕೆ ಮೂರ್ತಸ್ವರೂಪ ಕೊಡಬೇಕೆಂದು ನಿರ್ಧರಿಸಿದೆವು.

ಅದೇ ವರುಷದ ಡಿಸೆಂಬರ ತಿಂಗಳಲ್ಲಿ ನಾಗಪುರದಲ್ಲಿ ಪ್ರಚಂಡವಾದ ಕಾಂಗ್ರೆಸ ಸಭೆ ಸೇರಿತು. ಆ ಸಭೆಗೆ ನಾನೂ ಹೋಗಿದ್ದೆನು. ಅಲ್ಲಿ ರಾಜಕಾರಣ ಕ್ಷೇತ್ರದಲ್ಲಿ ಕೂಡಲೇ ಧುಮುಕಬೇಕೆಂಬ ನಿಶ್ಚಯವು ಮತ್ತಷ್ಟು ದೃಢವಾಯಿತು. ಅಲ್ಲಿಂದ ಬಂದೊಡನೆಯೆ ನಾವು ಮೂವರೂ 'ಕರ್ಮವೀರ' ಪತ್ರಿಕೆಯನ್ನು ಕೂಡಲೇ ಹೊರಡಿಸಬೇಕೆಂದು ಸಂಕಲ್ಪ ಮಾಡಿದೆವು. ಆದರೆ ಮನಸಿನಲ್ಲಿ ಮಂಡಿಗೆ ತಿಂದರೆ ಗೋದಿಬೀಸುವವರಾರು ಎಂಬನಾಣ್ಣುಡಿಯಂತೆ ಈ ಕಾರ್ಯಕ್ಕೆ ಹಣವನ್ನೆಲ್ಲಿಂದ ತರಬೇಕು ಎಂಬ ದೊಡ್ಡ ಪ್ರಶ್ನೆ ಎದುರಾಯಿತು. ಸಣ್ಣದೇ ಆದ ಒಂದು ಮುದ್ರಣಯಂತ್ರವನ್ನಿಟ್ಟರೂ ಕನಿಷ್ಠ ಮೂರು ಸಾವಿರದಷ್ಟು ಹಣವು ಬೇಕೆ ಬೇಕು ಎಂದು ಲೆಕ್ಕ ಹಾಕಿದೆವು. ಆದರೆ ಆ ಮೂರು ಸಾವಿರವನ್ನಾದರೂ ಎಲ್ಲಿಂದ ತರಬೇಕು ?

ನನ್ನಂಥವನಿಗಂತೂ ಇದು ಬಹಳ ಕಠಿಣವಾದ ಮಾತು. ನನ್ನ ಹತ್ತಿರ ಒಂದು ಬಿಡಿಕಾಸು ಸಹ ಇರಲಿಲ್ಲ. ಶಾಲೆಯಲ್ಲಿ ಎರಡು ಮೂರು ತಾಸು ದುಡಿಯುವ ಬಗ್ಗೆ ನನಗೆ ತಿಂಗಳಿಗೆ ಐವತ್ತು ರೂಪಾಯಿ ಮಾತ್ರ ದೊರೆಯುತಿದ್ದವು. ತ್ಯಾಗದ ತಳಹದಿಯ ಮೇಲೆಯೇ ಅಧ್ಯಾಪಕರ ಕೆಲಸವನ್ನು ಕೈಕೊಂಡ ರಾಮರಾಯರಿಗೆ ಕೂಡ ಒಂದು ಕಾಸನ್ನು ಸಹ ಸಂಗ್ರಹಿಸುವದು ಸಾಧ್ಯವಾಗಿರಲಿಲ್ಲ. ಮಾಧವರಾಯರು ಅದೇ ವಕೀಲೀ ಪ್ರಾರಂಭಿಸಿದ್ದರಿಂದ ಅವರ ಕೈಯಲ್ಲಿಯು ಹಣವಿರಲಿಲ್ಲ. ಹೀಗೆ ಆಲಮಟ್ಟಿಯ ಜಂಗಮರಂತಿದ್ದ 'ನಾವು 'ಕೇಸರಿ' ಪತ್ರದಂತಹ ಒಂದು ಪತ್ರಿಕೆಯನ್ನು ಹೊರಡಿಸುವ ಹವ್ಯಾಸವನ್ನು ತೊಟ್ಟೆವು. ಅದಕ್ಕೆ 'ಕರ್ಮವೀರ' ಎಂಬ ನಾಮಕರಣವನ್ನು ಮಾಡಿದೆವು.

ಹಣದ ಬಗ್ಗೆ ನಾನಂತೂ ಭಿಕ್ಷಾಪಾತ್ರವನ್ನು ಹಲವು ಸ್ನೇಹಿತರ ಮುಂದೆ ಒಡ್ಡಿದೆನು. ಸನ್ಮಿತ್ರರಾದ ಶೇವಡೆ ರಾಮರಾಯರು, ಟೇಂಬೆ ದಾದಾರಾಯರು, ಐದೈದು ನೂರು ರೂಪಾಯಿಗಳನ್ನು ಕೊಡಮಾಡಿ ನನ್ನಲ್ಲಿ ಆತ್ಮವಿಶ್ವಾಸವನ್ನುಂಟುಮಾಡಿದರು. ರಾಮರಾಯರು ತಮಗೆ ಬರಬಹುದಾಗಿದ್ದ ಪ್ರಾವಿಡಂಟ ಫಂಡಿನ ರಕಮಿನ ಆಧಾರದ ಮೇಲೆ ಸಾಲ ತೆಗೆದು ಹಣ ದೊರಕಿಸಿದರು. ಮಾಧವರಾಯರು ಸೋದರಮಾವನಿಂದ ಸಾಲ ತೆಗೆದುಕೊಂಡು ಹಣವನ್ನು ಕೊಟ್ಟರು. ಹೀಗೆ ನಾವು ಮೂವರೂ ಹಣದ ಹೊಣೆ ಹೊತ್ತು ಕೆಲಸಕ್ಕೆ ಕೈ ಹಾಕಿದೆವು.

ಆಗ ಧಾರವಾಡದಲ್ಲಿ 'ರಾಜಹಂಸ', 'ವಿಜಯ' ಎಂಬ ಎರಡು ದೈನಿಕ ಹಾಗು ವಾರಪತ್ರಿಕೆಗಳೂ ಅದೇ ರೀತಿ 'ಕರ್ನಾಟಕ ವೃತ್ತ' ವೆಂಬ ಮುದವೀಡು ಕೃಷ್ಣರಾಯರು ನಡೆಸಿದ ವಾರಪತ್ರಿಕೆಯು ಅಸ್ತಿತ್ವದಲ್ಲಿದ್ದವು. ಅವುಗಳಲ್ಲಿ ಬರೆದು ಪ್ರಚಾರ ಕಾರ್ಯವನ್ನು ಮಾಡಿ ನಾವು ಸಂತೋಷಪಟ್ಟಿದ್ದರೆ ಈ ಹೊಸ ಸಂಸಾರವನ್ನು ಹೂಡುವ ವಿಚಾರವು ನಮ್ಮಲ್ಲಿ ಬರುವ ಕಾರಣವಿರಲಿಲ್ಲ. ಆದರೆ ಒಂದು ಹೊಸ ಪತ್ರಿಕೆಯನ್ನು ಹೊರಡಿಸಿ ನವವಿಚಾರಗಳನ್ನು ಮಂಡಿಸಿ ಒಂದು ದೊಡ್ಡ ಸಂಸ್ಥೆಯನ್ನು ಕಟ್ಟಬೇಕು ಎಂಬ ಆಕಾಂಕ್ಷೆಯೇ ನಮ್ಮನ್ನು ಈ ಸಾಹಸಕ್ಕೆ ಎಳೆಸಿತು. ಪತ್ರಿಕಾ ಪ್ರಪಂಚವು ನಮ್ಮ ಮೂವರಿಗೂ ಹೊಸತು ಎಂದು ಹೇಳಲು ಅಡ್ಡಿಯಿಲ್ಲ. ಅಕಸ್ಮಾತ್ತಾಗಿ ಆಗೊಮ್ಮೆ ಈಗೊಮ್ಮೆ ಹೀಗೆ ಹಲವೊಂದು ಲೇಖಗಳನ್ನು ನಾನು ಹಾಗ ಮಾಧವರಾಯರು ಕನ್ನಡ ಪತ್ರಿಕೆಗಳಲ್ಲಿ ಬರೆದಿದ್ದೆವು. ಅದೇ ನಮ್ಮ ಲೇಖನವ್ಯವಸಾಯದ ಅನುಭವ. ಅಚ್ಚಕೂಟವೆಂದರೆ ಹೇಗಿರುವದೆಂಬುದನ್ನು ಎಂದೂ ನಾವು ಯಾರೂ ನೋಡಿರಲಿಲ್ಲ ಆದರೆ ಈ ಬಗೆಯ ಒಂದು ಅನನುಭವವೇ ನಮ್ಮನ್ನು ಈ ಸಾಹಸಕ್ಕೆ ಹೆಚ್ಚಾಗಿ ಎಳೆಸಿತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಹಣದ ಕೊರತೆ, ಅನುಭವದ ಅಭಾವ ಇವು ನಮ್ಮನ್ನು ಹೆಜ್ಜೆ ಹೆಜ್ಜೆಗೆ ತಡೆಗಟ್ಟುತಿದ್ದವು. ಆದರೆ ನಮ್ಮಿಂದ ದೇಶಕಾರ್ಯವು ಆಗಬೇಕು ಎಂಬ ಹುಮ್ಮಸ ಹಾಗು ಹಿರಿಯರ ಪ್ರೋತ್ಸಾಹ ಇವೇ ನಮ್ಮನ್ನು ಎತ್ತಿ ಹಿಡಿದು ಹೊಸ ಚೈತನ್ಯದಿಂದ ಪ್ರೇರೇಪಿಸುತಿದ್ದವು.

ಈ ಮೇರೆಗೆ ನಾವು ಪ್ರಯನ್ನ ನಡೆಸಿ ಕೊನೆಗೆ ೫—೨—೧೯೨೨ ನೆ ದಿನ 'ಕರ್ಮವೀರ' ದ ಪ್ರಥಮ ಅಂಕವನ್ನು ಹೊರಡಿಸಿದೆವು. ಆಗ ರಾಮರಾಯರು ವ್ಯವಸ್ಥಾಪಕರಾಗಿಯೂ ನಾನು ಸಂಪಾದಕನಾಗಿಯೂ ಮಾಧವರಾಯರು ಪ್ರಕಾಶಕರಾಗಿಯೂ ಕೆಲಸಮಾಡುತ್ತಿದ್ದೆವು. ಆದರೆ ಹೆಸರಿಗೆ ಈ ಕೆಲಸವನ್ನು ಮಾಡಬೇಕೆಂದಿದ್ದರೂ ನಾವು ಅಚ್ಚುಕೂಟದಲ್ಲಿ ಮಾಡದೇ ಇದ್ದ ಕೆಲಸ ಉಳಿಯಲಿಲ್ಲ. ಇಷ್ಟೆಲ್ಲ ಹಗಲಿರುಳು ದುಡಿದರೂ ಒಂದು ಅಚ್ಚುಕಟ್ಟಾದ ಒಳ್ಳೆಯ ಪತ್ರಿಕೆ ಹೊರಡಿಸುವದು ನಮಗೆ ಬಹಳ ದುಸ್ತರವಾಗುತಿತ್ತು. ನಮ್ಮ ಸಾಧನಸಂಪತ್ತು ಅಷ್ಟೊಂದು ಸದೋಷವಿತ್ತು. ಮೇಲಾಗಿ ಕೇವಲ ಪತ್ರಿಕೆಯಲ್ಲಿ ಬರೆಯುವ ಕಾರ್ಯವನ್ನಷ್ಟೇ ಮಾಡದೆ ನಾವು ಮೂವರೂ ಪ್ರತ್ಯಕ್ಷ ಚಳವಳಿಯಲ್ಲಿ ಮುಖ್ಯ ಭಾಗವನ್ನು ವಹಿಸುತಿದ್ದೆವು. ಆ ಮೂಲಕ ಪ್ರಚಾರಕಾರ್ಯ, ಕಾಂಗ್ರೆಸ ಕಮಿಟಿಗಳ ಸಂಘಟನೆ, ಪಿಕೆಟಿಂಗ ಮುಂತಾದ ಕೆಲಸಗಳ ಭಾರವೂ ನಮ್ಮ ಮೇಲೆ ಸಾಕಷ್ಟು ಬೀಳುತ್ತಿತ್ತು.

ನಾವು ನಾಲ್ಕೈದು ತಿಂಗಳು 'ಕರ್ಮವೀರ' ವನ್ನು ನಡಿಸುವಷ್ಟರಲ್ಲಿಯೇ ಆ ಪತ್ರಿಕೆ ಬಹಳ ಲೋಕಪ್ರಿಯವಾಯಿತು. ಉಗ್ರಲೇಖಗಳನ್ನು ಬರೆಯುವದರಲ್ಲಿ ಹಾಗು ನಿರ್ದಾಕ್ಷಿಣ್ಯವಾಗಿ ಸರಕಾರವನ್ನು ಟೀಕಿಸುವದರಲ್ಲಿ ಈ ಪತ್ರದ ಮೇಲುಗೈ ಇರುವದೆಂದು ಜನಾಭಿಪ್ರಾಯವಾಯಿತು. ಮುಂದೆ ಇಂಥ ಲೇಖಗಳ ಪರಿಣಾಮವಾಗಿ ಜಿಲ್ಲೆಯ ಕಲೆಕ್ಟರರಾದ ಪೇಂಟರ್ ಸಾಹೇಬರು ಮಾಧವರಾಯರು ಹಾಗುನನ್ನನ್ನು ಕರೆಯಿಸಿ ನಮ್ಮಿಬ್ಬರಿಗೂ ಎಚ್ಚರಿಕೆ ಕೊಟ್ಟು 'ನಿಮ್ಮ ನೆತ್ತರದ ನೀರಡಿಕೆ ನನಗಾಗಿದೆ' ಎಂದು ಹೇಳಿದರು. ಆಯಿತು ಮರುದಿನವೇ ಧಾರವಾಡದ ಪ್ರಸಿದ್ಧ ಗೋಳೀಬಾರ ಘಟನೆ ನಡೆದು ೩೮ ಜನರ ಬಂಧನವಾಯಿತು. ಅವರಲ್ಲಿ ನಾವಿಬ್ಬರು.

'ಕರ್ಮವೀರ'ನ ಸುದೈವದಿಂದ ರಾಮರಾಯರು ಸೆರೆಮನೆಗೀಡಾಗಲಿಲ್ಲ. ನಿಜವಾಗಿ ಆಗ ಅವರೊಬ್ಬರ ಮೇಲೆಯೇ ಅಂಥ ಕಠೋರವಾದ ಹಾಗು ಭಯಪ್ರದವಾದ ವಾತಾವರಣದಲ್ಲಿ 'ಕರ್ಮವೀರ' ವನ್ನು ನಡೆಸುವ ಭಾರವು ಬಿದ್ದಿತು ಆದೇ ಅವರ ಅಗ್ನಿಪರೀಕ್ಷೆ ಎಂದು ಹೇಳಬಹುದು. ಎದೆಗುಂದದೆ ಹಿಂಜರಿಯದೆ ಅವರು ಧೈರ್ಯದಿಂದ ಉತ್ಸಾಹದಿಂದ ಹಲವು ಸಹಕಾರಿಗಳನ್ನು ಒಟ್ಟುಗೂಡಿಸಿ 'ಕರ್ಮವೀರ'ವನ್ನು ಎಂದಿನಂತೆ ಮುಂದೆ ಸಾಗಿಸಿದರು. ಆಗ ಕರ್ನಾಟಕದ ಕುಲಪುರೋಹಿತರಾದ ಆಲೂರ ವೆಂಕಟರಾಯರು ಹಾಗು ಧಾರವಾಡ ವಾಮನರಾಯರು 'ಕರ್ಮವೀರ' ಕ್ಕೆ ಸಲ್ಲಿಸಿದ ಸೇವೆಯನ್ನು ಯಾರೂ ಮರೆಯಲಾರರು. ರಾಮರಾಯರು ಆಗ ಚಳವಳಿಯ ಸೂತ್ರಚಾಲಕರೂ ಆಗಿದ್ದರು. ನಾವು ಮುಂದೆ ಸೆರೆಮನೆಯಿಂದ ಹೊರಬೀಳುವವರೆಗೂ ಸತತವಾಗಿ 'ಕರ್ಮವೀರ'ದ ತೇಜಿಯು ಹೆಚ್ಚೆಚ್ಚು ಬೆಳೆಯುವಂತೆ ಅದನ್ನು ನಡೆಸಿದರು.

ಈ ರೀತಿ ಈಗ ಇಡೀ ಕರ್ನಾಟಕದಲ್ಲಿ ಉಜ್ವಲ ರಾಷ್ಟ್ರೀಯ ವಾರಪತ್ರಿಕೆಯೆಂದೆನಿಸಿಕೊಂಡು ಜನತೆಯ ಅಖಂಡ ಸೇವೆ ಮಾಡುತಿರುವ ಕರ್ಮವೀರ ವಾರ ಪತ್ರಿಕೆಯ ಮೂಲ ಉತ್ಪಾದಕರಲ್ಲಿ ಶ್ರೀ ರಾಮರಾಯರು ಪ್ರಮುಖರು. ಇಷ್ಟೇ ಅಲ್ಲ. ಆ ಕಠಿಣಕಾಲದಲ್ಲಿ ನೆಟ್ಟ ರಾಷ್ಟ್ರೀಯ ವೃತ್ತಿಯ ವೃಕ್ಷವನ್ನು ಚನ್ನಾಗಿ ಪಂರಕ್ಷಿಸಿ ನೀರೆರೆದು ಅದನ್ನು ಬೆಳೆಯಿಸಿದ ಶ್ರೇಯಸ್ಸು ಅವರಿಗೆ ಸೇರುವದು. ಅವರ ಷಷ್ಟ್ಯಬ್ದಪೂರ್ತಿಯ ಈ ಸುಪ್ರಸಂಗದಲ್ಲಿ ಅವರ ಈ ಅನುಪಮ ಸಾಹಸದ ಸೇವೆಯನ್ನು 'ಕರ್ಮವೀರ'ವು ಮನ್ನಿಸದೆ ಇರಲಾರದು. ಆ ಕಾರಣದಿಂದಲೇ ಆ ಪತ್ರಿಕೆಯ ಜನ್ಮಕಥನವನ್ನು ಇಲ್ಲಿ ಹೇಳಿ ಅದರಲ್ಲಿ ರಾಮರಾಯರು ವಹಿಸಿದ ಪ್ರಮುಖ ಭಾಗವನ್ನು ಉಲ್ಲೇಖಿಸಿರುವೆನು.

ಶ್ರೀ. ಸಾಲಿಯವರ ಪ್ರೇಮಸಂದೇಶ

ಶ್ರೀನಿಕೇತನದಲ್ಲಿ ೧೯-೧೦-೪೭ ರವಿವಾರ ದಿವಸ ಶ್ರೀಮಾನ್ ಸಾಲಿರಾಮಚಂದ್ರರಾಯರ ೫೯ ನೆಯ ಹುಟ್ಟು ಹಬ್ಬದ ನಿಮಿತ್ತ ಅವರ ಗೆಳೆಯರು ವಿದ್ಯಾರ್ಥಿಗಳು ಕೂಡಿದ್ದರು.



ಮೊದಲು ಧೂಳ್ಳಿಯವರು "ಕಾಯೊ ರಾಘವೇಂದ್ರ" ಎಂಬ ಪದ್ಯವನ್ನು ಇಂಪಾಗಿ ಹಾಡಿದರು. ನಂತರ ಗಾಯನಾಚಾರ್ಯ ಕಟ್ಟಿ ಹನುಮಂತಾಚಾರ್ಯರು ಪುರಂದರದಾಸರ ೮-೧೦ ಪದಗಳನ್ನು ಬಿಡಿಬಿಡಿಸಿ ಜನ ಮೆಚ್ಚುವಂತೆ ಹಾಡಿದರು. ಕಮಲಾಪೂರ ಭೀಮರಾಯರ ಪೇಟೀವಾದನವು ಬಹು ಮನೋಹರವಾಗಿದ್ದಿತು. ಇದಾದ ಮೇಲೆ ಶ್ರೀ ಸಾಲಿಯವರು ಹೀಗೆ ಪ್ರಾರಂಭಿಸಿದರು.

"ನಾನು ೫೯ ವರ್ಷಗಳನ್ನು ಅನೇಕ ತೊಡಕು ತೊಂದರೆಗಳಿಂದ ಕಳೆದು ೬೦ ನೆಯ ವರ್ಷದಲ್ಲಿ ಕಾಲಿಡುತ್ತೇನೆ. ದೇಶದ ಸ್ವಾತಂತ್ರ್ಯವು ಆನಂದವನು ಕೊಟ್ಟಿದೆ. ಆದರೆ ಅದನ್ನು ಕಾಯ್ದುಕೊಳ್ಳುವ ಶಕ್ತಿ ನಮ್ಮಲ್ಲಿ ಬರಬೇಕು.

"ಮನುಷ್ಯ ಚಿಕ್ಕವನಿರುವಾಗ ಯೋಜನೆಗಳನ್ನು ಕಟ್ಟಿ ಇಂದು-ನಾಳೆ-ಮುಂದು ಎಂದು ಎಣಿಕೆ ಹಾಕುತ್ತಾನೆ. ಆದರೆ ನನ್ನ ಈಗಿನ ಸ್ಥಿತಿ ನಾಳೆಯೆನ್ನುವ ಹಾಗಿಲ್ಲ. ಒಂದು ಕಾಲು ಹೊರಗೆ ಇಟ್ಟು ಇನ್ನೊಂದು ಕಾಲನ್ನು ಎತ್ತಿದ್ದೇನೆ. ಈ ಕಾಲದಲ್ಲಿ ಪರ ಹಿತವೇ ಜೀವನದ ಗುರಿ. ಕೊಂದು ಬದುಕುವುದು ಬದುಕಲ್ಲ. ಒಬ್ಬನನ್ನು ನಾನು ಕೊಲ್ಲಬೇಕಾದರೆ ನನ್ನಲ್ಲಿಯ ವಿವೇಕನನ್ನು ಮೊದಲು ಕೊಂದು ಬಳಿಕ ಅವನನ್ನು ಕೊಲ್ಲಬೇಕಾಗುತ್ತದೆ. ಇದು ತರವಲ್ಲ. ಪ್ರೇಮದಿಂದ ಪ್ರೇಮವನ್ನು ಬೆಳೆಸಿ ಪ್ರೇಮದ ನೆಳಲಿನಲ್ಲಿ ಬದುಕುವುದು ನಿಜವಾದ ಬದುಕು.

"ವಿದ್ಯಾರ್ಥಿಗಳು ಸ್ವಾತಂತ್ರ್ಯದ ಸದುಪಯೋಗವನ್ನು ಮಾಡಿಕೊಳ್ಳಬೇಕು. ಹಿರಿಯರು ಅವರಿಗೆ ಮಾರ್ಗದರ್ಶಕರಾಗಿ ಕೈ ಹಿಡಿದು ಕಾರ್ಯಮಾಡಿಸಬೇಕು. ಇದೇ ನನ್ನ ಆಸೆ."

ಶ್ರೀ ಸಾಲಿಯವರ ಪ್ರೇಮಸಂದೇಶವಿದು. ಇದು ವ್ಯಕ್ತಿಯ ಸಂದೇಶವಾದರೂ ದೇಶಕ್ಕೆ ಮಾರ್ಗದರ್ಶನವಿದ್ದರೆ, ಹಾಗೆ ಅನಿಸಿದರೆ ಕವಿವರ್ಯರ ಉದ್ದೇಶವು ಫಲಿಸಿದಂತಾಗುವದು. ಅವರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯವಿತ್ತು ಕಾಪಾಡಲಿ.

ಶ್ರೀಯುತ ಹುಕ್ಕೇರಿಕರ ರಾಮುರಾಯರ ವೈಶಿಷ್ಟ್ಯ

ಬರೆದವರು– ಶ್ರೀ ಆಲೂರ ವೆಂಕಟರಾಯರು

ಶ್ರೀ ರಾಮುರಾಯರು ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಒಂದು ಗಣ್ಯವಾದ ವ್ಯಕ್ತಿ. ಸಾರ್ವಜನಿಕ ಕಾರ್ಯ ಮಾಡುವವರಲ್ಲಿಯೂ ಅನೇಕ ತರತರಗಳಿವೆ, ತರಗತಿಗಳಿವೆ, ವೈಶಿಷ್ಟ್ಯಗಳಿವೆ, ಎಲ್ಲರ ಜೀವನಕಾರ್ಯವೂ ಒಂದೇ ಬಗೆಯದಿರುವುದಿಲ್ಲ. ಆದರೆ ಗಂಗಾನದಿಯು ಸಮುದ್ರಮುಖದಲ್ಲಿ ನೂರಾರು ಟಿಸಿಲುಗಳಾಗಿ ಹರಿದಿದ್ದರೂ ಅವೆಲ್ಲವೂ ಕೊನೆಗೆ ಒಂದೇ ಸಮುದ್ರಕ್ಕೆ ಹೋಗಿ ಕೂಡುವಂತೆ ಸಾರ್ವಜನಿಕ ಪುರುಷರ ಕಾರ್ಯಗಳೆಲ್ಲವೂ ಕೊನೆಗೆ ರಾಷ್ಟ್ರದ ನವಜೀವನವನ್ನು ಒಂದಿಲ್ಲೊಂದು ರೀತಿಯಲ್ಲಿ ಪುಷ್ಟೀಕರಿಸುವುದರಲ್ಲಿ ಪರಿಣಮಿಸುತ್ತವೆ. ಆದಕಾರಣ ಪ್ರತಿಯೊಬ್ಬ ಸಾರ್ವಜನಿಕ ಪುರುಷನ ಚರಿತ್ರೆಯನ್ನು ಓದುವಾಗ ಆ ಪುರುಷನ ವೈಶಿಷ್ಟ್ಯವೇನೆಂಬುದನ್ನು ಅರಿತುಕೊಳ್ಳುವುದು ಅವಶ್ಯವಿದೆ. ಆದಕಾರಣ ನಾನು ಈ ಲೇಖದಲ್ಲಿ ಶ್ರೀ ರಾಮರಾವ ಹುಕ್ಕೇರಿಕರ ಇವರ ಸಾರ್ವಜನಿಕ ಜೀವನದ ವೈಶಿಷ್ಟ್ಯವೇನೆಂಬುದನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತೇನೆ. ಪ್ರಯತ್ನಿಸುತ್ತೇನೆ ಎಂದೆನ್ನುವ ಕಾರಣವೇನೆಂದರೆ ಅವರ ನನ್ನ ಸಾರ್ವಜನಿಕ ಜೀವನದ ಸಂಪರ್ಕ ಅಷ್ಟೊಂದು ದೃಢವಾಗಿರಲಿಲ್ಲ ಅವರು ಅನೇಕ ವರ್ಷ ವಿಕ್ಟೋರಿಯಾ ಹಾಯಸ್ಕೂಲಿನ ಪ್ರಿನ್ಸಿಪಾಲರಾಗಿದ್ದರು. ಆಗ ನಾನು ಸಾರ್ವಜನಿಕ ಜೀವನದಲ್ಲಿ ಇದ್ದೆ. ಅವರು ಪ್ರಿನ್ಸಿಪಾಲರಾದುದನ್ನು ಬಿಟ್ಟು ಮುಂದೆ ಸಾರ್ವಜನಿಕ ರಣಾಂಗಣವನ್ನು ಸೇರಿದಾಗ ನಾನು ಮೆಲ್ಲಮೆಲ್ಲನೆ ಅವರ ರಣಾಂಗಣದ ವೈಶಿಷ್ಟ್ಯವಾದ ಮಹಾತ್ಮಾ ಗಾಂಧಿಯವರ ರಾಜಕಾರಣದಿಂದ ಹಿಂದೆ ಸರಿಯುವದರಲ್ಲಿ ಇದ್ದೆ. ಅದಗೂ ಪ್ರತಿಯೊಂದು ಕಾರ್ಯದಲ್ಲಿ ಕೂಡಿದಲ್ಲಿ ಕೂಡಿ ನಡೆಸುವುದನ್ನೂ ಕೂಡದಿದ್ದಲ್ಲಿ ನನ್ನ ಕೈಲಾದ ಮಟ್ಟಿಗೆ ನೆರವಾಗುವುದನ್ನೂ ನನ್ನ ಸಂಪ್ರದಾಯವನ್ನಿಟ್ಟುಕೊಂಡಿರುವದರಿಂದ ಪ್ರತ್ಯಕ್ಷ ಕಾರ್ಯದಲ್ಲಿ ನಮ್ಮ ಅವರ ಸಂಪರ್ಕ ವಿಶೇಷವಿಲ್ಲದಿದ್ದರೂ ಅವರು ಕಾರ್ಯ ಮಾಡುವ ಕುಶಲತೆಯ ಪರಿಚಯವು ನನಗೆ ಸಾಕಷ್ಟು ಇದೆ. ಇರಲಿ.

ಅವರಲ್ಲಿ ನನಗೆ ಕಂಡುಬಂದ ಒಂದು ವೈಶಿಷ್ಟ್ಯವೆಂದರೆ ಅವರು ತಿರ ಚಿಕ್ಕವರಿದ್ದಾಗಿನಿಂದಲೇ ತಮ್ಮ ಮುಂದಿನ ಆಯುಷ್ಯದ ಧ್ಯೇಯವನು ಸ್ಪಷ್ಟವಾಗಿ ತಮ್ಮ ಕಣ್ಣಮುಂದೆ ಇರಿಸಿಕೊಂಡುದು. ಅವರು ಇನ್ನೂ ವಿದ್ಯಾರ್ಥಿದೆಸೆಯಲ್ಲಿರುವಾಗಲೇ ತಮ್ಮ ಆಯುಷ್ಯವನ್ನೆಲ್ಲ ಸಾರ್ವಜನಿಕಸೇವೆಯಲ್ಲಿ ಕಳೆಯುವ ಸಂಕಲ್ಪ ತೆಗೆದುಕೊಂಡರು. ನನಗೆ ಇವರ ಮಹತ್ವ ಹೆಚ್ಚಿಗೆ ಎನಿಸುವುದಕ್ಕೆ ಕಾರಣವೆಂದರೆ ನನ್ನ ಮನಸ್ಸಿನಲ್ಲಿಯೂ ಸಾರ್ವಜನಿಕಸೇವೆ ಮಾಡಬೇಕೆಂಬಿಚ್ಛೆ ಇದ್ದರೂ ಒಮ್ಮೆಲೆ ದೃಢನಿಶ್ಚಯ ಮಾಡುವ ಧೈರ್ಯ ನನಗೆ ಆಗಲಿಲ್ಲ. ಮುಂಚೆ ವಕೀಲಿಯನ್ನು ಕೆಲ ವರ್ಷ ಬಿಟ್ಟು ಸಾರ್ವಜನಿಕ ಜೀವನದಲ್ಲಿ ಸೇರಿದ್ದರೂ ಪುನಃ ವಕೀಲಿಯನ್ನು ಹಿಡಿದೆನು. ಶ್ರೀ ರಾಮರಾಯರು ವಿದ್ಯಾರ್ಥಿ ದೆಸೆಯಲ್ಲಿರುವಾಗ ಅವರನ್ನು ನಾನು ಮೊದಲ ಕಾಣುವ ಸಂದರ್ಭ ಒದಗಿತು. ವಿಕ್ಟೋರಿಯಾ ಹಾಯಸ್ಕೂಲಿನಲ್ಲಿ ಪದವೀಧರರಾರೂ ಅಜೀವ ಸದಸ್ಯರಾಗಿರಲಿಲ್ಲ. ಅಲ್ಲಿ ಕೆಲವರನ್ನು ಸೇರಿಸಲಿಕ್ಕೆ ನಾನು ಪ್ರಯತ್ನಿಸುತ್ತಿದ್ದೆ. ಅದಕ್ಕೊಂದು ಹೊಸ ಘಟನೆ ನಾನೂ ನನ್ನ ಮಿತ್ರರಾದ ಶ್ರೀ ನರಗುಂದಕರ ಇವರೂ ಸಿದ್ಧಮಾಡಿಕೊಟ್ಟೆವು. ಈಗ ವೈಕುಂಠವಾಸಿಗಳಾದ ಗುತ್ತಲ ರಂಗಾಚಾರ್ಯರು ಅಜೀವಸದಸ್ಯರಾಗಲು ಒಪ್ಪಿದರು. ಅವರನ್ನು ಕಾಣುವದಕ್ಕೆ ನಾನು ಪುಣೆಗೆ ಹೋಗಿದ್ದೆ. ಆಗ ರಂಗಾಚಾರ್ಯರೂ ಶ್ರೀ ರಾಮರಾಯರೂ ಪುಣೆಯ ಲಕಡಿಪೂಲಿನ ಹತ್ತರ ಇರುವ ಒಂದು ಕೋಣೆಯಲ್ಲಿ ಅಭ್ಯಾಸ ಮಾಡುತ್ತಿದ್ದರು. ವಿಕ್ಟೋರಿಯಾ ಹಾಯಸ್ಕೂಲಿನ ಘಟನೆ ಸಿದ್ಧ ಮಾಡುದನ್ನು ರಂಗಾಚಾರ್ಯರಿಗೆ ತಿಳಿಸಿದೆ. ಆಗ ಶ್ರೀ ರಾಮರಾಯರ ಪರಿಚಯವೇನೂ ನನಗೆ ಇರಲಿಲ್ಲ. ಅವರು ವಿಕ್ಟೋರಿಯಾ ಹಾಯಸ್ಕೂಲಿಗೆ ಬರಬಹುದೆಂದು ನಾನೇನೂ ಅರಿತಿರಲಿಲ್ಲ, ಅದನೂ ಅವರು ತಾವಾಗಿಯೇ ಅಜೀವಸದಸ್ಯರಾಗಲೊಪ್ಪಿ ಆ ಪ್ರಕಾರ ಸೇರಿದರು ಮತ್ತು ತಮ್ಮ ಕರ್ತೃತ್ವಶಕ್ತಿಯಿಂದ ಪ್ರಿನ್ಸಿಪಾಲರಾದರು.

ಹಿಂದೆ ಹೇಳಿದಂತೆ ಮುಂದೆ ನನ್ನ ಅವರ ಸಂಬಂಧ ಆಗ ವಿಶೇಷ ಬರಲಿಲ್ಲ. ಆದರೆ ಆಗಿನಿಂದ ಅವರಲ್ಲಿ ಒಂದು ದೊಡ್ಡ ಗುಣ ಕಂಡೆ. ಅದಾವುದೆಂದರೆ ಯಾರಿಂದ ಯಾವ ಕೆಲಸವಾಗುತ್ತದೋ ಅದನ್ನು ಅವರಿಂದ ಮಾಡಿಸಿಕೊಳ್ಳುವುದು. ಅವರು ಪ್ರಿನ್ಸಿಪಾಲರಿದ್ದಾಗ, ನನಗೆ ತಮ್ಮ ವಿದ್ಯಾರ್ಥಿಗಳ ಸಲುವಾಗಿ ಒಂದು ಚಿಕ್ಕ ಪ್ರಹಸನವನ್ನು ಬರೆದುಕೊಡಲಿಕ್ಕೆ ಕೇಳಿದರು. ನಾನೂ ಶ್ರೀ ನರಗುಂದಕರ ರಾಮರಾಯರೂ 'ಕನ್ನಡಿಗರ ಭ್ರಮನಿರಸನ' ವೆಂಬ ಪ್ರಹಸನವನ್ನು ಬರೆದು ಕೊಟ್ಟೆವು. ಅವರ ಪ್ರೇರಣೆಯಿಂದ ಅದನ್ನು ಮುಂಚೆ ಅವರು ತಮ್ಮ ವಿದ್ಯಾರ್ಥಿಗಳಿಂದ ತಮ್ಮ ವಾರ್ಷಿಕ ಉತ್ಸವದಲ್ಲಿ ಆಡಿತೋರಿಸಿದರು.

ಮುಂದೆ ನನ್ನ ಅವರ ಸಂಬಂಧ ಬಂದುದು ಈ ಊರಲ್ಲಿ ಆರ್ಟ್ಸ ಕಾಲೇಜ ತೆಗೆಯುವಾಗ. ಧಿನೆಯಲ್ಲಿ ಶ್ರೀ. ಸುರೇಂದ್ರರಾವ ದೇಸಾಯಿ ಮುಂತಾದ ಕೆಲವು ತರುಣರ ಮನಸ್ಸಿನಲ್ಲಿ ಸಾರ್ವಜನಿಕ ಸೇವೆಯು ಮಾಡುವ ಹಂಬಲವಿತ್ತು. ವೃತ್ತಪತ್ರ ಮುಂತಾದುವನ್ನು ತೆಗೆಯಬೇಕೋ ಕೋಮುಕ್ತಾವಮಾರ್ಗವನ್ನಾದರೂ ಹಿಡಿಯಬೇಕೋ ಎಂಬ ಹೊಯ್ದಾಟದಲ್ಲಿ ಅವರ ಮನಸ್ಸು ಇತ್ತು. ಆ ಕಾಲಕ್ಕೆ ಕರ್ನಾಟಕ ಕಾಲೇಜು ಸರಕಾರೀ ಕಾಲೇಜವಾದ ಕಾರಣ ಬೇರೊಂದು ಕಾಲೇಜು ಆದರೆ ಒಳಿತು ಎಂಬ ಮಾತು ಹೊರಬಿತ್ತು. ವಿಕ್ಟೋರಿಯಾ ಹಾಯಸ್ಕೂಲನ್ನೇ ಆರ್ಟ್ಸ ಕಾಲೇಜವಾಗಿ ಬೆಳೆಸಿದರೆ ನೆಟ್ಟಗೆ ಎಂಬ ನಿರ್ಧಾರವಾಯಿತು. ಆದರೆ ಒಮ್ಮೆಲೆ ಆರ್ಟ್ಸ ಕಾಲೇಜು ಹೊರಡಲಾರದಷ್ಟೆ. ಅದರಿಂದ ಆ ತರುಣರು ಮುಂಚೆ ವಿಕ್ಟೋರಿಯಾ ಹಾಯಸ್ಕೂಲಿನಲ್ಲಿ ಅಜೀವ ಸದಸ್ಯರಾಗಬೇಕೆಂದು ಗೊತ್ತಾಯಿತು. ಆ ಕಾಲಕ್ಕೆ ಶ್ರೀ. ಸುರೇಂದ್ರರಾವ ದೇಸಾಯಿ ಇವರನ್ನು ಶ್ರೀ ಹುಕ್ಕೇರಿಕರ ಇವರ ಮನೆಗೆ ಕರಕೊಂಡ ಹೋಗಿ ಅವರ ಪರಿಚಯ ಮಾಡಿಕೊಟ್ಟು ಆ ತರುಣರೆಲ್ಲರೂ ಅಜೀವ ಸದಸ್ಯರಾಗುವುದರ ಉದ್ದೇಶವು ಕೇವಲ ಹಾಯಸ್ಕೂಲಿನಲ್ಲಷ್ಟೇ ಕಾರ್ಯ ಮಾಡುವುದಿರದೆ ಕಾಲೇಜನ್ನು ತೆಗೆಯುವದಿರುತ್ತದೆ ಎಂಬದನ್ನು ಅವರಿಗೆ ನಾನು ಸ್ಪಷ್ಟವಾಗಿ ತಿಳಿಸಿದೆ. ಮತ್ತು ಅದಕ್ಕೆ ಆಸ್ಪದ ಕೊಡುವುದಾದರೆ ಮಾತ್ರ ಅವರು ಸೇರುತ್ತಾರೆ. ಇಲ್ಲದಿದ್ದರೆ ಇಲ್ಲವೆಂದು ನಿಚ್ಚಳವಾಗಿ ಹೇಳಿದೆ. ಆಗ ಶ್ರೀ ಹುಕ್ಕೇರಿಯವರು ಆನಂದದಿಂದ ಅವರಿಗೆ ಪ್ರೋತ್ಸಾಹನ ಕೊಟ್ಟದ್ದು ನನ್ನ ನೆಲೆಪಿನಲ್ಲಿದೆ. ಆ ಪ್ರಕಾರ ಶ್ರೀ. ದೇಸಾಯರೂ ಶ್ರೀ ಲಕ್ಕುಂಡಿಯವರೂ ಹಾಯಸ್ಕೂಲಿನಲ್ಲಿ ಸೇರಿದರು. ಮುಂದೆ ಶ್ರೀ. ರುಕ್ಮಾಂಗದರಾವ ಇವರ ವಿಶೇಷ ಪರಿಶ್ರಮದಿಂದ ಆ ಆರ್ಟ್ಸ ಕಾಲೇಜು ಹೊರಟದ್ದು ಸರ್ವರಿಗೂ ವಿದಿತವೇ ಅದೆ.

ಶ್ರೀ ಹುಕ್ಕೇರಿ ರಾಮರಾಯರ ಒಲವು ವಿಶೇಷತಃ ರಾಜಕಾರಣದ ಕಡೆಗೆ ಇತ್ತು. ಅಥವಾ ಅದೊಂದೇ ಅವರ ಪ್ರೀತಿಯ ವಿಷಯವೆಂದರೂ ಸಲ್ಲುವದು. ಆದರೆ ನಮ್ಮ ದೇಶದಲ್ಲಿ ನಮ್ಮ ನಮ್ಮ ಒಲವಿನಂತೆ ಕಾರ್ಯ ಮಾಡುವದಕ್ಕೆ ಎಲ್ಲಿ ಸಿಗುತ್ತದೆ? ಎಲ್ಲಿ ಆಸ್ಪದ ಸಿಕ್ಕುತ್ತದೆಯೋ ಮತ್ತು ಎಷ್ಟು ಹೊತ್ತಿನವರೆಗೆ ಆಸ್ಪದ ಸಿಕ್ಕುತ್ತದೆಯೋ ಹಾಗೆ ನಡೆಯಬೇಕಾಗುತ್ತದೆ. ಮುಂದೆ ತಮ್ಮ ಒಲವಿನಂತೆ ಆಸ್ಪದ ಸಿಕ್ಕಾಗ ಅಲ್ಲಿ ಸೇರಬೇಕಾಗುತ್ತದೆ. ಆ ತರಹದ ಸಂದರ್ಭವೊಂದು ಒದಗಿತು. ಅಸಹಕಾರ ಚಳವಳಿಯೇ ಆ ಆಸ್ಪದವು. ಕೂಡಲೆ ಶ್ರೀ ರಾಮರಾಯರು ತಾವೇ ಬೆಳೆಸಿದ ಆ ಸಂಸ್ಥೆಗಳಿಗೆ ಬೀಗಹೊಡೆದು ಹೊರಬಿದ್ದು ರಾಜಕಾರಣದಲ್ಲಿ ಶ್ರೀ ದಿವಾಕರರೊಡನೆ ಧುಮುಕಿದರು! 'ಕರ್ಮವೀರ'ಪತ್ರಿಕೆಯ ವ್ಯವಸ್ಥಾಪಕರಾಗಿ ಕಾರ್ಯ ಮಾಡಿದರು! ಅವರು ಶ್ರೀ ರಂಗರಾಯರ ಬಲಗೈ. ಆ ಕಾಲಕ್ಕೆ ಒಂದು ಪ್ರಸಂಗದಲ್ಲಿ ಶ್ರೀ ಹುಕ್ಕೇರಿ ರಾಮರಾಯರ ಧೈರ್ಯವನ್ನು ಪರೀಕ್ಷಿಸುವ ಪ್ರಸಂಗ ಒದಗಿತು. ಧಾರವಾಡದ ಗೋಳೀಬಾರಿನ ಪ್ರಕರಣದಲ್ಲಿ ಶ್ರೀ. ರಂಗರಾಯರು ಹಿಡಿಯಲ್ಪಟ್ಟರು. ಆಗ "ಕರ್ಮವೀರ"ಕ್ಕೆ ಲೇಖಗಳನ್ನು ಬರೆದುಕೊಡುತ್ತಿದ್ದೆ. ಶ್ರೀಮಾನ್ ಹುಕ್ಕೇರಿ ರಾಮರಾಯರ ಕಾರ್ಯ ಕೌಶಲ್ಯದ ಪರಿಚಯವು ನನಗೆ ಆಯಿತು. ನಾನು ಎಷ್ಟೇ ಕೆಲಸದಲ್ಲಿ ಇದ್ದಾಗ್ಯೂ ನನ್ನಿಂದ ಲೇಖಗಳನ್ನು ಬರೆಸಿಕೊಳ್ಳದೆ ಬಿಡುತ್ತಿದ್ದಿಲ್ಲ. ಈ ತರಹದ ಕೌಶಲ್ಯ ಶ್ರೀ ಅಂಕಲಗಿ ಕೃಷ್ಣರಾಯರಲ್ಲಿ ಮಾತ್ರ ಆಗ ನಾನು ಕಂಡಿದ್ದೆ. ಇರಲಿ, ಆ ಗುಂಡಿನ ಪ್ರಕರಣವು ಮುಗಿದು ಶ್ರೀ ರಂಗರಾಯರು ಬಿಡಲ್ಪಟ್ಟರು. ಆದರು ಸಹ ಅವರು ಈ ಊರಬಿಟ್ಟು ಹೊರಗೆ ಹೋಗಬೇಕಾಗಿತ್ತು. ಕಾರಣ ನನಗೆ ಲೇಖ ಬರೆಯಲು ಹೇಳಿದರು. ನಾನು 'ಭೂರಕ್ತಸಾಯ ಸ್ವಾಹಾ' ಎಂಬ ಉಗ್ರ ಲೇಖ ಬರೆದೆ. ಶ್ರೀ. ರಾಮರಾಯರಿಗೆ ತೋರಿಸಿದೆ, ಆದರೆ ಅದು ಅತ್ಯುಗ್ರವಾದ್ದರಿಂದ ರಾಜದ್ರೋಹದ ಬಲೆ ತಪ್ಪಿದ್ದಲ್ಲ. ಕಾರಣ ಅದನ್ನು ಮುದ್ರಿಸಬೇಡಿರಿ ಎಂದು ಹೇಳಿದೆ. ಅದಕ್ಕೆ ಅವರ ರಾಜದ್ರೋಹವನ್ನು ಪ್ರಚಾರ ಮಾಡುವುದನ್ನು ನಾವು ನಮ್ಮ ಮುಖ್ಯ ಧ್ಯೇಯವನ್ನಾಗಿಯೇ ಇಟ್ಟುಕೊಂಡಿರುವೆವು. ಅದಕ್ಕೆ ನೀವೇನೂ ಕಾಳಜಿ ಮಾಡಬೇಡಿರಿ. ಬರೆಯಿರಿ ಎಂದರು ಮತ್ತು ಅದನ್ನು ಮುದ್ರಿಸಿದರು. ಅದಕ್ಕಾಗಿ ಶ್ರೀ ರಂಗರಾಯರೂ ಅವರೂ ತುರಂಗಕ್ಕೆ ಹೋದರು. ಆಗ ಆ ಇಬ್ಬರ ತರುಣರಲ್ಲಿ ನನ್ನ ಧೃಢಸ್ನೇಹವಿರಲಿಲ್ಲ. ಆದರೂ "ಕರ್ಮವೀರ" ಪತ್ರಿಕೆಯನ್ನು ನನ್ನ ಕಡೆಗೆ ಒಪ್ಪಿಸಿ ಹೋದರು! ಆ ಪ್ರಕಾಶನ ಒಬ್ಬರಿಗಿಂತ ಹೆಚ್ಚಿಗೆ ಜನರನ್ನೇಕೆ ತುರಂಗದ ಗಂಡಾಂತರದಲ್ಲಿ ಹಾಕಬೇಕೆಂದು ತಿಳಿದು ಆ ಪ್ರೆಸ್ಸಿನ ಮ್ಯಾನೇಜರ ಪ್ರೊಪ್ರಾಯಿಟರ ಎಡಿಟರನೆಂದು ಒಬ್ಬನೇ ಡಿಕ್ಲೇರೇಶನ ಮಾಡಿ ಆ ಪತ್ರಿಕೆ ಶ್ರೀ ದಿವಾಕರರು ಬರುವವರೆಗೆ ನಡೆಸಿದೆ.

ಮುಂದೆ ಅಂದಿನಿಂದ ಇಂದಿನ ವರೆಗೆ ಅವರ ಸಾರ್ವಜನಿಕ ಜೀವನವನ್ನು ನಿರೀಕ್ಷಿಸುತ್ತಲಿರುವೆ. ಅವರು ಸದ್ದಿಲ್ಲದೆ ಹೆಸರಿಲ್ಲದೆ ಬೇಸರಿಲ್ಲದೆ ಕೆಲಸ ಮಾಡುವ ಕೆಲಸಗಾರರು. ಶ್ರೀ ದಿವಾಕರ ರಂಗರಾಯರ ಕೀರ್ತಿಯ ಅರ್ಧ ಪಾಲು ಅವರಿಗೆ ಸಲ್ಲುತ್ತದೆಂದು ನಾನು ಹೇಳಿದರೆ ಶ್ರೀ ರಂಗರಾಯರು ಒಪ್ಪದೆ ಇರಲಿಕ್ಕಿಲ್ಲವೆಂದು ನನಗೆ ಎನಿಸುತ್ತದೆ. ಅವರು ಮುಖ್ಯತಃ ಯೋಜಕರು, ಸಂಘಟಕರು. ಯಾರಿಂದ ಯಾವಾಗ ಎಷ್ಟರ ಮಟ್ಟಿಗೆ ಕೆಲಸ ತೆಗೆದುಕೊಳ್ಳಬೇಕೆಂಬದು ಅವರಷ್ಟು ಮತ್ತಾರಿಗೂ ಗೊತ್ತಿಲ್ಲ. ನಾನು ಮೇಲಿಂದ ಮೇಲೆ ಅನ್ನುತ್ತಿದ್ದೆ: ಏನೆಂದರೆ ಶ್ರೀನಿವಾಸರಾಯರ ಸ್ವಭಾವ ಮಿತ್ರರನ್ನು ಕೂಡ ನಿಷ್ಕಾರಣವಾಗಿ ಬೇಸರಾಗುವಂತೆ ಮಾಡುವದು. ದೇ. ಭ. ಗಂಗಾಧರರಾವ ದೇಶಪಾಂಡೆಯವರ ಸ್ವಭಾವದಲ್ಲಿ ಶತ್ರುಗಳನ್ನಾದರೂ ಕೆಲವು ಕಾಲ ಮಿತ್ರರನ್ನಾಗಿ ಮಾಡಿಕೊಳ್ಳುವ ದೊಡ್ಡ ಗುಣವುಳ್ಳವಿದೆ. ಎಂದು ಅದನ್ನೇ ಶ್ರೀ ರಾಮರಾಯರ ಸಂಬಂಧವಾಗಿ ಹೇಳಬಹುದು ಅವರಿಗೂ ಶತ್ರುಗಳೇ ಇಲ್ಲ; ಎಲ್ಲರೂ ಮಿತ್ರರೇ.

ನಮ್ಮ ಮಾಸ್ತರರು

(ಲೇ:— ಡಾ. ನಾ. ಸು. ಹರ್ಡೀಕರರು)

ಕ್ರಮಬದ್ಧವಾಗಿ ವಿದ್ಯೆಯನ್ನು ಕಲಿಸಲು ಕೂಡ ಕೈಲಾಗದ ಮಾಸ್ತರ ಜನರು ರಾಜಕಾರಣದಲ್ಲಿ ಕೈಹಾಕಿದರೆ ನೀರಿನಿಂದ ಹೊರಗೆಳೆಯಲ್ಪಟ್ಟ ಮೀನಿನೋಪಾದಿಯಾಗುವುದು ಸಹಜ. ಆದರೆ ನಮ್ಮ ಮಾಸ್ತರರು ಹಾಗಲ್ಲ. ಅವರು ರಾಜಕಾರಣದಲ್ಲಿ ಕೈಹಾಕಿ ಯಶವನ್ನು ಹೊಂದಿರುವರಲ್ಲದೆ ಅವರದೇ ಆದ ಒಂದು "ಮಾಸ್ತರೀ ರಾಜಕಾರಣ " ಇಂದು ಕರ್ನಾಟಕದಲ್ಲಿ ಕಟ್ಟಿರುವರು. ಹುಕ್ಕೇರಿಕರ ಮಾಸ್ತರರ ಈ ಮಾಸ್ತರೀ ರಾಜಕಾರಣವು ವ್ಯಾಪಿಸದ ಕ್ಷೇತ್ರವೇ ಕರ್ನಾಟಕದಲ್ಲಿ ಉಳಿದಿಲ್ಲ; ಕಾಂಗ್ರೆಸ, ಖಾದಿ, ರೈತ ಹಿತಸಂವರ್ಧನೆ, ಹಳ್ಳಿಯ ಸಮಸ್ಯೆಗಳು, ಗ್ರಾಮಸೇವೆ, ಪತ್ರಿಕಾ ವ್ಯವಸಾಯ ಮೊದಲಾದ ಗೋಚರಾಗೋಚರ ಕ್ಷೇತ್ರಗಳಲ್ಲಿ ಇಂದು ಕಂಡು ಬರುತ್ತದೆ.

'ಆದೇನದೆಲ್ಲಾ ಇದ್ದದ್ದು' ಇದ್ದ ಹಾಗೆ ಆಗಬೇಕೆನ್ನುವುದು ಅವರ ಮತ. ಈ 'ಇದ್ದದ್ದು' ಎಂಬ ಸರ್ವನಾಮವು ಅದೆಷ್ಟು ವ್ಯಾಪಕವಿರುವುದೋ ಅಷ್ಟೇ ಅವರ ಕಾರ್ಯಕ್ಷೇತ್ರ ಮತ್ತು ಕರ್ತೃತ್ವ ಶಕ್ತಿಗಳು ಅಪಾರವಿವೆ ಎಡರು ತೊಡರುಗಳನ್ನು ಲೆಕ್ಕಿಸದೆ, ಮಾನಾಪಮಾನಗಳ ಕಡೆಗೆ ಲಕ್ಷ್ಯಕೊಡದೆ, ಪ್ರಸಂಗ ಬಂದರೆ ಸತ್ಯಾ-ಸತ್ಯ, ಹಿಂಸೆ ಅಹಿಂಸೆಗಳ ಗೊಂದಲದಲ್ಲಿಯೂ ಕಾಲಕಳೆಯದೆ ಹಿಡಿದ ಕಾರ್ಯವನ್ನು ತೀವ್ರದಿಂದ ಮುಗಿಸುವ ಮನೋವೃತ್ತಿ ಮಾಸ್ತರರದು. ೧೯೪೨ರ 'ಚಲೇಜಾವ' ಚಳವಳಿಯಲ್ಲಿ ಅವರು ವಹಿಸಿದ ಧೋರಣೆಯು ಇದಕೆ ಸಾಕ್ಷಿ ಇದೆ.

ಸಾದಾ ಉಡುಪು, ನಿರಾಡಂಬರದ ನಡೆ 'ಇಸ್ತ್ರೀ ಮಾಡದ ಗಾಂಧಿ ಟೊಪ್ಪಿಗೆ, ಮಾಸಿದ ಪೈರಣ ಹರಕು ಕೋಟು ಇವು ಹುಕ್ಕೇರಿಕರ ರಾಮರಾಯರ ಗುರುತುಗಳು. ಪರಪ್ರಾಂತದಿಂದ ಬಂದ ವ್ಯಕ್ತಿಯೊಬ್ಬನು ಹುಕ್ಕೇರಿಕರರನ್ನು ಪ್ರಥಮ ಸಾರಿ ಭೆಟ್ಟಿಯಾದ ನಂತರ ಅವನು ಮಾಸ್ತರರನ್ನು ಇನ್ನೂ ಇವರೊಬ್ಬ ಶಾಲಾ ಮಾಸ್ತರರೆಂದೇ ಹೇಳಲು ಯಾವ ಅಭ್ಯಂತರವೂ ಇಲ್ಲ; ಹಾಗಿದೆ ಅವರ ವೇಷಭೂಷಣ ಮತ್ತು ಅವರು ಕಂಕುಳಲ್ಲಿ ಸೇರಿಸಿಕೊಳ್ಳುವ ಛತ್ರಿ. ಪ್ರಸಂಗಕೆ ತಕ್ಕಂತೆ ತಮ್ಮನ್ನು ತಿದ್ದಿಕೊಂಡು ಯಶವನ್ನು ಸಂಪಾದಿಸುವುದರಲ್ಲಿ ರಾಮರಾಯರು ನುರಿತವರು. 'ಎದುರಾಳುಗಳು ಬಾಯಿ ಬಡಾಯಿ'ಗೆ ಪ್ರಾರಂಭಿಸಿದರೆ ತಾವು ತಣ್ಣಗೆ ಕೂತು ಹೊಂಚು ಹಾಕಿ ಕೆಲಸವನ್ನು ಸಾಧಿಸಿಕೊಳ್ಳುವುದೂ ಎದುರಾಳುಗಳು ತಡವರಿಸ ಹತ್ತಿದೊಡನೆ ತನ್ನ ಅಸ್ಖಲಿತ ವಾಣಿಯಿಂದ ಪ್ರಸಂಗವನ್ನು ತಮ್ಮಂತೆ ಮಾಡಿಕೊಳ್ಳುವುದೂ ಮಾಸ್ತರರ ರಾಜಕಾರಣದ ಒಂದು ಗತ್ತು. ವ್ಯಕ್ತಿಗಳ ಲಾಘವಸ್ಥದ ಕಡೆಗೆ ಹೆಚ್ಚಿನ ಮಹತ್ವ ಕೊಡದೆ ಸಮಾಜ ಹಿತವನು ಸಾಧಿಸುವ ವಿಶಾಲ ಧೋರಣೆಯನ್ನು ರಾಮರಾಯರು ತಮ್ಮ ಕಣ್ಣಮುಂದೆ ಇಟ್ಟುಕೊಂಡಿರುವುದರಿಂದಲೇ ಅವರಿಗಿನ್ನೂ– ಅವರ ವಿರೋಧಿಗಳ ವಿಶ್ವಪ್ರಯತ್ನವನ್ನು ಲೆಕ್ಕಿಸದೆ– ಕರ್ನಾಟಕದ ರಾಜಕಾರಣದಿಂದ 'ಪೆನ್ಶನ್' ಆಗಲಿಲ್ಲ.

ತುಸುಮಟ್ಟಿಗೆ ಮಾಸ್ತರರು "'ನಮ್ಮ ರಾಮುರಾಯರು' 'ನಮ್ಮ ಹುಕ್ಕೇರಿಕರರು, 'ಎಂಬ 'ನಮ್ಮ' ಪ್ರತ್ಯಯವನ್ನು ಹಚ್ಚಿದರೆ ಅದೇ ವದಲ್ಲಾ ಇದ್ದದ್ದು' ಇದ್ದಂತಾಗುವುದೆನ್ನುವುದು ಮಾಸ್ತರರಿಗೆ ತೃಪ್ತಿ. ಇದಕ್ಕೆ ಅವರಲ್ಲಿರುವ 'ನಮ್ಮ ತನದೇ ಕಾರಣವು— ಅದರಲ್ಲಿ 'ನನ್ನ' ತನವಿಲ್ಲ. ಕರ್ನಾಟಕದ ರಾಜಕಾರಣಿಗಳು ಸೋತೆ ಪಾಲಾಗುವುದು 'ನನ್ನ' ತನದಿಂದ ಎಂಬುದು ರಾಯರಿಗೆ ಗೊತ್ತಿದೆ' ಎಂದೇ ಅವರು ಆ ದಾರಿಯನ್ನು ಹಿಡಿಯದೆ 'ನಮ್ಮ' ತನವನ್ನು ಸ್ವೀಕರಿಸಿರುವರು.

ಇಂದು ಕರ್ನಾಟಕದ ರಾಜಕಾರಣದಲ್ಲಿ ರಾಮರಾಯರು ಬೇಕಾದವರಿಗೆ ಹೇಗೂ ಬೇಕಾಗಿ ಬೇಡಾದವರಿಗೂ ಅನಿವಾರ್ಯವಾಗಿ ಬೇಕಾಗಿ ತಮ್ಮ ಮಾಸ್ತರೀ ರಾಜಕಾರಣವನ್ನು ಸಾಗಿಸಿರುವರು. ಕರ್ನಾಟಕಕ್ಕೆ ಹಾಗೂ ರಾಷ್ಟ್ರಕ್ಕೆ ಅವರು ಸಲ್ಲಿಸಿದ ಸೇವೆಯು ಅಪಾರವಿದೆ. ಅವರ ರಾಜಕಾರಣದಿಂದ ಪ್ರಾಂತಕ್ಕಾಗಲೀ ರಾಷ್ಟ್ರಕ್ಕಾಗಲೀ ಯಾವುದೇ ರೀತಿಯ ಹಾನಿಯಾಗಲಿಲ್ಲವೆಂಬ ಮಾತಿನಲ್ಲಿ ಭಿನ್ನಾಭಿಪ್ರಾಯವಿಲ್ಲ. ಅವರನ್ನು ಚಿರಕಾಲ ಬಾಳಪ್ರಾಂತಕ್ಕೆ ಹಾಗೂ ರಾಷ್ಟ್ರಕ್ಕೆ ಸೇವೆಯನ್ನು ಸಲ್ಲಿಸುವಂತಾಗಲೆಂದು ನಾವು ಪರಮಾತ್ಮನನ್ನು ವಿನಂತಿ ಮಾಡಿಕೊಳ್ಳೋಣ.

ಶ್ರೀ. ರಾ. ಶ್ರೀ. ಹುಕ್ಕೇರಿಕರರ ಷಷ್ಟ್ಯಬ್ದಪೂರ್ತಿ

ಧಾರವಾಡದಲ್ಲಿ ಸಂಭ್ರಮದ ಸಮಾರಂಭ

"ರಾವಣಾಸುರನನ್ನು ಸೋಲಿಸಿ ಸೀತಾಮಾತೆಯ ಬಂಧವಿಮೋಚನೆ ಮಾಡುವದು ಶ್ರೀರಾಮನಿಗೆ ವಾನರ ಸೇನಾಬಲದಿಂದ ಸಾಧ್ಯವಾದಂತೆ. ಭಾರತಸ್ವಾತಂತ್ರ್ಯ ಸಾಧಿಸಲು ಮಹಾತ್ಮರು ಸಮರ್ಥರಾದುದು ಶ್ರೀ ಹುಕ್ಕೇರಿಕರರಂತಹ ನಿಃಸ್ವಾರ್ಥ ಕಾರ್ಯಕರ್ತರ ವಾನರ ಸೇನೆಯಿಂದಲೇ" ಎಂದು ಮುಂಬಯಿ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲರು ಶ್ರೀ ರಾಮರಾವ ಹುಕ್ಕೇರಿಕರರ ಸತ್ಕಾರ ಸಮಾರಂಭದ ಅಧ್ಯಕ್ಷಸ್ಥಾನದಿಂದ ೨೨ ನೇ ತಾರೀಖಿನ ಸಭೆಯಲ್ಲಿ ಹೇಳಿದರು.

ಇಂದು ಕರ್ನಾಟಕದ ಕಾಂಗ್ರೆಸ ಕಾರ್ಯಕರ್ತರಲ್ಲಿ ಅಗ್ರೇಸರರಾದ ಶ್ರೀ ಹುಕ್ಕೇರಿ ರಾಮರಾಯರ ಷಷ್ಟ್ಯಬ್ದಪೂರ್ತಿ ಸಮಾರಂಭವು ಧಾರವಾಡದ ವಿಜಯ ಚಿತ್ರ ಮಂದಿರದಲ್ಲಿ ಸರಿಯಾಗಿ ಸಾಯಂಕಾಲ ೫ ಗಂಟೆಗೆ ಒಳ್ಳೇ ಸಂಭ್ರಮದಲ್ಲಿ ಪ್ರಾರಂಭವಾಯಿತು. ಈ ಸಮಾರಂಭದ ನಿಯೋಜಿತ ಅಧ್ಯಕ್ಷರಾದ ಮುಂಬಯಿ ಪ್ರಾಂತಿಕ ಕಾಂ ಸಮಿತಿ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರೂ ನ್ಯಾಯಮೂರ್ತಿಗಳಾದ ಲೋಕೂರ ಮತ್ತು ಜಹಾಗಿರದಾರ, ದಿವಾಕರ, ಕಲೆಕ್ಟರ ಶೀಲ್ಡ್ಸ, ಶ್ರೀ ಕೆ. ಎಫ್. ಪಾಟೀಲ ಮತ್ತು ಸ. ಪ. ಗಾಂವಕರ ಇವರೂ, ಜಿಲ್ಲಾ ಕಾಂಗ್ರೆಸ ಅಧ್ಯಕ್ಷರಾದ ಗಂಡ್ಲೆಪ್ಪಾ ಹಳ್ಳಿಕೇರಿ, ಪ್ರೊ. ಗೋಕಾಕ, ಶ್ರೀ ಬಳವಂತರಾವ ದಾತಾರ, ಶ್ರೀ ಅನಂತರಾವ ಕಂಕಣವಾಡಿ, ರಾಘವೇಂದ್ರರಾವ ಹುಲಗಬಾಳಿ, ಟಿ. ಎಸ್. ಕೌಜಲಗಿ, ಮತ್ತಿಹಳ್ಳಿ ರಾಘವೇಂದ್ರರಾವ ಡಾ. ಹರ್ಡಿಕರ ಇತ್ಯಾದಿ ಅನೇಕ ಮಹನೀಯರಿಂದಲೂ ಸ್ಥಳಿಕ ಮುಖಂಡರಿಂದಲೂ ಸಭಾಭವನವು ಕಿಕ್ಕಿರಿದು ತುಂಬಿತ್ತು. ಧ್ವನಿವಾಹಕ ಯಂತ್ರದಲ್ಲಿ ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಗೀತೆಯಿಂದ ಸಭಾಕಾರ್ಯ ಪ್ರಾರಂಭವಾಯಿತು.

ಸತ್ಕಾರ ಸಮಿತಿಯ ಸ್ವಾಗತಾಧ್ಯಕ್ಷರಾದ ಶ್ರೀ ಬುರ್ಲಿ ಬಿಂದುಮಾಧವರು ಸಭಿಕರಿಗೆ ಸ್ವಾಗತ ಕೋರಿ ಹುಕ್ಕೇರಿ ರಾಮರಾಯರ ಸತ್ಕಾರ ಸಮಿತಿಯ ಸ್ಥಾಪನೆಯ ಬಗ್ಗೆ ಹೇಳುತ್ತಾ ಅನೇಕ ಕಷ್ಟನಷ್ಟಗಳನ್ನು ಎದುರಿಸಿ ಕನ್ನಡಿಗರಲ್ಲಿ ಜಾಗೃತಿಯನ್ನುಂಟು ಮಾಡಿದ ಕಾರ್ಯಕರ್ತರ ಬಗ್ಗೆ ಆತ್ಮೀಯಭಾವ ವ್ಯಕ್ತ ಪಡಿಸುವದೇ ಈ ಸತ್ಕಾರದ ಉದ್ದೇಶವೆಂದೂ ಇದರಲ್ಲಿ ಯಾರನ್ನೂ ಮೇಲು ಕೀಳು ಎಂಬ ಭಾವನೆಯಿಂದ ನೋಡುವ ಉದ್ದೇಶವಿರದೆ ಅವರು ಮಾಡಿದ ಸೇವೆಯ ಫಲವಾಗಿ ದೊರೆತ ಸ್ವಾತಂತ್ರ್ಯದ ನಾನು ಸಮಯದಲ್ಲಿ ನಮ್ಮ ಕೃತಜ್ಞತೆಗಳನ್ನೂ ಗೌರವವನ್ನೂ ಸಲ್ಲಿಸುವದೇ ಮುಖ್ಯ ಉದ್ದೇಶವೆಂದೂ ಹೇಳಿದರು.

ನಂತರ ಡಾ. ನಾರಾಯಣರಾವ ಕಬ್ಬೂರ ಇಂದಿನ ಸಭೆಯ ಅಧ್ಯಕ್ಷ ಸ್ಥಾನವನ್ನು ಮುಂಬಯಿ ಪ್ರಾಂ. ಕಾ. ಸ. ಅಧ್ಯಕ್ಷರಾದ ಎಸ್. ಕೆ. ಪಾಟೀಲರು ವಹಿಸಬೇಕೆಂದು ಹೇಳಿ ಅವರು ಮುಂಬಯಿ ಸಾರ್ವಜನಿಕ ಜೀವನದಲ್ಲಿ ಪ್ರಮುಖ ಪಾತ್ರವಹಿಸದವರಾದರೂ ಬಡತನದಲ್ಲಿ ಬೆಳೆದವರೆಂದೂ ವೃತ್ತಪತ್ರ ವ್ಯವಸಾಯದ ಉಚ್ಚ ಶಿಕ್ಷಣವನ್ನೂ ವಿದೇಶದಲ್ಲಿ ಪಡೆದು ಮರಳಿ ಬಂದಿದ್ದರೂ ಮಹಾತ್ಮರ ಅಸಹಕಾರ ಆಂದೋಲನದ ಕರೆಗೆ ಓಗೊಟ್ಟು ಮುಂದೆ ಬಂದು ೧೯೨೭ರಿಂದ ಕಾಂಗ್ರೆಸಸಂಸ್ಥೆಯ ಮುಖಾಂತರ ನಾಡಿನ ಸೇವೆ ಮಾಡುತ್ತಿರುವದನ್ನು ವಿವರಿಸಿ ಹೇಳಿ; ಹುಕ್ಕೇರಿಕರರ ಸತ್ಕಾರ ಸಭೆಗೆ ಇವರು ಅಧ್ಯಕ್ಷರಾಗಲು ಯೋಗ್ಯರೆಂದು ಹೇಳಿದರು.

ಧಾರವಾಡ ನಗರ ಸಭೆಯ ಅಧ್ಯಕ್ಷರಾದ ಶ್ರೀ. ಮಟ್ಟಿಯವರು ಕಬ್ಬೂರರ ಸೂಚನೆಗೆ ಅನುಮೋದನ ಕೊಟ್ಟರು. ಸಭಿಕರು ಚಪ್ಪಾಳೆಯಿಂದ ತಮ್ಮ ಸಮ್ಮತಿ ಸೂಚಿಸಿದ ನಂತರ ಅಧ್ಯಕ್ಷರು ತಮ್ಮ ಸ್ಥಾನವನ್ನು ಅಲಂಕರಿಸಿದರು.

ಶ್ರೀ. ದಾಬಡೆಯವರು ಹುಕ್ಕೇರಿ ರಾಮರಾಯರಿಗೆ ಆಯುರಾರೋಗ್ಯ ಯಶಸ್ಸು ಕೋರುವ ಡಾ. ಪಟ್ಟಾಭಿ, ಮುಂಬಯಿ ಮುಖ್ಯ ಮಂತ್ರಿಗಳಾದ ಬಿ. ಜಿ. ಖೇರ, ತ್ರಿವೇದಿ, ದಿನಕರ ದೇಸಾಯಿ, ಜಿನಿವಾದಿಂದ ದ. ಪ. ಕರಮರಕರ ಮೊದಲಾದ ಅನೇಕರಿಂದ ಬಂದ ಶುಭ ಶುಭ ಸಂದೇಶಗಳನ್ನು ಓದಿ ಹೇಳಿದರು.

ಶ್ರೀ. ಎಸ್. ಕೆ. ಪಾಟೀಲರು

ನಂತರ ಶ್ರೀ. ಎಸ್. ಕೆ. ಪಾಟೀಲರು ಭಾಷಣ

ಹುಕ್ಕೇರಿಕರರ ಈ ಸತ್ಕಾರ ಸಭೆಯಲ್ಲಿ ಭಾಗ ವಹಿಸಲು ನನಗೆ ಆನಂದವೆನಿಸುವದು. ಅನೇಕ ರಾಜಕೀಯ ಕಾರ್ಯಕರ್ತರ ನಿಕಟ ಪರಿಚಯ ನನಗಿದೆ. ಆದರೆ ಹುಕ್ಕೇರಿ ರಾಮರಾಯರ ಸಂಗಡ ನಿಕಟ ಸಂಬಂಧ ನನಗೆ ಬಂದಿದುದರಿಂದ ನಾಲ್ಕು ಶಬ್ದಗಳನ್ನು ಅವರ ಜೀವನ ಪ್ರವೃತ್ತಿಯ ಬಗ್ಗೆ ಹೇಳಬಯಸುವೆ.

ನಾನು ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಕಾರ್ಯದರ್ಶಿಯಾಗಿದ್ದೆ. ಹುಕ್ಕೇರಿಕರರು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಕಾರ್ಯದರ್ಶಿಗಳಾಗಿ ೧೯೩೦ ರಿಂದ ೧೯೩೪ರ ವರೆಗೆ ಇದ್ದರು. ಆಗ ಅವರೊಡನೆ ನನಗೆ ಮೇಲಿಂದ ಮೇಲೆ ನಿಕಟ ಸಂಬಂಧ ಬರುತ್ತಿತ್ತು. ಇಷ್ಟೇ ಅಲ್ಲ. ಜೇಲಿನಲ್ಲಿ ನಾನೂ ಅವರೂ ಕೂಡಿದ್ದರಿಂದ ನಮ್ಮ ಮಿತ್ರತ್ವ ಗಾಢತರವಾಗಿದೆ. ನನಗೆ ಅವರ ಸಂಬಂಧ ಬಂದಾಗೆಲ್ಲ ಅವರು ನಿಗರ್ವಿ ಸ್ವಭಾವದ ಸಿಟ್ಟು ಸಿಡುಕಿಲ್ಲದ ಕಾರ್ಯತತ್ಪರ ವ್ಯಕ್ತಿ ಎಂದು ನಾನು ಕಂಡಿದ್ದೇನೆ. ೧೯೩೦ ರಲ್ಲಿ ಕಾಂಗ್ರೆಸ ಸಂಸ್ಥೆಯ ಬಗ್ಗೆ ಸರಕಾರದ ಉಗ್ರ ದೃಷ್ಟಿ ಜನರ ಅಸಹಕಾರ ಇದ್ದ ಕಾಲದಲ್ಲಿ ಕಾಂಗ್ರೆಸ ಸಂಸ್ಥೆಗೆ ಸದಸ್ಯರಾಗಲು ಒತ್ತಾಯ ಮಾಡುವ ಕಾಲವದು, ಆಗ ಸಹ ಹುಕ್ಕೇರಿಕರ ರಾಮರಾಯರು ನಿರಾಶವೃತ್ತಿ ತಾಳಿದ್ದು ನಾನು ಎಂದೂ ನೋಡಿಲ್ಲ.

೬೦ ವರ್ಷದ ತರುಣರು

ಈಗ ಅವರಿಗೆ ೬೦ ವರ್ಷ ವಯಸ್ಸಾದರೆ ಅವರಿಗೆ ಮುಪ್ಪು ಬಂದಿತೆಂದು ಭಾವಿಸುವದು ತಪ್ಪು. ಇಂದು ಅವರಿಗೆ ೬೦ ವರ್ಷದ ತರುಣರೆಂದು ಹೇಳಿದರೆ ಆಶಿರ್ವಾದ ಮಾಡಿದಂತೆ ಆಗಬಹುದು. ಇಂಗ್ಲಂಡದಲ್ಲಿ ೬೦ ವಯಸ್ಸಿನವರು ಮದುಮಕ್ಕಳಾಗುತ್ತಾರೆ. ಇಂದು ಹುಕ್ಕೇರಿಕರರು ಮುದುಕರೆಂದು ವಿಶ್ರಾಂತಿ ಹೊಂದಲಿ ಎಂದು ಹೇಳದೆ ಅವರು ಸ್ವತಂತ್ರ ಹಿಂದುಸ್ತಾನವನ್ನು ಆದರ್ಶ ರಾಷ್ಟ್ರವನ್ನಾಗಿ ಕಟ್ಟಲು ಮೊದಲಿನ ನಾಲ್ಕು ಪಟ್ಟು ಕಾರ್ಯ ಮಾಡುವ ಉತ್ಸಾಹ ಅವರಿಗೆ ಬರಲೆಂದು ಪರಮೇಶ್ವರನನ್ನು ಪ್ರಾರ್ಥಿಸುವೆ.

ಸ್ವಾತಂತ್ರ್ಯ ದಿನದ ಉತ್ಸವವನ್ನು ಮುಂಬಯಿಯಲ್ಲಿ ನಾನು ನೋಡಿದ್ದೇನೆ. ಜನರು ಅಮಲಿನ ಪದಾರ್ಥ ಸೇವನೆ ಮಾಡಿದವರಂತೆ ಮತ್ತರಾಗಿದ್ದಂತೆ ಭಾಸವಾಗುತ್ತಿತ್ತು. ಮದ್ಯ ಪದಾರ್ಥ ಸೇವನೆಗಿಂತ ಸ್ವಾತಂತ್ರ್ಯದ ಭಾವನೆಯ ಅಮಲು ಹೆಚ್ಚಿನದು. ಸ್ವಾತಂತ್ರ್ಯ ಪ್ರಾಪ್ತಿಯೊಡನೆ ಹೆಚ್ಚಿನ ಹೊಣೆಗಾರಿಕೆ ನಮ್ಮ ಮೇಲೆ ಬಿದ್ದಿದೆ. ಸ್ವರಾಜ್ಯವೆಂದರೆ ಸ್ವೇಚ್ಛಾಚಾರದ ರಾಜ್ಯವಲ್ಲ. ಸ್ವಾತಂತ್ರ್ಯ ಪಡೆಯಲು ಅರ್ಹನಾದವನಿಗೆ ಸ್ವಾತಂತ್ರ್ಯ ಕಾಯ್ದುಕೊಳ್ಳುವ ಹೊಣೆಯೂ ಇರುವದೆಂಬದನ್ನೂ ಮರೆಯಲಾಗದು. ನಮ್ಮ ಸ್ವಾತಂತ್ರ್ಯ ಸಂಘಟನೆಯಿಂದ ನಾವು ಆದರ್ಶ ಘಟನೆ ರಚಿಸಿ ಜಗತ್ತಿಗೆ ಮಾರ್ಗದರ್ಶಕರಾಗುವ ಶಕ್ತಿ ಸಂಪಾದನೆಗಾಗಿ ಯತ್ನಿಸಬೇಕು.

ನಾವು ೨೭ ವರ್ಷ ದುಡಿದಿರುವೆವು. ಇನ್ನೇನು ನಮ್ಮ ಕೆಲಸ ಮುಗಿಯಿತು ಎಂದು ವಿಶ್ರಾಂತಿ ಪಡೆಯುವ ಆಸೆ ಮಾಡತಕ್ಕದ್ದಲ್ಲ. ಸ್ವಾತಂತ್ರ್ಯ ಪ್ರಾಪ್ತಿಗಾಗಿ ತನು, ಧನ, ಮನಗಳಿಂದ ದುಡಿದವರಿಗೆ ನಾವು ನಮ್ಮ ಕೃತಜ್ಞತೆಗಳನ್ನು ಸಮರ್ಪಿಸಬೇಕು.

೨೭ ವರ್ಷಗಳಹಿಂದೆ ದಾಸ್ಯಪಂಕದಲ್ಲಿ ಬಿದ್ದ ಭಾರತವನ್ನು ಸ್ವಾತಂತ್ರ್ಯದ ಸಂದೇಶ ಬೀರಿ ಸ್ಫೂರ್ತಿತುಂಬಿ ರಕ್ತರಹಿತ ರಾಜ್ಯಕ್ರಾಂತಿ ಮಾಡಿದ ಮಹಾ ವಿಭೂತಿ ಮಹಾತ್ಮಾ ಗಾಂಧಿಯವರು ಈಗ ದೇಶದಲ್ಲಿ ನಡೆದ ಕೊಲೆ ಸುಲಿಗೆ ನೋಡಿದರೆ ಜನರಿಗೆ ಅವರ ಉಪದೇಶದಲ್ಲಿ ವಿಶ್ವಾಸವಿಲ್ಲವೆಂಬಂತೆ ವ್ಯಕ್ತವಾಗುವದು. ಸ್ವಾತಂತ್ರ್ಯ ಪ್ರಾಪ್ತಿ ಆಗಬೇಕಿತ್ತು. ಈಗ ನಾವು ಸ್ವತಂತ್ರರು ಇನ್ನು ಅವರ ಅವತಾರ ಮುಗಿಯಿತು. ಅವರಿಗೆ ನಾವು ಗೌರವಸಲ್ಲಿಸಿ ಪೂಜೆಮಾಡುವೆವು ಆದರೆ ಅದರೆ ಅವರ ಉಪದೇಶ ಬೇಕಿಲ್ಲ, ಎಂದು ಹೇಳುವ ಜನರೂ ಇದ್ದಾರೆ. ಸ್ವಾತಂತ್ರ್ಯ ದೊರಕಿಸಿ ಕೊಡುವಾಗ ಯೋಗ್ಯ ಮಾರ್ಗದರ್ಶಕನಾದವನು ಇಂದು ಅದು ಹೇಗೆ ಅಯೋಗ್ಯ ಮಾರ್ಗದರ್ಶಕನಾಗುವನು ಮಹಾತ್ಮರು ತಮ್ಮ ವರ್ಚಸ್ಸಿನಿಂದ ೧೯೩೦ ರಲ್ಲಿ ತರುಣರ ತಂಡವನ್ನು ತ್ಯಾಗ ಬಲಿದಾನಕ್ಕೆ ರಾಷ್ಟ್ರ ಸೇವೆಗೆ ಎಳೆದರು. ಈ ಪೀಳಿಗೆಯ ಕಾರ್ಯದಿಂದಲೇ ರಾಷ್ಟ್ರದಲ್ಲಿ ರಾಜಕೀಯ ಜಾಗ್ರತಿಯಾಗಿ ೨೫ ವರ್ಷದ ಅಲ್ಪಾವಧಿಯಲ್ಲಿ ಬಲಾಢ್ಯ ಬ್ರಿಟಿಶರು ಕಾಲ್ತೆಗೆಯುವಂತೆ ಮಾಡಿದರು. ವಾನರ ಸೇನೆಯ ಬಲದಿಂದ ರಾಮನು ರಾವಣನನ್ನು ಕೊಂದು ಸೀತಾಮಾತೆಯ ಬಂಧವಿಮೋಚನೆ ಮಾಡಿದಂತೆ ಮಹಾತ್ಮರು ತಮ್ಮ ಅನುಯಾಯಿಗಳ ಪರಿಶ್ರಮದಿಂದ ಬ್ರಿಟಿಶರ ಅಧಿಕಾರವನ್ನು ಕಿತ್ತೆಸೆದರು. ಮಹಾತ್ಮರ ವಾನರ ಸೇನೆಯಲ್ಲಿ ಹುಕ್ಕೇರಿ ರಾಮರಾಯರು ಓರ್ವ ಪ್ರಮುಖ ವಾನರರು. ಅಂದರೆ ಮಂಗನಂತಹ ಮನುಷ್ಯರೆಂದು ನಾನು ಹೇಳದೆ ಮನೆ ಮಾರು ತೊರೆದು ರಾಮನ ಸೇವೆ ಮಾಡುವ ಏಕನಿಷ್ಠ ಸೇವಕರೆಂದೇ ಅದರ ಭಾವನೆ.

ಇಂಥ ತ್ಯಾಗಿಗಳು ಮಾಡಿದ ನಾಡಿನ ಸೇವೆಗಾಗಿ ಅವರಿಗೆ ಕೃತಜ್ಞತೆ ಅರ್ಪಿಸುವದು ನಾಡಿನ ಎಲ್ಲರ ಕರ್ತವ್ಯ. ನಾವು ಕೃತಘ್ನರಾದರೆ ಅದರಿಂದ ಅವರಿಗೇನೂ ಹಾನಿಯಿಲ್ಲ. ನಮಗೇ ಅದರಿಂದ ಹಾನಿ. ಮುಂದಿನ ಪೀಳಿಗೆಯವರು ಹಿಂದುಸ್ತಾನದ ಸ್ವಾತಂತ್ರ್ಯ ಸಮರದ ಇತಿಹಾಸವನ್ನು ಸಾವಿರ ವರ್ಷದ ನಂತರ ಓದುವಾಗ ಈಗ ಮಹಾತ್ಮರ ಅನುಯಾಯಿಗಳಾದವರೆಲ್ಲರೂ ದೇವತೆಗಳೆಂದು ಭಾವಿಸಬಹುದು. ನಾವು ಐತಿಹಾಸಿಕ ಘಟನೆಗಳ ನಿಕಟವರ್ತಿಗಳಾಗಿರುವದರಿಂದ ನಮಗೆ ಅದರ ಮಹತ್ವ ತಿಳಿಯುವದಿಲ್ಲ. ಈಗ ಆದರ್ಶ ನಾಗರಿಕರಾಗಲು ಅಗತ್ಯವಿದ್ದ 'ಶಿಸ್ತು' ಲಯವಾಗಹತ್ತಿದೆ. ಜಗತ್ತು ಹುಚ್ಚೆದ್ದು ಆತ್ಮನಾಶದದತ್ತ ಓಡುತ್ತಿದೆ. ಮಾನವೀಯ ಸಂಸ್ಕೃತಿಯ ರಕ್ಷಣೆಗೆ ಗಾಂಧೀಜಿಯವರು ತೋರಿದ ಒಂದೇ ಒಂದು ದಾರಿ ಉಳಿದಿದೆ. ಸ್ವಾತಂತ್ರ್ಯ ಸಮರದ ಸರ್ವಾಧಿಕಾರಿಗಳು ಮಹಾತ್ಮರೆಂದು ಹೇಳಿದ ರಾಷ್ಟ್ರವು ಇಂದು ಸ್ವತಂತ್ರ ಹಿಂದುಸ್ತಾನ ನಿರ್ಮಾಣಕ್ಕೆ ಅವರೇ ಯೋಗ್ಯ ಮಾರ್ಗದರ್ಶಕರೆಂದು ಅವರನ್ನು ಅನುಸರಿಸಬಾರದೇ? ಅವರ ಮಾರ್ಗ ಅನುಸರಿಸಿದರೆ ಪ್ರಗತಿ, ಶಾಂತಿ ಮೊದಲಿನಿಂದಲೂ ಮಹಾತ್ಮರ ಅನುಯಾಯಿಗಳಾಗಿದ್ದು ರಾಷ್ಟ್ರಸೇವೆಯಲ್ಲಿ ನಿರಂತರಾದ ಹುಕ್ಕೇರಿಕರರ ಸತ್ಕಾರದಿಂದ ಕನ್ನಡನಾಡು ಸ್ವಾತಂತ್ರ್ಯ ರಕ್ಷಣೆಯಲ್ಲಿ ತನ್ನ ಹೊಣೆಯನ್ನು ನಿರ್ವಹಿಸುವದೆಂದು ಭಾವಿಸುವಂತಿದೆ.

ಶ್ರೀ ದಿವಾಕರರ ಭಾಷಣ

ಶ್ರೀ ದಿವಾಕರರು ತಾವೂ ಹುಕ್ಕೇರಿಕರರೂ ಮೊದಲಿನಿಂದಲೂ ಕೂಡಿ ಕೆಲಸಮಾಡಿದವರೆಂದು ಹೇಳಿ ಹುಕ್ಕೇರಿಕರರ ಅಸಾಮಾನ್ಯ ಗುಣಗಳ ಬಗ್ಗೆ ಉದಾಹರಣೆ ಸಹಿತವಾಗಿ ಹೇಳಿದರು. ಹುಕ್ಕೇರಿಕರರು ಭಾರತ ಸ್ವಾತಂತ್ರ್ಯ ಏಕತಂತ್ರ ಕರ್ನಾಟಕ ಈ ಎರಡು ಕಾರ್ಯ ಸಾಧಿಸಲು ತಮ್ಮ ಜೀವನವನ್ನೇ ರಾಷ್ಟ್ರಕಾರ್ಯಕ್ಕೆ ಮುಡಿಪಿಡುವದಾಗಿ ನಿಶ್ಚಯಿಸಿದ್ದರು. ಇಂದು ಒಂದು ಇಚ್ಛೆ ಕೈಗೂಡಿದೆ- ಏಕತಂತ್ರ ಕರ್ನಾಟಕ ಸಾಧಿಸುವವರೆಗೆ ಅವರಿಗೆ ವಿಶ್ರಾಂತಿ ಇಲ್ಲ. ಪರಮಾತ್ಮನು ಅವರಿಗೆ ಅದನ್ನು ಸಾಧಿಸುವ ಶಕ್ತಿ ಆಯುರಾರೋಗ್ಯ ದಯೆಪಾಲಿಸಲಿ ಎಂದು ಹೇಳಿದು.

ನಂತರ ಶ್ರೀ ನೇಸ್ವಿ ಹಳ್ಳಿಕೇರಿ, ದಾತಾರ ಬಳವಂತರಾವ ನ್ಯಾಯಮೂರ್ತಿ ಜಾಹಗೀರದಾರ, ನ್ಯಾಯಮೂರ್ತಿ ಲೋಕೂರ ಕೆ. ಎಫ್ ಪಾಟೀಲ ಮೊದಲಾದ ಅನೇಕ ಮಹನೀಯರು ಭಾಷಣ ಮಾಡಿದರು.

ಶ್ರೀ ಹುಕ್ಕೇರಿಕರರಿಗೆ ಅನೇಕ ಸಂಘ, ಸಂಸ್ಥೆಗಳಿಂದ ಹಾರ, ಪುರಾಯಿ, ಪಾಕಲಾಯಿತಲ್ಲದೆ ಖಾದಿ ಬಟ್ಟೆ, ಮೊದಲಾದವುಗಳನ್ನು ಕೊಟ್ಟು ಅವರನ್ನು ಅನೇಕ ಇಷ್ಟಮಿತ್ರರೂ, ಸಂಸ್ಥೆಯವರೂ ಸತ್ಕರಿಸಿದರು.

ಶ್ರೀ. ಹುಕ್ಕೇರಿಕರರ ಭಾಷಣ

ಶ್ರೀ ಹುಕ್ಕೇರಿಕರರು ತಮ್ಮ ಇಷ್ಟಮಿತ್ರರು ವ್ಯಕ್ತಪಡಿಸಿದ ಮಾತುಗಳಿಗೆ ಉತ್ತರ ಕೊಡುತ್ತ ನಿಮ್ಮ ಹೊಗಳಿಕೆಯಿಂದ ನನ್ನ ಮನಸ್ಸಿನ ಮೇಲೆ ಒಂದು ಮುಸುಕು ಬಂದಂತಾಗಿದೆ. ಇಂತಹ ಪ್ರಸಂಗದಲ್ಲಿ ಕಡಿಮೆ ಮಾತನಾಡಿದಷ್ಟೂ ಹಿತವೇ.

ನಾನು ಸಾರ್ವಜನಿಕ ಜೀವನದಲ್ಲ ಅಂತಃಪ್ರೇರಣೆಯಿಂದ ಧುಮುಕಿದ್ದೇನೆ. ನಾನು ಯಾವ ಪ್ರತಿಫಲವನ್ನೂ ಅಪೇಕ್ಷಿಸಿಲ್ಲ, ಆ ಆಶೆಯೂ ನನಗಿಲ್ಲ.

ಕಳೆದ ೩೫ ವರ್ಷಗಳಲ್ಲಿ ಕರ್ನಾಟಕವು ಉಳಿದ ಯಾವ ಪ್ರಾಂತಗಳಿಗಿಂತಲೂ ಮುಂದುವರಿದಿದೆ. ಈ ಕೆಲಸದಲ್ಲಿ ನನ್ನ ಸಂಗಡಿಗರಾದಂಥ ಕರ್ನಾಡ ಸದಾಶಿವರಾಯರು, ಕೌಜಲಗಿ ಹಣಮಂತರಾಯರು, ಕೌಜಲಗಿ ಶ್ರೀನಿವಾಸರಾಯರು, ಮುತ್ತು ಮಜಲಿ ಮುಂತಾದ ಅನೇಕರು ಈಗ ಇಲ್ಲದ್ದು ಬಹಳ ವಿಷಾದಕರ ಸಂಗತಿ. ನಾನೆಂದಿಗೂ ಅವರನ್ನು ಮರೆಯಲಾರೆ. ಅಲ್ಲದೆ ನನ್ನ ಕೆಲಸದಲ್ಲಿ ಶ್ರೀ ಸಿದ್ದಪ್ಪ ಹೊಸಮನಿಯವರಿಂದ ಆದ ಸಹಾಯವನ್ನೂ ಮರೆಯಲಾರೆ.

ನಾನು ತಮ್ಮ ತಮ್ಮ ವಿಶಿಷ್ಟ ಕ್ಷೇತ್ರಗಳಲ್ಲಿಯೇ ಕೆಲಸ ಮಾಡಬೇಕೆಂದು ಅನೇಕರು ಹೇಳಿದರು. ಆದರೆ ಈಗಾಗಲೆ ಹರಡಿದ ನನ್ನ ಕಾರ್ಯಕ್ಷೇತ್ರವನ್ನು ಆಕುಂಚನಗೊಳಿಸುವದು ಕಠಿಣವೆನಿಸುತ್ತದೆ.

ಇನ್ನೂ ಕರ್ನಾಟಕ ಏಕೀಕೃತವಾಗಬೇಕಾಗಿದೆ. ನಂತರವೂ ಅದರಲ್ಲಿ ಅನೇಕ ವಿಧಾಯಕ ಕಾರ್ಯಗಳು ನಡೆಯಬೇಕು. ಅದಕ್ಕೆ ಕಾರ್ಯಕರ್ತರ ಅಭಾವವೂ ಸಾಕಷ್ಟಿದೆ.

ಇಂದಿನ ವರೆಗೆ ನೀವು ನನಗೆ ನೀಡಿದ ಸಹಾಯ ಸಹಕಾರಗಳನ್ನೇ ಮುಂದೂ ಕೊಡಬೇಕು. ತಮ್ಮ ಆಶೀರ್ವಾದ ಬಲದಿಂದ ನನ್ನಲ್ಲಿ ಆಯುರಾರೋಗ್ಯಗಳಷ್ಟೇ ಅಲ್ಲದೆ ಸಾರ್ವಜನಿಕ ಸೇವೆಯ ಸಾಮರ್ಥ್ಯವೂ ಬೆಳೆಯಲಿ.

ನಂತರ ವಂದೇಮಾತರಂ ಗೀತೆಯಾಗಿ ಕಾರ್ಯಕ್ರಮ ಮುಕ್ತಾಯವಾಯಿತು.

ಇಷ್ಟ ಮಿತ್ರರಿಂದ ಸತ್ಕಾರ

ಸಮಾರಂಭಕ್ಕಾಗಿಯೇ ತಳಿರು ತೋರಣಗಳಿಂದ ಸಿಂಗರಿಸಲ್ಪಟ್ಟ ವಿಜಯ ಟಾಕೀಜದ ಭವ್ಯ ಮಂಟಪದಲ್ಲಿ ಕಾರ್ಯಕ್ರಮವು ಪ್ರಾರಂಭವಾಯಿತು, ಶ್ರೀ. ಹುಕ್ಕೇರಿಕರರ ಇಷ್ಟಮಿತ್ರರೂ, ಶಿಷ್ಯವೃಂದದವರೂ ಒಳ್ಳೇ ಉತ್ಸಾಹ ಭರಿತರಾಗಿ ಬಂದಿದ್ದರು. ಅನೇಕ ವರುಷಗಳಿಂದ ಅಗಲಿದ ಮಿತ್ರರು ಮತ್ತೆ ಕಲೆತದ್ದಕ್ಕಾಗಿ ಎಲ್ಲರ ಮುಖಗಳ ಮೇಲೆ ಆನಂದ ಉಕ್ಕೇರುತ್ತಿತ್ತು. ಹಸ್ತಾಂದೋಲನ ಆಲಿಂಗನ ಮುಂತಾದ ಅನೇಕ ರೀತಿಗಳಲ್ಲಿ ಆತ್ಮ ಹರ್ಷವನ್ನು ಅವರು ವ್ಯಕ್ತ ಮಾಡಿದರು. ಡಾ. ಹರ್ಡೀಕರರಂತೂ ಆನಂದೋದ್ರೇಕದಿಂದ ಶ್ರೀ. ಹುಕ್ಕೇರಿಕರರನ್ನು ಅಪ್ಪಿಕೊಂಡು ಅವರನ್ನು ಒಯ್ದು ಶ್ರೀ. ದಿವಾಕರರ ಹತ್ತರ ಕುಳ್ಳಿರಿಸಿದರೇ.

ರಾಜಕೀಯ ಕಾರ್ಯಕರ್ತರ ಸಭೆ

ರಾಜಕೀಯ ಕ್ಷೇತ್ರದಲ್ಲಿಯ ಶ್ರೀ. ಹುಕ್ಕೇರಿಕರರ ಸ್ನೇಹಿತರ ಸಭೆಯು ಶ್ರೀ. ದಿವಾಕರ ರಂಗರಾಯರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಶ್ರೀಗಳಾದ ಕುರ್ತಕೋಟಿ ಮತ್ತು ಕರಗುದರಿಯವರು ಪ್ರಾಸ್ತಾವಿಕ ಭಾಷಣಮಾಡಿ ಉತ್ಸವದ ಉದ್ದೇಶ ಮತ್ತು ವೈಶಿಷ್ಟಗಳನ್ನು ಹೇಳಿದರು. ತರುವಾಯ ಶ್ರೀ ದಿವಾಕರರು ಅಧ್ಯಕ್ಷತೆ ವಹಿಸಿ "ಇದು ವೈಯಕ್ತಿಕ ಗೌರವ ಪೂರ್ವಕ ಉತ್ಸಾಹ ಮಾತ್ರವಲ್ಲ ಆ ವ್ಯಕ್ತಿಯು ಅಭಿವ್ಯಕ್ತ ಪಡಿಸಿದ ವಿಶಿಷ್ಟ ಗುಣಗಳ ಸತ್ಕಾರ" ಎಂದು ಹೇಳಿದರು. ಎಷ್ಟೋ ಮಹಾ ವ್ಯಕ್ತಿಗಳು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಿ ಕೀರ್ತಿಶೇಷರಾಗಿದ್ದಾರೆ ಅವರ ದೇಹ ಕಣ್ಮರೆಯಾದರೂ ಅವರು ಮಾಡಿದ ಕಾರ್ಯದ ಸವಿನೆನಪುಗಳು ನಮಗೆ ಸ್ಫೂರ್ತಿದಾಯಕವಾಗಿ ನಮ್ಮಿಂದ ಇನ್ನೂ ಕೆಲಸ ಮಾಡಿಸುತ್ತಿವೆ ಎಂದು ಅವರು ಹೇಳಿದರು.

ತರುವಾಯ ಶ್ರೀ ವಾಯಚಳರವರು ಶ್ರೀ ಹುಕ್ಕೇರಿಕರರಿಗೆ ವೀರಶ್ರೀಯನ್ನು ಪಾರ್ಶ್ವಿಸಿ ಹಿಂದೂ ಪದ್ಧತಿಯ ಪ್ರಕಾರ ಅವರಿಗೆ ಕುಂಕುಮ ತಿಲಕವನ್ನು ಹಚ್ಚಿದರು.

ತರುವಾಯ ಡಾ. ಕಬ್ಬೂರರು ತಮಗೆ ಹುಕ್ಕೇರಿಕರರೊಡನೆ ತಮ್ಮ ಗುರುಶಿಷ್ಯ ಸಂಬಂಧವನ್ನು ಹೇಳಿ ಅವರು ಜೀವನ ಕಡೆಗೆ ನೋಡುವ ದೃಷ್ಟಿ ಅಖಂಡವಾದುದೆಂದು ನುಡಿದರು.

ನಂತರ ಶ್ರೀಗಳಾದ ಮಹಾದೇವಪ್ಪ ಕಂಬಳಿ, ರಮಾಕಾಂತ ಗೋಳಕೇರಿ, ಸಾಲಿ ರಾಮಚಂದ್ರರಾಯರು, ಸಿದ್ದಪ್ಪ ಕುಂಬಿ, ಸುರೇಂದ್ರ ದೇಸಾಯಿ, ಪಟವರ್ಧನ, ಮಳಿಯೆ ಗೋವರ್ಧನರಾಯರು ಮತ್ತು ಅಷ್ಟಪುತ್ರೆ ಮುಂತಾದವರು ಶ್ರೀ ಹುಕ್ಕೇರಿಕರರೊಡನೆ ತಮಗೆ ಬಂದ ಸಂಬಂಧವನ್ನೂ ಅವರು ತಮಗೆ ಮಾಡಿದ ಮಾರ್ಗದರ್ಶನವನ್ನು ಹೇಳಿದರು.

ಶ್ರೀ ಹುಕ್ಕೇರಿಕರರು ಉತ್ತರಿಸುತ್ತ ನನ್ನ ಸಾರ್ವಜನಿಕ ಜೀವನವೆಂದರೆ ಶ್ರೀ ದಿವಾಕರರ ಸಾರ್ವಜನಿಕ ಜೀವನವೇ. ನಾವಿಬ್ಬರೂ ಅಷ್ಟೊಂದು ಹೊಂದಿಕೊಂಡು ಸಾಗುತ್ತಿದ್ದೇವೆ. ಈ ೩೦ ವರುಷಗಳಲ್ಲಿ ಕರ್ನಾಟಕವು ಉಳಿದ ಎಲ್ಲ ಪ್ರಾಂತಗಳಿಗಿಂತಲೂ ಹೆಚ್ಚು ಪ್ರಗತಿಯನ್ನು ಹೊಂದಿದೆ ಅದರ ಶ್ರೇಯಸ್ಸು ನನನೊಬ್ಬನಿಗೇ ಅಲ್ಲದೆ ನನ್ನ ಸಂಗಡಿಗರೆಲ್ಲರಿಗೂ ಸಲ್ಲುತ್ತದೆ.

ಅಂದಿನ ರಾಜಕಾರಣಕ್ಕೂ ಇಂದಿನ ರಾಜಕಾರಣಕ್ಕೂ ಅಂತರವಾಗಿದೆ. ಈಗ ಅಧಿಕಾರಲಾಲಸೆ ಹೆಚ್ಚುತ್ತಿದೆ. ಅದನ್ನು ತಡೆದು ಹಿಡಿದು ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು ಎಂದು ಹೇಳಿದರು.

(೧೬ನೇ ಪುಟ ನೋಡಿರಿ)

ಚತುರ ವ್ಯವಹಾರಿ ಶ್ರೀ ಹುಕ್ಕೇರಿ ರಾಮರಾಯರು

ಲೇ:—ಶ್ರೀ ಶಂ. ಬಾ. ಜೋಶಿ

ಧಾರವಾಡದ ಸಾರ್ವಜನಿಕ ಕೆಲಸಗಾರರೊಡನೆ ಮೊದಲು ಪರಿಚಯವಾದುದು ೧೯೨೦ ರಲ್ಲಿ. ನನಗೆ ಆಗ ಇಲ್ಲಿ ಎಲ್ಲರೂ ಹೊಸಬರೇ. ಶ್ರೀ ರಾಮರಾಯರ ಬಗೆಗೆ ಒಮ್ಮೆ ಅವರ ಒಬ್ಬ ವಿದ್ಯಾರ್ಥಿಯಾಗಿದ್ದ ತರುಣನು ಆಡಿದ ಮಾತುಗಳು ನನ್ನನ್ನು ಸೋಜಿಗಗೊಳಿಸಿದವು. 'ಗಾಂಧಿ ಮುಮ್ಮಾನೆ ಅಸಹಕಾರದ ಚಳವಳಿ ಹೂಡ್ಯಾನ; ಸ್ವರಾಜ್ಯ ತನ್ನ ಬೇಡಿಕೆ ಎಂದು ಹೇಳತಾನ. ಸ್ವರಾಜ್ಯ ಎಂದರೆ ಬ್ರಿಟಿಶರು ಬಿಡರತಾರ, ಮುಮ್ಮಾನೆ ಸ್ವರಾಜ್ಯ ಕೇಳೋದಕ್ಕಿಂತ ಅವ ಒಂದs ಸಣ್ಣ ಬೇಡಿಕೆ ಬ್ರಿಟಿಶರೆದುರಿಗೆ ಇಡಬೇಕು; ಬ್ರಿಟಿಶ್ ಕ್ಯಾಬಿನೆಟ್ಟಿನಲ್ಲಿ ಹುಕ್ಕೇರಿ ರಾಮರಾಯರನ್ನು ಸೇರಿಸಿಕೊಳ್ಳಿರಿ, ಎಂತ ಒಂದ ಬೇಡಿಕೆ ಸಾಕು. ಮುಂದ ಸ್ವರಾಜ್ಯ ತನ್ನ ತಾನ ಬರತ್ತದ'

ಸ್ವಚ್ಛಂದ ವೃತ್ತಿಯ ಆ ತರುಣನ ಮಾತಿನಲ್ಲಿ ವ್ಯಾಜನಿಂದೆಯಿದ್ದರೂ ಆ ಹೇಳಿಕೆಯಿಂದ ಶ್ರೀ ರಾಮರಾಯರ ಶಕ್ತಿವಿಶೇಷದ ಪರಿಚಯವು ನನಗಾಯ್ತು. ಆ ಉಪಹಾಸದ ಮಾತನ್ನು ಬಿಟ್ಟರೂ ಶ್ರೀ ರಾಮರಾಯರ ವ್ಯವಹಾರ ಚಾತುರ್ಯದ ಬಗೆಗೆ ಈಗ ಭಿನ್ನಾಭಿಪ್ರಾಯವೇ ಇಲ್ಲ. ನಮ್ಮ ಭಾಗದ ಸಾರ್ವಜನಿಕ ಜೀವನದ ವಿವಿಧ ರಂಗಗಳಲ್ಲಿ ಶ್ರೀ ರಾಮರಾಯರ ಸಲಹೆಯ ಲಾಭ ಪಡೆಯದೆ ಇದ್ದ ಸಾರ್ವಜನಿಕ ಚಟುವಟಿಕೆಗಳೆ ವಿರಳ.

ವ್ಯಕ್ತಿಯು ಜೀವಂತವಿರುವಾಗಲೆ ಆತನ ಚರಿತ್ರೆಯನ್ನು ಬರೆಯಬಾರದೆಂದು ಒಂದು ಅಭಿಪ್ರಾಯವಿದೆ. 'ಮುಂದೆ ಆ ವ್ಯಕ್ತಿಯು ಇನ್ನು ಯಾವ ರೀತಿಯಿಂದ ನಡೆದೀತೆಂಬುದನ್ನು ಯಾರು ಹೇಳಬೇಕು?' ಎಂಬ ಹೆದರಿಕೆಯೆ ಮೇಲಣ ಅಭಿಪ್ರಾಯಕ್ಕೆ ಕಾರಣ. ಇದು ಕೆಲಮಟ್ಟಿಗೆ ನಿಜವಿದ್ದರೂ, ಜನರು ಒಬ್ಬನಿಗೆ ಒಳ್ಳೆಯವನೆಂದು ಹೇಳುವದರಿಂದಲೂ ಒಂದು ಮಹತ್ವದ ಲಾಭವಿದೆ. 'ಒಳ್ಳೆಯವನೆಂದೂ ಸಜ್ಜನನೆಂದೂ ಕರೆವ ಲೋಕವು ತನಗೆ ಏನೆಂದೀತು. ತಾನು ಸಿಕ್ಕ ಹಾಗೆ ನಡೆದರೆ!' ಎಂಬ ವಿಚಾರದಿಂದ ದಿನದಿನಕ್ಕೂ ಆತನು ಮಿಗಿಲಾದವನಾಗಿ ಲೋಕದ ಮೆಚ್ಚಿಕೆಯವನಾಗಿ ಬಾಳಲು ಹಂಬಲಿಸುವನು.

ಶಾಲೆಯಲ್ಲಿ, ವಿದ್ಯಾರ್ಥಿಗಳಲ್ಲಿರುವ ಗುಣಗಳಿಗೆ ಸರಿಯಾದ ಮಾನ್ಯತೆ ಸಿಗದ್ದಕ್ಕೆ, ಪ್ರೋತ್ಸಾಹವು ದೊರೆಯದ್ದಕ್ಕೆ ಅವು ಮಾಸಿ ಹೋಗಿ ಆ ಹುಡುಗನಿಂದ ಮುಂದೆ ಯಾವ ಒಳ್ಳೆಯ ಕೆಲಸವೂ ಆಗದೆ ಆತನು ಹಿಂದುಳಿದುದು ಕಂಡುಬರುತ್ತದೆ. ಇದು ಆ ಹುಡುಗನಿಗಷ್ಟೆ ಅಲ್ಲ; ಶಾಲೆಗೂ ಹಾನಿ. ಮುಂದೆ ನಾಡಿಗೂ ಹಾನಿ.

ಸಾರ್ವಜನಿಕ ಕಾರ್ಯಕರ್ತರ ಸನ್ಮಾನ, ಗುಣಗೌರವ ಮಾಡುವ ವಿಷಯದಲ್ಲಿಯೂ ಈ ಮಾತು ಸಂಪೂರ್ಣವಾಗಿ ಸರಿಹೋಗುತ್ತದೆ. ತನಗಾಗಿ ದುಡಿವ ಗುಣಗಳನ್ನು ಸಾರ್ವಜನಿಕವಾಗಿ ಮೆಚ್ಚಿ ಅದಕ್ಕೆ ಮನ್ನಣೆಯನ್ನೀಯುವುದು ಸಮಾಜದ ಕರ್ತವ್ಯವೇ ಆಗಿದೆ. ಒಂದು ದೃಷ್ಟಿಯಿಂದ ಸಮಾಜವು ತನ್ನ ತಾನೇ ಗೌರವಿಸಿಕೊಂಡಂತೆ ಇದೆ. ಏಕೆಂದರೆ ಆ ವ್ಯಕ್ತಿಯ ಮಹಿಮೆಯಿಂದ ಆ ವ್ಯಕ್ತಿಯು ಇರುವ ಸಮಾಜದ ಮಹತಿಯೂ ಬೆಳೆಯುವುದು.

ವಿಶ್ವವಿದ್ಯಾಲಯದ ಪದವೀಧರರಾಗಿದ್ದು ಆ ಜನ್ಮ ದೇಶಸೇವೆಗಾಗಿ ೨೪ ತಾಸು ಕೆಲಸಕ್ಕೆ ನಿಂತ ಧಾರವಾಡದ ಮೊದಲನೆಯ ಗುಂಪು ಶ್ರೀ ಹುಕ್ಕೇರಿ, ದಿವಾಕರ ಮತ್ತು ಕಬ್ಬೂರ(ಮಧ್ವರಾಯ)ರದೇ ಆಗಿದೆ. ಅದರಿಂದ ಆಗ ಇಲ್ಲಿಯ ಸಾರ್ವಜನಿಕ ಜೀವನದಲ್ಲಿ ನವ ಚೈತನ್ಯದ ಸಂಚಾರವಾಯಿತು. ಧಾರವಾಡದಲ್ಲಿ ಆದ ಮುಂದಿನ ಘಟನೆಗಳೆ ಇದಕ್ಕೆ ಸಾಕ್ಷಿ. ಎಂ.ಎ., ಎಂ.ಎ. ಎಲ್.ಎಲ್.ಬಿ.ಗಳಾಗಿದ್ದ ಮೂವರು ಕಾರ್ಯಕರ್ತರು ಒಂದು ಗೂಡಿ ಹೊರಡಿಸಿದ ಮೊದಲನೆಯ ವಾರ ಪತ್ರಿಕೆಯೆಂದರೆ ಕಂನಾಡಿನಲ್ಲಿ ಕರ್ಮವೀರವೇ ಮೊದಲನೆಯದು. ಈ ಕಾರಣದಿಂದಲೆ ಅಂದಿನ ಸರಕಾರವು ಕರ್ಮವೀರವನ್ನು ಬಗ್ಗು ಬಡಿಯಲು ನಾನಾ ತರದಿಂದ ಅದನ್ನು ಗಂಡಾಂತರದಲ್ಲಿ ನೂಕಿತು. ಈ ಸತ್ವ ಪರೀಕ್ಷೆಯ ಹೋರಾಟದಲ್ಲಿ ಶ್ರೀ ಹುಕ್ಕೇರಿಯವರಿಗೆ ಅನುಭವಿಸಬೇಕಾದ ತೊಂದರೆಗಳು ಅಷ್ಟಿಷ್ಟಲ್ಲ. ಶ್ರೀ ದಿವಾಕರರ ಧ್ಯೇಯವಾದಕ್ಕೆ ಶ್ರೀ ಮಧ್ವರಾಯರ ಪ್ರಭಾವಶಾಲಿಯಾದ ಪ್ರಚೋದಕ ಶಕ್ತಿ, ಶ್ರೀ ರಾಮರಾಯರ ವ್ಯವಹಾರ ಚಾತುರ್ಯಗಳ ಜೋಡಣೆ ದೊರೆತು ಕರ್ಮವೀರ ಹುಟ್ಟಿ ಹೊಸದನೆಯ ಹನುಮಂತನಂತೆ ಖ್ಯಾತಿಯನ್ನು ಪಡೆಯಿತು.

ಶ್ರೀ ಹುಕ್ಕೇರಿ ರಾಮರಾಯರ ಕಾರ್ಯವೈಶಿಷ್ಟ್ಯ ಅವರ ಮಂತ್ರ ಶಕ್ತಿಯಲ್ಲಿದೆ. ಎದುರಿಗೆ ಬಂದ ಪರಿಸ್ಥಿತಿಯಲ್ಲಿ ಯಾವ ದಾರಿಯಿಂದ ಮುಂದೆ ಸಾಗಿದರೆ ಕಾರ್ಯಸಿದ್ಧಿ ಯಾಗಬಲ್ಲದೆಂಬುದನ್ನು ಅರಿತುಕೊಳ್ಳುವ ಹುಟ್ಟುಗುಣವೆ ಅವರಲ್ಲಿದ್ದಂತೆ ತೋರುತ್ತದೆ.

ಅವರು ಈ ಶಕ್ತಿಯ ಬಲದಿಂದಲೆ ವಿಕ್ಟೋರಿಯಾ ಹೈಸ್ಕೂಲಿನ ಅಭೂತಪೂರ್ವ ಉನ್ನತಿಯನ್ನು ಮಾಡಿದರು. ಕಾಲೇಜಿನ ಸ್ಥಾಪನೆಯೂ ಆಯಿತು. ಆದರೆ ನಾಡಿನ ದುರ್ದೈವದಿಂದ ಅಂದಿನ ವಿಶಿಷ್ಟ ಪರಿಸ್ಥಿತಿಯ ಮೂಲಕ ಅದು ಹೆಚ್ಚು ದಿನ ತಾಳಿ ಬಾಳಲಿಲ್ಲ.

ವಿಶೇಷ ಧ್ಯೇಯವಾದಿಗೆ ಅವ್ಯವಹಾರಿ, ಎಬಡನೆಂಬ ಆರೋಪವು ಬರುವದಾದರೆ, ವ್ಯವಹಾರ ಚತುರನಿಗೆ ಧೂರ್ತ ಚಾಣಕ್ಯ ಎಂಬೀ ಬಗೆಯ ಆಕ್ಷೇಪಣೆಗಳಿಗೂ ತಲೆಗೊಡಬೇಕಾಗುತ್ತದೆ. ಶ್ರೀ ರಾಮರಾಯರಿಗೆ ಇಂತಹ ಕಗ್ಗತ್ತಲೆಯೊಳಗಿಂದಲೂ ಹೊರಬೀಳಬೇಕಾಗಿದೆ. ಅವರು ಸ್ಥಿರ, ಗಂಭೀರ ಮನೋವೃತ್ತಿಯವರಾದ್ದರಿಂದ ಎಲ್ಲಿಯೂ ಕಂಗೆಡದೆ ತಮ್ಮ ಗುರಿಯತ್ತ ಸಾಗಿದ್ದುದು ಅಭಿನಂದನೀಯವಾಗಿದೆ. ಧ್ಯೇಯವು ಉದಾತ್ತವಾಗಿದ್ದರೆ ಅದರ ಸಾಧನೆಯ ಕಾಲದಲ್ಲಿ ಸ್ವಲ್ಪಕಾಲ ನಿಂದೆ, ಟೀಕೆಗಳಿಗೆ ಎಡೆದೊರೆಯಬಹುದಾದರೂ ತನ್ನ ಕಾರ್ಯಶುದ್ಧಿಯ ವಿಷಯದಲ್ಲಿ ಆತ್ಮವಿಶ್ವಾಸವಿದ್ದ ಕಾರ್ಯಕರ್ತನಿಗೆ ಆ ಟೀಕೆಗಳು ಏನನ್ನೂ ಮಾಡಲಾರವೆಂಬುದನ್ನು ಶ್ರೀ ರಾಮರಾಯರು ತಮ್ಮ ನಡೆವಳಿಯಿಂದ ತೋರಿಸಿಕೊಟ್ಟಿದ್ದಾರೆ. ಘಂಡಗುಂಡರೆಂದು ಮುಂತಾಗಿ ವಿಡಂಬನ ಮಾಡಿದ ನಿಂದಕರೆ ಈಗ ಅವರಲ್ಲಿ ಆ ಈ ಸಲಹೆಗಳ ನೆರವಿಂದ ಅರ್ಜವನ್ನೆತ್ತಿಯವರಾದುದನ್ನು ಕಾಣಬಹುದಾಗಿದೆ.

ಮುಖ್ಯವಾಗಿ ಸಮಾಜಕ್ಕೆ ಉಪಯುಕ್ತವಾದ ಕೆಲಸಗಳು ತಮ್ಮಿಂದ ಆಗಬೇಕೆಂಬುದ ಶ್ರೀ ಹುಕ್ಕೇರಿಕರ ರಾಮರಾಯರ ಹಿರಿಯ ಹಂಬಲ. ಖಾಸಗಿ ಶಾಲೆಯನ್ನು ನಡೆಸುವದರಿಂದ ಅದು ಸಾಧಿಸುತ್ತಿದ್ದರೆ ಅದಕ್ಕೆ ತಮ್ಮನ್ನು ಹೂಡಿಕೊಳ್ಳಲಿಕ್ಕೂ ಅವರು ಸಿದ್ಧರು. ಗಣೇಶೋತ್ಸವ, ಸಾರ್ವಜನಿಕ ವಾಚನಾಲಯಗಳ ಮೂಲಕ, ಸಮಾಜಕ್ಕೆ ಉಪಯುಕ್ತ ಜ್ಞಾನದಾನ ಮಾಡಬೇಕೆಂದು ಅಂದಿನ ಧಾರವಾಡದ ಪರಿಸ್ಥಿತಿಯಲ್ಲಿ ಮರಾಠಿ–ಕನ್ನಡ ಎಂಬ ತಾರತಮ್ಯಕ್ಕೆ ವಿಶೇಷ ಮಹತ್ವವನ್ನು ಅವರು ಕೊಡಲಿಲ್ಲ. ಅವರಿಗೆ ಕಾರ್ಯಸಿದ್ಧಿಯು ಮುಖ್ಯ. ಆದುದರಿಂದ ಸಾಧನಗಳ ಕಡೆಗೆ ಸ್ವಲ್ಪ ದುರ್ಲಕ್ಷ್ಯವಾಗುತ್ತಿದ್ದುದನ್ನೇ ಅವರ ಎದುರಾಳಿಗಳು ಕಟ್ಟಿಯಿದ್ದುದನ್ನು ಕೆಲಸಾರೆ ಗುಡ್ಡವಾಗಿ ಮಾಡಿದ್ದಾರೆ.

ಆದರೆ, ಲೋಕಸೇವೆಯು ತಮ್ಮಿಂದಾಗಬೇಕೆಂಬ ಹಂಬಲದ ಶ್ರೀ ರಾಮರಾಯರಿಗೆ ಕಂನಾಡಿನಲ್ಲಿ ಕಂನಡಿಗೇ ಪ್ರಥಮಸ್ಥಾನವು ಪ್ರಥಮಗೌರವವು ಕ್ರಮಪ್ರಾಪ್ತವಾದುದೆಂಬುದನ್ನು ಅರಿತು ಕೊಳ್ಳಲು ತಡವಾಗಲಿಲ್ಲ ಮತ್ತು ಒಮ್ಮೆ ಕೈಕೊಂಡ ಕೆಲಸದಲ್ಲಿ ಸಂಪೂರ್ಣ ಮನಸು ಹಾಕುವ ನಿಷ್ಠೆಯವರಾದುದರಿಂದ, ಕಂನಾಡ ಒಕ್ಕೂಟದ ಸಲುವಾಗಿ ತಾವು ಬಹಳ ದಿನಗಳಿಂದ ಪ್ರಯತ್ನಿಸಿದವರೆಂದು ಹೇಳಿಕೊಳ್ಳುವವರಿಗಿಂತಲೂ ಹೆಚ್ಚಾಗಿ ಶ್ರೀ ರಾಮರಾಯರು ಈ ವಿಷಯದಲ್ಲಿ ಅಭ್ಯಾಸಿಗಳಾದ ಬಲ್ಲಿದರಾಗಿದ್ದಾರೆ.

ನಮ್ಮ ಪ್ರಾಂತದ ರಾಜಕಾರಣದ ವಿಚಿತ್ರ ಪರಿಸ್ಥಿತಿಯ ಮೂಲಕ ಶ್ರೀ ರಾಮರಾಯರ ಕರ್ತೃತ್ವ ಶಕ್ತಿಯ.. ಮಂತ್ರಶಕ್ತಿಯ ಸಂಪೂರ್ಣ ಲಾಭವು ಕಂನಾಡಿಗೂ ಆದರಂತೆ ಭಾರತಕ್ಕೂ ದೊರೆಯಲಿಲ್ಲವೆಂದು ನಾನು ಆಗಾಗ ಮಿಡುಕುತ್ತಿರುತ್ತೇನೆ. ಮಹಾತ್ಮಾ ಗಾಂಧಿಯವರಂತೆ ನಮ್ಮ ನಾಡಿನ ಈ ಮೊದಲಿನ ಮುಂದಾಳುಗಳು ತಮಗಿಂತಲೂ ಚಿಕ್ಕವರನ್ನು ತಮ್ಮ ಹತ್ತಿರ ಸ್ವೀಕರಿಸಿ ಅವರಿಗೆ ಮುಂದೆ ತರುವ ಕೆಲಸವನ್ನು ಮಾಡಲಿಲ್ಲ. ಅದರಿಂದ ಅಖಿಲ ಭಾರತೀಯ ರಾಜಕಾರಣದಲ್ಲಿ ಕಂನಾಡ ಕಾರ್ಯಕರ್ತರಿಗೆ ಅಲ್ಪಸ್ವಲ್ಪವದರೂ ಸ್ಥಾನ, ಮಾನಗಳು ದೊರೆಯಲು ೧೯೪೭ ಬೆಳಗಾಗಬೇಕಾಯಿತು!

ಶ್ರೀ ಪಟ್ಟಾಭಿ, ದೇವ ಪ್ರಭೃತಿಗಳನ್ನು ಅರಿತವರು ಯಾರೇ ಹೇಳಬಹುದು, ಶ್ರೀ ಹುಕ್ಕೇರಿಯವರು ಇಂದು ಎ. ಆಯ. ಸಿ. ಸಿ. ಯ ಕಾರ್ಯದರ್ಶಿಗಳಾಗಿ ಯಶಸ್ವಿ ರೀತಿಯಿಂದ ಅದನ್ನು ಲೀಲೆಯಿಂದ ನೆರವೇರಿಸಬಹುದಾಗಿತ್ತು. ಶ್ರೀ ಹುಕ್ಕೇರಿಯವರು ಯಾವುದೊಂದು ತೊಡಕಿನ ಸಮಸ್ಯೆಯನ್ನು ಅರಿತುಕೊಂಡು ಶಾಂತವಾಗಿ ಅದನ್ನು ಬಿಡಿಸಿ ಹೇಳುವ ಕೌಶಲವನ್ನು ನೋಡಬೇಕು. ವಿರೋಧಿಗಳಿಗೂ ತಲೆದೂಗಿಸುವ ಕೊನೆಗೆ ತೆಪ್ಪಗೆ ಕುಳ್ಳಿರಿಸುವ ಶಕ್ತಿಯಿದೆ ಅವರ ವಿವೇಚನೆಯಲ್ಲಿ. ಈ ಬಗೆಯಾದ ಪೃಥಕ್ಕರಣ ಪದ್ಧತಿಯಿಂದ ತಿಳಿಸಿ ಹೇಳುವ ಮುಂದಾಳುಗಳು ನಮ್ಮಲ್ಲಿ ತೀರವಿರಳ. ಆವೇಶದಿಂದ ಕೂಗಿ ಕಿವಿಗೆಡಚಿಕ್ಕುವ ವಾಡಿಕೆ ಹೆಚ್ಚು. ಇಲ್ಲವೆ ಚುಚ್ಚುಮಾತು ಅವಾಚ್ಯ ಬೈಗಳ ಮಳೆಸುರಿಸುವ ಫಾಲ್ಗುಣ ಪದ್ಧತಿಯೊಂದಿದೆ.

ವಿಚಾರ ಶಕ್ತಿಯಿಲ್ಲದ ಅಜ್ಞ ಸಮಾಜದ ಎದುರು ಶ್ರೀ ಹುಕ್ಕೇರಿಯವರ ಉಪನ್ಯಾಸಗಳು ಪರಿಣಾಮಕಾರಿಯಾಗಲಾರವು. ತಾವು ತಿಳಿದವರೆಂಬ ಭ್ರಮೆಯಿಂದ ಸ್ವಂತದ ಹೆಮ್ಮೆಯಲ್ಲಿ ತಿರುಗುವವರೆ ಹೆಚ್ಚಿರುವದರಿಂದ ಇನ್ನೊಂದು ಸಮಾಜಕ್ಕೂ ಅವರ ಮಂತ್ರ ಶಕ್ತಿಯ ಲಾಭವು ಸಾಕಷ್ಟು ದೊರೆಯದೆ ಹೋಗಿದೆ.

ಹೀಗಾಗಿ, ನಮ್ಮ ನಾಡಿನ ಪ್ರಭಾವಶಾಲಿಯಾದ ವಿಚಾರವಂತ ಕರ್ತೃತ್ವಶಾಲಿಗಳಿಗೆ ಸಾಕಷ್ಟು ಕಾರ್ಯರಂಗವೆ ದೊರೆಯದೆ, ಅವರು ಉಳಿದ ಪ್ರಾಂತದ ಮುಂದಾಳುಗಳಿಗಿಂತ ಚಿಕ್ಕವರಾಗಿ ಕಾಣುತ್ತಾರೆ. ಮತ್ತೆ ಅಖಿಲ ಭಾರತೀಯ ಮುಂದಾಳುಗಳು ನಮ್ಮಲ್ಲಿ ಹೊರಡಲಿಲ್ಲವಲ್ಲ, ಎಂದು ನಾವೆ ಇನ್ನೊಂದು ಗಳಿಗೆಯಲ್ಲಿ ಮಿಡುಕುತ್ತೇವೆ. ನಮ್ಮ ನಾಯಕರ ಪ್ರಭಾವ, ಪ್ರಭುತ್ವಗಳು ಸಾಕಷ್ಟು ಉಜ್ವಲವಾಗಿ ಹೊರಹೊಮ್ಮಬೇಕಾದರೆ ನಾಡಿಗರು ಸರಿಯಾಗಿ ಅವರ ಲಾಭ ಪಡೆಯುವದು ಅಗತ್ಯವಾಗಿಲ್ಲವೆ!

ಶ್ರೀ ರಾಮರಾಯರಿಗೆ ಈಗ ೬೦ ವರುಷ ತುಂಬುತ್ತವೆ. ಇದೀಗ ಇನ್ನು ಅವರ ಪರಿಣತ ದೆಶೆ ಕಂನಾಡಿಗೆ ದೊರೆಯಲಿ. ಶ್ರೀ ರಾಮರಾಯರಿಗೆ ದೇವರು ಆಯುರಾರೋಗ್ಯಗಳನ್ನೀಯಲಿ

ನನ್ನ ಪರಿಚಯದ ಮಾಸ್ತರರು ಅವರ ಮುಖ್ಯ ಗುಣಗಳು

(ಲೇ. ವೆಂ. ಶ್ರೀ. ಮಿರಜಿ, ಕ. ಚ. ಸಂಘ)

೧೯೧೮ ರಲ್ಲಿ ನಾನು ವಿಕ್ಟೋರಿಯಾ ಹಾಯಸ್ಕೂಲಿನ ಮೊದಲನೇ ಇಯತ್ತೆಯಲ್ಲಿ ಪ್ರವೇಶ ಮಾಡಿದಾಗಿನಿಂದ ಶ್ರೀ. ರಾ. ಶ್ರೀ. ಹುಕ್ಕೇರಿಕರರು ನನಗೆ ಗುರುಗಳಾಗಿದ್ದಾರೆ. ಶಾಲೆಯ ವಾದವಿವಾದಮಂಡಲದಲ್ಲಿ ನನಗೆ ಅವರಿಂದ ವಿಶೇಷ ಪ್ರೋತ್ಸಾಹ ದೊರೆಯುತ್ತಿತ್ತು. ಈಗಿನ ಅನೇಕ ಸಾರ್ವಜನಿಕ ಕಾರ್ಯಕರ್ತರಿಗೆ ಆಗ ಗರಡಿಮನೆಯಂತಿದ್ದ ಧಾರವಾಡದ ಬಾಲಮಾರುತಿ ಸಂಸ್ಥೆಯಲ್ಲಿ ಅವರು ಕೆಲವು ಕಾಲ ಅಧ್ಯಕ್ಷರಿದ್ದರು. ಅದರಲ್ಲಿ ನಾನೊಬ್ಬ ಕಾರ್ಯಕರ್ತನಾಗಿದ್ದೆನು. ಡಾಕ್ಟರ ಕಬ್ಬೂರ, ದ. ಪ. ಕರಮರಕರ, ವಾ. ರಾ. ಮುಧೋಳಕರ, ರಾ. ಗೋ. ಹುಕ್ಕೇರಿ ಮೊದಲಾದವರು ಬಾಲಮಾರುತಿ ಸಂಸ್ಥೆಯಲ್ಲಿಯೇ ತಮ್ಮ ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದರು. ೧೯೨೧ ರಲ್ಲಿ ನಾನು ಪುಣೆಯ ಟಿಳಕ ಮಹಾವಿದ್ಯಾಲಯದಲ್ಲಿ ಕಲಿಯುತ್ತಿರುವಾಗ, "ಇದು ಕಲಿಯುತ್ತ ಕೂಡುವ ಸಮಯವಲ್ಲ ನೀನು ಧಾರವಾಡದಲ್ಲಿಯ ಕಾಂಗ್ರೆಸ ಕೆಲಸಕ್ಕಾಗಿ ಹೊರಟು ಬಾ" ಎಂದು ಮಾಸ್ತರರು ನನಗೆ ಬರೆದರು. ಆ ಅಪ್ಪಣೆಯಂತೆ ಶಿಕ್ಷಣವನ್ನು ಬಿಟ್ಟು ನಾನು ಧಾರವಾಡಕ್ಕೆ ಬಂದೆನು. ಶ್ರೀ. ಹುಕ್ಕೇರಿಕರರ ಪ್ರಭಾವವು ನನ್ನ ಮೇಲೆ ಇಷ್ಟು ಇತ್ತು. ಮುಂದೆ ಕೆಲ ಕಾಲದ ಮೇಲೆ ನನ್ನ ಶಿಕ್ಷಣವನ್ನು ಮುಗಿಸಿ "ಕೇಸರಿ" ಕಚೇರಿಯಲ್ಲಿ ವೃತ್ತಪತ್ರೋದ್ಯೋಗವನ್ನು ಕಲಿತನಂತರ ೧೯೨೪ ಮೇ ತಿಂಗಳಲ್ಲಿ ಮಾಸ್ತರರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ "ಕರ್ಮವೀರ" ಹಾಗೂ "ನವಶಕ್ತಿ" (ಇಂಗ್ಲಿಷ) ವಾರಪತ್ರಿಕೆಗಳಿಗೆ ನನ್ನನ್ನು ಅವರು ಉಪಸಂಪಾದಕನನ್ನಾಗಿ ನೇಮಿಸಿದರು. ಶ್ರೀ. ದಿವಾಕರರು ಆಗ ಕಾರಾವಾಸದಲ್ಲಿದ್ದರು. ನಾನೊಬ್ಬನೇ ಉಪಸಂಪಾದಕನಾದ್ದರಿಂದ ಮಾಸ್ತರರ ವಿಚಾರದಂತೆ ಈ ಪತ್ರಿಕೆಗಳನ್ನು ಹೊರಡಿಸುವ ಭಾರವು ನನ್ನ ಮೇಲಿತ್ತು. ಆಗ ಅವರೊಡನೆ ಹಗಲೆಲ್ಲ ಕೆಲಸ ಮಾಡುವದಲ್ಲದೇ "ಕರ್ಮವೀರ" ಹಾಗೂ "ನವಶಕ್ತಿ"ಗಳು ಹೊರಡುವ ವಾರದಲ್ಲಿಯ ಎರಡು ದಿನ ಇಡೀ ರಾತ್ರಿಯೂ ನಾನು ಕೆಲಸ ಮಾಡುತ್ತಿದ್ದೆನು. ೧೯೨೯ ರ ವರೆಗೂ ನಾನು "ಕರ್ಮವೀರ"ದಲ್ಲಿ ಕೆಲಸ ಮಾಡಿದೆನು. ೧೯೨೯ ರಿಂದ ೧೯೩೭ ರ ವರೆಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಸಹಾಯಕ ಕಾರ್ಯದರ್ಶಿಯಾಗಿ ಕೆಲಸ ಮಾಡಿ

[೧೧ ನೇ ಪುಟ ನೋಡಿರಿ]

ಶ್ರೀ ಹುಕ್ಕೇರಿಕರರು ಮತ್ತು ಅವರ ಕುಟುಂಬ



ಎಡದಿಂದ ಬಲಕೆ:- ಶ್ರೀ ವಸಂತ ಹುಕ್ಕೇರಿಕರ (ಹಿರಿಯ ಮಗ), ಶ್ರೀ ನಿವಾಸ ಹುಕ್ಕೇರಿಕರ (ಕಿರಿಯ ಮಗ), ಶ್ರೀ ರಾ. ಶ್ರೀ. ಹುಕ್ಕೇರಿಕರ, ಸೌ॥ ಜಾನಕಿಬಾಯಿ ಹುಕ್ಕೇರಿಕರ (ಹೆಂಡತಿ), ಸೌ॥ ಸುಶೀಲಾಬಾಯಿ ಹುಕ್ಕೇರಿಕರ (ಮಾಸ್ತರರ ಸೊಸೆ ಶ್ರೀ ವಸಂತರಾಯರ ಹೆಂಡತಿ) ಕುಮಾರಿ ಶಾಂತಾ ಮತ್ತು ಕುಮಾರಿ ಸುಧಾ (ಇಬ್ಬರು ಹೆಣ್ಣು ಮಕ್ಕಳು)

ಕರ್ಮವೀರ ಹರಿಜನ ಪುರವಣಿ

ಒಂದು ಒಗಟು

(ಮೋ. ಕ. ಗಾಂಧಿ)

ಗೆಳೆಯನೊಬ್ಬನು ಬರೆಯುತ್ತಾನೆ:–

"ನಮ್ಮ ಎರಡು ರಾಷ್ಟ್ರಗಳ ನಡುವೆ ಯುದ್ಧವಾಗುವ ಸಂಭವವಿದೆಯೆಂದು ಚೇಷ್ಟೆಯಲ್ಲಿಯೂ ಕೂಡ ಚರ್ಚೆ ಮಾಡದಿರುವದು ಒಳಿತು. ಆದರೆ ನೀವು ಈ ಸಂದರ್ಭದಲ್ಲಿ ಬಹಳ ಮುಂದೆ ಹೋಗಿ ಎರಡು ರಾಷ್ಟ್ರಗಳಲ್ಲಿ ಯುದ್ಧ ನಡೆಯದದ್ದಾದರೆ ಹಿಂದೀ ಒಕ್ಕೂಟದಲ್ಲಿಯ ಮುಸಲ್ಮಾನರು ಪಾಕಿಸ್ತಾನದಲ್ಲಿಯ ಮುಸಲ್ಮಾನರ ವಿರುದ್ಧ ಹೋರಾಡತಕ್ಕದ್ದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತಿರುವಿರಿ, ಇದರ ಅರ್ಥ, ಹಿಂದುಗಳು ಮತ್ತು ಮುಸಲ್ಮಾನೇತರರು ಹೀಗೆಯೆ ಮಾಡಬೇಕೆಂದು ಆಗುವದಿಲ್ಲವೆ? ಜಾತೀಯ ಪ್ರಶ್ನೆಗಾಗಿ ಇಂಥ ಯುದ್ಧವು ಸಂಭವಿಸಿದ್ದೇ ಆದರೆ ಹಿಂದೀ ಒಕ್ಕೂಟದಲ್ಲಿಯ ಮುಸಲ್ಮಾನರು ಪಾಕಿಸ್ತಾನದಲ್ಲಿಯ ಮುಸಲ್ಮಾನರ ವಿರುದ್ಧ ಹೋರಾಡುವಂತೆ ಮಾಡಲು ಯಾವ ವಿವಾದವೂ ಫಲಕಾರಿಯಾಗುವ ಸಂಭವವಿಲ್ಲ ಅದೇ ರೀತಿಯಾಗಿ ಪಾಕಿಸ್ತಾನದಲ್ಲಿಯ ಹಿಂದುಗಳು ಮತ್ತು ಶೀಖರು ಹಿಂದೀ ಒಕ್ಕೂಟದಲ್ಲಿಯ ಹಿಂದು ಮತ್ತು ಶೀಖರ ಗೂಡ ಹೋರಾಡುವಂತೆ ಮಾಡುವ ವಿವಾದವೂ ಫಲಕಾರಿಯಾಗದು. ಆದರೆ ಜಾತೀಯ ಕಾರಣವನ್ನು ಬಿಟ್ಟು ಉಳಿದ ಯಾವದೇ ಕಾರಣಕ್ಕಾಗಿ ಎರಡೂ ರಾಷ್ಟ್ರಗಳಲ್ಲಿ ಯುದ್ಧ ಸುರುವಾದರೆ ಪಾಕಿಸ್ತಾನದಲ್ಲಿಯ ಹಿಂದುಗಳು ಮತ್ತು ಒಕ್ಕೂಟದಲ್ಲಿನ ಮುಸಲ್ಮಾನರು ಪಾಕಿಸ್ತಾನದ ವಿರುದ್ಧ ಹೋರಾಡಬೇಕೆಂದು ನೀವು ಪ್ರತಿಪಾದಿಸುವದಿಲ್ಲ"

ಎರಡೂ ರಾಷ್ಟ್ರಗಳಲ್ಲಿ ಯುದ್ಧವಾಗುವ ಸಂಭವವಿದೆಯೆಂದು ಚೇಷ್ಟೆಗಾಗಿ ಚರ್ಚೆ ನಡೆಸದಿರುವದು ನಿಶ್ಚಯವಾಗಿ ಸತ್ಯ ಸಂಗತಿಯಾಗಿದೆ. 'ಆದರೂ' ಎಂಬ ಅವ್ಯಯವು ಇಲ್ಲಿ ಸರಿಹೋಗವದಿಲ್ಲ ಏಕೆಂದರೆ ಯುದ್ಧದ ಸಂಭಾವ್ಯತೆಯು ನಿಜವಾಗಿದ್ದರೆ ಆದರ ಬಗ್ಗೆ ಚರ್ಚೆ ನಡೆಸುವುದು ಕರ್ತವ್ಯವಾಗಿ ಪರಿಣಮಿಸುತಿದೆ. ಚರ್ಚೆ ಮಾಡದಿರುವುದೇ ಮೂರ್ಖತನದ್ದಾಗುವದು ಯಾವ ಯಾವ ಸಂದರ್ಭಗಳಲ್ಲಿ ಯಾವ ನಿಯಮಗಳು ಹಿಂದೀ ಒಕ್ಕೂಟದಲ್ಲಿಯ ಮುಸಲ್ಮಾನರಿಗೆ ಅನ್ವಯಿಸುವವೊ ಅವೆಲ್ಲ ನಿಯಮ ನಿಬಂಧನೆಗಳು ಆಯಾ ಸಂದರ್ಭಗಳಲ್ಲಿ ಪಾಕಿಸ್ತಾನದಲ್ಲಿಯ ಹಿಂದುಗಳು ಮತ್ತು ಶೀಖರಿಗೂ ಅನ್ವಯಿಸುವವೆಂದು ನನ್ನ ದೃಢವಾದ ವಿಶ್ವಾಸವಿದೆ. ನನ್ನ ಪ್ರಾರ್ಥನೋತ್ತರ ಭಾಷಣಗಳಲ್ಲಿ ನಾನು ಇದನ್ನು ಸಾರಿ ಹೇಳಿರುವೆನಲ್ಲದೆ ಇಲ್ಲಿ ಗೆಳೆಯರೊಡನೆ ನಡೆಸಿದ ಸಂಭಾಷಣೆಗಳಲ್ಲಿಯೂ ಹೇಳಿದ್ದೇನೆ.

ಈ ಅಭಿಪ್ರಾಯದ ಹಿನ್ನಲೆಯಾಗಿ ಕಾರಣ ಮೀಮಾಂಸೆ ಇದ್ದೇ ಇದೆಯೆಂಬುದು ನಿಶ್ಚಿತ. ನಿಷ್ಠೆಯೇನು ಆಜ್ಞೆಯನ್ನು ಕೊಟ್ಟ ಕೂಡಲೆ ಬರತಕ್ಕದ್ದಲ್ಲ. ಪರಿಸ್ಥಿತಿ ಅನುಕೂಲವಿಲ್ಲದಿದ್ದರೆ ಅದನ್ನು ಸಾಧಿಸುವದು ಶಕ್ಯವೆ ಆಗಲಾರದೆಂದು ಹೇಳಬಹುದು. ಇಂಥ ವಿಶುದ್ಧ ನಿಷ್ಠೆಯ ಸಂಭಾವ್ಯತೆಯಲ್ಲಿ ವಿಶ್ವಾಸವಿಲ್ಲದ ಅನೇಕ ಜನರು ಇರುವರು ಅಂತೆಯೆ ಅವರು ನನ್ನ ಈ ಅಭಿಪ್ರಾಯಕ್ಕೆ ನಗೆಯಾಡುತ್ತಾರೆ. ಇಂಥ ಸಂಭಾವ್ಯತೆಯ ವಿಚಾರ ಮಾಡುವದರಲ್ಲಿ ನಗೆಯಾಡುವದಕ್ಕೆ ನಿಶ್ಚಯವಾಗಿ ಏನೂ ಸ್ಥಾನವಿಲ್ಲ. ಕರ್ತವ್ಯವೆಂದು ತಿಳಿದುಕೊಂಡಾಗಲೆ ಹಿಂದೀ ಒಕ್ಕೂಟದಲ್ಲಿಯ ಮುಸಲ್ಮಾನರು ಪಾಕಿಸ್ತಾನದ ಮುಸಲ್ಮಾನರ ವಿರುದ್ಧ ಹೋರಾಡಲು ಸಿದ್ಧರಾಗಬಲ್ಲರು; ಬೇರೆ ಶಬ್ದಗಳಲ್ಲಿ ಹೇಳುವದಾದರೆ ಒಕ್ಕೂಟದಲ್ಲಿಯ ಮುಸಲ್ಮಾನರನ್ನು ಯೋಗ್ಯ ರೀತಿಯಿಂದ ನಡೆಯಿಸಿಕೊಳ್ಳಲಾಗುತ್ತದೆ ಮತ್ತು ಪಾಕಿಸ್ತಾನದಲ್ಲಿಯ ಮುಸಲ್ಮಾನೇತರರನ್ನು ಅಲ್ಲಿ ಆ ರೀತಿ ನಡೆಸಿಕೊಳ್ಳಲಾಗುವದಿಲ್ಲ ಎಂಬುದಾಗಿ ಅವರಿಗೆ ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾಗಿರುವಾಗ ಇಂಥ ಮೆಟ್ಟಲು ಏನು ಅಶಕ್ಯಕೋಟಿಯದಲ್ಲ.

ಅದೇ ರೀತಿಯಾಗಿ ಪಾಕಿಸ್ತಾನದಲ್ಲಿಯ ಮುಸಲ್ಮಾನೇತರರು ತಮ್ಮನ್ನು ಅಲ್ಲಿ ಯೋಗ್ಯ ರೀತಿಯಿಂದ ನಡೆಯಿಸಿಕೊಳ್ಳಲಾಗುತ್ತಿದೆ ಮತ್ತು ಸುರಕ್ಷಿತತೆಯಿಂದ ತಾವು ಅಲ್ಲಿ ಇರಬಹುದು ಎಂದು ಭಾವಿಸಿಕೊಂಡಿರುವಾಗ ಒಕ್ಕೂಟದಲ್ಲಿಯ ಹಿಂದುಗಳು ಅಲ್ಲಿನ ಅಲ್ಪಸಂಖ್ಯಾಕರನ್ನು ಕೆಟ್ಟ ರೀತಿಯಿಂದ ನಡಿಸಿಕೊಂಡರೆ ಪಾಕಿಸ್ತಾನದಲ್ಲಿಯ ಅಲ್ಪಸಂಖ್ಯಾಕರು ಸ್ವಾಭಾವಿಕವಾಗಿ ಒಕ್ಕೂಟದಲ್ಲಿಯ ಬಹುಸಂಖ್ಯಾಕರೊಡನೆ ಹೋರಾಡುವರು. ಆಗ ಆ ಅಲ್ಪಸಂಖ್ಯಾಕರಿಗೆ ಅವರ ಕರ್ತವ್ಯವನ್ನು ಮಾಡುವಂತೆ ಮನಒಲಿಸಲು ಯಾವದೇ ಬಗೆಯ ವಿವಾದದ ಅವಶ್ಯಕತೆ ಉಳಿಯುವದಿಲ್ಲ.

ದೇಶವು ಎರಡು ತುಂಡುಗಳಾಗಿ ವಿಭಾಗಿಸಲ್ಪಟ್ಟದ್ದು ದುರ್ದೈವ. ಜಾತೀಯತೆಯ ತಳಹದಿಯಲ್ಲಿಯೆ ಈ ತುಂಡುಗಳಾದದ್ದು ಸ್ಪಷ್ಟವೆ ಇದೆ. ಅದರ ಹಿಂದೆ ಆರ್ಥಿಕ ಮತ್ತು ಉಳಿದ ಕಾರಣಗಳು ಇದ್ದಿರಬಹುದು. ಅವೆಲ್ಲ ವಿಭಜನೆಯನ್ನು ಮಾಡುವಷ್ಟು ಬಲಿಷ್ಠವಾಗಿರಲಿಲ್ಲ. ಈಗ ವಾತಾವರಣದಲ್ಲೆಲ್ಲ ತುಂಬಿದ ವಿಷವೂ ಅದೇ ಕಾರಣದಿಂದ ಹುಟ್ಟಿತು. ಅಧರ್ಮವೆ ಧರ್ಮದ ಹೆಸರಿನಲ್ಲಿ ತಾಂಡವವಾಡುತಿದೆ. ಜಾತೀಯ ಪ್ರಶ್ನೆ ಇದ್ದಿರದಿದ್ದರೆ ಎಲ್ಲವೂ ಒಳಿತಾಗುತಿತ್ತೆಂದು ಹೇಳುವುದು ಕಿವಿಗೆ ಇಂಪೆನಿಸುತ್ತದೆ; ಆದರೆ ವಸ್ತುಸ್ಥಿತಿಯನ್ನು ಹತ್ತಿಕ್ಕುವದೆಂತು? ಎರಡೂ ರಾಷ್ಟ್ರಗಳಲ್ಲಿ ಯುದ್ಧ ಸಂಭವಿಸಿದ್ದಾದರೆ ಒಕ್ಕೂಟದಲ್ಲಿಯ ಮುಸಲ್ಮಾನರು ಪಾಕಿಸ್ತಾನದಲ್ಲಿಯ ಮುಸಲ್ಮಾನರ ವಿರುದ್ಧ ಮತ್ತು ಒಂದು ಭಾಗದಲ್ಲಿಯ ಹಿಂದುಗಳು ಮತ್ತೊಂದು ಭಾಗದಲ್ಲಿಯ ಹಿಂದುಗಳ ವಿರುದ್ಧ ಹೋರಾಡುವರೋ? ಎಂದು ಮೇಲಿಂದ ಮೇಲೆ ಕೇಳಲಾಗಿದೆ. ಸದ್ಯಕ್ಕೆ ಅದೆಷ್ಟೇ ಅಸಂಭವವೆಂದು ತೋರಿದರೂ ಈ ರೀತಿ ವಿಚಾರ ಮಾಡುವದರಲ್ಲಿ ಯಾವದೇ ಬಗೆಯ ಅಸ್ವಾಭಾವಿಕತೆ ಇಲ್ಲವೆ ಅಸಂಭಾವ್ಯತೆ ಇರುವದಿಲ್ಲ. ನಿಷ್ಠೆಯ ಬಗ್ಗೆ ವಿಶ್ವಾಸವಿಟ್ಟು ಅದರಿಂದ ಬರಬಹುದಾದ ಗಂಡಾಂತರವನ್ನು ಧೈರ್ಯದಿಂದ ಎದುರಿಸುವುದಕ್ಕಿಂತ ಆ ನಿಷ್ಠೆಯ ಬಗ್ಗೆ ಅವಿಶ್ವಾಸವನ್ನು ತಾಳುವದರಲ್ಲಿಯೇ ಹೆಚ್ಚು ಗಂಡಾಂತರವಿದೆಂಬುದು ಸುಸ್ಪಷ್ಟ. ಈ ಮಾತನ್ನು ಹೆಚ್ಚು ಸ್ಪಷ್ಟವಾಗಿ ಈ ರೀತಿಯಾಗಿ ಹೇಳಬಹುದು- ಹಿಂದುಗಳು ಹಿಂದುಗಳ ವಿರುದ್ಧ ಮುಸಲ್ಮಾನರು ತಮ್ಮ ಧರ್ಮ ಬಾಂಧವರ ವಿರುದ್ಧ ಸತ್ಯಕ್ಕಾಗಿ ಮತ್ತು ನ್ಯಾಯಕ್ಕಾಗಿ ಎಂದಾದರೂ ಹೋರಾಡಬಲ್ಲರೆ? ಇತಿಹಾಸದಲ್ಲಿ ಇಂಥ ಉದಾಹರಣೆಗಳು ಇರುವವೇ? ಎಂಬ ಪ್ರತಿಪ್ರಶ್ನೆಯನ್ನು ಹಾಕಿ ಇದಕ್ಕೆ ಉತ್ತರ ಕೊಡಬಹುದಾಗಿದೆ.

ಈ ಒಗಟನ್ನು ಬಿಡಿಸುವದರಲ್ಲಿ ಸತ್ಯವನ್ನು ಹತ್ತಿಕ್ಕಿದುದೆ ದೊಡ್ಡದೊಂದು ಅಡಚಣೆಯು ಈ ರಣಯಜ್ಞದಲ್ಲಿ ಸತ್ಯವೆ ಕೊನೆಯಲ್ಲಿ ವಿಜಯಿಯಾಗುವದೆಂಬ ತಮ್ಮ ವಿಶ್ವಾಸದಲ್ಲಿ ಕೆಲವರಾದರೂ ದೃಢವಾಗಿ ಉಳಿಯುವರೆಂಬದಾಗಿ ನಾವು ಆಶಿಸುವಾ.

(ಗುಜರಾಥಿಯಿಂದ ಅನುವಾದಿತ)

ಹೊಸದಿಲ್ಲಿ
೧೭-೧೦-೪೭

ಕಾರ್ಯಾಲಯದ ಸ್ಥಳಾಂತರ

ಈವರೆಗೆ ಪಾವಥಹೌಸ ಕಂಪೌಂಡಿನಲ್ಲಿದ್ದ 'ಕರ್ಮವೀರ' ಕಾರ್ಯಾಲಯವನ್ನು ಪಸರಿಯ ಶುಭ ಮುಹೂರ್ತದಿಂದ ಕೊಪ್ಪೀಕರ ಬೀದಿಯಲ್ಲಿರುವ ಲೋಕಶಿಕ್ಷಣ ಟ್ರಸ್ಟಿನ ಭವ್ಯವಾದ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ನಮ್ಮ ವಾಚಕರು, ಜಾಹೀರಾತುದಾರರು ಮತ್ತು ಸಹಾನುಭೂತಿಪರರು ಇತ್ತ ಗಮನಿಸಬೇಕಾಗಿ ಬೇಡಿಕೆ.

ವ್ಯವಸಾಪಕ
ಕರ್ಮವೀರ

ಬಿಡುವು

ವಾಡಿಕೆಯಂತೆ ವಿಜಯ ದಶಮಿಯ ನಿಮಿತ್ತ ೩--೧೧--೧೯೪೭ ನೆಯ ತಾರೀಕಿನ ಸಂಚಿಕೆ ಹೊರಡುವುದಿಲ್ಲ.

ವ್ಯವಸ್ಥಾಪಕ
ಕರ್ಮವೀರ

ಓಡಿಸಾ ಆಸೆ—ಅಭಿವೃದ್ಧಿಯ ಪ್ರಾಂತ

ಓಡಿಸಾ ಹಿಂದುಸ್ತಾನದಲ್ಲಿ ಅತ್ಯಂತ ಅಲಕ್ಷಿಸಲ್ಪಟ್ಟ ಪ್ರಾಂತ. ಬರಗಾಲ ದಬ್ಬಾಳಿಕೆ ಮತ್ತು ನೆರೆಹಾವಳಿಯಿಂದ ಅದು ಬಳಲಿದೆ. ಇಪ್ಪತ್ತು ವರುಷಗಳ ಹಿಂದೆ ದೀನಬಂಧು ಅಂಡ್ರೂಜರವರು ಓಡಿಸಾದಲ್ಲಿ ಕೆಲದಿನಗಳನ್ನು ನಾನು ಕಳೆಯುವಂತೆ ಯೋಜಿಸಿದರು. ಬಾಲೇಸೂರ ಮತ್ತು ಕಟಕದಲ್ಲಿ ಅಫುವಿನ ಉಪಯೋಗ ಭಾರಿ ಆಗುತಿರುವದರ ಕಾರಣಗಳನ್ನು ಅಭ್ಯಸಿಸಲು ನನಗೆ ಅವರು ಹೇಳಿದ್ದರು. ಮಹಾನದಿ ಹೊಳೆಯು ಪ್ರತಿ ಎರಡು ಮೂರು ವರ್ಷಗಳಿಗೊಮ್ಮೆ ಮಹಾಪೂರ ಬರುವಂತೆ ಅದೇ ತಾನೆ ನೆರೆಯಲ್ಲಿದ್ದಿತು. ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದ್ದಿತು. ಜನರೂ ಮುಳುಗಿ ಸತ್ತಿದ್ದರು. ದೀನಬಂಧು ಅಂಡ್ರ್ಯೂಜರು ಪರಿಹಾರದ ವ್ಯವಸ್ಥೆಯನ್ನು ಮಾಡಿದ್ದರು. ಆದರೆ ಅದಕ್ಕಾಗಿ ಸ್ಥಳೀಯ ಸರಕಾರದ ಗೂಡ ಹೋರಾಡಬೇಕಾಯಿತು. ಪ್ರಾಂತದ ಜನತೆಯು ಕಷ್ಟನಿಷ್ಠುರಗಳ ಸುದ್ದಿಗಳು ಜಗತ್ತಿಗೆ ಗೊತ್ತಾಗಬಾರದೆಂದು ಅವರ ಅಭಿಲಾಷೆಯಾಗಿದ್ದಿತು. ಅತಿಶಯೋಕ್ತಿಯ ಆರೋಪವನ್ನು ಅವರ ಮೇಲೆ ಹೊರಿಸಲಾಯಿತು. ಕೆಲ ತಿಂಗಳುಗಳ ನಂತರ ಗಾಂಧೀಜಿ ಓಡಿಸಾವನ್ನು ಸಂದರ್ಶಿಸಿದರು. ಆ್ಯಂಡ್ರೂಜರು ಅವರ ಗೂಡ ಹೋಗಿದ್ದರು ಅಧಿಕಾರಿಗಳ ಅಬ್ಬರದಿಂದ ಜನ ಅತ್ಯಂತ ಬೆಚ್ಚಿಬಿದ್ದದ್ದರಿಂದ ತಮ್ಮ ಪ್ರೇಮಪಾತ್ರ ಧುರೀಣರನ್ನು ಭೆಟ್ಟಿಯಾಗಲು ಕೂಡ ಅವರು ಎಡೆಮಾಡಲಿಲ್ಲೆಂದು ಆ್ಯಂಡ್ರೂಜರು ವರ್ಣಿಸಿದ್ದುಂಟು.

ಇತ್ತೀಚೆಗೆ ಸುಮಾರು ಹತ್ತು ವರ್ಷಗಳ ಹಿಂದೆ ನಿರಾಶ್ರಿತರ ಕಷ್ಟನಿಷ್ಠುರಗಳ ಬಗ್ಗೆ [illegible] ಹ್ಯಾರಿಸನ್‌ರ ಬಾಯಿಂದ ಕೇಳಿಕೊಂಡೆನು. ಓಡಿಸಾ ಪ್ರಾಂತದ ಒಂದು ಸಂಸ್ಥಾನದಲ್ಲಿ ಜನತೆ ಅತ್ಯಂತ ಸಂಕಷ್ಟಕ್ಕೆ [illegible] ರಿಂದ ಅವರು ಗಡಿಯಿಂದ [illegible] ಓಡಿಹೋಗಬೇಕಾಯಿತೆಂದು [illegible] ಆ ಕಾಲಕ್ಕೆ ಓಡಿಸಾದಲ್ಲಿ ಮೊದಲನೇ ಕಾಂಗ್ರೆಸ್ ಮಂತ್ರಿಮಂಡಳವಿದ್ದಿತು.

ಇಪ್ಪತ್ತು ವರುಷಗಳ ಹಿಂದೆ [illegible] ಲ್ಲಿಯ ತರುಣ ಕಾಂಗ್ರೆಸ್ ಕಾರ್ಯಕರ್ತರಾದ ಹರಿಕೃಷ್ಣ ಮೆಹತಾಬರು ನನ್ನ [illegible] ದ್ದರು. ಇಂದು ಅವರು ಸ್ವತಂತ್ರ ಓಡಿಸಾದ ಮುಖ್ಯಮಂತ್ರಿಗಳಾಗಿರುವರು. [illegible] ಲೂ ನಾನು ಅವರ ಆತಿಥ್ಯ [illegible]. ಓಡಿಸಾದಲ್ಲಿಯ ಜನರು ತಮ್ಮ ದಾರಿದ್ರ್ಯ [illegible] ಮುಕ್ತರಾಗಿರುವರೆಂದು ಈಗಲೆ ಹೇಳುವದು ಬಹಳ ಅವಸರವಾಗಬಹುದು. ಅಲ್ಲದೆ [illegible] ವಲ್ಲದ [illegible] ಮುಕ್ತರಾಗಿರುವರೆಂದೂ ಹೇಳಲಿಕ್ಕಾಗದು. ಆದರೆ ಅಂಜಿಕೆಯೀಗ ಅಡಗಿಹೋಗಿದ್ದು ಅವರ ಭವಿತವ್ಯವು ಅತ್ಯಂತ ಉಜ್ವಲವಾಗಿದೆ.

ಅಲ್ಪಸಂಖ್ಯಾಕರ ಒಪ್ಪಿಗೆಯಿಂದ ಬಹುಸಂಖ್ಯಾಕರು ಆಳುತಿರುವದೇ ನಿಜವಾದ ಪ್ರಜಾಪ್ರಭುತ್ವ ಸರಕಾರವೆಂದು ಹರೆ ಕೃಷ್ಣ ಮೆಹತಾಬರು ಅಭಿಪ್ರಾಯ ಪಡುತ್ತಾರೆ. ಈ ತತ್ವವನ್ನು ವ್ಯವಹಾರದಲ್ಲಿ ತರಲು ಅವರು ಪ್ರಯತ್ನಿಸುತ್ತಿರುತ್ತಾರೆ. ಕಳೆದ ಬೇಸಿಗೆಯಲ್ಲಿ ಕಲಕತ್ತೆಯಲ್ಲಿ ಭೀಕರ ಹತ್ಯಾಕಾಂಡ ನಡೆದನಂತರ ಓಡಿಸಾದಲ್ಲಿ ಜಾತೀಯ ಕೊಲೆಗಳು ಭೀಕರ ಪ್ರಮಾಣದಲ್ಲಿ ನಡೆದವೆಂಬ ಸುದ್ದಿ ಹಬ್ಬಿತ್ತು. ಆದರೆ ಸುದ್ದಿಗಳು ಸುಳ್ಳಾಗಿದ್ದವು. ಮತ್ತು ಮೂಲದಲ್ಲಿಯೇ ಅವನ್ನು ಚಿವುಟಿ ಒಗೆಯಲಾಯಿತು. ಮುಸಲ್ಮಾನ ಅಲ್ಪಸಂಖ್ಯಾಕರ ಸಂಖ್ಯೆ ಬಹಳ ಕಡಿಮೆ ಆದರೆ ಸರಕಾರದ ಯೋಜನೆಗಳಲ್ಲಿ ಅವರು ಅತ್ಯಂತ ನಿಷ್ಠೆಯಿಂದ ಸಹಕರಿಸುತಿರುವರು.

ತೊಂಬತ್ತು ವರ್ಷಗಳ ಹಿಂದೆ ಗಂಡಾಂತರಪ್ರದವಾಗಿದ್ದ ಮಹಾನದಿ ಹೊಳೆಯನ್ನು ಅಳವಿನಲ್ಲಿ ಕರವುದಕ್ಕಾಗಿ ಉಪಾಯಗಳನ್ನು ಯೋಜಿಸಲಾಗಿತ್ತು. ಮಧ್ಯಂತರ ವರುಷಗಳಲ್ಲಿ ಮತ್ತೆ ಮತ್ತೆ ಹೊಸ ಹೊಸ ಯೋಜನೆಗಳು ಮುಂದೆ ಬಂದಿವೆ. ಆದರೆ ಭಾರೀ ವೆಚ್ಚದ ನೆವದಿಂದ ಅವೆಲ್ಲ ಕಪಾಟಿನಲ್ಲಿಯೆ ಉಳಿದಿವೆ.

ಆದರೀಗ ಮತ್ತೆ ಪನಾಸಿ ವ್ಯಾಲಿಯ ಯೋಜನೆಯು ಅಸುಭವದ ಬೋಳೆ ಸಿದ್ಧಮಾಡಲ್ಪಟ್ಟಿ ನಿಜವಾಗಿ ಸಾಕಷ್ಟು ವ್ಯಾಪಕ ಮತ್ತು ಎಲ್ಲ ಬಗೆಯ ಉದ್ದೇಶಗಳನ್ನು ಈಡೇರಿಸಬಲ್ಲ ಯೋಜನೆಯೊಂದು [illegible] ತಿಂಗಳುಗಳ ಹಿಂದೆ [illegible] ಅಣೆಕಟ್ಟಿನ ಅಡಿಗಲ್ಲನ್ನು ಕೂಡಿಸುವ ಸಮಾರಂಭ ನಡೆಯಿತು. ಆದರೆ ಆಗ ಪ್ರಾಂತದ ಜನತೆಯ ಭಾವನೆಗಳನ್ನು ಸಾಕಷ್ಟು ವಿಚಾರಿಸಲಿಲ್ಲ. ಸ್ಥಳೀಯ ಕೆಲ ಜಮೀನದಾರರು ಸಂಬಳಪುರದ ಹತ್ತರದ ಜನರನ್ನು ಉದ್ರೇಕಿಸಿ ನಿಷೇಧವನ್ನು ಪ್ರದರ್ಶಿಸುವದಕ್ಕಾಗಿ ಪ್ರಯತ್ನಿಸಬೇಕೆಂದು ಅವರನ್ನು ಒತ್ತಾಯಪಡಿಸಿದರು. ಹಿರೀಕುಡ ಅಣೇಕಟ್ಟಿನ ಯೋಜನೆಯು ಎಲ್ಲಬಗೆಯ ತಜ್ಞರ ವರದಿ ಮತ್ತು ಅತಿ ಆಕರ್ಷಕರವಾದ ಅನೇಕ ನಕ್ಷೆಗಳು ಮೊದಲಾದವುಗಳೊಡನೆ ಪ್ರಸಿದ್ಧಿಸಲಾಗಿದೆ. ಪ್ರಾಂತಿಕ ಶಾಸನಸಭೆಯ ಸದಸ್ಯರಿಗೆ ಇದರ ಬಗ್ಗೆ ಅಭ್ಯಾಸ ಮಾಡಲು ಸಾಕಷ್ಟು ಅವಕಾಶವು ದೊರಕಿತು. ಮುಖ್ಯಮಂತ್ರಿಗಳು ಅವರ ಸಹಕಾರಿಗಳು ಯೋಜನೆಯ ವಿರೋಧಕರ ಗೂಡ ಅನೇಕ ದಿನಗಳ ವರೆಗೆ ವಿಚಾರ ವಿನಿಮಯ ನಡೆಸಿದನಂತರ ಶಾಸನ ಸಭೆಯಲ್ಲಿ ಒಮ್ಮತದಿಂದ ಅಗಸ್ಟ ತಿಂಗಳ ಕೊನೆಯಲ್ಲಿ ಅದಕ್ಕೆ ಒಪ್ಪಿಗೆ ಕೊಡಲಾಯಿತು. ಈ ವಿಷಯ ಮನೋರಂಜಕ ಚರ್ಚೆಯಲ್ಲಿ ಸ್ಥಳೀಯ ಮುಸ್ಲಿಂ ಲೀಗಿನ ಧುರೀಣರು ಅತ್ಯಂತ ಆಸ್ಥೆಯಿಂದ ಮಸೂದೆಗೆ ಬೆಂಬಲ ಕೊಟ್ಟರು.

ಎಲ್ಲವೂ ಸುಸೂತ್ರದಾಗಿ ಸಾಗಿದರೆ ಆ ಅಣೆಕಟ್ಟು ಕೊನೆಗೊಳ್ಳುವುದು ಮತ್ತು ಐದು ವರ್ಷಗಳಲ್ಲಿ ಕಾಲುವೆಗಳನ್ನು ಕಟ್ಟಲಾಗುವದು ಅನಂತರ ಓಡಿಸಾದಿಂದ ನೆರೆ ಮತ್ತು ಬರಗಾಲ ಪೂರ್ಣವಾಗಿ ಮಾಯವಾಗುವವು. ವಿಶಾಲ ಪಡಭೂಮಿಯೆಲ್ಲ [illegible] ಹೊಸ ಉದ್ಯೋಗಗಳಿಗೆ ಸಾಕಷ್ಟು [illegible] ತ್ರವನ್ನು [illegible] [illegible]

[illegible] ನಡೆದು [illegible]

[illegible] ಅದೇ [illegible] ಉದ್ಯೋಗಗಳಲ್ಲಿಯೂ ಅವು ಕೈಯಿಕ್ಕಲಾರವು. ಹಳೆಯವು ಮತ್ತು ಹೊಸವು ಪರಸ್ಪರ ಸಹಾಯ ಮಾಡಬಲ್ಲವು. ಹರೆಕೃಷ್ಣ ಮೆಹತಾಬರು [illegible] ಅವರ ಸಹಕಾರಿಗಳ ಪರಿಚಯವಿದ್ದ [illegible] ಹತ್ತು ವರುಷಗಳಲ್ಲಿ ಅವರಿಂದ [illegible] ಗಳನ್ನು ಅಪೇಕ್ಷಿಸುವರು. [illegible] ನ್ನು ಸ್ವತಂತ್ರ ಓಡಿಸಾದ ಮೊದಲ [illegible] ನ್ನಾಗಿ ನೇಮಿಸಿದ್ದು ಅತ್ಯಂತ ಸಮು [illegible]

[illegible] ದರ ಸ್ಪಷ್ಟ ಚಿತ್ರವನ್ನು ನೋಡಬೇಕಾದರೆ [illegible] ಸಾವನ್ನು ಸಂದರ್ಶಿಸಬೇಕು. ಮುಖವಾಯಕ ನಿರಾಶ್ರಿತರ ಶಿಬಿರಗಳ ಸಂದರ್ಶನದಲ್ಲಿ ಇಡೀ ದಿವಸವನ್ನು ಕಳೆದ ನಂತರ ದಿಲ್ಲಿಯಲ್ಲಿ ನಾವಿದನ್ನು

(೧೮ ನೇ ಪುಟ ನೋಡಿರಿ)

ಗಾಂಧಿಯವರ ಪ್ರಾರ್ಥನೋತ್ತರ ಭಾಷಣಗಳು

ಬಿರ್ಲಾ ಭವನ ಹೊಸದಿಲ್ಲಿ
೧೩-೧೦-೪೭

ನಿರಾಶ್ರಿತರಿಗೆ

ನಿನ್ನೆ ನಾನು ನಿರಾಶ್ರಿತರ ಶಿಬಿರಗಳ ಬಗ್ಗೆ ಹಿಂದೆನ ಮಾತುಗಳನ್ನು ಹೇಳಿದೆ. ಅವು ಅಲ್ಲಿನವರಲ್ಲಿ ಸಾರಿ ಬರೆದಾಗ ಉಳಿದು ಹೋದವು. ಈ ಸಂಜೆ ನಾನು ಅವನ್ನು ಚಿತ್ರಿಸುತ್ತೇನೆ. ಅವಕ್ಕೆ ನಾನು ಬಹಳ ಪ್ರಾಮುಖ್ಯ ಕೊಡುತ್ತೇನೆ. ನಮ್ಮಲ್ಲಿ ಧಾರ್ಮಿಕ ಇಲ್ಲವೆ ಇತರ ಜಾತ್ರೆಗಳಿದ್ದರೂ ಕಾಂಗ್ರೆಸ್ ಸಭೆ ಮತ್ತು ಪರಿಷತ್ತುಗಳನ್ನು ನಾವು ಕಂಡಿರುವೆವಾದರೂ ಸರಿಯಾದ ಶಿಬಿರದಲ್ಲಿ ವಾಸಿಸುವುದು ನಮಗೆ ಅಭ್ಯಾಸವಿಲ್ಲ. ನಾನು ಕಾಂಗ್ರೆಸ್ ಮತ್ತು ಸಭೆ ಸಮ್ಮೇಲನಗಳಿಗೆ ಅನೇಕಸಲ ಹೋಗಿದ್ದೆ. ಹರಿದ್ವಾರದ ಕುಂಭಮೇಲಕ್ಕೆ ಹೋಗಿದ್ದೆ. ದ. ಆಫ್ರಿಕದಿಂದ ಬಂದ ನನ್ನ ಜೊತೆಯ ಕೆಲಸಗಾರರೊಡನೆ ಹಿಂದುಸ್ತಾನ ಸೇವಕದಲದ ಶಿಬಿರದಲ್ಲಿ ಕೆಲಸಮಾಡಿದ್ದೆ. ಅವರಲ್ಲಿ ಹೇಳುವಂತಹ ಹೆಚ್ಚಿನ ಸಂಗತಿಯಾವುದಿಲ್ಲ. ಅಲ್ಲಿಯವರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ನಾನು ನೋಡಿದಂತೆ ನಮ್ಮ ಜನರು ಅಲ್ಲಿ ಅಷ್ಟೇನೂ ಸಭ್ಯರಾಗಿದ್ದಿಲ್ಲ. ನಮಗೆ ಸಾಮಾಜಿಕ ಆರೋಗ್ಯದ ಕಡೆ ಲಕ್ಷವಿಲ್ಲ. ಅದರಿಂದ ಬಹಳ ಹಾನಿಕರವಾದ ಅನಾರೋಗ್ಯಕರ ವಾತಾವರಣ ಮತ್ತು ಸಾಂಕ್ರಾಮಿಕ ರೋಗಗಳನ್ನು ಹರಡುವ ಕೊಳೆ ಇವು ಹುಟ್ಟುತ್ತವೆ. ನಮ್ಮ ಶಾಯಖಾನೆಗಳು ಬಹಳ ಹೊಲಸಾದಳವೆಂಬಂತಿರುತ್ತವೆ. ಅಂತಹ ವ್ಯವಸ್ಥೆಯೇ ಇಲ್ಲವೆಂಬುದು ಅದಕ್ಕೂ ಚೆನ್ನಾಗಿ ಸ್ಥಿತಿಯನ್ನು ಬಯಲಿಗೆಳೆಯಬಲ್ಲುದು. ಎಲ್ಲಿ ಬೇಕಲ್ಲಿ ನಾವು ಶೌಚಕ್ಕೆ ಹೋಗಬಹುದೆಂದು ನಮ್ಮ ಜನರು ತಿಳಿದಂತಿದೆ. ಯಾವಾಗಲೂ ಬರಿಗಾಲಿನಿಂದ ತಿರುಗುವವರ ಪವಿತ್ರ ನದಿಗಳ ತೀರದಲ್ಲಿ ಕೂಡ ಅವರು ಶೌಚಕ್ಕೆ ಕೂಡುತ್ತಾರೆ. ... ಏನೂ ಗಮನಕೊಡದೆ ... ಅವರು ... ಇದ್ದಾರೆ. ಇಷ್ಟರ ಮೇಲೆ ನಮ್ಮ ... ವ್ಯವಸ್ಥೆ ಬಹಳ ... ಹೇಳೋಣವೆ? ಅದೂ ಸಾಧ್ಯವಿಲ್ಲ. ... ರೋಗಗಳು ... ಪರಿಚಾರಕರು. ಅದೇ ಒಂದು ... ಅವು ಎಲ್ಲಾದರೂ ಕೊಳಚೆಯ ಮೇಲೆ ಕುಳಿತು ಬಂದು ಅಂಟುರೋಗದ ... ಹೊತ್ತು ತಂದಿರಬಹುದೆಂಬುದನ್ನು ನಾವು ಮರೆತೇಬಿಡುತ್ತೇವೆ. ಹಾಗೆ ಯಾವಾಗಲೂ ಸರಿಯಾಗಿ ಯೋಜಿಸಿ ವ್ಯವಸ್ಥೆಗೊಳಿಸಿದ್ದಾಗಿರುವುದಿಲ್ಲ. ಇದು ಹೆಚ್ಚುಮಾಡಿ ಹೇಳಿದ ಮಾತಲ್ಲ. ಇಷ್ಟೆಲ್ಲ ಹೇಳಿದ ನಂತರ ಶಿಬಿರಗಳಲ್ಲಿ ... ಗಲಿಬಿಲಿ ಸದ್ದನ್ನು ಹೇಳದಿದ್ದರಾಗದು.

ಕ್ರಮ, ಯೋಜನೆ ಮತ್ತು ಸಂಪೂರ್ಣ ಆರೋಗ್ಯಕರ ವಾತಾವರಣ ಇವುಗಳನ್ನು ನಾವು ಮಿಲಿಟರಿ ಶಿಬಿರಗಳಲ್ಲಿ ಕಾಣಬಹುದು. ನಾನು ಎಂದೂ ದಂಡಿನ ಅವಶ್ಯಕತೆಯಿದೆಯೆಂಬುದಕ್ಕೆ ಒಪ್ಪಿದವನಲ್ಲ, ಹಾಗೆ ಹೇಳಿದ ಮಾತ್ರದಿಂದ ಅದರಲ್ಲಿ ಏನೂ ಒಳ್ಳೆಯದಿಲ್ಲವೆನ್ನಲಾಗದು. ಅದು ಶಿಸ್ತಿನಲ್ಲಿ ಒಟ್ಟಿಗೆ ಇರುವದು, ಆರೋಗ್ಯವ್ಯವಸ್ಥೆ, ಪ್ರತಿಯೊಂದು ಪ್ರಯೋಜನಕ್ಕೆ ಬರುವ ಕೆಲಸದ ಬಗ್ಗೆ ಸರಿಯಾದ ವೇಳಾಪತ್ರಿಕೆ ಈ ಮೊದಲಾದವುಗಳಲ್ಲಿ ಒಳ್ಳೆಯ ಪಾಠಕಲಿಸುತ್ತದೆ. ಅಂತಹ ಶಿಬಿರಗಳು ಸಂಪೂರ್ಣ ನಿಶ್ಶಬ್ದವಿರುತ್ತವೆ. ಅವೆಂದರೆ ಕೆಲವೇ ಗಂಟೆಗಳಲ್ಲಿ ಬಟ್ಟೆಯಿಂದ ಕಟ್ಟಿದ ಪಟ್ಟಣಗಳೇ ಆಗಿರುತ್ತವೆ. ಈ ಆದರ್ಶವನ್ನು ನಮ್ಮ ನಿರಾಶ್ರಿತರ ಶಿಬಿರಗಳು ಮುಟ್ಟಬೇಕಾಗಿದೆ. ಮಳೆಯಿರಲಿ, ಇಲ್ಲದಿರಲಿ, ಅಲ್ಲಿ ಅನಾನುಕೂಲವಿರುವುಲ್ಲ.

ಈ ಶಿಬಿರಗಳನ್ನು ಏನೂ ಖರ್ಚಿಲ್ಲದೆ ನಡೆಸಬಹುದು. ಹೇಗೆ? ನಿರಾಶ್ರಿತರು ಇಂದು ಸ್ವಯಂ ಆಗಿ ಅಡಿಗೆಯವರು ತಂಪಾಗಿ ..., ರಸ್ತೆ ಮಾಡುವವರು, ಗುಡಿಸುವವರು, ಮುಸುರಿ ತಿಕ್ಕುವವರು ಎನಿಸಿದ್ದಾರೆ. ಹಾಗಿರುವಾಗ ಈ ಬಟ್ಟೆಯ ಪಟ್ಟಣವನ್ನಾದರೂ ಅವರೇ ಕಟ್ಟಬಹುದು. ಯಾವ ಕೆಲಸವೂ ಅವರಿಗೆ ಕೀಳಲ್ಲ. ಶಿಬಿರಕ್ಕೆ ಸಂಬಂಧಿಸಿದ ಯಾವ ಬಗೆಯ ಕೆಲಸವನ್ನಾದರೂ ಮಾಡುವುದೇ ಎಷ್ಟು ... ಅದರಿಂದ ಮೇಲ್ವಿಚಾರಣೆ ಮಾಡುತ್ತಿದ್ದರೆ ನನಗೆ ಬೇಕಾದ, ಅಗತ್ಯವಾದ ಶಾಂತಿಯನ್ನು ... ತರಬಹುದು. ಆಗ ... ದುಃಖವೇ ಬೈಬಿಟ್ಟು ... ಆಗ ಯಾವ ನಿರಾಶ್ರಿತನೂ ಎಲ್ಲಿ ಹೋದರೂ ಯಾರಿಗೂ ಭಾರವೆನಿಸನು. ಅವನು ಎಂದೂ ತನ್ನೊಬ್ಬನ ಸುಖಕ್ಕೆ ಪ್ರಯತ್ನಿಸುವುದಿಲ್ಲ; ತನ್ನ ಸುತ್ತುಮುತ್ತ ಜೊತೆಗೆ ಕಷ್ಟಪಡುವವರ ಇಡೀ ಸಮಾಜವನ್ನೇ ಅವನು ಲಕ್ಷ್ಯದಲ್ಲಿಡುತ್ತಾನೆ; ತನ್ನ ಒಡನಾಡಿಗಳಿಗಿಲ್ಲದ ಯಾವ ಒಡವೆಯೂ ತನಗೆ ಬೇಕೆಂದು ಅವನು ಹೇಳನು. ಇದು ಸುಮ್ಮನೆ ತಲೆಯ ಮೇಲೆ ಕೈಯಿಟ್ಟು ಕುಳಿತುಕೊಳ್ಳುವುದರಿಂದಾಗುವುದಲ್ಲ, ಆಯಾ ಹೊತ್ತಿಗೆ ಸರಿಯಾಗಿ ಕೆಲಸ ಮಾಡಬೇಕು, ಸರಿಯಾದವರ ಸಲಹೆ ಸೂಚನೆ ಮೇಲ್ವಿಚಾರಣೆಯಲ್ಲಿ ಸಾಗಬೇಕು.

ಹಾಸಿಗೆ ಹೊದಿಕೆಗಳು ಬರುತ್ತಲೇ ಇವೆ, ಬಹಳ ಚಳಿಯಿಂದ ನಿರಾಶ್ರಿತರನ್ನು ಉಳಿಸಲು ಸದ್ಯದಲ್ಲೇ ಸಾಧ್ಯವಾಗಬಹುದೆಂದು ಇದರಿಂದ ಈಗ ಹೇಳಬಹುದಾಗಿದೆ.

ಬಿರ್ಲಾ ಭವನ,
ಹೊಸದಿಲ್ಲಿ, ೧೪—೧೦—೪೭

ಉತ್ತಮ ಉದಾಹರಣೆ

"ಇಂದು ಬಹಳ ಹೊದಿಕೆಗಳು ಬಂದಿವೆ. ಆರ್ಯಸಮಾಜದ ಹುಡುಗಿಯರ ಶಾಲೆಯಿಂದ ಇಬ್ಬರು ಶಿಕ್ಷಕರು ಹೊದಿಕೆಗಳನ್ನೂ ಹಣವನ್ನೂ ತಂದೊಪ್ಪಿಸಿದ್ದಾರೆ. ಆದರೆ ಇವೆಲ್ಲಕ್ಕಿಂತ ನನಗೇ ಹೆಚ್ಚು ಸಂತೋಷವನ್ನುಂಟುಮಾಡಿದ್ದೆಂದರೆ ಆಹಾರ ನಿಯಂತ್ರಣಕ್ಕೆ ಸಂಬಂಧಿಸಿದ ನನ್ನ ಹೇಳಿಕೆಯ ಪ್ರಕಾರ ಹೊರಗಿನಿಂದ ತರಿಸುವ ಆಹಾರ ಉಳಿತಾಯ ಮಾಡಬೇಕೆಂದು ಶಿಕ್ಷಕರೂ ಶಿಷ್ಯೆಯರೂ ಪ್ರತಿ ಗುರುವಾರ ಉಪವಾಸ ಮಾಡಲು ನಿಶ್ಚಯಿಸಿರುವರೆಂದು ಒಬ್ಬ ಶಿಕ್ಷಕರು ಹೇಳಿದ್ದು. ಅಲ್ಲದೆ ಅವರು ತಮ್ಮ ಹಿತ್ತಲಲ್ಲಿ ಯಾವು ಯಾವುದನ್ನು ಬೆಳೆಯಲು ಸಾಧ್ಯವೋ ಅವೆಲ್ಲವನ್ನೂ ಬೆಳೆಯುವುದಾಗಿ ಹೇಳಿದ್ದಾರೆ. ಎಲ್ಲರೂ ಈ ಉದಾಹರಣೆಯನ್ನು ಅನುಸರಿಸಿದರೆ ಆಹಾರ ಸಮಸ್ಯೆಯು ಹಾ ಹಾ ಅನ್ನುವಷ್ಟರಲ್ಲಿ ಇಲ್ಲದಂತಾಗಬಹುದು.

ಇರಾಣಿ ಪ್ರತಿನಿಧಿ ಮತ್ತು ಅವರ ಹೆಂಡತಿ ಬಂದು ಬಹಳ ಹೊದಿಕೆಗಳನ್ನು ಕೊಟ್ಟರು ಅವನ್ನು ನಾನು ಕೃತಜ್ಞತೆಯಿಂದ ಸ್ವೀಕರಿಸಿದೆ'.

ಶೀಖ ಗೆಳೆಯನೊಡನೆ ಮಾತುಕತೆ

ಮೇಲಿನ ತಾರೀಖಿನಲ್ಲಿ ಅನೇಕ ಶೀಖ ಗೆಳೆಯರು ಗಾಂಧಿಯವರನ್ನು ಕಾಣಬಂದಿದ್ದರು. ಅವರೊಡನೆ ಬಹಳಹೊತ್ತು ಮಾತುಕತೆ ನಡೆಯಿತು. ಅದರ ಸಾರವೆಂದರೆ, ತಮ್ಮ ತಮ್ಮಲ್ಲಿ ಜಗಳ ಮಾಡುತ್ತ ಹೋದರೆ ಅವರಿಂದೂ ಉದ್ಧಾರವಾಗಲಾರರು, ಏನಾದರೂ ಕೆಲಸವಾಗಬೇಕಾಗಿದ್ದರೆ ಅದು ಸರಕಾರಗಳಿಂದಲೇ ಆಗಬೇಕು

ಸರಕಾರದ ಕಸುವನ್ನು ಕಡಿಮೆ ಮಾಡದಿರಿ

"ಸರಕಾರವು ಕೆಲವು ಜನರನ್ನು ಸೆರೆ ಹಿಡಿದಿದೆ. ಅದರ ವಿರುದ್ಧ ಒಂದು ಚಳವಳಿ ನಡೆದಿದೆ. ಸರಕಾರಕ್ಕೆ ಹಾಗೆ ಮಾಡಲು ಅಧಿಕಾರವಿದೆ. ನಮ್ಮ ಸರಕಾರವೆಂದೂ ನಿರಪರಾಧಿಗಳನ್ನು ಬುದ್ಧಿಪೂರ್ವಕವಾಗಿ ಶಿಕ್ಷಿಸಲಾರದು. ಆದರೆ ತಪ್ಪು ಮಾಡುವುದು ಮಾನವನಿಗೆ ಸಹಜವಾದುದು ಆದುದರಿಂದ ಒಮ್ಮೆ ಅಪ್ಪಿತಪ್ಪಿ ನಿರಪರಾಧಿಗಳು ಶಿಕ್ಷೆಗೆ ಗುರಿಯಾಗಬಹುದು. ಅಂತಹ ತಪ್ಪುಗಳನ್ನು ತಿದ್ದುವುದು ಸರಕಾರದ ಕೆಲಸ. ಪ್ರಜಾ ಪ್ರಭುತ್ವದಲ್ಲಿ ಜನತೆ ಸರಕಾರದ ಲಕ್ಷ್ಯವನ್ನು ತಪ್ಪುಗಳಿದ್ದರೆ ಅವುಗಳತ್ತ ಸೆಳೆದು ತೃಪ್ತವಾಗಬೇಕು. ಅದು ಮನಸ್ಸು ಬಂದರೆ ಸರಕಾರವನ್ನು ಕಿತ್ತು ಹಾಕಬಹುದು. ಆದರೆ ಅದರ ವಿರುದ್ಧ ಚಳವಳಿ ಹೂಡಿ ಅದಕ್ಕೆ ಅಡ್ಡಿಯನ್ನು ತಂದೊಡ್ಡಬಾರದು. ಸಮರ್ಥವಾದ ನೆಲದಳ ಹಾಗೂ ಹಡಗುಪಡೆಯುಳ್ಳ ಪರದೇಶೀಯರ ಸರಕಾರದಂತೆ ನಮ್ಮ ಸರಕಾರವಿಲ್ಲ. ಇದು ಜನಬಲವನ್ನೇ ಆಧರಿಸಿ ನಿಂತಿದೆ.

ನಿಮ್ಮ ತಪ್ಪನ್ನು ಕಂಡುಕೊಳ್ಳಿರಿ

"ನಿಜವಾದ ಶಾಂತಿಯನ್ನು ಹೇಗೆ ನೆಲೆಗೊಳಿಸಲಾದೀತು? ನೀವೆಲ್ಲ ದಿಲ್ಲಿಗೆ ಶಾಂತಿ ಬಂದುಬಿಟ್ಟಿದೆಯೆಂದು ಸಂತೋಷಪಡಬಹುದು. ಆದರೆ ನಾನು ಅದರಲ್ಲಿ ಭಾಗಿಯಾಗಲಾರೆನು. ಹಿಂದು ಮುಸಲ್ಮಾನರು ಒಬ್ಬರಿಂದೊಬ್ಬರು ದೂರ ಮಾಡಲ್ಪಟ್ಟಿದ್ದಾರೆ. ಹಿಂದೆಯೂ ಅವರು ಒಬ್ಬರೊಬ್ಬರೊಡನೆ ಕಾಳಗ ಮಾಡುತ್ತಿದ್ದರು. ಆದರೆ ಅದು ಒಂದೆರಡು ದಿನಗಳವರೆಗೆ ಮಾತ್ರ ಇರುತ್ತಿತ್ತು; ಕಡೆಗೆ ಎಲ್ಲರೂ ಅದನ್ನು ಮರೆತುಬಿಡುತ್ತಿದ್ದರು. ಇಂದು ನಾವು ಬುನಾದಿ ಕಾಲದಿಂದಲೂ ಹಗೆಗಳಾಗಿ ಬಡುತಿದ್ದೇವೆಂದು ತಿಳಿಯುವಷ್ಟು ಅವರ ಬಗ್ಗೆ ಒಬ್ಬರೊಬ್ಬರ ಬಗ್ಗೆ ಕೆಟ್ಟು ಹೋಗಿದೆ, ಕಡೆಗೊಂದಿದೆ ಇದು ಅವರವರೊಳಗಿನ ಕಸು ಕಳೆದುದರ ಕುರುಹು. ಅವನ್ನು ಬಿಟ್ಟು ಬಿಡಬೇಕು ಅನ್ನಲೇ ಅವರು ಒಂದು ದೊಡ್ಡ ಪ್ರಭುತ್ವದವರೆನಿಸಿಕೊಂಡಾರು. ಅವರ ಮುಂದೆ ಎರಡು ದಾರಿಗಳಿವೆ. ಅವರು ಒಂದು ಬಹುದೊಡ್ಡ ಮಿಲಿಟರಿ ಪ್ರಭುತ್ವದವರಾಗಬಹುದು, ಹಾಗಲ್ಲದೆ ನನ್ನ ದಾರಿ ಹಿಡಿದರೆ ಒಂದುದೊಡ್ಡ ಅಹಿಂಸಾತ್ಮಕವೂ ಅಜಯ್ಯವೂ ಆದ ಪ್ರಭುತ್ವದವರಾಗಬಲ್ಲರು. ಎರಡರಲ್ಲಿ ಎಲ್ಲದಕ್ಕೂ ಮೊದಲು ಮಾಡಬೇಕಾದ ಕಾರ್ಯವೆಂದರೆ ಎಲ್ಲ ಹೆದರಿಕೆಯನ್ನೂ ಬಿಟ್ಟುಬಿಡುವುದು.

ಒಬ್ಬರೊಬ್ಬರು ಹತ್ತಿರವಾಗಲು ಒಂದೇ ಒಂದು ಮಾರ್ಗವಿದೆ. ಅಂದರೆ ಒಬ್ಬರು ಇನ್ನೊಬ್ಬರ ತಪ್ಪನ್ನು ಮರೆತು ತಮ್ಮದನ್ನು ಹೆಚ್ಚಾಗಿ ತಿಳಿಯುವುದು. ನನ್ನ ಎಲ್ಲ ಕಸುವಿನಿಂದ ನಾನು ಈ ಮಾತನ್ನು ಮುಸಲ್ಮಾನರಿಗೂ ಹಾಗೂ ಹಿಂದುಗಳಿಗೂ ಒತ್ತಿ ಹೇಳುತ್ತೇನೆ; ನಿನ್ನೆಯ ಹಗೆಗಳು ಇಂದು ಗೆಳೆಯರಾಗಬಹುದು. ಅದಕ್ಕೆ ಅವರು ನೇರವಾಗಿ ತಮ್ಮ ತಪ್ಪನ್ನೊಪ್ಪಿಕೊಳ್ಳಬೇಕು. ಮಾಡಿದ್ದಕ್ಕೆ ಪ್ರತಿಯಾಗಿ ಮಾಡುವುದರಿಂದ ಗೆಳೆತನ ಕೂಡಿಬರದು. ನನ್ನ ಬುದ್ಧಿವಾದವನ್ನು ಬಗೆದಂದು ಅದರಂತೆ ನಡೆದರೆ ನಾನು ದಿಲ್ಲಿಯನ್ನು ಬಿಟ್ಟು ನನ್ನ ಕಾರ್ಯವನ್ನು ನಡೆಸಲು ಪಾಕಿಸ್ತಾನಕ್ಕೆ ತೆರಳಲು ಶಕ್ತನಾದೇನು.

ಬಿರ್ಲಾ ಭವನ, ಹೊಸದಿಲ್ಲಿ,
೧೫-೧೦-೪೭

ಚಿನ್ನದಂಥ ಕೆಲಸಗಳನ್ನು ಕೂಡಿಸಿರಿ

ಪ್ರಾರ್ಥನಾಸ್ಥಳದ? ವಿದ್ಯುಚ್ಛಕ್ತಿ ನಿಂತು ಹೋದುದರಿಂದ ಧ್ವನಿವರ್ಧಕ ಯಂತ್ರವು ನಡೆಯದಾಯಿತು. ಆದುದರಿಂದ ಜನರು ತಮ್ಮ ಹತ್ತಿರಕ್ಕೆ ಬಂದರೆ ಚೆನ್ನಾಗಿ ಮಾತು ಕೇಳಿಸೀತೆಂದು ಅವರಿಗೆ ಗಾಂಧಿಯವರು ಹಾಗೆ ಮಾಡ ಹೇಳಿದರು. ಅನಂತರ ಮಾತಿಗಾರಂಭಿಸಿದರು.:—

"ನನಗೆ ಹೊದಿಕೆ ಮತ್ತು ಅವುಗಳನ್ನು ಕೊಳ್ಳಲು ಹಣ ಇವು ಹೆಚ್ಚು ಹೆಚ್ಚಾಗಿಬಂದು ಮುಟ್ಟುತ್ತಿವೆ. ಒಬ್ಬ ತಂಗಿ ೨ ಸಾವಿರ ರೂಪಾಯಿಗಳಿಗೆ ಒಂದು ಹುಂಡಿಯನ್ನು ಬರೆದು ಕಳುಹಿರುತ್ತಾಳೆ. ಇಬ್ಬರು ಮುಸಲ್ಮಾನ ಗೆಳೆಯರು ಕೂಡ ಕೆಲವು ಹೊದಿಕೆಗಳನ್ನು ಮತ್ತ ಅವುಗಳನ್ನು ಮತ್ತಷ್ಟು ಕೊಳ್ಳಲು ಹಣವನ್ನು ಕಳುಹಿದ್ದಾರೆ. ಅವರೇ ಅವನ್ನಿಟ್ಟುಕೊಂಡು ಹಂಚುವರಕೆ ನಾನು ಅವರಿಗೆ ಹೇಳಿದೆ ಆದರೆ ನಾನೇ ಅವನ್ನು ತೆಗೆದುಕೊಂಡು ಹಿಂದು ಮತ್ತು ಶೀಖ ನಿರಾಶ್ರಿತರಿಗೆ ಹಂಚಬೇಕೆಂಬುದಾಗಿ ನಾವು ಶಪಥ ಮಾಡಿರುವುದಾಗಿ ಅವರು ಹೇಳಿದರು. ನಾನು ತಪ್ಪುಗಾರನೆಂದು ಒಮ್ಮೆ ಅವರಿಗನಿಸಿತ್ತಂತೆ. ಆದರೆ ಈಗ ಅವರಿಗೆ ನಾನು ಎಲ್ಲರ ಗೆಳೆಯನೆಂದೂ ಯಾರಿಗೂ ಹಗೆಯಲ್ಲವೆಂದೂ ತಿಳಿಯಿತೆಂದರು. ಪರಸ್ಪರ ಅಪನಂಬಿಗೆ ಮತ್ತು ಕಡುಹಗೆಯಿರುವ ಈ ಹೊತ್ತಿನಲ್ಲಿ ಅಂತಹ ಕಾರ್ಯಗಳು ಬಹಳ ಸೊಗಸಾಗಿ ಕಾಣುತ್ತವೆ. "ಚಿನ್ನದಂಥ ಕೆಲಸಗಳ ಹೊತ್ತಿಗೆ" ಎಂಬ ಒಂದು ಇಂಗ್ಲೀಷು ಪುಸ್ತಕವಿತ್ತು ಅವರು ಅಂತಹದನ್ನಿಟ್ಟುಕೊಂಡಿರಬೇಕು, ಒಳ್ಳೆಯದನ್ನು ಮಾಡಿದ್ದಕ್ಕೆ ಇನ್ನೊಬ್ಬರಿಗೆ ಯಾರೂ ದುರುದ್ದೇಶ ಹಚ್ಚಬಾರದು. ಆ ಇಬ್ಬರು ಮುಸಲ್ಮಾನ ಗೆಳೆಯರೇ ನನಗೆ ತಮ್ಮ ಹೆಸರನ್ನು ಕೂಡ ಕೊಟ್ಟಿಲ್ಲ. ಪ್ರತಿಯೊಬ್ಬ ಶೀಖ ಮತ್ತು ಮುಸಲ್ಮಾನನು ಪರಸ್ಪರ ಹಗೆಯೆಂದು ತಿಳಿದುಕೊಂಡಿರುವುದಾಗಿ ಹೇಳಿಕೆಯಿದೆ. ಬಹಳ ಜನ ಹಿಂದು ಶೀಖರಂತೆ ಬಹಳ ಮುಸಲ್ಮಾನರೂ ತಮ್ಮ ಬುದ್ಧಿಯನ್ನು ಕಳೆದುಕೊಂಡಿದ್ದಾರೆ. ಆದರೆ ಕೆಲವರ ತಪ್ಪಿಗಾಗಿ 'ಅವು ಎಷ್ಟೇ ಇರಲಿ' ಎಲ್ಲರನ್ನೂ ಹೀಗಳೆವುದು ತಪ್ಪು. ಬಹಳ ಜನ ಹಿಂದು ಶೀಖರು ಮುಸಲ್ಮಾನ ಗೆಳೆಯರಿಂದ ತಮ್ಮ ಜೀವ ಉಳಿಯಿತೆಂದೂ ಹಾಗೇ ಬಹಳ ಜನ ಮುಸಲ್ಮಾನರು ತಮ್ಮ ಹಿಂದು ಶೀಖ ಗೆಳೆಯರಿಂದಲೇ ಜೀವ ಉಳಿಯಿತೆಂದೂ ಹೇಳಿದ್ದಾರೆ. ಅಂತಹ ಒಳ್ಳೆಯ ಹಿಂದು, ಶೀಖ, ಮುಸಲ್ಮಾನರು ಪ್ರತಿಯೊಂದು ಪ್ರಾಂತದಲ್ಲೂ ಸಿಕ್ಕುತ್ತಾರೆ. ವೃತ್ತ ಪತ್ರಿಕೆಗಳು ಅಂತಹ ಒಳ್ಳೆಯತನದ ಸುದ್ದಿಗಳನ್ನೇ ಪ್ರಕಟಿಸಿ ಪ್ರತೀಕಾರ ಬುದ್ಧಿಯನ್ನು ಕೆರಳಿಸುವ ಕೇಡಿಗತನದ ಸುದ್ದಿಗಳನ್ನು ಬಯಲಿಗೆಳೆಯದಿದ್ದರೆ ಎಷ್ಟು ಚೆನ್ನಾಗಿ ಇರುತ್ತಿತ್ತು! ಒಳ್ಳೆಯವತ್ತ ಧಾರಾಳತನದ ಕೆಲಸಗಳನ್ನು ಬಣ್ಣಿಸುವಲ್ಲಿ ಅತಿಶಯವಿರಬಾರದೆಂಬುದೇನೋ ನಿಜ.

ಹಿಂದಿ ಮತ್ತು ಹಿಂದುಸ್ತಾನಿ

"ಸಂಯುಕ್ತ ಪ್ರಾಂತದ ಸರಕಾರೀ ಭಾಷೆಯು ದೇವನಾಗರಿ ಲಿಪಿಯಲ್ಲಿ ಬರೆದ ಹಿಂದಿಯಾಗುವುದೆಂದು ಪತ್ರಿಕೆಗಳಲ್ಲಿ ಓದಿದೆ. ಅದರಿಂದ ನನಗೆ ಉಮ್ಮಳ ಉಂಟಾಯಿತು. ಹಿಂದೀ ಒಕ್ಕೂಟದಲ್ಲಿಯ ಮುಸಲ್ಮಾನರಲ್ಲಿ ನಾಲ್ಕನೆಯ ಒಂದರಷ್ಟು ಜನರು ಸಂಯುಕ್ತ ಪ್ರಾಂತದಲ್ಲಿದ್ದಾರೆ. ಅಲ್ಲಿ ಸರ್. ತೇಜ್ ಬಹದ್ದೂರ್ ಸಪ್ರುರವರಂತಹ ಅನೇಕ ... ಅವರು ಉರ್ದು ಲಿಪಿಯನ್ನು ಮರೆತು ಬಿಡಬೇಕೆ? ಸರಿಯಾದ ಮಾರ್ಗವೆಂದರೆ ಎರಡೂ ಲಿಪಿಯನ್ನಿಟ್ಟುಕೊಂಡು ಸರಕಾರೀ ವ್ಯವಹಾರದಲ್ಲಿ ಬಳಸುವುದು. ಇದರಿಂದ ಪ್ರತಿಯೊಬ್ಬನೂ ಎರಡೂ ಲಿಪಿಗಳನ್ನು ಕಲಿಯಲೇಬೇಕಾಗುತ್ತದೆ. ಆಗ ಭಾಷೆ ತನ್ನಂತೆ ತಾನೇ ಬೆಳೆದು ಹಿಂದುಸ್ತಾನಿಯೆ ಪ್ರಾಂತ ಭಾಷೆ ಆಗುವುದು. ಈ ಎರಡು ಲಿಪಿಗಳ ಜ್ಞಾನವು ವ್ಯರ್ಥವಾಗುವದಿಲ್ಲ. ಅದು ಅವರನ್ನು ಅವರ ಭಾಷೆಯನ್ನು ಬೆಳೆಸುತ್ತದೆ. ಯಾರೂ ಅಂತಹ ಪ್ರಯತ್ನಕ್ಕೆ ಅಡ್ಡಿಯೊಡ್ಡಬಾರದು.

ಮುಸಲ್ಮಾನರನ್ನು ನಿಮ್ಮ ಸರಿಸಮಾನ ನಾಗರಿಕರೆಂದು ಗಣಿಸಬೇಕು. ಸಮಾನತೆಯಿಂದ ನಡೆಸಿಕೊಳ್ಳಬೇಕಾದರೆ ನೀವು ಉರ್ದು ಲಿಪಿಗೆ ಮನ್ನಣೆ ಕೊಡಬೇಕು. ಮರ್ಯಾದೆಯಿಂದ ಮುಸಲ್ಮಾನರು ಬಾಳಲಾರದಂತೆ ಮಾಡಿ ನೀವು ಅವರಿಗೆ ಹೋಗಿರೆಂದು ನಾವು ಹೇಳಿಲ್ಲವೆನ್ನಬಾರದು. ಸಮಾನತೆಯಿಂದ ನಡೆಸಿಕೊಂಡಾಗಲೂ ಅವರು ಪಾಕಿಸ್ತಾನಕ್ಕೆ ಹೋಗಲೆಳಸಿದರೆ ಅದಕ್ಕೆ ಅವರು ಹೊಣೆ: ನಿಮ್ಮ ನಡತೆಯಲ್ಲಿ ಮುಸಲ್ಮಾನರನ್ನು ಅಂಜಿಸುವ ಯಾವ ಅಂಶವೂ ಇರಕೂಡದು. ನೀವು ನಿಮ್ಮ ನಡತೆಯನ್ನು ಸರಿಯಾಗಿಟ್ಟುಕೊಂಡಿರಬೇಕು. ಆಗ ಅವರು ಭಾರತಕ್ಕೆ ಹಿಂದು ಧರ್ಮಕ್ಕೆ ಸೇವೆ ಸಲ್ಲಿಸುತ್ತಾರೆ. ನೀವು ಅವರನ್ನು ಕೊಲ್ಲುವುದರಿಂದ, ಹೊಡೆದಟ್ಟುವುದರಿಂದ ಇಲ್ಲವೆ ಕಷ್ಟಕ್ಕೆ ಗುರಿಪಡಿಸುವುದರಿಂದ ಅವರ ಸೇವೆಯನ್ನು ತೆಗೆದು ಕೊಳ್ಳಲಾರಿರಿ. ಪಾಕಿಸ್ತಾನದಲ್ಲಿ ಏನಾಯಿತೆಂಬುದನ್ನು ಲಕ್ಷಕ್ಕೆ ತರದೆ ಸರಿಯಾದುದನ್ನು ಮಾಡಬೇಕು.

ಬಿರ್ಲಾ ಭವನ, ಹೊಸದಿಲ್ಲಿ,
೧೬-೧೦-೪೭

ಒಳ್ಳೆಯ ನಡೆ

ಪ್ರಾರ್ಥನಾ ಸಭೆ ಇಂದು ಖಾಸಗಿ ಮನೆಯೊಂದರಲ್ಲಿ ನೆರವಿತ್ತು. ಅದರ ವಿಚಾರವಾಗಿ ಗಾಂಧಿಯವರು ಹೀಗೆಂದರು.

"ನಮ್ಮೆಲ್ಲರನ್ನು ತಮ್ಮ ಅಂಗಳದೊಳಗೆ ಬಿಟ್ಟದ್ದಕ್ಕಾಗಿ ನಾವೆಲ್ಲರೂ ಬಿರ್ಲಾ ಸಹೋದರರಿಗೆ ಕೃತಜ್ಞರಾಗಿರಬೇಕು. ಕೆಲ ನೋಟಕರು ತೋಟವನ್ನು ಹಾಳುಮಾಡಿ ಒಡೆಯರ ಅಪ್ಪಣೆಯಿಲ್ಲದೆ ಮರಗಳಿಂದ ಹಣ್ಣುಗಳನ್ನು ಕಿತ್ತುಕೊಂಡುದು ನನಗೆ ಕೆಡುಕೆನಿಸಿತು. ಅಪ್ಪಣೆಯಿಲ್ಲದೆ ಒಂದು ಎಲೆಯನ್ನು ಕೂಡ ಯಾರೂ ಕೊಯ್ಯಬಾರದು. ಯಾರೂ ತಮ್ಮ ಬೇಗುಂದಿಯಲ್ಲಿ ಒಳ್ಳೆಯ ನಡತೆಯ ಸಾಮಾನ್ಯ ನಿಯಮಗಳನ್ನು ಮರೆತುಬಿಡಬಾರದು.

ನೋಕರರಿಂದ ಬಯಸುವುದು

"ಸರಕಾರೀ ನೋಕರರಾದ ಸಿವಿಲ ಸರ್ವಿಸ್ಸಿನವರಿಗೆ, ಪೋಲೀಸಿನವರಿಗೆ, ಮಿಲಿಟರಿಯವರಿಗೆ ಅವರ ಯೋಗ್ಯತೆಗೆ ಮಿಕ್ಕಿದ ಶಿಫಾರಸು ಕೊಟ್ಟಿದ್ದೇನೆಂದು ನನ್ನ ಮೇಲೆ ದೂರು ಬಂದಿದೆ. ನಾನು ಹಾಗೆ ಮಾಡಿಲ್ಲ. ನಾನು ಅವರಿಂದ ನಾಡು ಎಂತಹ ಸೇವೆಯನ್ನು ಬಯಸುವುದೆಂಬುದನ್ನಷ್ಟೆ ಹೇಳಿದ್ದೆ. ಅದರಿಂದ ಅವರು ಆ ಬಯಕೆಯನ್ನು ಪೂರಯಿಸಿದ್ದಾರೆಂದು ಆಗುವುದಿಲ್ಲ. ಸಿವಿಲ್ ಸರ್ವೀಸಿನವರು, ಪೋಲೀಸರು ಮಿಲಿಟರಿಯವರು ಮತ್ತು ಬ್ರಿಟಿಶ ನೋಕರರು ಈ ಎಲ್ಲರೂ ಜನರ ಸೇವಕರು. ಅವರು ಪರಕೀಯ ಆಡಳಿತಗಾರರ ಉಪ್ಪು ತಿಂದು ಯಜಮಾನಿಕೆ ನಡೆಸಿದ ಕಾಲ ಕಳೆದುಹೋಗಿದೆ. ಅವರು ಇಂದು ಈ ಪಂಚಾಯತ ರಾಜ್ಯದ ನಿಷ್ಠ ಸೇವಕರಾಗಿರಬೇಕು. ಅವರು ಮಂತ್ರಿಗಳ ಅಪ್ಪಣೆಯನ್ನು ಪಾಲಿಸಬೇಕು. ಅವರು ಲಂಚದ ಬಯಕೆ ಹಾಗೂ ಪಕ್ಷಪಾತತನಗಳನ್ನು ಮೀರಿರಬೇಕು. ಅಲ್ಲದೆ, ಆಡಳಿತದಲ್ಲಿ ಜನರು ಅವರಿಗೆ ಸಂಪೂರ್ಣ ಸಹಕಾರ ಕೊಡಬೇಕು. ನೋಕರರು ಕರ್ತವ್ಯಭ್ರಷ್ಟರಾದರೆ ಅಪ್ರಾಮಾಣಿಕತೆಯ ಅಪಾದನೆ ಅವರ ಮೇಲೆ ಬರುತ್ತದೆ. ಮತ್ತು ಸನ್ನಿವೇಶವನ್ನು ಸರಿಪಡಿಸಲು ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುವುದು. ನೋಕರಿಯಲ್ಲಿರುವ ವಂಚಕರ ವಿರುದ್ಧ ತಮ್ಮ ಕಷ್ಟನಿಷ್ಠುರಗಳನ್ನು ಹೇಳಿಕೊಳ್ಳಲು ಜನರಿಗೆ ಹಕ್ಕಿದ್ದೇ ಇದೆ.

ಪೂರ್ವಪಾಕಿಸ್ತಾನದ ಅಲ್ಪಸಂಖ್ಯಾಕರು

"ಪೂರ್ವಪಾಕಿಸ್ತಾನದಿಂದ ಕೆಲ ಜನರು ನನ್ನೆಡೆಗೆ ಬಂದಿದ್ದರು. ಬಹಳ ಜನ ಹಿಂದುಗಳು ಪೂರ್ವ ಬಂಗಾಲವನ್ನು ಬಿಡುತ್ತಿದ್ದಾರೆ. ಅವರು ಈ ವಿಷಯದಲ್ಲಿ ನನ್ನ ಸಲಹೆ ಕೇಳಿದರು. ನಾನು ಆ ಬಗ್ಗೆ ಪದೇ ಪದೇ ಬೇಕಾದಷ್ಟು ಹೇಳಿದ್ದೇನೆ. ಅದನ್ನೇ ಈಗ ಮತ್ತೆ ಹೇಳಬೇಕಾಗುತ್ತದೆ; ಅಷ್ಟೆ. ಹೆದರಿಕೆಗೆ ಬೆಚ್ಚಿ ಮನೆ ಬಿಟ್ಟು ಹೊರಡುವುದು ಧೀರರಿಗೆ ತಕ್ಕದಲ್ಲ. ಅವಮಾನ

ಗಾಂಧಿಯವರ ಪ್ರಾರ್ಥನೋತ್ತರ ಭಾಷಣಗಳು

(೧೨ ನೇ ಪುಟದಿಂದ)

ಇಲ್ಲವೆ ಆತ್ಮಗೌರವನಾಶವನ್ನು ಎದುರಿಸುವ ಬದಲು ಅವರು ಅಲ್ಲೇ ಇದ್ದು ಸಾವನ್ನು ಎದುರಿಸಬೇಕು. ದೇವರಿಗಲ್ಲದೆ ಅವರು ಮತ್ತಾರಿಗೂ ಅಂಜಬಾರದು. ಅವರು ತಮ್ಮ ಧರ್ಮಗೌರವ ನಾಗರಿಕ ಹಕ್ಕುಗಳು ಮತ್ತು ತಮ್ಮ ಜೀವಗಳನ್ನು ಕಾಯ್ದುಕೊಳ್ಳಬೇಕು. ಅವರಿಗೆ ಈ ಧೈರ್ಯವಿಲ್ಲದಿದ್ದರೆ ಹೊರಟು ಹೋಗುವುದೇ ಮೇಲು. ಪೂರ್ವಬಂಗಾಲವನ್ನು ಬಿಡುವುದನ್ನೇ ಅವರು ನಿಶ್ಚಯಿಸಿದರೆ ಹಿಂದುಗಳಲ್ಲಿ ಮೇಲಿನ ವರ್ಗಕ್ಕೆ ಸೇರಿದ ವೈದ್ಯರು, ವಕೀಲರು, ವ್ಯಾಪಾರಿಗಳು ಮುಂತಾದವರು ಬಡ ಹಿಂದುಳಿದವರು ಮೊದಲು ಹೊರಡುವಂತೆ ನೋಡಿಕೊಳ್ಳಬೇಕು. ಅವರು ಮೊದಲಲ್ಲ, ಕಡೆಗೆ ಹೊರಟು ಬರಬೇಕು. ನಾನು ಒಂದೇ ಕಾಲದಲ್ಲಿ ಎಲ್ಲ ಕಡೆಗೂ ಇರಲಾರೆ. ಆದರೆ ನನ್ನ ದನಿ ಎಲ್ಲರಿಗೂ ಕೇಳಿಸುವಂತೆ ಮಾಡಬಲ್ಲೆ!"

ಮೇಲಿನ ಮಾತು ಮುಗಿಯುವಷ್ಟರಲ್ಲಿ ಕೆಲವರು ಹಿಂದುಳಿದವರಿಗೂ ತಮ್ಮ ಧರ್ಮವನ್ನು ಹಾಗು ಮಾನವನ್ನು ಕಾಯುವದರ ಸಲುವಾಗಿ ಅಲ್ಲೇ ಇದ್ದು ಮಡಿವಂತೆ ಬಿನ್ನವಿಸಿಕೊಳ್ಳಲು ಡಾ. ಅಂಬೇಡಕರರಿಗೆ ಕೇಳಿಕೊಳ್ಳಬೇಕೆಂದರು. ಗಾಂಧಿಯವರು ಹಾಗೆಯೇ ಆಗಬಹುದು ಸಭೆಯಲ್ಲೇ ಅರಿತ ಬಿನ್ನಹ ಮಾಡುತೇನೆಂದರು.

ತಮ್ಮೆದುರಿಗಿರುವ ಕಷ್ಟದ ಕೆಲಸವನ್ನು ಮಾಡುವಲ್ಲಿ ಖ್ವಾಜಾಸಾಹೇಬರಿಗೆ ನೆರವೀಯಲು ಬಂಗಾಲಕ್ಕೆ ಹೋಗಿರೆಂದು ಸುಹ್ರವರ್ದಿ ಸಾಹೇಬರಿಗೆ ಹೇಳಬೇಕೆಂದು ಕೆಲವರು ಗೆಳೆಯರು ಗಾಂಧಿಯವರಿಗೆ ಬಿನ್ನವಿಸಿದರು. ಸುಹ್ರವರ್ದಿ ಸಾಹೇಬರು ಈಗ ದಿಲ್ಲಿಯಲ್ಲಿಲ್ಲ. ಆದರೆ ಹಿಂದಿರುಗಿದೊಡನೆ ಸುಹ್ರವರ್ದಿಯವರು ಬಂಗಾಲಕ್ಕೆ ಹೋಗುವರೆಂಬುದರಲ್ಲಿ ತಮಗೆ ಸಂಶಯವಿಲ್ಲವೆಂದು ಗಾಂಧಿಯವರೆಂದರು. ಅಲ್ಪ ಸಂಖ್ಯಾಕರಿಗೆ ನಂಬಿಗೆ ಹುಟ್ಟುವಂಥ ವಾತಾವರಣವನ್ನು ಕಲ್ಪಿಸುವದು ಮುಸಲ್ಮಾನ ಮುಖಂಡರ ಕರ್ತವ್ಯ. ಶಾಂತಿಗಾಗಿ ದುಡಿಯುವದು ಸಂಬಂಧಪಟ್ಟ ಎಲ್ಲರಿಗೂ ಬೇಕಾದದ್ದು. ಪಾಕಿಸ್ತಾನವು ಕೇವಲ ಮುಸಲ್ಮಾನ ರಾಜ್ಯವಾದರೆ, ಹಿಂದುಸ್ತಾನವು ಕೇವಲ ಹಿಂದು-ಸಿಖ ರಾಜ್ಯವಾದರೆ, ಅಲ್ಲೆಲ್ಲೂ ಅಲ್ಪಸಂಖ್ಯಾಕರಿಗೆ ಯಾವ ಹಕ್ಕುಗಳೂ ಇಲ್ಲವಾದರೆ ಎರಡೂ ರಾಜ್ಯಗಳಿಗೆ ಕೇಡು ಉಂಟಾಗದಿರದೆಂಬುದು ಖಂಡಿತ. ಈ ಗಂಡಾಂತರದಿಂದ ದೂರವಿರುವಂತೆ ಆ ಎರಡೂ ಸರಕಾರದವರಿಗೆ ಬುದ್ಧಿಯನ್ನು ಕೊಡೆಂದು ದೇವರನ್ನು ಗಾಂಧಿಯವರು ಪ್ರಾರ್ಥಿಸಿದರು.

ಬಿರ್ಲಾ ಭವನ ಹೊಸದಿಲ್ಲಿ

೧೭-೧೦-೪೭

ರಾಜಮದ್ದು

" ನನಗೆ ಮೇಲಿಂದ ಮೇಲೆ ಬರುತ್ತಿರುವ ಕೆಮ್ಮಿನ ವಿಷಯದಲ್ಲಿ ಗಾಬರಿಯನ್ನು ತೋರ್ಪಡಿಸುವ ಕಾಗದಗಳು ನನ್ನ ಗೆಳೆಯರಿಂದ ಬಂದಿವೆ. ನಾನು ಬಯಲಿನಲ್ಲಿ ನಿಂತು ಭಾಷಣವನ್ನು ಬಿತ್ತರಿಸಬೇಕಾದುದರಿಂದ ಕೆಮ್ಮು ಹಿಡಿದಿದೆ. ಕಳೆದ ನಾಲ್ಕು ದಿನಗಳಿಂದ ಒಟ್ಟಿಗೆ ಕೆಮ್ಮು ಅಷ್ಟೇನೂ ತೊಂದರೆ ಕೊಡುತ್ತಿಲ್ಲ. ಅದು ಬೇಗನೆ ಸಂಪೂರ್ಣವಾಗಿ ವಾಸಿ ಮಾದೀತೆಂದು ನನ್ನ ಭರವಸೆ. ಮದ್ದನ್ನು ತೆಗೆದುಕೊಳ್ಳುವುದೇ ಇಲ್ಲ ವೆಂದದ್ದೇ ನನ್ನ ಕೆಮ್ಮು ಹೆಚ್ಚಾದುದಕ್ಕೆ ಕಾರಣ. ಪೆನ್ಸಿಲಿನ್ ತೆಗೆದುಕೊಂಡಿದ್ದರೆ ಮೂರೇ ದಿನಗಳಲ್ಲಿ ಗುಣಹೊಂದಬಹುದಾಗಿತ್ತೆಂದು ಡಾ. ಸುಶೀಲಾನಯ್ಯರಳನ್ನು ತ್ತಾರೆ ಅಲ್ಲದಿದ್ದರೆ ಅದರಿಂದ ಗುಣ ಹೊಂದಲು ನನಗೆ ಮೂರು ವಾರಗಳು ಹಿಡಿಯ ಬಹುದಂತೆ. ಪೆನ್ಸಿಲಿನನ್ನು ತೆಗೆದುಕೊಳ್ಳುವುದು ವ್ಯರ್ಥವೆಂದು ನಾನು ಹೇಳುವುದಿಲ್ಲ. ಆದರೆ ರಾಮನಾಮವೆಂಬುದು ಎಲ್ಲ ಕಾಹಿಲೆಗಳಿಗೂ ರಾಜ ಮದ್ದೆಂದು ನನ್ನ ನಂಬಿಗೆ;ಅದುದರಿಂದ ಅದು ಎಲ್ಲಕೂ ಹೆಚ್ಚು ನಡೆನಿಸುತ್ತದೆ. ನನ್ನನ್ನು ಕವಿದಿರುವ ಉರಿಯ ನಡುವೆ ದೇವರಲ್ಲಿ ಉರಿಯುವ ನಂಬಿಗೆಇರಬೇಕಾದ್ದು ಇನ್ನೂ ಹೆಚ್ಚು. ಅವಶ್ಯ ಆ ದೇವರೊಬ್ಬನೆ ಬೆಂಕಿಯನ್ನು ನಂದಿಸಲು ಜನರಿಗೆ ಕಸುವನ್ನು ಕೊಡಬಲ್ಲನು ಆತನಿಗೆ ನನ್ನಿಂದ ಕೆಲಸತಕ್ಕೊಳ್ಳಬೇಕೆಂದಿದ್ದರೆ ನನ್ನನ್ನು ಜೀವಂತ ಇಡುವದು, ಇಲ್ಲದಿದ್ದರೆ ನನ್ನನ್ನು ಹೊತ್ತುಕೊಂಡು ಹೋಗುವನು

" ಈಗ ತಾನೆ ನೀವು ಹಾಡಿದ ಭಜನೆಯಲ್ಲಿ ರಾಮನಾಮಕ್ಕೆ ಅಂಟಿಕೊಳ್ಳಿರುವಿಕೆಯ ಅರ್ಥಯಿಂದ ಅರಿಕೆ ಮಾಡಿರುವದನ್ನು ನೀವು ಕೇಳಿದ್ದಿರಿ

ಹೊದಿಕೆಗಳು

ಬೆಚ್ಚನೆಯ ಹೊದಿಕೆಗಳು ಬರುತ್ತಿರುವ ಪ್ರಮಾಣದ ಬಗ್ಗೆ ಅವರು (ಗಾಂಧೀಜಿ) ತುಂಬ ಮೆಚ್ಚಿಗೆ ತೋರ್ಪಡಿಸಿದರು. ಅವುಗಳ ಕೊರತೆ ಇದ್ದವರಿಗೆ ಅವನ್ನು ಬೇಗ ಹಂಚಲಾಗುವದು.

ನಿಯಂತ್ರಣಗಳನ್ನು ತೆಗೆದೊಗೆಯಬೇಕು

ಡಾ. ರಾಜೇಂದ್ರ ಪ್ರಸಾದರಿಂದ ನಿಯೋಜಿತವಾದ ಸಮಿತಿಯ ತನ್ನ ವಿಚಾರ ವಿನಿಮಯ ಮುಗಿಸಿದೆ. ಅಹಾರ ನಿಯಂತ್ರಣವನ್ನು ಮಾತ್ರ ಆ ಸಮಿತಿ ಚರ್ಚಿಸತಕ್ಕದಿತ್ತು, ಆದರೆ ಅವರು (ಗಾಂಧೀಜಿ) ಕೆಲ ದಿನಗಳಹಿಂದೆ, ಊಟ ಉಡುಗೆಯ ಮೇಲಿನ ನಿಯಂತ್ರಣ ಕೂಡಲೇ ಹೊರಟು ಹೋಗಬೇಕೆಂದು ಅಭಿಪ್ರಾಯ ಪಟ್ಟಿದ್ದರು. ಯುದ್ಧ ಮುಗಿದಿದ್ದರೂ ಬೆಲೆಗಳು ಏರುತ್ತಲೇ ಇವೆ. ದೇಶದಲ್ಲಿ ಅಹಾರವಿದೆ ವಸ್ತ್ರವೂ ಉಂಟು; ಆದರೆ ಜನತೆಗೆ ಅವು ಸಿಕ್ಕುತ್ತಿಲ್ಲ. ಇದು ತುಂಬ ಶೋಚನೀಯ ಸರಕಾರವು ಜನತೆಯನ್ನು ಕೈತುತ್ತಿನಿಂದ ಪೋಷಿಸ ಹೊರಟಿದೆ. ಹೀಗೆ ಮಾಡುವದಕ್ಕಿಂತ ಅವರವರ ಪಾಡಿಗೆ ಜನತೆಯನ್ನು ಬಿಟ್ಟುಕೊಡುವದು ಲೇಸು. ಸಿವಿಲ್ ಸರ್ವಿಸಿನ ಅಧಿಕಾರಿಗಳು ತಮ್ಮ ಕಚೇರಿಯಲ್ಲಿ ಕುಳಿತು ಕೇವಲ ಕಾಗದ ಪತ್ರಗಳ ಮುಖ ಮುದ್ದೆಗಳನ್ನು ನೋಡಿ ನೋಡಿ ಜನಸಾಮಾನ್ಯರನ್ನು ಗುರುತಿಸ ಬಹುದೆ? ಅದರೊಡನೆ ಸಂಪರ್ಕ ಬೆಳೆಸಬಲ್ಲರೆ? ಅದೊಂದು ಸಾಧ್ಯವಿಲ್ಲ. ಅವರಿಂದೂ ಜನತೆಯನ್ನು ಅರಿಯಲಿಲ್ಲ. ಜನತೆಯಲ್ಲಾದ ಪರಿವರ್ತನವನ್ನು ಅಧಿಕಾರಿಗಳು ವಿನಮ್ರಭಾವದಿಂದ ಅರಿತುಕೊಳ್ಳಬೇಕು. ಜನತೆಯ ಕರ್ತೃತ್ವಶಕ್ತಿಯನ್ನು ನಿಯಂತ್ರಣಗಳು ಹತ್ತಿಕ್ಕುವವು. ಅವರನ್ನು ಅವರ ಕಾಲಮೇಲೆ ನಿಲ್ಲಗೊಡಬೇಕು. ಪ್ರಜಾಸತ್ತೆಯು ಜನತೆಯನ್ನು ಅಸಹಾಯರನ್ನಾಗಿ ಮಾಡುವಲ್ಲಿ ಮುಕ್ತಾಯವಾಗಬಾರದು. ನಿಯಂತ್ರಣಗಳನ್ನು ತೆಗೆದರೆ ಪರಿಸ್ಥಿತಿಯು ತುಂಬ ಹದಗೆಡುವದೆಂದೇ ಇಟ್ಟುಕೊಳ್ಳುವಾ. ಹಾಗಾಗುವದಿದ್ದಲ್ಲಿ ಅದನ್ನು ತಪ್ಪಿಸುವದೂ ಸಾಧ್ಯವಿಲ್ಲ. ಪರಿಸ್ಥಿತಿ ಹದಗೆಡುವ ಬದಲು ಸುಧಾರಿಸುವದೆಂದೇ ಗಾಂಧೀಜಿಯವರ ಅಭಿಮತ. ಜನರು ಅತನವನನಗಳ ತೊಡಕನ್ನು ಬಿಡಿಸಿಕೊಳ್ಳ ಹತ್ತುತ್ತಾರೆ ಮತ್ತು ಈ ಮೂಲಕ ತಮ್ಮ ತಮ್ಮೊಡನೆ ಬಡಿದಾಡಲು ಅವರಿಗೆ ಸಮಯ ಸಹ ಸಿಕ್ಕದೆ ಹೋಗುವದು.

ದ. ಆಫ್ರಿಕೆಯಲ್ಲಿ ಸತ್ಯಾಗ್ರಹ

ದ. ಆಫ್ರಿಕೆಯಲ್ಲಿಯ ಸತ್ಯಾಗ್ರಹದ ಬಗ್ಗೆ ಅವರು ವ್ಯಕ್ತಪಡಿಸಿದ ಅಭಿಪ್ರಾಯದಕ್ಕಾಗಿ ಗಾಂಧೀಜಿಯವರನ್ನು ಅಭಿನಂದಿಸಿ ಒಂದು ತಂತಿ ಬಂದಿತ್ತು. ಸತ್ಯವಾಗಿ ತೋರಿದುದನ್ನೆ ಅವರು ವ್ಯಕ್ತಪಡಿಸಿದ್ದರು. ಸತ್ಯಾಗ್ರಹದಲ್ಲಿ ಸೋಲೆಂಬುದೇ ಇಲ್ಲ, ಬೆನ್ನು ತೋರಿಸುವ ಮಾತೇ ಇಲ್ಲ. ಅವರು ದಿವಂಗತ ಪಂ. ರಾಮಭಜದತ್ತರ ಕವಿತೆಗಳ ಮೊದಲನೆಯ ಚರಣವನ್ನು ಉದ್ಧರಿಸಿದರು.

"ಸೋಲನ್ನೊಪ್ಪುವದಕಿಂತ ಸಾವನಪ್ಪುವದು ಲೇಸು" ಪಂಜಾಬದ ದಂಡಿನಾಳಿಕೆಯ ಕಾಲಕ್ಕೆ ಜನತೆ ಕಲ್ಪನಾತೀತ ಹಿಂಸೆಗೆ ಗುರಿಯಾದಾಗ ಕವಿಯು ಆ ಚರಣಗಳನ್ನು ಬರೆದಿದ್ದನು. ಆದರೆ ಆ ಸಾಲು ಸರ್ವಕಾಲಕ್ಕೂ ಅನ್ವಯಿಸುವಂತಹವು. ಸತ್ಯವಾದ ನ್ಯಾಯವಾದ ಕಾರಣ ಪೊಂದಿದ್ದರಾಯಿತು ಬೆರಳಮೇಲೆ ಎಣಿಸುವಷ್ಟು ಸತ್ಯಾಗ್ರಹಿಗಳಾದರೂ ಸರಿ; ಹಿಂದುಸ್ತಾನದ ಸನ್ಮಾನ ಸಂರಕ್ಷಣೆಗೆ ಸಾಕಾದೀತು.

ಗಾಂಧೀಜಿಯವರಿಗೆ ಅವರು ಧನಸಹಾಯದ ಬಗ್ಗೆ ಬೇಡಿಕೊಂಡಿದ್ದರು. ದ. ಅಫ್ರಿಕೆಯಲ್ಲಿದ್ದ ಭಾರತೀಯರು ಬಡವರೇನಲ್ಲ. ಆದರೆ ಹಲಕೆಲವು ಸತ್ಯಾಗ್ರಹಿಗಳ ಕೊರತೆಗಳ ಕಲ್ಪನೆ ಅವರಿಗುಂಟು. ಹಿಂದುಸ್ತಾನವು ಇಂದು ಆರ್ಥಿಕ ಗಂಡಾಂತರದಲ್ಲಿ ಸಿಲುಕಿಕೊಂಡಿದೆ. ಭ್ರಾತೃಹತ್ಯವೂ ಗುಳೆ ಎತ್ತಿ ಹೋಗುವದೂ ಕೋಟ್ಯಾವಧಿ ರೂಪಾಯಿಯ ವೆಚ್ಚಕ್ಕೂ ಹಾನಿಗೂ ಕಾರಣವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ದ. ಅಫ್ರಿಕೆಯ ಸತ್ಯಾಗ್ರಹಿಗಳಿಗೆ ಭಾರತೀಯರಿಂದ ಧನಸಹಾಯ ಕೇಳುವ ಪುನಸ್ಸಾಗದು. ಅವರಿಗೆ ತಾವಾಗಿ ಯಾರಾದರೂ ಕೊಡುವವರಿದ್ದರೆ ಸಂತೋಷವೇ. ಪೂರ್ವ ಅಫ್ರಿಕೆ, ಮಾರಿಶಸ್ ಮೊದಲಾದಲ್ಲಿ ಅನೇಕ ಹಿಂದೀಯರಿದ್ದಾರೆ. ಅವರೆಲ್ಲನೇಕರು ಉಳ್ಳವರಿದ್ದಾರೆ. ಹಾಗೂ ಹಿಂದು ಮುಸಲ್ಮಾನರೆಂಬ ಭೇದಭಾವದ ಪ್ರಶ್ನೆಯೂ ಅವರಲ್ಲಿಲ್ಲ. ಕಾರಣ ಹಿಂದುಸ್ತಾನದ ಸ್ವಾಭಿಮಾನಕ್ಕಾಗಿ ಹೋರಾಡುತ್ತಿರುವ ದ. ಅಫ್ರಿಕೆಯ ತಮ್ಮ ಬಂಧುಗಳಿಗೆ ಅವರು ಧನಸಹಾಯ ಸಲ್ಲಿಸಬೇಕೆಂದು ಗಾಂಧೀಜಿ ನಿರೀಕ್ಷಿಸುತ್ತಾರೆ. ಸತ್ಯಾಗ್ರಹ ಹೂಡಿದವರಿಗೆ ಸುಖಭೋಗಗಳೇನು ಬೇಕಾಗಿಲ್ಲ. ಅವರಿಗೆ ಬೇಕಾದುದು ಕೇವಲ ಬದುಕಲು ಅಗತ್ಯವಾದುದಷ್ಟೇ. ಅವರಿಗೆ ಸರ್ವವಿಧ ಸಹಾಯ ನೀಡುವದು ಸಮುದ್ರದಾಚೆಗಿರುವ ಎಲ್ಲ ಹಿಂದೀಯರದೂ ಕರ್ತವ್ಯವಾಗಿದೆ.

ಕುರುಕ್ಷೇತ್ರಕ್ಕೆ ಕಳಿಸಲಾದ ಕಂಬಳಿಗಳು

ಪ್ರಾರ್ಥನಾನಂತರ ಗಾಧೀಜಿ ಇಂತು ಮುಂತಾಗಿ ನುಡಿದರು :— " ಮತ್ತೆ ಹೆಚ್ಚಿನ ಹಣವೂ ಕಂಬಳಿಗಳೂ ಬಂದಿವೆಯೆಂದು ತಿಳಿಸಲು ನನಗೆ ಆನಂದವಾಗುತ್ತದೆ. ಈ ಪ್ರಮಾಣದಲ್ಲಿ ಕಂಬಳಿಗಳು ಬಂದುದಾದರೆ ಅಗತ್ಯವಿದ್ದ ನಿರಾಶ್ರಿತರಿಗೆ ಅವನ್ನು ಒದಗಿಸುವಲ್ಲಿ ಯಾವತೊಂದರೆಯಾಗದು. ಸರದಾರ ಪಟೇಲರೂ ಈ ಬಗ್ಗೆ ಬೇಡಿಕೆಯ ಪತ್ರ ಹೊರಡಿಸಿದ್ದಕ್ಕೆ ನನಗೆ ತುಂಬ ಸಂತೋಷ. ನಿರಾಶ್ರಿತರ ಸುಖಶೌಕರ್ಯಕ್ಕಾಗಿ ದುಡಿಯುತ್ತಿರುವ ಡಾ. ಸುಶೀಲಾ ನಯ್ಯರರು. ಶ್ರೀಮತಿ ಮಥಾಯಿ, ಶ್ರೀಮತಿ ಸಾರನ ಮತ್ತು ಶ್ರೀಮತಿ ಕೃಷ್ಣಾಬಾಯಿ ಇವರೊಂದಿಗೆ ಮುಂಜಾನೆ ಕುರುಕ್ಷೇತ್ರಕ್ಕೆ ತೆರಳಿದರು. ಅವರು ತಮ್ಮೊಡನೆ ನಿರಾಶ್ರಿತರಿಗೋಸ್ಕರ ಅನೇಕ ಕಂಬಳಿಗಳನ್ನು ಮತ್ತು ಉಡುಪುಗಳನ್ನು ಒಯ್ದಿದ್ದಾರೆ."

ರಾಷ್ಟ್ರಭಾಷೆ

ಆ ಮೇಲೆ ಹಿಂದುಸ್ತಾನಿಯು ರಾಷ್ಟ್ರಭಾಷೆಯಾಗಬೇಕೆಂಬ ಬಗ್ಗೆ ತಾವು ವ್ಯಕ್ತಪಡಿಸಿದ ಅಭಿಪ್ರಾಯದ ಬಗ್ಗೆ ಬಂದ ಅನೇಕ ಪತ್ರಗಳ ವಿಷಯವನ್ನೆತ್ತಿ ಗಾಂಧೀಜಿಯವರು ಇಂತು ಮುಂತಾಗಿ ಹೇಳಿದರು :—

"ಹಿಂದೀಯರೆಲ್ಲ ಹಿಂದುಸ್ತಾನಿಯೇ ಅತ್ಯುತ್ತಮ ಅಂತಃಪ್ರಾಂತೀಯ ಭಾಷೆಯಾಗುವದೆಂಬಲ್ಲಿ ನನಗೆ ಒಂದಣುವೂ ಸಂದೇಹವಿಲ್ಲ. ಪರ್ಶಿಯನ್ ಪ್ರಚುರವಾದ ಉರ್ದುವಾಗಲಿ ಸಂಸ್ಕೃತಪ್ರಚಾರವಾದ ಹಿಂದೀಯಾಗಲೀ ಜನಸಾಮಾನ್ಯರಿಗೆ ಸುಲಭವಾಗಿ ತಿಳಿಯದು. ಬ್ರಿಟಿಶ ರಾಜ್ಯಭಾರದ ಮುಕ್ತಾಯದೊಂದಿಗೆ ಇಂಗ್ಲೀಷ ಕೋರ್ಟಭಾಷೆ ಅಥವಾ ಸರ್ವರಿಗೂ ತಿಳಿದ ಮಾಧ್ಯಮ ಭಾಷೆ ಎಂಬ ಮಾತು ಇನ್ನು ಮೇಲೆ ಹೊರಟು ಹೋಗಲೇಬೇಕು. ನಮ್ಮ ಮನೆಯಲ್ಲಿ ಅದೊಂದು ಬಲಾತ್ಕಾರದ ಅತಿಕ್ರಮಣವಾಗಿತ್ತು. ಯಥಾಸಾಧನದಲ್ಲಿ ನಾನು ಇಂಗ್ಲಿಷ ಭಾಷೆಯನ್ನು ಗೌರವಿಸಿಯೇ ಗೌರವಿಸುವೆ. ಅದು ಎಂದಿಗೂ ಭಾರತದ ರಾಷ್ಟ್ರ ಭಾಷೆಯಾಗಲಾರದು. ತನಗೆ ತಲ್ಲದ ಸ್ಥಾನದಿಂದ ಇಂಗ್ಲೀಷಭಾಷೆ ಬೇಗ ತಳ್ಳಲ್ಪಡುವದೆಂಬುದಾಗಿ ನನ್ನೋರ್ವ ಸನ್ಮಾನ್ಯಮಿತ್ರರು ಸೂಚಿಸಿದ್ದರು. ಈ ಭಾಷೆಯ ಬಗೆ ಮತ್ತೆ ಮತ್ತೆ ಹೀಗೆ ವ್ಯಕ್ತಮಾಡಿದ ಅನಾದರವು ಅದನ್ನಾಡುವ ಜನರ ಬಗ್ಗೆ ಎಲ್ಲಿ ಹೊರಪಡುವದೋ ಎಂದು ಪತ್ರ ಬರೆದವರು ಹೆದರಿಕೆ ತೋರಿದ್ದಾರೆ ಈ ಬಗೆಯ ಅನಾಹುತವೇನಾದರೂ ಘಟಿಸಿದರೆ ನನ್ನ ಎದೆಗೆ ಬರೆಕೊಟ್ಟ ವೇದನೆ ಯಾಗುವದೆಂಬುದನ್ನೂ ನಾನು ಈ ದುರ್ಘಟನೆಯ ನೋವಿನಿಂದ ಹುಚ್ಚನಾಗಿರಬಹುದೆಂಬುದನ್ನು ತಾವು ಬಲ್ಲೆವೆಂಬುದಾಗಿ ಪತ್ರ ಬರೆದವರು ಅರುಹಿದ್ದಾರೆ. ಈ ಮುಂಜಾಗ್ರತೆ ಸಮಯೋಚಿತವಾಗಿದೆ. ಯಾವಾಗಲೂ ನಾನು ಕೃತಿ ಮತ್ತು ಕರ್ತಾರ ಇವರನ್ನು ವಿಂಗಡಿಸಿ ನೋಡುತ್ತೇನೆಂಬುವದನ್ನು ಪ್ರೇಕ್ಷಕರು ಅರಿಯಬೇಕು. ಕೃತಿಯು ಗರ್ಹಣೀಯವಾಗಿರಬಹುದು, ಆದರೆ ಕರ್ತಾರನೆಂದಿಗೂ ಅಲ್ಲ. ಈ ತಾರತಮ್ಯವನ್ನು ಮರೆದುದು ನಡೆವನರು ತೀರ ವಿರಲ. ಜನರು ಸಾಮಾನ್ಯವಾಗಿ ಕೃತಿಯನ್ನು ಕರ್ತಾರನೊಂದಿಗೆ ಹೊಸೆದು ಬಿಟ್ಟು ಕೃತಿಗೆ ಸಲ್ಲಬೇಕಾದ ತಿರಸ್ಕಾರವನ್ನು ಕರ್ತಾರನಿಗೂ ತಗುಲಿಸಿ ಬಿಡುತ್ತಾರೆ ಎಂಬುದನ್ನು ನನಗೆ ಎತ್ತಿ ತೋರಿಸಿದ್ದಾರೆ. ಆ್ಯಂಗ್ಲೋ ಇಂಡಿಯನನ್ನು ಗೋವಾದವರು ಮೊದಲಾದವರಿಗೆ ಇಂಗ್ಲೀಷ ಮಾತೃಭಾಷೆಯಂತಾಗಿ ಹೋಗಿದೆಯೆಂದೂ ಅಂತಹರಿಗೆ ಕೆಲ ಸೌಕರ್ಯ ಕೊಡಬೇಕೆಂದೂ ಬರೆಹಗಾರರು ನನ್ನನ್ನು ಬೆದರಿಸಿದ್ದಾರೆ. ಹಿಂದಿ ಅಥವಾ ಹಿಂದುಸ್ತಾನಿ, ಅದಾವುದೇ ಇರಲಿ, ಅಂತಃ ಪ್ರಾಂತೀಯ ಭಾಷೆಯಾಗಿ ಅದು ಬಾರದೆಂದು ಈ ಜನಗಳನ್ನು ಕೆಲಸದಿಂದ ತಿತ್ತೊಗೆಯ ಬೇಕೆಂದು ನಾನೆಂದಾದರೂ ಬರೆದಿದ್ದೇನೆಯೋ ಬರೆಹಗಾರರಿಗೆ ನಾನು ಹಾಗೆಂದೂ ಮಾಡಿಲ್ಲವೆಂಬುದು ಗೊತ್ತಿದೆಯಂತೆ ಇರಲಿ. ಅಂತವರ ಬಗ್ಗೆ ಬರೆಹಗಾರರಿಗಿದ್ದ ಹೆದರಿಕೆ ಸರಿಯೇ. ಅವರೂ ಕೆಲವೊಂದು ಕಾಲದಲ್ಲಿ ಕೆಲಸಕ್ಕೆ ತಕ್ಕಷ್ಟು ಹಿಂದುಸ್ತಾನಿಯನ್ನು ಅವರೆಲ್ಲ ಕಲಿಯಬಲ್ಲರೆಂದು ನಾನು ನಂಬಿದ್ದೇನೆ. ಎಷ್ಟೇ ಸಂಖ್ಯಾ ಪ್ರಮಾಣದಲ್ಲಿದ್ದರೂ ಅಲ್ಪಸಂಖ್ಯಾಕರಿಗೆ ಎಳ್ಳಷ್ಟು ಒತ್ತಾಯವೆಂಬುದು ತೋರಬಾರದು. ಇಂತಹ ಪಕ್ಷಿ [illegible] ಬಹಳ ಸಮಯಾಗಿ [illegible]

ಇದೇ ಸ್ನೇಹಿತರು ಇಬ್ಬರ ಲಿಪಿಯ ಬಗ್ಗೆ ಮಾತೆತ್ತಿ ಇವೆರಡರ ಸ್ಥಾನವನ್ನು ರೋಮನ್ ಲಿಪಿ ಆಕ್ರಮಿಸಬಹುದೆಂದು ಅಂದಿದ್ದಾರೆ. ಇವರಿಗೆ ರೋಮನ್ ಲಿಪಿಯ ಬಗ್ಗೆ ಪಕ್ಷಪಾತವಿದೆ. ಈ ದಾಕ್ಷಿಣ್ಯ ಪಕ್ಷಪಾತ ರೋಮನ್ ಲಿಪಿಯು ಇವೆರಡನ್ನು ಮಿಗಿಲಿಸುವ ವಿರಾಜಿಸ ಬಹುದೆಂಬ ಹೆದರಿಕೆಯೂ ನನಗಿಲ್ಲ. ಈ ಬಗ್ಗೆ ಹೆಚ್ಚಿನ ಚರ್ಚೆಯಲ್ಲಿ ನಾನು ಬೀಳ ಬಯಸುವದಿಲ್ಲ. ಆದರೆ ಎರಡೂ ಲಿಪಿಗಳನ್ನು ಕಲಿಯಲಾರದವರ ರಾಷ್ಟ್ರಪ್ರೇಮ ಟೊಳ್ಳೆಂಬುದನ್ನು ತೋರಿಸಲಷ್ಟೇ ಈ ಮಾತನ್ನೆತ್ತಿದ್ದೇನೆ, ದೇಶದ ಮೇಲಿನ ನಿಮ್ಮ ಪ್ರೇಮವು ಈ ಎರಡೂ ಲಿಪಿಗಳನ್ನು ಅತ್ಯಂತ ಆನಂದದಿಂದ ಕಲಿಯ ಹಚ್ಚಬೇಕು ಕಾಶ್ಮೀರಕಾವಾಡದಲ್ಲಿದ್ದ ಶೇಕ ಅಬ್ದುಲ್ಲಾರು ಹಿಂದಿ ಮತ್ತು ದೇವನಾಗರಿ ಲಿಪಿಗಳನ್ನು ನಿರಾಯಾಸವಾಗಿ ಕಲಿತುದನ್ನು ಇವೇ ದೃಗಳು ಬರೆದು ತಿಳಿದದ್ದನ್ನು ಪವಿತ್ರ ಹೇಳಬಯಸುತ್ತೇನೆ ಶೇಖ ಸಾಹೇಬರಿಗೆ ಸರಳ ಸಾಧ್ಯವಿದ್ದದ್ದು ಇನ್ನುಳಿದ ದೇಶ ಪ್ರೇಮಿಗಳಿಗೂ ಸಹಜವಾಗಿ ಸಾಧಿಸಬಾರದೇಕೆ?

ಬಿರ್ಲಾಭವನ;

ಹೊಸದಿಲ್ಲಿ ೧೮—೧೦—೪೭,

" ಹಗಲು ದಿನದಿನವೂ ಚಿಕ್ಕದಾಗುತ್ತ ಹೋಗುತ್ತಿರುವದರಿಂದ ೬ ಗಂಟೆಗೆ ಪ್ರಾರ್ಥನೆಗೆ ಬರುವುದೆಂದರೆ ಬಹಳ ತಡವೆಂದು ಜನರಿಗೆ ಅನಿಸುತಹತ್ತಿದೆ ಆದುದರಿಂದ ಸೋಮವಾರದಿಂದ ೬ ಕ್ಕೆ ಬದಲಾಗಿ ಸಂಜೆ ೫॥ ಗೆ ಪ್ರಾರ್ಥನೆ ಪ್ರಾರಂಭವಾಗುವದು.

ಇದು ಸ್ವರಾಜ್ಯವೇ?

ಈ ಸಂಜೆಯ ಭಜನೆಯಲ್ಲಿ ಬಳಸಿಬಿಟ್ಟ ನೆನಪುಗಳಿವೆ. "ಭಜನಾವಳಿ"ಯಲ್ಲಿರುವ ಎಲ್ಲ ಭಜನೆಗಳಿಗೂ ಅವುಗಳದೇ ಆದ ಇತಿಹಾಸವು ಅವುಗಳ ಹಿಂದಿದೆ. ಈ ಭಜನೆಗಳ ಸಂಗ್ರಹಕಾರರೆಂದರೆ ಆಶ್ರಮವಾಸಿಗಳಾಗಿದ್ದ ದಿವಂಗತ ಪಂಡಿತ [illegible]

[illegible] ನೋಡುವಂತಾಗುತ್ತಿದ್ದಿಲ್ಲ. ಸ್ವರಾಜ್ಯವನ್ನು ಕಳೆದ ಆಗಸ್ಟ ೧೫ರ ಕೆಲವಳಿಗೆ [illegible] ಆಗುತ್ತದೆ. ಇದನ್ನು ಸ್ವರಾಜ್ಯವೆಂದು ನಾನು ಕರೆಯಲಾರೆ. ಸ್ವರಾಜ್ಯದ ಸೋಗನ್ನು ಕರಸ್ಪರ್ಶ ಕುತ್ತಿಗೆ ಕೊಯ್ಯಲು ಬಿರಿ [illegible] ಸ್ವತಂತ್ರ ಹಿಂದುಸ್ತಾನವು ಎಲ್ಲರೊಡನೆ ಗೆಳೆತನದಿಂದ ಇರಬಯಸುತ್ತದೆ. ಇಂಥ ಅಗತ್ಯದಲ್ಲಿ ತನಗೆ ಹನಿಯೊಬ್ಬ ವೈರಿಯೂ ಇರಬಾರದೆನ್ನುವ ಸಂದರ್ಭ ಬರದಂತೆ ಅದು ಇರಬಯಸುತ್ತದೆ. ಆದರೆ ಅಯ್ಯೋ! ಇಂದು ಭಾರತಾಂಬೆಯ ಮಕ್ಕಳೆನಿಸುವ ಹಿಂದು ಸಿಖರು ಒಂತೆಡೆ ಮುಸಲ್ಮಾನರೊಂದೆಡೆ ಪರಸ್ಪರರ ಕತ್ತು ಇರಿಯಲು ಬಾಯಿ ತೆರೆದು ಕುಳಿತಿದ್ದಾರೆ!

" ಇದನ್ನೆಲ್ಲ ನೋಡಿ ಕೇಳಿದಾಗ ನಾನು [illegible] ವಡೆ ಪಡೆದ ಸ್ವರಾಜ್ಯದ ಕನಸನ್ನು [illegible]

೧೫ನೇ ಪುಟ ನೋಡಿರಿ

ಸಮುದ್ರದಾಚೆಯ ಭಾರತೀಯರು

ಪ್ರಶ್ನೆ — ಒಂದು ವೇಳೆ ಯುಕ್ತರಾಷ್ಟ್ರ ಸಂಘವು ದಕ್ಷಿಣ ಆಫ್ರಿಕೆಯಲ್ಲಿಯ ಭಾರತೀಯರಿಗೆ ಹಕ್ಕು ಕೋರಿಸಿ ಕೊಡುವಲ್ಲಿ ಅಸಮರ್ಥರಾಗಿದ್ದರೆ ಆ ಭಾರತೀಯರು ಯಾವ ಮಾರ್ಗವನ್ನು ಅನುಸರಿಸಬೇಕೆಂದು ನೀವು ಉಪದೇಶಿಸುವಿರಿ?

ಉತ್ತರ— [illegible] ನಾನು [illegible] ಎಣಿಸುವದಿಲ್ಲ. 'ಅದೆಂದಿಗೂ ಅಯಶಸ್ವಿಯಾಗದು. ಇದು ಪರಮ ವಿಶ್ವಾಸ.

ಪ್ರಶ್ನೆ — ಸಂಯುಕ್ತ ರಾಷ್ಟ್ರ ಸಂಘದ ಒಂದು ವೇಳೆ ದಕ್ಷಿಣ ಆಫ್ರಿಕೆಯಲ್ಲಿಯ ಭಾರತೀಯರ ಪ್ರಶ್ನೆ ನ್ಯಾಯವಾಗಿ ಬಿಡಿಸುವಲ್ಲಿ ಯಶಸ್ವಿಯಾಗದಿದ್ದರೆ ಆ ಸಂಸ್ಥೆಯ ಭವಿತವ್ಯದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ— ಈ ವ್ಯಾಜ್ಯದಲ್ಲಿ ಯುಕ್ತರಾಷ್ಟ್ರ ಸಂಘವು ಯಶಸ್ವಿಯಾಗದಿದ್ದರೆ ಅದು ತನ್ನ ಗೌರವವನ್ನು ಕಳೆದುಕೊಳ್ಳುವದು! ಅದು ನ್ಯಾಯನಿಷ್ಠುರವಾದರೆ ಮಾತ್ರ ಪ್ರಗತಿಯನ್ನು ಹೊಂದುವದೆಂಬಲ್ಲಿ ನನಗೆಳ್ಳಷ್ಟು ಸಂಶಯವಿಲ್ಲ.

ಪ್ರಶ್ನೆ — ಈ ಸಂಘವು ಅಯಶಸ್ವಿಯಾದರೆ ಜಗತ್ತಿನ ಮೇಲೆ ಅದರ ಪರಿಣಾಮವೆಂತಾಗಬಹುದು?

ಉತ್ತರ — ಜಗತ್ತಿನ ಮೇಲೆ ಅದರ ಪರಿಣಾಮವೆಂತಾಗಬಹುದೆಂಬುದನ್ನು ಯಾರೂ ಹೇಳಲಾರರು. ನನಗಂತೂ ಅದು ತಿಳಿಯದು!

ಪ್ರಶ್ನೆ — ಜಗತ್ತಿನಲ್ಲಿ ಶಾಂತಿ ಪ್ರಸ್ಥಾಪಿತವಾಗ [illegible]

[illegible]

ಉತ್ತರ— [illegible]

[illegible]

ಉತ್ತರ — [illegible]

(ಪ್ರಾರ್ಥನೋತ್ತರ ಭಾಷಣದ ಗಾಂಧೀಜಿಯ ಉತ್ತರಗಳು)

ಕಾಲೋಚಿತ ಸುಭಾಷಿತಗಳು

ಕಳೆದ ಸೆಪ್ಟಂಬರನಲ್ಲಿ ನನ್ನ ಕಲಕತ್ತದ ಉಪವಾಸ ಕಾಲದಲ್ಲಿ ಅನೇಕ ತಂತಿಗಳೂ ಕಾಗದಗಳೂ ನನಗೆ ಬಂದಿದ್ದವು. ಅವುಗಳಲ್ಲಿ ಈ ಕೆಳಗಿನದನ್ನು ಆರಿಸಿಕೊಟ್ಟಿದ್ದೇನೆ. ಅದು ಡಾ. ಹೋಮ್ಸ್ ಎಂಬುವರಿಂದ ಬಂದುದು.

"ಕಲಕತ್ತದಿಂದ ಈಚಿನ ಬಗ್ಗೆ ಬಂದ ಸುದ್ದಿ ನಮಗೆಲ್ಲ ಬಹಳ ದುಃಖವನ್ನುಂಟು ಮಾಡಿತು. ಆದರೆ ನಾವು ನಿರಾಶರಾಗಬಾರದು. ಕಳೆದ ಪಕ್ಷದಲ್ಲಿ ದೇವರಲ್ಲಿ [illegible] ಅವನು [illegible] ನಿಮ್ಮನ್ನು ಅದ್ಭುತ [illegible] ಆದರೆ ನೀವು ನಿಮ್ಮ ಉಪವಾಸದ ಮೂಲಕ ತಪಸ್ಸು [illegible] ದೇವರೆಡೆಗೆ [illegible] ನಿಮಗೆ ಎರಡು ಗಾದೆಗಳು ನೆನಪಾಗ್ತ್ರ.

[illegible]

[illegible]

ಮೋ. ಕ. ಗಾಂಧಿ.

ಹೊಸದಿಲ್ಲಿ

[illegible]-೪೭

ನಿಜವಾದ ಪ್ರೌಢ ಶಿಕ್ಷಣ

(ಮೋ. ಕ. ಗಾಂಧಿ)

ಚರಖಾಜಯಂತಿಯ ಸಂಬಂಧದಲ್ಲಿ ಬಂದ ಅನೇಕ ಪತ್ರಗಳು ಮತ್ತು ತಂತಿಗಳಲ್ಲಿ ಇಂದೂರ ಪ್ರೌಢ ಶಿಕ್ಷಣ ಸಮಿತಿಯಿಂದ ಬಂದ ಪತ್ರವು ನನ್ನ ಗಮನವನ್ನು ಹೆಚ್ಚಾಗಿ ಸೆಳೆಯಿತು. ಈ ಸಂಘವು ಈ ಜಯಂತಿಯಲ್ಲಿ ಕೇವಲ ಪ್ರಶಂಸನೀಯ ಉತ್ಸವ ಮಾಡುವದರಲ್ಲಿಯೇ ಎಲ್ಲ ವೇಳೆಯನ್ನು ಕಳೆಯದೆ ಕೆಲ ಮಹತ್ವದ ಮತ್ತು ಉಪಯುಕ್ತ ಕೆಲಸಕ್ಕಾಗಿ ಅದನ್ನು ಉಪಯೋಗಿಸಿತು. ಯುವಕರು, ವೃದ್ಧರು ಶ್ರೀಮಂತರು, ಅಧಿಕಾರಿಗಳು ಮತ್ತು ಅಧಿಕಾರೇತರರು ಮತ್ತು ಬಡವರು ಎಲ್ಲರೂ ಕೂಡಿಕೊಂಡು ಮನುಷ್ಯನಿಗೆ ಮತ್ತು ಪಶುಗಳಿಗೆ ಅಪಾಯಕರವಾದ ಈ ವಿಷ ಬಳ್ಳಿಯನ್ನು ನಾಶ ಮಾಡುವಲ್ಲಿ ತೊಡಗಿದರು. ಯಾವದೇ ಸ್ಥಳದಲ್ಲಿ ಇಂಥ ಸಹಕಾರವು ಸಾಧ್ಯವಾದುದಾದರೆ ಯುವಕ ವೃದ್ಧರಿಗೆಲ್ಲ ಇದೊಳ್ಳೆ ಶಿಕ್ಷಣವಾಗಿ ಪರಿಣಮಿಸುವದಲ್ಲದೆ ಯಾವ ಸಮಾಜದಲ್ಲಿ ಇದು ಕಾರ್ಯಕಾರಿಯಾಗಿರುವದೋ ಆ ಸಮಾಜದ ಆದಿಗಲ್ಲಿನ್ನೆ ಬದಲಿಸಿದಂತಾಗುವದು.

ಹೊಸದಿಲ್ಲಿ

೧೮-೧೦-೪೭

ಗಾಂಧಿಯವರ ಪ್ರಾರ್ಥನೋತ್ತರ ಭಾಷಣ

(೧೩ ನೇ ಪುಟದಿಂದ ಮುಂದರಿದುದು)

ಲಿಸಬೇಕೆಂದಿದ್ದರೆ ದಿವಂಗತ ಮಗನಲಾಲ ಗಾಂಧಿಯವರಂತೆ ನೀವು ಯಾವಾಗಲೂ ಅದಕ್ಕಾಗಿ ಹೆಬ್ಬಯಕೆಯನ್ನು ತಳೆದಿರಬೇಕು. ದೇವರಿಗೆ ರೂಪಿಲ್ಲ. ಮನುಷ್ಯನು ಅವನನ್ನು ಬೇರೆ ಬೇರೆ ರೂಪಗಳಲ್ಲಿ ಕಲ್ಪಿಸಿಕೊಂಡನು. ದೇವರನ್ನು ನೀವು ರಾಮರಾಜ್ಯದ ರೂಪದಲ್ಲಿ ಕಾಣಬಯಸುವಿರಾದರೆ, ಮೊಟ್ಟಮೊದಲನೆಯ ಕರ್ತವ್ಯವೆಂದರೆ, ತನ್ನ ನಡೆಯನ್ನು ತಾನೇ ಪರೀಕ್ಷಿಸುವುದು. ನೆರೆಯವರ ತಪ್ಪುಗಳತ್ತ ಕಣ್ಣು ಮುಚ್ಚಿ ನಿಮ್ಮ ನಿಮ್ಮ ತಪ್ಪುಗಳನ್ನು ಸಾವಿರಮಡಿ ಹಿಗ್ಗಿಸಿ ನೋಡಬೇಕು. ಇದೊಂದೇ ನಿಜವಾದ ಮುನ್ನಡೆಗೆ ದಾರಿ. ಇಂದು ಜನತೆ ಅಧೋಗತಿಗಿಳಿದಿದೆ. ಹಿಂದು ಶೀಖ ಹಾಗು ಮುಸಲ್ಮಾನರು ಪರಸ್ಪರರನ್ನು ಹಗೆಗಳೆಂದು ತಿಳಿಯುತ್ತಾರೆ. ಪರಸ್ಪರರ ಧರ್ಮದ ಬಗ್ಗೆ ಅವರು ಯಾವ ಗೌರವವನ್ನು ತಳೆದಿಲ್ಲ. ದೇಗುಲಗಳನ್ನಳಿದು ಮಸೀದೆ ಕಟ್ಟಿದರು. ಮಸೀದೆಗಳನ್ನು ಕೆಡಹಿ ದೇಗುಲಗಳನ್ನು ಕಟ್ಟಿದರು. ಇದು ಬಹಳ ದುಃಖಕರವಾದ ಪರಿಸ್ಥಿತಿ. ಇದು ಎರಡೂ ಧರ್ಮಗಳ ವಿನಾಶಕ್ಕೆ ಬಿಯ್ದು ಮುಟ್ಟಿಸುತ್ತದೆ.

ಒಂದೇ ಮಾರ್ಗ

ಜಾತೀಯ ಜ್ವಾಲೆಯನ್ನು ನೊಂದಿಸುವ ಬಗೆ ಹೇಗೆ? ಅದಕ್ಕೊಂದೇ ಮಾರ್ಗ. ಹೆರರು ಅದೇನೇ ಮಾಡಿರಲಿ ನಾವು ಮಾತ್ರ ನಮ್ಮ ನಡೆಯಲ್ಲಿ ಚಾಚೂ ತಪ್ಪದಿದ್ದರಾಯಿತು. ಪಾಕಿಸ್ತಾನದಲ್ಲಿಯ ಹಿಂದೂ ಹಾಗೂ ಶೀಖರ ಬವಣೆಯ ಅರಿವು ನನಗೆ ಇಲ್ಲವೆಂದಲ್ಲ. ಗೊತ್ತು ನನಗದು. ಆದರೂ ಅದನ್ನೆಲ್ಲ ಗಮನಕ್ಕೆ ತರತಕ್ಕದ್ದಲ್ಲ. ಹಾಗೆ ಅದನ್ನೆಲ್ಲ ಎಣಿಕೆ ಹಾಕುತ್ತ ಕುಳಿತರೆ ನನ್ನ ತಲೆ ಕೆಟ್ಟುಹೋಗಬಹುದು. ಹಾಗಾದರೆ ನಾನು ಹಿಂದುಸ್ತಾನಕ್ಕೆ ಸೇವೆ ಸಲ್ಲಿಸುವದೇ ದುಸ್ತರವಾಗುವದು. ಒಕ್ಕೂಟದಲ್ಲಿದ್ದ ಮುಸಲ್ಮಾನರನ್ನು ನಮ್ಮ ರಕ್ತಬಂಧುಗಳೆಂದೇ ಕಾಣಬೇಕು. ದಿಲ್ಲಿಯು ಶಾಂತವಾಗಿದೆಯೆಂದು ಹೇಳಲಾಗುತ್ತಿದೆ. ಇದರಿಂದ ನನಗೆ ಎಳ್ಳಷ್ಟೂ ಸಮಾಧಾನವೆನಿಸಿಲ್ಲ. ಈ ಶಾಂತತೆ ದಂಡಿನವರ ಮತ್ತು ಪೋಲೀಸನವರ ಮೂಲಕ ನೆಲಸಿದ್ದು. ಹಿಂದು ಮುಸಲ್ಮಾನರಲ್ಲಿ ಪ್ರೇಮವೆಂಬುದೇ ಅಳಿದುಹೋಗಿದೆ. ಅವರ ಹೃದಯ ಪರಸ್ಪರರಿಂದ ಮಾರು ದೂರದಲ್ಲುಂಟು. ಈ ಸಭೆಯಲ್ಲಿ ಮುಸಲ್ಮಾನರಿರುವರೋ ಇಲ್ಲವೋ ನನಗೆ ತಿಳಿಯದು. ಇದ್ದುದಾದರೆ ಅವರು ಮೈಚಳಿ ಬಿಟ್ಟು ಕುಳಿತಿದ್ದಾರೊ ಇಲ್ಲವೋ ಅದೂ ತಿಳಿಯದು. ಶೇಖ ಅಬ್ದುಲ್ಲಾ ಸಾಹೇಬರೂ ಇನ್ನುಳಿದ ಕೆಲ ಮುಸಲ್ಮಾನ ಸ್ನೇಹಿತರೂ ಮೊನ್ನಿನ ಪ್ರಾರ್ಥನಾ ಸಭೆಯಲ್ಲಿದ್ದರು. ಕಿದ್ವಾಯಿ ಸಾಹೇಬರ ಬಂಧುವಿನ ವಿಧವಾ ಸ್ತ್ರೀಯೂ ಇದ್ದರು. ಕಿದ್ವಾಯಿಯವರ ಬಂಧುವು ಮಸೂರಿಯಲ್ಲಿ ಯಾಪತಪ್ಪಿಸದೆ ಅಮಾನುಷ ಕೊಲೆಗೆ ಗುರಿಯಾದರು. ಅವರು ಸಭೆಯಲ್ಲಿದ್ದುದಕ್ಕೆ ನನಗೆ ತುಂಬಾ ಸಂಕೋಚವೆನಿಸಿತು. ಅವರ ಇರುವಿಕೆ ಗೋಸುಗ ಈ ಸಂಕೋಚವಲ್ಲ. ನಾನಿದ್ದಾಗ ಅವರ ಇರುವಿಗೆ ಯಾವಕೆಡಕೂ ಒದಗದೆಂದು ನನಗೆ ವಿಶ್ವಾಸವಿದೆ. ಆದರೆ ಅವರಿಗೆ ಅಪಮಾನ ಸಂಭವಿಸಲಾರದೆಂಬ ಬಗ್ಗೆ ನನಗೆ ಈ ವಿಶ್ವಾಸವಿಲ್ಲ. ಅವರಿಗೆ ಆದಾವದೇ ಬಗೆಯ ಅಪಮಾನವಾದರೆ [illegible] ಮುಸಲ್ಮಾನ ಬಂಧುಗಳ ಬಗ್ಗೆ ಈ ಬಗೆಯ ಭಯವೇಕೆ ಇರಬೇಕು?

ನಿಷ್ಕ್ರಿಯೆಯಲ್ಲಿ ಕ್ರಿಯೆ

(ಮೋ. ಕ. ಗಾಂಧಿ)

ಸುದ್ದಿಗಾರನೊಬ್ಬ ಬರೆಯುತ್ತಾನೆ: 'ನಿಷ್ಕ್ರಿಯೆಯಲ್ಲಿ ಕ್ರಿಯೆ' ಎಂಬ ನಿಮ್ಮ ಬರೆಹದಲ್ಲಿ ಆ ಸ್ಥಿತಿಯನ್ನು ನಾನು ಮುಟ್ಟಿಲ್ಲೆಂದು ಬರೆದಿರುವಿರಿ. ಆ ವಾಕ್ಯವೇನೋ ಸರಳವಾಗಿ ತೋರುತ್ತದೆ ಆದರೆ ಅದರ ಅರ್ಥವನ್ನು ನೀವು ಇನ್ನಷ್ಟು ವಿಶದವಾಗಿ ವಿವರಿಸಬೇಕೆಂದು ನನಗನಿಸುತ್ತದೆ."

ಮಾನವ ಜೀವನದಲ್ಲಿ ಇಂಥದೊಂದು ಪರಿಸ್ಥಿತಿ ಬರುತ್ತದೆ, ಆಗ ಅವನು ತನ್ನ ವಿಚಾರಗಳನ್ನು ಸಾರಿ ಹೇಳುವದೂ ಅವಶ್ಯವೆನಿಸುವದಿಲ್ಲ. ಕೃತಿಯಲ್ಲಿ ಮಾಡಿತೋರಿಸುವ ಮಾತಂತೂ ದೂರೇ ಉಳಿಯಿತು. ಕೇವಲ ವಿಚಾರಗಳೇ ಕಾರ್ಯಕಾರಿಯಾಗುತಿವೆ. ಆ ಬಗೆಯ ಶಕ್ತಿ ಆ ವಿಚಾರಗಳಿಗೆ ಬರುತ್ತದೆ. ಆಗ ಅದು ನಿಷ್ಕ್ರಿಯೆಯೆಂದು ತೋರುವುದಿಲ್ಲ, ಅವನ ಕ್ರಿಯೆಯೇ ಎಂದು ಹೇಳಬೇಕಾಗುವದು. ಆ ಪರಿಸ್ಥಿತಿಯಿಂದ ನಾನು ಇನ್ನೂ ಬಹಳ ದೂರ ಇರುವೆನೆಂದು ನಾನು ಒಪ್ಪಲೇಬೇಕಾಗುವುದು. ನನ್ನ ಓಟವೆಲ್ಲ ಆ ದಿಸೆಯಲ್ಲಿಯೆ ಸಾಗಿದೆಯೆಂದಿಷ್ಟೇ ನಾನು ಹೇಳಬಲ್ಲೆ.

(ಹಿಂದುಸ್ತಾನಿಯಿಂದ ಅನುವಾದಿತ)

ಹೊಸದಿಲ್ಲಿ ೧೬-೧೦-೪೭

ಜುನಾಗಡ ನವಾಬರ ಹನ್ನೆರಡು ಹಳ್ಳಿಗಳ ಆಕ್ರಮಣ

ತಾತ್ಪೂರ್ತಿಕ ಸರಕಾರದ ಆಡಳಿತ ಪ್ರಾರಂಭವಾಯಿತು

ಕಳೆದ ತಿಂಗಳು ಮುಂಬಯಿಯಲ್ಲಿ ಪ್ರಸ್ಥಾಪಿತವಾದ ಜುನಾಗಡ ತಾತ್ಪೂರ್ತಿಕ ಸರಕಾರವು ಜುನಾಗಡ ಸಂಸ್ಥಾನದ ಈಶಾನ್ಯ ಮೂಲೆಯಲ್ಲಿರುವ ಹನ್ನೆರಡು ಹಳ್ಳಿಗಳನ್ನು ಆಕ್ರಮಿಸಿಕೊಂಡಿದೆಂದು ಸುದ್ದಿ ಬಂದಿದೆ. ಈ ಹಳ್ಳಿಗಳಲ್ಲಿರುವ ಸಂಸ್ಥಾನಿ ಆಸ್ತಿಪಾಸ್ತಿಗಳನ್ನೆಲ್ಲ ಈ ತಾತ್ಪೂರ್ತಿಕ ಸರಕಾರವು ವಶಪಡಿಸಿಕೊಂಡು ಅಲ್ಲಿಯ ಪೋಲೀಸರನ್ನು ಸಂಸ್ಥಾನಿ ನೌಕರರನ್ನೂ ಬಂಧಿಸಿಟ್ಟು ತನ್ನ ಆಡಳಿತವನ್ನು ಪ್ರಾರಂಭಿಸಿದೆ.

ಈ ದಾಳಿಯಲ್ಲಿ ಅಮರಪುರವೆಂಬ ಹಳ್ಳಿಯನ್ನು ಮೊದಲಿಗೆ ಆಕ್ರಮಿಸಲಾಯಿತು. ಈ ಸುದ್ದಿ ೨೪ ರ ಮುಂಜಾನೆ ಇಲ್ಲಿ ತಿಳಿಯಿತು. ತಾತ್ಪೂರ್ತಿಕ ಸರಕಾರದ ನಾಲ್ಕು ದಳಗಳು ನಿನ್ನೆ ಅಲ್ಲಿಗೆ ಹೋಗಿ ಅಲ್ಲಿದ್ದ ೧೨ ಸಶಸ್ತ್ರ ಪೋಲೀಸರನ್ನು ಬಂಧಿಸಿದ ಕೂಡಲೆ ಆ ಹಳ್ಳಿಯ ನಾಗರಿಕರು ಸಾರ್ವಜನಿಕ ಸಭೆ ಸೇರಿಸಿ ತಮ್ಮ ಹಳ್ಳಿಯು ಹಿಂದೀ ಒಕ್ಕೂಟಕ್ಕೆ ಸೇರಿರುವದಾಗಿಯೂ ಹಿಂದುಸ್ತಾನ ಸರಕಾರವು ತಮಗೆ ರಕ್ಷಣೆ ಕೊಡಬೇಕೆಂದೂ ಸಾರಿ ಹೇಳಿದರು.

ಕಾಠೇವಾಡ ರಾಜಕೀಯ ಪರಿಷತ್ತಿನ ಕಾರ್ಯದರ್ಶಿ ಶ್ರೀ ರಸಿಕಲಾಲ ಪರೀಖರು ಮುಂಬಯಿಯ ಇಬ್ಬರು ಪತ್ರಿಕೋದ್ಯಮಿಗಳೊಡನೆ ಹಿಂತಿರುಗುತ್ತಿರುವಾಗ ಅವರ ಕಾರಿಗೆ ಅಪಘಾತ ಸಂಭವಿಸಿ ಅವರಿಗೆ ತೀವ್ರ ಗಾಯಗಳಾದವು. ಅವರನ್ನು ರಾಜಕೋಟ ಆಸ್ಪತ್ರೆಯಲ್ಲಿಡಲಾಗಿದ್ದು ಅವರ ಪ್ರಾಣಕ್ಕೆ ಅಪಾಯವಿಲ್ಲೆಂದು ತಿಳಿದುಬಂದಿದೆ.

ಹಿಂದುಗಳು ತಮ್ಮದೆಲ್ಲ ಸುರಕ್ಷಿತವಾಗಿರುವರೆಂಬ ಭರವಸೆ ಹುಟ್ಟುವಹಾಗೆ ಮುಸಲ್ಮಾನರೂ ಯತ್ನಿಸಬೇಕು. ಮುಸಲ್ಮಾನರು ತಮ್ಮ ತಪ್ಪುಗಳನ್ನು ದೊಡ್ಡದುಮಾಡಿ ನೋಡಲು ಕಲಿತಂದು ಆದರಂತೆ ತಮ್ಮ ನೆರೆಯವರ ತಪ್ಪನ್ನು ಸಣ್ಣದೆಂದು ಕಡೆಕಡೆಗಣಿಸಲು ಅರಿತಂದು ಮಾತ್ರ ಅದು ಸಾಧ್ಯ. ಎಲ್ಲರ ಕಣ್ಣು ಇಂದು ಹಿಂದುಸ್ತಾನದ ಮೇಲುಂಟು. ಆಫ್ರಿಕೆಯ, ಏಶಿಯಾದ ಅದೇಕೆ ಇಡೀ ಜಗತ್ತಿನ ಆಶೆ ಆಕಾಂಕ್ಷೆಗಳು ಇಂದು ಹಿಂದುಸ್ತಾನವನ್ನು ಅವಲಂಬಿಸಿವೆ.

ಜಗದ ಈ ಹೆಬ್ಬಯಕೆ ಈಡೇರಬೇಕಾದರೆ ಹಿಂದುಸ್ತಾನವು ಭ್ರಾತೃಹತ್ಯಾವನ್ನು ನಿಲ್ಲಿಸಬೇಕು ಮತ್ತು ಹಿಂದೀಯರೆಲ್ಲ ಅಣ್ಣತಮ್ಮಂದಿರಾಗಿ ನೇಹಿಗರಾಗಿ ಇರಗಲಿಯಬೇಕು. ಪರಿಶುದ್ಧ ಹೃದಯಗಳೇ ಆ ಸುಖರಾಜ್ಯವನ್ನು ಕಟ್ಟಲು ತಳಹದಿಯಾಗಬಲ್ಲವು.

ಓಡಿಸಾ-ಆಸೆ ಅಭಿವೃದ್ಧಿಯ ಪ್ರಾಂತ

೧೧ ನೇ ಪುಟದಿಂದ ಮುಂದುವರಿದುದು.

ಬರೆಯುತಿರುವೆನು, ಆ ಸೋಟವೂ ಆಸೆಯ ಕಿರಣವನ್ನು ಮುರಿದೊಗೆಯಲಾರದು. ಕಾರ್ಮೋಡಗಳು ಹಿಂದುಸ್ತಾನ ಕೆಲಭಾಗಗಳ ಆಕಾಶದಲ್ಲಿ ಇನ್ನೂ ಕವಿದಿವೆ ಆದರೆ ಪ್ರಕಾಶವು ಓಡಿಸಾದಿಂದ ಹೊರಹೊಮ್ಮುತಿದೆ. ಪ್ರಕಾಶವು ಕತ್ತಲೆಯನ್ನು ಅಡಗಿಸಲಿ.

ಹೊಸದಿಲ್ಲಿ

೧-೯ ೪೭

ಬೆಂಗಳೂರಲ್ಲಿ ಲೋಕಪ್ರಿಯ ಮಂತ್ರಿಗಳ ಅಧಿಕಾರ ಸ್ವೀಕಾರ

ಗಾಂಧೀತತ್ವಗಳ ಆದರ್ಶದಂತೆ ಆಡಳಿತೆ ನಡೆಯುವದು

ಮೈಸೂರ ಸಂಸ್ಥಾನದ ಪ್ರಥಮ ಲೋಕಪ್ರಿಯ ಮಂತ್ರಿಮಂಡಳವು ತಾ. ೨೪ ರ ಮಧ್ಯಾನ್ಹ ೩ ಗಂಟೆಗೆ ಅಧಿಕಾರವನ್ನು ವಹಿಸಿಕೊಂಡಿತು. ಈ ಸಮಾರಂಭವು ಅತ್ಯಂತ ಉತ್ಸಾಹಪೂರ್ಣವಾಗಿದ್ದಿತು. ದಸರೆಯ ನಿಮಿತ್ತ ದಿವಾಣರೂ ಮುಖ್ಯ ನ್ಯಾಯಾಧೀಶರೂ ಮೈಸೂರಲ್ಲಿ ಇದ್ದದ್ದರಿಂದ ಈ ಮಂತ್ರಿಗಳ ಪ್ರತಿಜ್ಞಾವಿಧಿಯು ಇಂದು ಜರುಗಲಿಲ್ಲ. ಬರುವ ವಾರದಲ್ಲಿ ನಡೆಯುವದು.

ಈ ಕೆಳಗಿನವರನ್ನು ಮಂತ್ರಿಗಳನ್ನಾಗಿ ನೇಮಿಸಲಾಗಿದೆಂದು ಮಹಾರಾಜರು ವಿಶೇಷ ಗ್ಯಾಜೆಟ ಹೊರಡಿಸಿದ್ದಾರೆ.

ಶ್ರೀ. ಕೆ. ಚಂಗಲರಾಯರೆಡ್ಡಿ (ಮುಖ್ಯಮಂತ್ರಿ), ಶ್ರೀಗಳಾದ ಎಚ್. ಸಿ. ದಾಸಪ್ಪ. ಕೆ. ಟಿ. ಭಾಷ್ಯಂ, ಎಚ್. ಸಿದ್ದಯ್ಯ, ಟಿ. ಮರಿಯಪ್ಪ, ಆರ್. ಚನ್ನಿಗರಾಮಯ್ಯ, ಮಹಮ್ಮದ ಶರೀಫ, ಡಿ. ಎಚ್. ಚಂದ್ರಶೇಖರಯ್ಯ. ಪಿ. ಸುಬ್ಬರಾಮಚೆಟ್ಟಿ.

ಈ ಹೊಸ ಮಂತ್ರಿಮಂಡಲವು ಅಧಿಕಾರ ಸ್ವೀಕರಿಸುವ ಮೊದಲು ಅಧಿಕಾರದಲ್ಲಿದ್ದ ಸರ್ ರಾಮಸ್ವಾಮಿಯವರ ಮಂತ್ರಿಮಂಡಳವನ್ನು ವಿಸರ್ಜಿಸಲಾಯಿತು. ಆ ಹಳೆ ಮಂತ್ರಿಗಳು ಸಂಸ್ಥಾನಕ್ಕೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಲಾಯಿತು. ಮೈಸೂರ ಸರಕಾರವು ಕಾಂಗ್ರೆಸ್ಸಿನೊಡನೆ ಮಾಡಿಕೊಂಡ ಒಡಂಬಡಿಕೆಗೆ ಸರಿಹೋಗುವಂತೆ ೧೯೪೦ ರ ಮೈಸೂರ ರಾಜ್ಯಘಟನೆಯ ಕಾಯದೆಯಲ್ಲಿ ತಾತ್ಪೂರ್ತಿಕವಾಗಿ ಬದಲಾವಣೆ ಮಾಡಲಾಗುವದು.

ಜನತೆಯ ಸರಾಂಗೀಣ ಉನ್ನತಿಗಾಗಿ ನಾವು ಪುನಃ ಟೊಂಕಕಟ್ಟೋಣ. ನಮ್ಮ ಈ ಅಧಿಕಾರ ಸ್ವೀಕಾರದಿಂದ ಜನತೆಯ ಉದ್ಧಾರದ ನಮ್ಮ ಪ್ರಯತ್ನಗಳು ಬಲಗೊಂಡು ಅವರ ಜೀವನದ ಮಟ್ಟ ಮೇಲಕ್ಕೇರಲಿ. ನಾವೆಲ್ಲರೂ ಬಾಂಧವ್ಯದಿಂದ ವರ್ತಿಸಿ ಸಂಸ್ಥಾನದ ಏಳಿಗೆ ಸಾಧಿಸೋಣವೆಂದು ಶ್ರೀ. ಭಾಷ್ಯಂರು ನಮ್ಮ ಸುದ್ದಿಗಾರರಿಗಿತ್ತ ಸಂದರ್ಶನದಲ್ಲಿ ಹೇಳಿದ್ದಾರೆ.

ವಿಜಯದಶಮಿ ದಿನವನ್ನು ಸ್ವಾತಂತ್ರ್ಯ ದಿನವೆಂದು ಇಡೀ ಸಂಸ್ಥಾನದ ತುಂಬೆಲ್ಲ ಆಚರಿಸಲಾಯಿತು.

ಅಧಿಕಾರ ಸ್ವೀಕಾರದ ನಂತರ ಮಂತ್ರಿಗಳನ್ನು ಜನರು ಮೆರವಣಿಗೆಯಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಕರೆದೊಯ್ದು ನಂತರ ಸಾರ್ವಜನಿಕ ಸಭೆ ಸೇರಿಸಿದರು. ಈ ಸಭೆಯಲ್ಲಿ ಒಂಭತ್ತೂ ಮಂತ್ರಿಗಳು ಭಾಷಣ ಮಾಡಿದರು. ಮುಖ್ಯಮಂತ್ರಿಗಳಾದ ಶ್ರೀ ರೆಡ್ಡಿಯವರು ಮಾತಾಡುತ್ತ ನಮ್ಮ ಆಡಳಿತವನ್ನು ನಾವು ಗಾಂಧೀತತ್ವಗಳ ಪ್ರಕಾರ ನಡೆಸುವೆವು. ಈಗ ನಮಗೆ ಹೊಣೆಗಾರ ಸರಕಾರ ದೊರೆತದ್ದರಿಂದ ಹಿಂದಿನ ಲೋಪದೋಷಗಳನ್ನೆಲ್ಲ ಮರೆತು ಬಿಡಬೇಕು. ಎಂದು ಹೇಳಿದರು. ಸಂಸ್ಥಾನದಲ್ಲಿ ಆಹಾರ ಪರಿಸ್ಥಿತಿ ಬಿಕ್ಕಟ್ಟಿನದಾಗಿದ್ದು ನಮ್ಮ ಪ್ರಯತ್ನಗಳಷ್ಟೇ ಸಾಲದು. ಹಿಂದುಸ್ತಾನ ಸರಕಾರವು ನೆರವಾಗಬೇಕು. ಇದಲ್ಲದೆ ಇನ್ನೂ ಅನೇಕ ಸಮಸ್ಯೆಗಳನ್ನು ನಾವು ಬಿಡಿಸಬೇಕಾಗಿದೆಂದೂ ಹೇಳಿದರು.

ಹುಬ್ಬಳ್ಳಿಯಲ್ಲಿ ಗಲಭೆ

೧೪೪ ಕಲಮು ಜಾರಿ

ಹುಬ್ಬಳ್ಳಿ ೨೫ನೇ ತಾರೀಖು ಸಾಯಂಕಾಲ ೬ ½ ಗಂಟೆಯ ಸುಮಾರಿಗೆ ಹಳೆ ಹುಬ್ಬಳ್ಳಿಯ ಚನ್ನಪೇಟೆಯಲ್ಲಿ ಸೌಮ್ಯಸ್ವರೂಪದ ಜಾತಿಯ ಗಲಭೆ ಸಂಭವಿಸಿ ಲಾಠಿ ಹೊಡೆತದಿಂದ ಕೆಲವರಿಗೆ ಗಾಯಗಳಾಗಿರುತ್ತವೆ. ಒಟ್ಟಿಗೆ ಸುಮಾರು ೨೭ ಜನರಿಗೆ ಗಾಯಗಳಾಗಿದ್ದು ಅದರಲ್ಲಿ ೬ ಜನರಿಗೆ ಸ್ವಲ್ಪ ತೀವ್ರಗಾಯಗಳಾಗಿವೆ. ಇವರೆಲ್ಲರೂ ಇಲ್ಲಿಯ ಮುನಸಿಪಲ್ ಆಸ್ಪತ್ರೆಯಲ್ಲಿ ಉಪಚಾರ ಹೊಂದಿದರು. ಸಬರ್ಬನ್ ಪೋಲೀಸ ಸ್ಟೇಶನದ ಫೌಜದಾರರಿಗೂ ಸಹ ಸ್ವಲ್ಪ ಗಾಯವಾಗಿದೆ. ಅವರು ಪುಂಡರನ್ನು ಹಿಂದಕ್ಕಟ್ಟುವ ಪ್ರಯತ್ನದಲ್ಲಿದ್ದಾಗ ಲಾಠಿ ಪೆಟ್ಟು ಬಿದ್ದಿತಂತೆ ಆದರೂ ಪೋಲಿಸರು ಪರಿಸ್ಥಿತಿಯನ್ನು ಶಾಂತಗೊಳಿಸಿದರು. ಗಲಭೆಯ ಕಾರಣ ನಿಶ್ಚಿತವಾಗಿ ತಿಳಿದಿರದಿದ್ದರೂ ಸುಮಾರು ೫ ಗಂಟೆಗೆ ಒಂದು ವರ್ಗದ ಕೆಲವರು ಕುಡಿದು ಮತ್ತರಾಗಿ ಹಳೆಹುಬ್ಬಳ್ಳಿಯಲ್ಲಿಯ ಹಳ್ಳದಲ್ಲಿ ಬಟ್ಟೆ ಒಗೆಯುತಿದ್ದ ಹೆಣ್ಣುಮಗಳನ್ನುದ್ದೇಶಿಸಿ ಅಪಮಾನಕರ ರೀತಿಯಲ್ಲಿ ವರ್ತಿಸಿದ್ದೇ ಈ ಗಲಭೆಗೆ ಕಾರಣವೆಂದು ಹೇಳಲಾಗುತ್ತದೆ. ಜಿಲ್ಹಾ ಮ್ಯಾಜಿಸ್ಟ್ರೇಟರು ಧಾರವಾಡ, ಗದಗ ರಸ್ತೆಯ ದಕ್ಷಿಣ ಭಾಗ ಮತ್ತು ರೇಲ್ವೆ ಪ್ರದೇಶವನ್ನು ಬಿಟ್ಟು ಉಳಿದೆಲ್ಲ ಮುನಸಿಪಾಲಿಟಿ ಹದಿಯಲ್ಲಿ ೧೪೪ ಕಲಮು ಜಾರಿ ಮಾಡಿ ೫ ಕ್ಕಿಂತ ಹೆಚ್ಚು ಜನ ಅಡ್ಡಾಡಬಾರದು. ಚೂರಿ ಮುಂತಾದನು. ಒಡಿಯಬಾರದು [illegible]

ನಾ ಕಂಡ ಹುಕ್ಕೇರಿ ರಾಮರಾಯರು

[ಲೇ :— ಶ್ರೀ. ತಲ್ಲೂರ ರಾಯನಗೌಡರು ಪಾಟೀಲ]

ಕರ್ನಾಟಕದ ರಾಜಕೀಯ ರಂಗದಲ್ಲಿಯ ಅನೇಕ ಹಳೆಯ ಹುದ್ದರಿಗಳಲ್ಲಿ ರಾಮರಾಯರು ಪ್ರಮುಖರು; ಇಲ್ಲಿಯ ಜನಜೀವನದ ಮೇಲೆ ಸ್ಥಿತ್ಯಂತರಗಳನ್ನುಂಟು ಮಾಡಿದವರಲ್ಲಿಯೇ ಅಗ್ರಗಣ್ಯರು. ರಾಜಕೀಯ ಕ್ಷೇತ್ರದಲ್ಲಿ ಈ ಶತಕದ ಆರಂಭದಿಂದ ಈ ವರೆಗಿನ ಕಾಲವನ್ನು ಮೂರು ಭಾಗವಾಗಿ ವಿಭಾಗಿಸಿದರೆ ಇವರು ನಡುವಿನ ಪೀಳಿಗೆಯವರಾಗುತ್ತಾರೆ. ಹೋಂ ರೂಲ್ ಚಳವಳಿ ಕರ್ತರ ಗುಂಪಿಗೆ ಸೇರಿದ ದಿವಂಗತರಾದ ಗದಗಯ್ಯಾಸ್ವಾಮಿ ಹೊಸ್ಮಾಪುರಮಠ ವಕೀಲರು, ಸಂಗನಗೌಡರು ಮತ್ತು ಅವರ ಸಂಗಡಿಗರು ಮೊದಲನೆಯ ಗುಂಪಿನವರು. ಆಮೇಲೆ ಗಾಂಧಿಯುಗವು ಆರಂಭವಾಯಿತೆಂದು ತಿಳಿಯತಕ್ಕದ್ದು; ಈ ಗುಂಪಿನ ಅನೇಕ ಮುಂದಾಳುಗಳು ಕರ್ನಾಟಕದಲ್ಲಿ ಬಹು ದೊಡ್ಡ ಕಾರ್ಯಮಾಡಿ ಕರ್ನಾಟಕವನ್ನು ಇಂದಿನ ದರ್ಜೆಗೆ ತಂದಿದ್ದಾರೆಂದು ಹೇಳಬಹುದು.

ಈ ಮುಂದಾಳುಗಳ ಪಂಕ್ತಿಯಲ್ಲಿ ದಿವಂಗತ ಕೌಜಲಗಿ ಶ್ರೀನಿವಾಸರಾಯರು, ಹುದಲಿ ಗಂಗಾಧರರಾಯರು ಮತ್ತು ಡಾಕ್ಟರ ಹರ್ಡೀಕರ, ದಿವಾಕರ ಮುಂತಾದವರು. ಶ್ರೀ ಹುಕ್ಕೇರಿ ರಾಮರಾಯರು ಈ ಗುಂಪಿಗೇ ಸೇರಿದವರು. ೧೯೧೯–೧೯೨೦ ರಿಂದೀಚೆ ಈ ಗುಂಪಿನವರು ಕರ್ನಾಟಕದ ರಾಜಕೀಯ ಜೀವನವನ್ನೇ ಪಲ್ಲಟಿಸಿ ಬಿಟ್ಟರು. ಹಿಂದುಸ್ತಾನದ ರಾಜಕೀಯ ಜೀವನದಲ್ಲಿ ಕರ್ನಾಟಕಕ್ಕೆ ಒಂದು ಸ್ಥಾನವನ್ನು ತಂದು ಕೊಟ್ಟವರಲ್ಲಿ ಈ ಗುಂಪಿನವರೇ ಅಗ್ರಗಣ್ಯರು. ಹಿಂದುಳಿದಿದ್ದ ಕರ್ನಾಟಕವು ನಕಾಶೆಯಲ್ಲಿದೆಯೋ ಇಲ್ಲೋ ಎಂಬ ನಿದ್ರಾವಸ್ಥೆಯಲ್ಲಿದ್ದ ಕನ್ನಡ ನಾಡಿಗೆ ಒಂದು ಮೆರಗು ಕೊಟ್ಟರು. ಈ ಗುಂಪಿನಲ್ಲಿಯೇ ಶ್ರೀ. ಹುಕ್ಕೇರಿ ರಾಮರಾಯರು ಪ್ರಮುಖ ವ್ಯಕ್ತಿಗಳು; ೧೯೨೦ ರಿಂದ ಜನ್ಮಿಸಿದ ಕಾಂಗ್ರೆಸ್ಸಿನ ಯಾವದೇ ಚಟುವಟಿಕೆಗಳು, ಕಾರ್ಯಕ್ರಮಗಳು, ಯೋಜನೆಗಳು ಹೊರಗೆ ಬಂದು ಕಾರ್ಯರೂಪಕ್ಕೆ ಇಳಿದಿದ್ದರೆ ಅವುಗಳ ಜನಕರು—ಶ್ರೀ. ಹುಕ್ಕೇರಿ ರಾಮರಾಯರು ಎಂದು ಖಂಡಿತವಾಗಿ ಹೇಳಬಹುದು.

ಅಂತೆಯೇ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಕಾರ್ಯಕ್ರಮದ ಪಟ್ಟಿಯೆಂದರೆ ಶ್ರೀ ರಾಮರಾಯರ ಮೆದುಳಿನ ಹಿಂದಿನ ಬಂಡವಲು. ಒಂದೇ ಮಾತಿನಲ್ಲಿ ಹೇಳುವದೇ ಆದರೆ, ೧೯೨೦ ರಿಂದ ೧೯೩೭ ರ ವರೆಗೆ ಕರ್ನಾಟಕ ಕಾಂಗ್ರೆಸ್ಸಿನ ಬುದ್ಧಿ—ಭಾಂಡಾರ (Brain Trust) ವಾಗಿದ್ದರು. ಇವರಿಗೆ ಕಾಂಗ್ರೆಸ್ಸಿನ ಕೋಶವೆಂದರೂ ಸರಿಯೇ. ೧೯೨೦ ರಿಂದೀಚೆ ಖಿಲಾಫತ–ಚಳವಳಿ, ಅಸಹಕಾರ ಅಂದೋಲನ, ಕಾಯಿದೆಭಂಗ ಮುಂತಾದ ಕರ್ನಾಟಕದ ರಾಜಕೀಯ ಹೋರಾಟಗಳಲ್ಲಿ ಕಾರ್ಯದರ್ಶಿಗಳಾಗಿಯೇ ದುಡಿದಿದ್ದಾರೆ. ಬಹುತರ ಆ ೧೫ ವರುಷಗಳವರೆಗೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಪ್ರಧಾನ ಕಾರ್ಯದರ್ಶಿಯ ಪಟ್ಟವು ಇವರಿಗೇನೇ ಮೀಸಲಾಗಿತ್ತೆಂದು ಹೇಳಬಹುದು. ಅಂದಿನ ಇಂದಿನ ಕಾರ್ಯದರ್ಶಿಗಳ ದರ್ಜೆಯಲ್ಲಿ ಬಹು ಅಂತರವಿತ್ತೆಂದು ಹೇಳಬಹುದು. ಅಂದಿನ ದಿನಮಾನಗಳು ಬಲಿದಾನ, ತ್ಯಾಗಮಯವಾಗಿ ಅಧಿಕಾರದರ್ಪದಿಂದ ಹೊರತಾಗಿ, ಕಷ್ಟತಾಪತ್ರಯಗಳಿಂದ ಕೂಡಿದ್ದವು. ನಿಜವಾದ ಕಾರ್ಯ ಮಾಡಿದ, ಮಾಡುವ ಜಾಣ್ಮೆಯೂ ಕಾರ್ಯಕರ್ತನ ತ್ಯಾಗ, ಕಷ್ಟಸಹನೆಯ ಪರೀಕ್ಷೆಯ ಕಾಲವೆಂದರೆ, ಆ ದಿನಮಾನಗಳೇ ಆಳತೆಗೋಲುಗಳು ಮತ್ತು ರಾಜಕೀಯಜೀವನದ ಮುಖಂಡತ್ವದ ಹೊಣೆಗಾರಿಕೆ ವಹಿಸುವ ಧೈರ್ಯ ಸಾಹಸಗಳನ್ನೂ, ಸಾಗಿಸಿಕೊಂಡು ನಡೆಯುವ ನಿರ್ಧಾರಗಳನ್ನೂ ಆದರ ಕಟು ಅನುಭವಗಳ ಪ್ರತಿಕ್ರಿಯೆಗಳನ್ನು ತಡೆಯುವಶಕ್ತಿಯನ್ನೂ ತಿಳಿದುಕೊಳ್ಳಬೇಕಾಗಿದ್ದರೆ, ಶ್ರೀ ಹುಕ್ಕೇರಿ ರಾಮರಾಯರನ್ನೆ ನಾವು ಕೇಳಬೇಕು. ಹಾಗೂ ಅವರ ಸಲಹೆ ಪಡೆಯಬೇಕೆಂದು ಬೊಟ್ಟುಮಾಡಿ ತೋರಿಸಬಲ್ಲೆನು. ಇವರಂಥ ಅನುಭವಿಕ ತಾಳ್ಮೆಯ, ಬುದ್ಧಿಜೀವಿಗಳೇ ಕರ್ನಾಟಕದಲ್ಲಿ ಇಂದಿನ ರಾಜಕೀಯ ಪ್ರಪಂಚದಲ್ಲಿ ಇಲ್ಲೆಂದು ಹೇಳಿದರೆ ತಪ್ಪಾಗದು. ಈ ಮಾತಿಗೆ ಕಾಂಗ್ರೆಸ್ಸೇತರ ಪಕ್ಷಗಳು ಒಪ್ಪಲಿಕ್ಕಿಲ್ಲವಾದರೂ, ಕಾಂಗ್ರೆಸ್ಸ ಹಾಗೂ ಕಾಂಗ್ರೆಸ್ಸೇತರ ಕಾರ್ಯಕ್ಷೇತ್ರಗಳಲ್ಲಿ ಒಡನಾಟ ಮಾಡಿದ ಮಟ್ಟಿಗೆ ಒಂದು ಮಾತನ್ನು ಧೈರ್ಯದಿಂದ ಹೇಳಬಲ್ಲೆನು. ಅದೇನೆಂದರೆ, ಒಂದೊಂದು ಕ್ಷೇತ್ರದಲ್ಲಿ, ಒಂದೊಂದು ವಿಷಯದಲ್ಲಿ, ಒಂದೊಂದು ಜೀವನದ ವಿವಿಧ ಸಮಸ್ಯೆಯಲ್ಲಿ, ಒಬ್ಬೊಬ್ಬರು ಒಂದೊಂದು ಬಗೆಯಿಂದ ವೈಶಿಷ್ಟ್ಯಪೂರ್ಣರಾಗಿರಬಹುದು; ಆದರೆ ರಾಮರಾಯರು ಎಲ್ಲ ವಿಷಯಗಳಲ್ಲಿ ಕರ್ನಾಟಕದ ಜನಜೀವನದ ರೈತ—ಕೂಲಿಕಾರ—ಹಮಾಲರನ್ನು ಮೊದಲ್ಗೊಂಡು ಖಾದಿ-ಸ್ವದೇಶಿಗಳಿಂದ ಔದ್ಯೋಗೀಕರಣ ವಿಷಯಗಳಲ್ಲಿ ನಿಷ್ಣಾತರು. ಅಂತೆಯೇ ನಮ್ಮ ಕಾಂಗ್ರೆಸ್ಸಿನ ವರ್ಗಗಳಲ್ಲಿ ಅವರಿಗೆ (Encyclopedia of Karnatak) ಕನ್ನಡ ನಾಡಿನ ವಿಶ್ವ ಕೋಶ' ವೆಂದೇ ಸಂಬೋಧಿಸಲಾಗುತ್ತಿದ್ದು, ನಿಜಕ್ಕೂ ಪ್ರತಿಶಬ್ದಗಳು ಸರಿಯಾಗಿವೆ. ಹಾಗೂ ಸಮಂಜಸವಾಗಿವೆಯೆಂದೇ ಹೇಳಬಲ್ಲೆನು.

ಕನ್ನಡ ನಾಡಿನ ಪ್ರತಿಯೊಂದು ಹೋರಾಟಗಳ ಕಾರ್ಯನಕ್ಷೆ, ಕಾರ್ಯಪದ್ಧತಿ, ಕಾರ್ಯಕರ್ತರ ಇತಿಹಾಸ ಬಲ್ಲವರೆಂದರೆ ಇವರೊಬ್ಬರೇ ಎಂದು ಕೈಯೆತ್ತಿ ಹೇಳಬಲ್ಲೆ. ಇದಕ್ಕೆಯಾರ ಅಭಿಪ್ರಾಯವೂ ಎರಡಾಗದು. ಮತ್ತು ಕಾಲಾವಧಿಯ ಕನ್ನಡ ರಾಜಕೀಯ, ಸಾಮಾಜಿಕ ಇತಿಹಾಸ ಹೇಳುವ ಜೀವಂತ ಪುಸ್ತಕವೆಂದರೆ ಹುಕ್ಕೇರಿಕರರು; ಇದರ ಜೊತೆಗೆ ಮತ್ತೊಂದು ಆಹ್ವಾನವನ್ನು ನಾನು ಧೈರ್ಯದಿಂದ ಕೊಡಬಲ್ಲೆ ಅಂದರೆ, ಕನ್ನಡ ನಾಡಿನಲ್ಲಿ ೧೯೩೦ರಿಂದೀಚೆ— ಕರ್ನಾಟಕದ ಸರ್ವವಿಧದಿಂದ ಇತಿಹಾಸವನ್ನು ಒಂದು ಸಮಂಜಸ ಮತ್ತು ಪರಿಮಿತಿಯುಕ್ತ ಸಂಗ್ರಹವನ್ನು ಕೊಡಬಲ್ಲ ಹಾಗು ಇಡಬಲ್ಲ ಇನ್ನೊಂದು ವ್ಯಕ್ತಿಯೇ ನಮ್ಮ ಕಾಂಗ್ರೆಸ, ಮತ್ತುಳಿದ ಪಕ್ಷಗಳಲ್ಲಿ ಇಲ್ಲೆಂದೇ ಹೇಳುತ್ತೇನೆ. ಕರ್ನಾಟಕದ ಇತಿಹಾಸವನ್ನ ಮಾರ್ಪಡಿಸಿದ ಅನೇಕ ಪ್ರಸಿದ್ಧ ವ್ಯಕ್ತಿಗಳು, ಮುಂದಾಳುಗಳು, ಕನ್ನಡ ನಾಡಿನಲ್ಲಿ ಇಲ್ಲೆಂದು ನಾನು ಹೇಳುತ್ತಿರುವದಿಲ್ಲ. ಬ್ರಾಹ್ಮಣೇತರ ಪಕ್ಷವಿರಲಿ, ಹಿಂದುಳಿದ ಪಕ್ಷವಿರಲಿ, ಅಲ್ಲಿನ ಮುಖಂಡರು ಪ್ರಚಲಿತ ರಾಜಕಾರಣ ಮತ್ತು ಕರ್ನಾಟಕದ ವಿವಿಧ ಕ್ಷೇತ್ರದ ಇತಿಹಾಸದ ಕ್ರಿಯೆಪ್ರತಿಕ್ರಿಯೆಗಳನ್ನು ಅವರವರ ದೃಷ್ಟಿಕೋನದಂತೆಯಾದರೂ ಚಿಂತೆಯಿಲ್ಲ ಸರಿಯಾಗಿ ಹೇಳುವವರನ್ನು ಹಾಗು ಪರಿಸ್ಥಿತಿಯ ಯೋಗ್ಯನಿಧಾನ ಮಾಡುವವರನ್ನು ನಾನು ಕಂಡಿಲ್ಲೆಂದು ಹೇಳುತ್ತೇನೆ. ಆದರೆ ಹುಕ್ಕೇರಿ ರಾಮರಾಯರು ಆ ಕಾರ್ಯವನ್ನು ಮಾಡಬಲ್ಲರು. ಕಾರ್ಯಪದ್ಧತಿಯಲ್ಲಿ, ಕಾರ್ಯಮಾರ್ಗದಲ್ಲಿ ಇನ್ನುಳಿದ ಪಕ್ಷಪಂಗಡದವರು ಭಿನ್ನಾಭಿಪ್ರಾಯ ಪಡಬಹುದು. ಕರ್ನಾಟಕದಲ್ಲಿ ರಾಜಕೀಯ ಪಕ್ಷಪಂಗಡ ಮತ್ತು ರಾಜಕೀಯ ಮಾರ್ಗ, ಆ ಮಾರ್ಗದಲ್ಲಿಯ ಕಾರ್ಯಯೋಜನೆ ಕಾರ್ಯಪದ್ಧತಿಯಲ್ಲಿ ಸ್ಪಷ್ಟವಾದ ಪ್ರಾಮಾಣಿಕ ಅಭಿಪ್ರಾಯ ತೋರಿಸುವ, ಮತ್ತು ಧೈರ್ಯದಿಂದ ಹೇಳುವ ರೂಢಿಯೇ ಕಡಿಮೆ; ತೆರೆಯ ಮರೆಯಲ್ಲಿ ಟೀಕೆ—ಟಿಪ್ಪಣಿ ಮಾಡುವದೇ ಒಂದು ಚಟವಾಗಿ ಬೆಳೆದಿದೆ. ಇದೇ ದುರ್ದೈವ! ಈಪರಿಣಾಮದಿಂದ ಕರ್ನಾಟಕದಲ್ಲಿ ಸ್ಪಷ್ಟವಾದ ರಾಜಕೀಯ ಪಕ್ಷಗಳು, ಅದಕ್ಕನುಗುಣವಾದ ರಾಜಕೀಯ ಧೋರಣೆಗಳೂ ಕಾರ್ಯನಕ್ಷೆ,—ಕಾರ್ಯಪದ್ಧತಿಗಳೂ ಕಂಡುಬಂದಿಲ್ಲ. ಯಾವನಾದರೊಬ್ಬ ಕಾರ್ಯಕರ್ತನ ಮುಂದಾಳುವನ್ನು ಅವನ ಜಾತಿಯ ಮೇಲಿಂದ ಅಳೆಯುತ್ತಿದ್ದೇವೆ; ಹಾಗೂ ಅದನ್ನೇ ಆಧಾರವಾಗಿಟ್ಟುಕೊಂಡು ಬೆಳೆಕಟ್ಟುತ್ತಿದ್ದೇವೆ. ಅಂತೆಯೇ ಕರ್ನಾಟಕದ ಜೀವನದಲ್ಲಿ ಖಚಿತ ರಾಜಕೀಯ ಪಕ್ಷಗಳಾಗಲಿ, ರಾಜಕೀಯ ಧೋರಣೆಗಳಾಗಲೀ ಒಡೆದು ಮೂಡಿರುವದಿಲ್ಲ. ಕೇವಲ ಹಿಂದೀ ರಾಜಕರಣದಲ್ಲಿಯ ಮೇಲಿಂದ ಬರುವ ಪಕ್ಷಗಳನ್ನೇ ಸೇರಿಸಿಕೊಂಡು ಅಂಥಾ ಪಕ್ಷಗಳ ಗೊತ್ತು ಗುರಿಗಳನ್ನು ಘೋಷಿಸುತ್ತು ನಡೆದಿರುತ್ತೇವೆ. ಹೀಗಾಗಿ ಕರ್ನಾಟಕನ ಮುಖಂಡತ್ವದ ಬಗ್ಗೆ ಯೋಗ್ಯ ನಿಧಾನ ಮಾಡಲಿಕ್ಕೆ ನಮಗೆ ಸಾಕಷ್ಟು ಬುದ್ಧಿಯಿಲ್ಲದಾಗಿರುತ್ತದೆ. ಈ ನಿಮಿತ್ತ ಶ್ರೀ ರಾಮರಾಯರು ಕರ್ನಾಟಕದ ಬ್ರಾಹ್ಮಣವರ್ಗಕ್ಕೆ ಸೇರಿದವರೆಂದು ತಿಳಿದು ಅವರ ಜೀವನ, ಆ ಜೀವನದ ಅನುಭವ ಹಾಗು ಜೀವನ ಚೈತನ್ಯಗಳಿಂದಾದ ಫಲಗಳನ್ನು ಮುಚ್ಚಿಸಬೇಕೆಂಬ ಮನೋವೃತ್ತಿಯವನು ನಾನಲ್ಲ. ಹುಕ್ಕೇರಿ ರಾಮರಾಯರ ಜೊತೆ ಕೂಡಿಯೂ ಕಾರ್ಯಮಾಡಿದ್ದೇನೆ; ಅವರ ಆದೇಶ ಪಡೆದುಕೊಂಡು ಸ್ವಯಂಸೇವಕನೂ ಆಗಿದ್ದೇನೆ; ಹಾಗೂ ಭಿನ್ನಾಭಿಪ್ರಾಯಪಟ್ಟು ಕಾಂಗ್ರೆಸ್ಸಿನ ಆಂತರಿಕ ಪಕ್ಷರಚನಾಕಾರ್ಯಗಳಲ್ಲಿ ಸಾಕಷ್ಟು ಎದುರಿಸಿದವನೂ ನಾಗಿದ್ದೇನೆ. ಅದೇನಿದ್ದರೂ ನಾನು ಅವರನ್ನು ಸಂಚಾರ ಮರ್ಯಾದಿಸುತ್ತ ಬಂದ ಒಬ್ಬ ಜೊತೆ ಕಾರ್ಯಕರ್ತನಿದ್ದೇನೆ.

ಇಂದಿನ ವರೆಗೆ ಹಿಂದೀ ಮತ್ತು ಕರ್ನಾಟಕ ರಾಜಕಾರಣದಲ್ಲಿ ನಿಶ್ಚಿತ ಪಕ್ಷರಂಗತಗಳು ಕಾಂಗ್ರೆಸ್ಸಿನಲ್ಲಿ ಉದ್ಭವಿಸಿದ್ದಿಲ್ಲ. ೧೯೪೨ರಿಂದೀಚೆಗೆ ಕಾಂಗ್ರೆಸ್ಸಿನಲ್ಲಿ ಭಿನ್ನ ಭಿನ್ನ ಪಕ್ಷಗಳು ಜನ್ಮತಾಳಿವೆ. ಅಂತೇ ಹುಕ್ಕೇರಿ ರಾಮರಾಯರು ಯಾವ ಗುಂಪಿಗೆ ಸೇರಿದವರೆಂದು ಹೇಳಬರುವಂತಿಲ್ಲ. ಈ ವರೆಗೆ ಸಾಮ್ರಾಜ್ಯ ವಿರೋಧಿಯಾಗಿಯೂ, ರಾಷ್ಟ್ರೀಯರಾಗಿಯೂ ಕಾರ್ಯಮಾಡುತ್ತ ಬಂದ ನಿಜವಾದ ಕಾಂಗ್ರೆಸ್ಸಿಗರಾಗಿದ್ದಾರೆ. ಕಾಂಗ್ರೆಸ್ಸಿನ ಅಂತರಂಗದಲ್ಲಿ, ಇವರು ನಾನು ತಿಳಿದ ಮಟ್ಟಿಗೆ ವರ್ಗರಹಿತ (Class less) ಧೋರಣೆಯವರು; ಇಂದಿನ ಸಾಮ್ಯವಾದಿ, ರೈತ-ವಾದಿ, ಎಡ-ಬಲ ಪಕ್ಷಗಳಿಗೆ ಸೇರಿರದಿದ್ದರೂ ಕೆಳದರ್ಜೆಯ ಜನತೆಯ ಪಕ್ಷಪಾತಿಗಳೆಂದು ನನಗೆ ಅನಿಸಿದೆ. ಆದರೂ ಈ ಪಕ್ಷಗಳ ಸದಸ್ಯರೂ ಅಲ್ಲ. ಈ ವರ್ಗ ಕಲಹದ ಸಮಸ್ಯೆಗಳನ್ನು ನೋಡುವಾಗೆಲ್ಲ ದಯೆ ಮತ್ತು ಬಾಂಧವ್ಯ ದೃಷ್ಟಿಯಿಂದ ಜನತೆಯ ಕಡೆಗೇನೇ ಇದ್ದಾರೆಂದು ನನ್ನ ನಿಧಾನವಾಗಿದೆ. ಒಬ್ಬ ಬುದ್ಧಿಜೀವಿಗೂ ಅವರ ನೆರೆಯಲ್ಲಿ ಸ್ಥಳವಿದೆ; ಒಬ್ಬ ಔದ್ಯೋಗೀಕರಣದ ಶೆಟ್ಟಿಗೂ ಅವರ ಪಕ್ಕದಲ್ಲಿ ಸ್ಥಳವಿದೆ; ಹಾಗೆಯೇ ಕೂಲಿಕಾರ, ಹಮಾಲ, ಭಂಗಿ, ಪ್ರೇಕ್ಷ ಕಾರ್ಮಿಕರಿಗೂ ಅಷ್ಟೇ ಸ್ಥಳವು ಸಿಗುತ್ತದೆ. ಹೀಗಾಗಿ ಪರಕೀಯ ಸಾಮ್ರಾಜ್ಯವಾದಿಯಿರಲಿ, ಗಾಂಧಿವಾದಿ ಜಾಗ್ರತ ಮಾಡುವ ರೈತ ಮಾಲಿಕರಿರಲಿ, ಕ್ರಾಂತಿಕಾರರಿರಲಿ [illegible] ರಕ್ತದಿಂದ ಕೂಡಿದ ಕ್ರಾಂತಿಕಾರನಿರಲಿ ಅವನ ಜೊತೆ ಭುಜ ಹಚ್ಚಿ ಚರ್ಚಿಸುತ್ತ, ಸಮತೋಲನೆಯಿಂದ ವಿಚಾರ ವಿನಿಮಯ ಮಾಡುತ್ತಾರೆ.

ಒಟ್ಟಿಗೆ, ಶ್ರೀ ಹುಕ್ಕೇರಿ, ರಾಮರಾಯರು ಕರ್ನಾಟಕದ ಒಬ್ಬ ಪ್ರಮುಖ ಮುಂದಾಳುಗಳ ಒಬ್ಬ ಮೇಲ್ಪಂಕ್ತಿಯ ಬುದ್ಧಿಜೀವಿ, ಲೇಖಕ ಗ್ರಂಥಕರ್ತ, ಸರ್ವ ವಿಷಯ ಸಮನ್ವಯಗೊಂಡ ಒಬ್ಬ ಸಿದ್ಧಿ. ಅಂತೆಯೇ ಶ್ರೀ ಹುಕ್ಕೇರಿ ರಾಮರಾಯರು ತಮ್ಮ ಸಾರ್ವಜನಿಕ ಜೀವನ ಅತ್ಯಕಥೆ ಬರೆಯಲಿ, ಅವರ ಅನುಭವದ ಸಾರ ಕರ್ನಾಟಕಕ್ಕೆ ದೊರೆಯಲಿ ಎಂದು ಹಾರೈಸುತ್ತೇನೆ.

ನನ್ನ ಪರಿಚಯದ ಮಾಸ್ತರರು

(೧೦ ನೇ ಪುಟದಿಂದ ಮುಂದುವರಿಯುದು)

ದೆನು. ಆಗ ಕೆಲವು ಕಾಲ ಶ್ರೀ ದಿವಾಕರರೂ ಕೆಲವು ಕಾಲ ಶ್ರೀ. ಹುಕ್ಕೇರಿಕರರೂ ಅದರ ಮುಖ್ಯ ಕಾರ್ಯದರ್ಶಿಯಾಗಿದ್ದರು. ಇಷ್ಟು ದಿನದ ನಿಕಟಸಹವಾಸದಿಂದ ಶ್ರೀ. ಹುಕ್ಕೇರಿಕರರು ಈಗಲೂ ನನ್ನ ಹಿತಚಿಂತಕರೂ ಸಲಹೆಗಾರರೂ ಆಗಿರುವರು. ಅವರ ಸ್ವಭಾವದಲ್ಲಿ ಕೆಳಗಿನ ಮುಖ್ಯವಾದ ಗುಣಗಳನ್ನು ನಾನು ಕಂಡಿದ್ದೇನೆ.

ಮಾಸ್ತರರ ಮೊದಲನೆಯ ಗುಣವು ಮನಸ್ಸಿನ ದಾರ್ಢ್ಯ. ತಮ್ಮ ಮೊದಲನೆಯ ಕುಟುಂಬ ಹಾಗೂ ಎರಡನೆಯ ಕುಟುಂಬದೊಡನೆ ಪ್ರಪಂಚ ಸಾಗಿಸುವಾಗ ಅವರಿಗೆ ಬಂದ ಅಡಚಣಿಗಳನ್ನು ನಾನು ನೋಡುತ್ತಿದ್ದೆನು. ಎಷ್ಟು ಕಷ್ಟಬಂದರೂ ಹಿಡಿದಮಾರ್ಗವನ್ನು ಬಿಡಬಾರದೆಂಬ ಅವರಮನೋನಿಶ್ಚಯವು ಯಾವಾಗಲೂ ಒಡೆದು ಕಾಣುತ್ತಿತ್ತು. ಈ ಬಗ್ಗೆ ಅನೇಕ ಉದಾಹರಣೆಗಳನ್ನು ಹೇಳಬಹುದು. ೧೯೨೧—೨೨ರಲ್ಲಿ ಇವರ ಮೊದನೆಯ ಹೆಂಡತಿ ಅವರ [illegible] ಇವರೊಂದಿಗೆ ಕಳಿಸುತ್ತಿದ್ದ ಪರದೇಶಿ ನೂಲಿನ ಖಣಗಳನ್ನು ಮಾಸ್ತರರು ನಿರಾಕರಿಸುವದು ತಮಗೆ ಬಹಳ ತಾಪದಾಯಕವಾಗಿದೆಯೆಂದು ಅವರ ಹುಣೆಯಲ್ಲಿಯ ಬೀಗರು ನನ್ನೆದುರು ಹೇಳುತ್ತಿದ್ದರು. ಮಗಳಿಗೆ ಕಳಿಸುವ [illegible] ಗಳನ್ನು ನಿರಾಕರಿಸುವದು [illegible] ತವರುಮನೆಯವರು [illegible].

ಅವರ ಎರಡನೆಯ [illegible] ತಾಳ್ಮೆ. ನಿಕಟ ಸಹವಾಸದಿಂದ [illegible] ಮಾಸ್ತರರಿಗೆ ಕಟು ಶಬ್ದಗಳನು [illegible] ಆಗ ಸಹ ಅವರು ನನ್ನಮೇಲೆ [illegible] ಶಾಂತರೀತಿಯಿಂದ [illegible]

ವರು ಮನೋದಾರ್ಢ್ಯದಿಂದ ಕಷ್ಟಸಹನಶಕ್ತಿಯೂ ಅವರಿಗೆ ಹೆಚ್ಚಾಗಿದೆ.

ಮೂರನೆಯ ಗುಣವೆಂದರೆ ಸತತೋದ್ಯೋಗ. ಕನ್ನಡ ಮಾತನಾಡಲಿಕ್ಕೆ ಅಥವಾ ಒಂದು ಅಕ್ಷರ ಕೂಡ ತಿಳಿಯದವರು ಧಾರವಾಡಕ್ಕೆ ಬಂದ ಮೇಲೆಯೇ ಅದನ್ನು ಕಲಿತು ಉತ್ತಮವ್ಯಾಖ್ಯಾನಗಳನ್ನು ಹೇಳುವಷ್ಟು ಪ್ರಾವೀಣ್ಯವನ್ನು ಸಂಪಾದಿಸಿರುವದು ಈ ಉದ್ಯೋಗದ ಫಲವಾಗಿದೆ. ಅದರಂತೆಯೇ ಅವರು [illegible]

[illegible]



ಅ. ಭಾ. ಸಂಸ್ಥಾನ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಶೇಖ ಅಬ್ದುಲ್ಲಾ. ಶ್ರೀಮತಿ ಇಂದಿರಾ ಗಾಂಧಿ (ಪಂಡಿತ ಜವಾಹರಲಾಲರ ಮಗಳು) ಮತ್ತು ಅವರ ಮಗನು ಹೊಸದಿಲ್ಲಿಯ ವಿಮಾನ ಗೃಹದಲ್ಲಿ

ನಮ್ಮ ಕಾಕಾ

(ಲೇ:— ಸರೋಜ [illegible], ಧಾರವಾಡ.)

ಧಾರವಾಡದ ಮಂಗಳವಾರ ಪೇಟೆಯಲ್ಲಿ ಕನ್ನಡ [illegible] ಒಂದು ಹಳೇ [illegible] ಇದೆ. ಅದರ ಮೇಲ್ಕಟ್ಟವನ್ನೇ ಮನೆಯಾಗಿ [illegible]. ಅದರ ಒಂದು ಕೋಣೆಯಲ್ಲಿ ಇದ ಜ್ಞಾನಭಾಂಡಾರ. ಇಂಥವರೇ ಬರಬೇಕು, ಇದೇ ವೇಳೆಗೆ ಬರಬೇಕು ಎಂಬ ನಿರ್ಬಂಧಗಳಿಲ್ಲ. ಹೆಣ್ಣಾದವರು ಬರಬಹುದು, ಸಣ್ಣವರು ಬರಬಹುದು, ದೊಡ್ಡವರು ಬರಬಹುದು. ನನ್ನವರು ತನ್ನವರು ಅನ್ನದು ಇಷ್ಟರು ಬೇಕಾದವರು ಬೇಡಾದವರು ಎಲ್ಲರೂ ಬರಬಹುದು. ಒಳಗೆ ಚೀಟಿ ಕಳಿಸಿ ಉತ್ತರದ ದಾರಿ ಕಾಯುತ್ತ ಅತ್ತಿಂದಿತ್ತ ಇತ್ತಿಂದತ್ತ ತಿರುಗಾಡಬೇಕಾಗಿಲ್ಲ. ಇಲ್ಲಿಯ ಜ್ಞಾನಭಾಂಡಾರದಿಂದ ಬೇಕಾದಷ್ಟು ಜ್ಞಾನವನ್ನು ಮಾಹಿತಿಗಳನ್ನು ತೆಗೆದುಕೊಂಡು ಹೋಗಬಹುದು. ಹಳೆ ಅನುಭವಗಳನ್ನು ಅದರ ಜತೆಗೆ ಹೊಸ ಯೋಜನೆಗಳನ್ನು ಕೇಳಿಕೊಂಡು ಹೋಗಬಹುದು. ಇಲ್ಲಿ ನಿರಾಶೆಗೆ ಎಡೆಯಿಲ್ಲ. ಇದುವೇ ನಮ್ಮ ಕಾಕಾನ ಮನೆ. ಈ ಜ್ಞಾನಭಾಂಡಾರದ ಒಡೆಯರೇ ನಮ್ಮ ಕಾಕಾ.

ನಾವು 'ಕಾಕಾ' ಎನ್ನುತ್ತಿರುವದು ಬಹುಶಃ ನಮ್ಮ ಕಾಕಾನಿಗೆ ಕೂಡಾ ಗೊತ್ತಿರಲಿಕ್ಕಿಲ್ಲ. ಯಾಕಂದರೆ ನಾವು ಅಂದರೆ ನಮ್ಮ ಗುಂಪಿನವರು ಅವರ ಎದುರಿನಲ್ಲಿ ಮಾತ್ರ "ಮಾಸ್ತರ" ಎಂದೇ ಸಂಬೋಧಿಸುತ್ತೇವೆ. ಆದರೆ ಅವರ ಪರೋಕ್ಷದಲ್ಲಿ 'ಕಾಕಾ' ಎಂದರೆ [illegible] ಗೊತ್ತು [illegible]. ಇವರೇ ನಮ್ಮ [illegible].

ಇವರ ಒಂದೇ, ಒಂದು ದಿವಸದ ಕಾರ್ಯಕ್ರಮ [illegible] ತಿಳಿದುಕೊಂಡರೆ ಇವರ ಭಾಂಡಾರಕ್ಕೆ [illegible] ಬರುವದೆಂಬ ಕಲ್ಪನೆ [illegible]. ಇವರು ಏಳುವದು ಬೆಳಿಗ್ಗೆ [illegible]. [illegible] ಗಂಟೆಯ ವರೆಗೆ [illegible]. [illegible] ಪತ್ರಗಳಿಗೆಲ್ಲ ಇವರೇ [illegible] ನಂತರ ಅದೇಕೆ [illegible] ಗೆ ಪ್ರಾರಂಭವಾಗುತ್ತದೆ. [illegible] ಎಲ್ಲರನ್ನೂ ಸಮಾಧಾನ ಮಾಡಿ [illegible] ನಮ್ಮ ಕಾಕಾನಲ್ಲಿ. [illegible] ಚರ್ಚಿಸಿದಾಗ ಒಬ್ಬ ಆಪ್ತಕಾರ್ಯದರ್ಶಿಯನ್ನು ನೇಮಿಸಿಕೊಳ್ಳಲಿಕ್ಕೆ ಹೇಳಿದವರಲ್ಲಿ ನಾನೊಬ್ಬ. ಒಂದೆರಡು ಸಲ ನೇಮಿಸಿಕೊಂಡದ್ದೂ ಉಂಟು. ಆದರೆ ಇವರ ಕೆಲಸದ ಒತ್ತಡವನ್ನು ಮತ್ತು ಸಾವಿರಾರು ನಮೂನೆಯ ಕೆಲಸಗಳನ್ನು ನೋಡಿ ಆ ಆಪ್ತ ಕಾರ್ಯದರ್ಶಿಗಳು ಪಲಾಯನ ಹೇಳಬೇಕಾಗುತ್ತದೆ. ಇವರ ಪತ್ರವ್ಯವಹಾರದ ಬಗ್ಗೆ ಒಮ್ಮೆ ಮೋಜಿನ ಸಂಗತಿ ನಡೆಯಿತು. ಪತ್ರದ ವಿಳಾಸವನ್ನು ಬರೆದು ಆಪ್ತ ಕಾರ್ಯದರ್ಶಿಗೆ ವಿಷಯ ಬರೆಯಲು ಹೇಳಿಕೊಟ್ಟರು. ದುರ್ದೈವದಿಂದ ಆತನು ಆ ವಿಷಯಗಳನ್ನೇನೂ ಬರೆಯದೇ ಹಾಗೆಯೆ ಹಾಕಿ ಬಿಟ್ಟ; ಈ ಪತ್ರ ಬಂದದ್ದೂ ನಮ್ಮ ಕಾಕಾರಿಗೇ.

ಇವರ ಕಡೆಗೆ ಬರುವ ಜನರ ಯಾದಿಯನ್ನು ನೋಡಿದರೆ ಆಶ್ಚರ್ಯವಾಗದಿರದು. ಖಾದಿ—ಗ್ರಾಮೋದ್ಯೋಗ ಕೆಲಸಗಾರರು—ಗಿರಣಿಯ ಮಾಲಕರು, ಕಾಂಗ್ರೆಸ್ಸಿಗರು—ಸರಕಾರೀ ಅಧಿಕಾರಿಗಳು ಹರಿಜನ ಉದ್ಧಾರಕರು—ಸನಾತನಿಗಳು, ಉದ್ಯೋಗಿಗಳು ನಿರುದ್ಯೋಗಿಗಳು, ಹೊಸ ಸಂಸ್ಥೆ ಹೊರಡಿಸುವವರು, ಹಳೆ ಸಂಸ್ಥೆಗಳ ಸಂಚಾಲಕರು, ಪತ್ರಿಕಾಕಾರರು, ಹಳ್ಳಿಯ ರೈತರು, ಕೂಲಿಕಾರರು—ಜಮೀನದಾರರು, [illegible]ಯವರು, ಲೋಕಲ್ ಬೋರ್ಡಿನವರು ಮತ್ತು [illegible] ಕೆಲಸಗಾರರ ಯೂನಿಯನ್ನದ ಅಧಿಕಾರಿಗಳು, ಅಂತರ್ ರಾಷ್ಟ್ರೀಯ ವಿಚಾರದವರು. ಮನೆತನದ ಜಗಳಗಳನ್ನು ಬಿಡಿಸಲು ಕೇಳುವವರು, ಗಾಂಧಿವಾದಿಗಳು, ಸಮಾಜವಾದಿಗಳು, ಮೋಟರ ಮಾಲಕ ಸಂಘದವರು, ಕೆಲಸಗಾರರ ಯುನಿಯನ್ನ ಅಧಿಕಾರಿಗಳೂ, ಪರಾಸ್ತೇಹಿಗಳು, ಶನ್ಯಾರ್ಥಿಗಳು ಇನ್ನೂ ಹೀಗೆ ಎಷ್ಟೋ ಒಂದಕ್ಕೊಂದು ವಿರುದ್ಧ ವಿಚಾರಪ್ರಣಾಲಿಯ ಜನ ಬರುವದುಂಟು. ಹೀಗೆ ಬರುವ ಜನರ 'ಕ್ಯು' ಮಾಡಿದರೆ ಇದೊಂದು ಇತ್ತೀಚಿನ ರೇಶನ್ ಅಂಗಡಿ ಎಂದೇ ಜನರ ಕಲ್ಪನೆ ಯಾಗಬಹುದು. ಒಂದು ಸಲ ನಾನು ಅಲ್ಲಿ ಹೋದಾಗ ಇನ್ನೂ ೮—೯ ಜನ ಇರಬಹುದು. ಆಗ ಒಂದು ಗಂಭೀರ ವಿಷಯದ ಚರ್ಚೆ ನಡೆದಿತ್ತು. ಆ ಸಮಯಕ್ಕೆ ಓರ್ವ [illegible] ನಮಸ್ಕಾರ [illegible] ಎಂದರು. ಆಗ ಮಾಸ್ತರರು [illegible]

ಬರಬೇಕು ಇಂಥ ಮುಪ್ಪಿನವರು? ಅವಗೇ ಪತ್ರ ಬರೆಯಲಿಕ್ಕೆ ಹೇಳ್ರಿ; ನಾನು ಏನು ಮಾಡಬೇಕು ಅದನ್ನೆಲ್ಲ ಮಾಡತೇನೆ. ನೀವು ಇದ್ದದ್ದು ಹೋಗಿರಿ" ಎಂದು ಹೇಳಿ ಪುನಃ ತಮ್ಮ ಚರ್ಚೆಯ ವಿಷಯವನ್ನು ಪ್ರಾರಂಭಿಸಿದರು. ಇಂತಹ ಅನೇಕ ಸನ್ನಿವೇಶಗಳು ಬರುವದುಂಟು.

ನಮ್ಮ ಕಾಕಾ ಸ್ಥಿತ-ಪ್ರಜ್ಞರೂ ಹೌದು; ಭಾವನಾವಶರೂ ಹೌದು—ಇವರಿಗೆ ಕರ್ತವ್ಯದ ಅರಿವು ಬಹಳ. ಒಂದು ಸಲ ಅವರ ಪರಮ ಮಿತ್ರರೊಬ್ಬರು ತೀರಿಕೊಂಡಾಗ್ಗೆ ಸ್ಮಶಾನಯಾತ್ರೆಗೆ ಹೋಗಿ ಅಲ್ಲಿ ಮೃತರ ಬಗ್ಗೆ ಮಾತಾಡುತ್ತ ನಿಜವಾಗಿ ಕಣ್ಣೀರುಗಳನ್ನೇ ತೆಗೆದರು. ಅದೇ ಮರುಕ್ಷಣ ಬೇರೊಂದು ಗಂಭೀರ ವಿಷಯದ ಚರ್ಚೆ; ಅದೇಕೆ, ಮೊನ್ನೆ ಮೊನ್ನೆ ಅವರ ಮಗಳು ಮೃತಪಟ್ಟ ದಿನ ಅದೇ ಅಂತ್ಯವಿಧಿ ಮುಗಿಸಿ ಕುಳಿತಿದ್ದಾರೆ. ಮನೆಗೆ ಬಂದರು ಒಬ್ಬ ಗ್ರಾಮೋದ್ಯೋಗಿಗಳು. ಅತಿಆಶ್ಚರ್ಯದ ಮಾತೆಂದರೆ ಆ ಗ್ರಾಮೋದ್ಯೋಗಿಗೆ ಯಾವ ಕಲ್ಪನೆಯಾಗದಂತೆ ಅವನ ಸಂಗಡ ೧॥ ಗಂಟೆಯವರೆಗೆ ನಮ್ಮ ಕಾಕಾ ಚರ್ಚೆ ಮಾಡಿದರು. ಇದು ಮುಗಿದ ಮೇಲೆ ಆಕಸ್ಮಿಕವಾಗಿ ಆತನಿಗೆ ನಡೆದ ಸಂಗತಿ ತಿಳಿದು ಬಹಳ ವಿಷಾದಪಟ್ಟುಕೊಂಡನು. ಇಂಥ ಎಷ್ಟೋ ಸಂದರ್ಭಗಳು ಅವರ ಜೀವಮಾನದಲ್ಲಿ ಬಂದಿರುವದುಂಟು. ಯಾವದೇ ಆಪತ್ತು ಬಂದರೂ ಅದರ ಬಗ್ಗೆ ಕ್ಷಣಹೊತ್ತು ವಿಚಾರಮಾಡಿ ಇವರು ತೊಡಗುವರು ಮುಂದಿನ ತಮ್ಮ ಕಾರ್ಯಕ್ಕೆ.

ಇನ್ನೊಂದು ಸನ್ನಿವೇಶ. ಮುಂಬೈಯಲ್ಲಿ ೧೯೪೨ ರ ಚಳವಳಿ ಆದೇ ಪ್ರಾರಂಭವಾಗಿದೆ. ಕೆಲಸಗಾರರು ಹಾಜರಾಗಲು ಸರಕಾರದ ನೋಟೀಸುಗಳು ಹೋಟವೆ. ನಮ್ಮ ಕಾಕಾನ ಮೇಲೂ ನೋಟೀಸು ಇತ್ತು. ತಮ್ಮ ಮನೆತನದ ಹಾಗು ಇತರ ಅಡಚಣೆಗಳ ಚಿತ್ರ ಬಂದು ನಮ್ಮ ಕಾಕಾ ಸಕಾಲಕ್ಕೆ ಹಾಜರಾಗಬೇಕೆಂದು ಮೊದಲು ನಿರ್ಣಯಿಸಿದ್ದರು. ಹೊರಹೊರಡಲು ವಿಕ್ಟೋರಿಯಾ ಗಾಡಿಯಲ್ಲಿ ಬೆಡ್ಡಿಂಗನ್ನು ಹಾಕಿದ್ದರು. ಇನ್ನು ಪ್ರತ್ಯಕ್ಷವಾಗಿ ಹೊರಡತಕ್ಕವರು. ಅಷ್ಟರಲ್ಲಿ ಕ್ಷಣಹೊತ್ತು ವಿಚಾರಿಸಿ "ಇಲ್ಲ, ನಾನು ಹೋಗುವದಿಲ್ಲ, ಪರಿಣಾಮ ಏನೇ ಆಗಲಿ" ಎಂದು ಹೇಳಿ ವ್ಹಿಕ್ಟೋರಿಯಾ ವಾಪಸ್ಸು ಕಳಿಸಿದರು. ಪುನಃ ಆ ವಿಷಯವನ್ನೇ ಎತ್ತಲಿಲ್ಲ.

ನಮ್ಮ ಕಾಕಾನಲ್ಲಿ ಸಮಾಧಾನ ಗುಣ ಮತ್ತು ಸಾದಾತನ ಪೈಪೋಟಿ ಮಾಡುವಂತೆ ತೋರುತ್ತದೆ. ಇವೆರಡು ಗುಣಗಳನ್ನು ಅಳೆಯುವ ಯಂತ್ರವಿದ್ದರೆ ಒಂದು ವೇಳೆ ಯಾವುದು ಹೆಚ್ಚೆಂಬುದನ್ನು ಹೇಳಬಹುದಾಗಿತ್ತು. ಪ್ರತ್ಯಕ್ಷವಾಗಿ ತಮ್ಮ ವಿರುದ್ಧವಿದ್ದ ಮನುಷ್ಯನು ಬಂದರೂ ಕೂಡ ಅತ್ಯಂತ ಶಾಂತರೀತಿಯಿಂದ ಮಾತಾಡ್ಡಿಸಿ ಕಳಿಸಿದ ಉದಾಹರಣೆಗಳು ಕಡಿಮೆಯಿಲ್ಲ ಇದರ ಪರಿಣಾಮ ಟೀಕಾಕಾರರ ಮೇಲೆ ಆಗದೇ ಹೋಗಿಲ್ಲ. ಹಿಂದೆ ಬೇಕಾದಷ್ಟು ಟೀಕೆ ಮಾಡುತ್ತಲಿದ್ದರೂ ಇವರ ಮುಂದೆ ಓಳ್ಳೇ ಮಾತಾಡಿಕೊಂಡು ಜಾರುವವರೇ ಬಹಳ. ಇವರ ಸಾದಾ ಜೀವನ, ಉಡುಪು, ಇರುವಿಕೆ ಇತ್ಯಾದಿಗಳ ಬಗ್ಗೆ ಹೇಳುವದೇ ಬೇಡ. ೧೯೪೨ ರ ಚಳವಳಿಯೊಂದಿಗೆ ಇವರೊಡನೆ ನಿಕಟಸಂಬಂಧ ಬಂದಿತ್ತು. ಎಷ್ಟೋ ಸಲ ಇವರು ಬರೀ ಚುರುಮರೀ ತಿಂದು ಇದ್ದದ್ದುಂಟು. ಆಗ್ಗೆ ಇವರು ತಮ್ಮ ಬಟ್ಟೆಗಳನ್ನು ತಾವೇ ತೊಳೆಯುತ್ತಲಿದ್ದರು. ಇವರು ಉದ್ದನ್ನ (ಫಾರ್ಸಿ) ಕೋಟು ಹಾಕುತ್ತಲಿದ್ದರು. ಒಂದು ಸಲ ನವರ ಅಂಗಿ [illegible]. ಅಂದು ನಮ್ಮ ಕಾಕಾ ಬರೀ ಕೋಟು ಹಾಕಿಕೊಂಡು ಊರಲ್ಲೆಲ್ಲ ಅಡ್ಡಾಡಿ ಬಂದರು. ಪಾರ್ಸಿ ಕೋಟು ಇದ್ದದರಿಂದ ಇವರಿಗೆ ಅಂಗಿಯ ಅವಶ್ಯಕತೆಯೇ ಎನಿಸಿರಲಿಲ್ಲ.

ಇಂಥ ನಮ್ಮ 'ಕಾಕಾ'ನ ಮಾರ್ಗದರ್ಶನವು ನಮಗೆ ಅನೇಕಾನೇಕ ವರುಷಗಳವರೆಗೆ ದೊರೆಯಲೆಂದ ಹಾರೈಸುತ್ತೇನೆ.

ಹಿಂದುಸ್ಥಾನ ಸರಕಾರದವರು ವಿದೇಶಗಳಲ್ಲಿ ರಾಯಭಾರಿಗಳನ್ನಾಗಿ ಈ ಕೆಳಗಿನವರನ್ನು ನೇಮಿಸಲಿರುವರೆಂದು ಸುದ್ದಿ ಯಿದೆ.

ಸ್ವಿಜರ್ಲಂಡ— ಶ್ರೀ ಧೀರೂಭಾಯಿ ದೇಸಾಯಿ (ದಿ. ಭೂಲಾಭಾಯಿಯವರ ಪುತ್ರ)

ಈಜಿಪ್ತ— ಡಾ. ಸಯ್ಯದ ಹುಸೇನ

ಫ್ರಾನ್ಸ— ಸರ ಎಸ್. ರಾಘವನ್ ಪಿಳ್ಳೆ (ವಾಣಿಜ್ಯ ಖಾತೆಯ ಕಾರ್ಯದರ್ಶಿ)

ಅಫಗಾನಿಸ್ಥಾನ— ಡಾ. ಕಾಟಜು ಜಂಡ (ಅಲಹಾ[illegible])

[illegible]

ಹುಬ್ಬಳ್ಳಿಯಲ್ಲಿ ವಿಶೇಷ ಸಾಹಿತ್ಯೋತ್ಸವ

ಶ್ರೀ ಸತ್ಯಬೋಧ ವಾಚನಾಲಯದ [illegible]ನೆಯ ವಾರ್ಷಿಕೋತ್ಸವದ ನಿಮಿತ್ತ ಹುಬ್ಬಳ್ಳಿಯಲ್ಲಿ ಇದೇ ನವ್ಹೆಂಬರ ೧೫ ಮತ್ತು ೧೬ ರಲ್ಲಿ ಪ್ರೊ. ರಂ. ಶ್ರೀ. ಮುಗಳಿಯವರ ಅಧ್ಯಕ್ಷತೆಯಲ್ಲಿ ಸಾಹಿತ್ಯೋತ್ಸವ ನೆರವೇರಿಸಲು ನಿಶ್ಚಯಿಸಿದೆ ಯೆಂದು ಅದರ ಕಾರ್ಯಕ್ರಮವನ್ನು ಈ ಕೆಳಗಿನಂತೆ ಪ್ರಕಟಿಸುತ್ತಾರೆ.

ಎರಡೂ ದಿನಗಳಲ್ಲಿ ನಡೆಯುವ ಕಾರ್ಯಕ್ರಮಗಳ ರೂಪರೇಷೆ

೧) ವಿಚಾರ ಸಂಕೀರ್ಣ— ವ್ಯಾಖ್ಯಾನ- ಉಪನ್ಯಾಸಗಳು.

೨) ಸ್ಪರ್ಧೆಗಳು. ವಾಕ್ಸ್ಪರ್ಧೆ- ೨ ಬಹುಮಾನಗಳು. ಕಾವ್ಯಗಾಯನ ಸ್ಪರ್ಧೆ- ೨ ಬಹುಮಾನಗಳು. ಅಭಿನಯ ಸ್ಪರ್ಧೆ— ೨ ಬಹುಮಾನಗಳು.

೩) ಏಕಾಂಕ ನಾಟಕಗಳು— ಗೋಪಾಳನ 'ಗೋಪಾಳ'; ಮುಹೂರ್ತ; ಅತಿಥಿ ದೇವರು; ಕಿವಿಮಾತು; ಭಗವಂತನ ಭವಿಷ್ಯ; ನಾನು ಸತ್ತಾಗ.

೪) ವಿವಿಧ ವಿನೋದಾವಳಿಗಳು— (ಅ) ಸಂಗೀತ (ಬ) ಕಾವ್ಯಗಾಯನ-ನೃತ್ಯಪ್ರದರ್ಶನ. (ಕ) ಏಕ ಪಾತ್ರಾಭಿನಯ (ಡ) ಮಕ್ಕಳ ಕಾರ್ಯಕ್ರಮ— ಸಾಭಿನಯ ಕಾವ್ಯಗಾಯನ

ಈ ಉತ್ಸವಕ್ಕೆ ಸಹಾಯ ಮಾಡುವವರ ವಿವರ ಹೀಗಿದೆಃ ಪೋಷಕರು ರೂ. ೧೦, ೫; ಅಭಿಮಾನಿಗಳು ರೂ. ೩, ೨; ಸಹಾಯಕರು ರೂ. ೧. ನಾಗರಿಕರೆಲ್ಲರು ಧನಸಹಾಯ ಮುಂತಾದ ಅನೇಕ ವಿಧದಲ್ಲಿ ನೆರವಾಗಿ ಸಹಕರಿಸಬೇಕೆಂದು ಕಾರ್ಯಕಾರಿ ಮಂಡಲದ ಪರವಾಗಿ ಎಲ್ಲರನ್ನೂ ಬೇಡಿಕೊಳ್ಳುವುದಾಗಿ ವಾಚನಾಲಯದ ಅಧ್ಯಕ್ಷರಾದ ಶ್ರೀ. ಪಿ. ವೆಂಕೋಬಾಚಾರ್ಯ, ಬಿ. ಎ., ಬಿ ಟಿ ಅವರು ವಿನಂತಿ ಮಾಡುತ್ತಾರೆ.

ಧಾರವಾಡದಲ್ಲಿ ಶ್ರೀ ಹುಕ್ಕೇರಿಕರರ ಸತ್ಕಾರ ಸಮಾರಂಭ

(೯ ನೇ ಪುಟದಿಂದ ಮುಂದುವರಿದುದು)

ವಿದ್ಯಾರ್ಥಿಗಳ ಸ್ನೇಹ ಸಮ್ಮೇಲನ

ಮಧ್ಯಾಹ್ನ ೩ ಗಂಟೆಗೆ ಶ್ರೀ ಹುಕ್ಕೇರಿಕರರ ವಿದ್ಯಾರ್ಥಿಗಳ ಸ್ನೇಹ ಸಮ್ಮೇಲನವು ಸೇರಿತ್ತು. ಅವರ ವಿದ್ಯಾರ್ಥಿಗಳೆಲ್ಲರ ಪರವಾಗಿ ಒಂದು ಮಾನಪತ್ರವನ್ನು ಬೆಳ್ಳಿಯ ತಾಟಿನಲ್ಲಿ ಸಮರ್ಪಿಸಲಾಯಿತು. ಅಧ್ಯಕ್ಷತೆ ವಹಿಸಿದ ಡಾ. ಕಬ್ಬೂರರು ಮಾನಪತ್ರವನ್ನು ಓದಿದರು. ತರುವಾಯ ಶ್ರೀಗಳಾದ ಮಟ್ಟಿ ವಕೀಲ, ನರೇಗಲ್ಲ, ಮಹಾಜನ ಮತ್ತು ಪಂಚಮುಖಿಯವರು ತಾವು ಹುಕ್ಕೇರಿಕರರ ಕೈಯಲ್ಲಿ ವಿದ್ಯಾರ್ಥಿಗಳಾಗಿನ ಸವಿ ನೆನಪುಗಳನ್ನು ಹೇಳಿದರು. ಸಭೆಯು ನಗೆಗಡಲಿನಲ್ಲಿ ತೇಲಿತು.

ಶ್ರೀ. ಹುಕ್ಕೇರಿಕರರು ಎದ್ದು ನಿಂತು ಮತ್ತೆ ತಮ್ಮ ವಿದ್ಯಾರ್ಥಿಗಳ ಮಧ್ಯದಲ್ಲಿರುವ ಪ್ರಸಂಗ ದೊರೆತದ್ದಕ್ಕೆ ಆನಂದ ವ್ಯಕ್ತಮಾಡಿದರು "ಅಂದು ಕಿಡಿಗೇಡಿಗಳಾದ ವಿದ್ಯಾರ್ಥಿಗಳು ಇಂದು ಗೌರವಯುಕ್ತ ಜೀವನ ಸಾಗಿಸುತ್ತಿದ್ದಾರೆ. ನಾನು ವ್ಹಿಕ್ಟೋರಿಯಾ ಹೈಸ್ಕೂಲಿನಲ್ಲಿ ಸೇರಿದಾಗ ಅದೊಂದು ತಪಶ್ಚರ್ಯೆಯಿಂದೇ ಬಗೆದು ಹಗಲು ರಾತ್ರಿ ಅದಕ್ಕಾಗಿ ಹೆಣಗಾಡಿದೆ. ಅಂದಿನಂತೆಯೇ ಇಂದೂ ಮತ್ತೆ ನನ್ನ ಶಕ್ತಿ ಸಾಮರ್ಥ್ಯಗಳಿಗನುಗುಣವಾಗಿ ಕೆ. ಇ. ಬೋರ್ಡ ಸಂಸ್ಥೆಗಾಗಲೀ ವಿದ್ಯಾರಣ್ಯ ಹೈಸ್ಕೂಲಿಗಾಗಲಿ ನನ್ನ ಸೇವೆಯನ್ನು ಸಲ್ಲಿಸಲು ಸಿದ್ಧನಿದ್ದೇನೆ" ಎಂದು ಆಶ್ವಾಸನ ಕೊಟ್ಟ ನಂತರ "ವಂದೇ ಮಾತರಂ" ಗೀತೆಯೊಡನೆ ಕಾರ್ಯಕ್ರಮ ಕೊನೆಗಂಡಿತು.

ಹೈದರಾಬಾದ ಸಂಸ್ಥಾನದ ಕಾಂಗ್ರೆಸಿನ ಕಿಸಾನ ಮಜದೂರ ಪಂಗಡದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಕಾಶೀನಾಥರಾವ ವೈದ್ಯರು ಹೈದರಾಬಾದ ನಗರದ ಗಡಿಯನ್ನು ದಾಟಿ ಹೋಗಬಾರದೆಂದು ನಿಜಾಮ ಸರಕಾರದವರು ಪ್ರತಿಬಂಧಕಾಜ್ಞೆ ಹೊರಡಿಸಿದ್ದಾರೆ.

ಮಿತ್ರವರ್ಯ ರಾಮುಭಾವು ಹುಕ್ಕೇರಿಕರ

ಲೇ:– ಶ್ರೀ. ದತ್ತೋ ವಾಮನ ಪೋತದಾರ, ಪುಣೆ

ಮೂವತ್ತೈದು ನಾಲ್ವತ್ತು ವರ್ಷಗಳ ಹಿಂದಿನ ನೆನಹುಗಳು ಎಷ್ಟೊಂದು ರಮಣೀಯವಾಗಿರುತ್ತವೆ! ಹಾ ಹಾ ಎನ್ನುವದರಲ್ಲಿ ಇಷ್ಟು ವರ್ಷಗಳು ಗತಿಸಿದವು. ನಮ್ಮ ಪೀಳಿಗೆ ಅರವತ್ತರ ಮನೆಯನ್ನು ಸಮೀಪಿಸಿತು. ಅಂದರೆ ನಾವು ಮುದುಕರಾದೆವೇನು! ಆದರೆ ಈ ಕಾಲವು ಹೇಗೆ ಕಳೆದುಹೋಯಿತೆಂಬುದೇ ನಮಗೆ ತಿಳಿಯಲಿಲ್ಲ!

೧೯೦೭-೮ ರ ಕಾಲ. ಆಗ ಟಿಳಕ ಪರಾಂಜಪೆ ಪ್ರಭೃತಿಗಳ ತೋಫುಖಾನೆಗಳು ಮಹಾರಾಷ್ಟ್ರ ಕರ್ನಾಟಕಗಳಲ್ಲಿ ಗರ್ಜಿಸುತ್ತಿದ್ದವು. ಇಂದಿನ ಕರ್ನಾಟಕದ ಧುರೀಣರಾದ ಶ್ರೀ ಗಂಗಾಧರರಾವ ದೇಶಪಾಂಡೆಯವರು ತಮ್ಮ 'ಚಿಕಿತ್ಸಕ' ಪತ್ರದಲ್ಲಿ ಟಿಳಕರತ ಟೀಕೆ ಮಾಡುತ್ತ ಮಾಡುತ್ತ ಟಿಳಕ ಮಯರಾಗಿ ಬಿಟ್ಟರು! ಅಂಥದು ಆಗಿನ ಕಾಲ. ಆಗಿನ ತರುಣರು ನಾವು! ಆ ದಿನಗಳನ್ನು ನೆನೆಸಿಕೊಂಡರೆ ನಮ್ಮ ತಾರುಣ್ಯವು ಪುನಃ ಉಕ್ಕೇರುತ್ತದೆ.

ಆ ದಿವ್ಯ ಕಾಲದಲ್ಲಿ, ಫರ್ಗ್ಯೂಸನ ಕಾಲೇಜಿನಲ್ಲಿ ಕಲಿಯುತ್ತಿರುವಾಗ ಎಂತೊ ಏನೊ ನನಗೆ ರಾಮುಭಾವುರ ಪರಿಚಯವಾಯಿತು. ಕೂಡಲೆ ನಮ್ಮಿಬ್ಬರಲ್ಲಿ ಸ್ನೇಹ ಬೆಳೆಯಿತು. ಇಂದಿಗೆ ನಾಲ್ವತ್ತು ವರ್ಷಗಳಾದರೂ ನಮ್ಮ ಸ್ನೇಹ ಅಚ್ಚಳಿಯದಿದೆ.

ಆಗ ನಾವು ಅನೇಕ ಸಲ ಒಂದೆಡೆಗೇ ಉಳಿಯುತ್ತಿದ್ದೆವು ಒತ್ತಟ್ಟಿಗೇ ವಿಹರಿಸುತ್ತಿದ್ದೆವು; ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತಿದ್ದೆವು.

ನಾವೆಲ್ಲರೂ ಸ್ವಾತಂತ್ರ್ಯಭಕ್ತರಾಗಿದ್ದೆವು. ರಾಜಕೀಯ ಸಮರದ ಒಲವು ನಮ್ಮೆಲ್ಲರಲ್ಲಿತ್ತು. ಸ್ವಾರ್ಥತ್ಯಾಗದ ಮತ್ತು ದೇಶಸೇವೆಯ ಧ್ಯೇಯಗಳನ್ನು ನಮ್ಮಿಂದಲೇ ರೂಪಿಸಿದಂತಿತ್ತು.

ಶಿಕ್ಷಣವೇ ಪ್ರಗತಿಯ ಮೂಲ. ಆಗ ರಾಷ್ಟ್ರೀಯ ಶಿಕ್ಷಣ ಪ್ರಚಾರದಲ್ಲಿತ್ತು. ನನ್ನ ಸಂಬಂಧಿಕರೂ ನನ್ನ ತಂದೆಯ ಸಚ್ಛಿಷ್ಯರೂ ಆದ ಕೈ. ವಾ. ಅಣ್ಣಾ ವಿಜಾಪೂರಕರ ಇವರ ಸ್ನೇಹ ಲಭಿಸಿದ್ದರಿಂದ ಮತ್ತು ನಾನು ವಿಜಾಪೂರಕರರ 'ಗ್ರಂಥ ಮಾಲೆ'ಯ ವಾಚಕನಾಗಿದ್ದರಿಂದ ಅವರು ಸ್ಥಾಪಿಸಿದ ಶ್ರೀ ಸಮರ್ಥ ವಿದ್ಯಾಲಯದತ್ತ ನನ್ನ ಒಲವು ಸುಲಭವಾಗಿ ಹರಿಯಿತು. ವಿಜಾಪೂರಕರರು ಸ್ವತಃ ಅಭಿಮಾನಿಗಳು. ಟಿಳಕರ ಬೆಂಬಲದಿಂದ ಸಮರ್ಥ ವಿದ್ಯಾಲಯದ ಉಪಕ್ರಮವನ್ನು ಸಾಗಿಸಿಕೊಂಡು ಹೋಗುತ್ತಿದ್ದರು. ಸಮರ್ಥ ವಿದ್ಯಾಲಯವನ್ನು ಕೊಲ್ಹಾಪುರದಿಂದ ಪುಣೆಯ ಸಮೀಪದ ತಳೇಗಾಂವಕ್ಕೆ ಸ್ಥಳಾಂತರಿಸಲಾಯಿತು. ೧೯೧೦ ರಲ್ಲಿ ನಾನು ಬಿ. ಎ. ಪಾಸಾದೆ. ಸರಕಾರದ ಶನಿಕಟಾಕ್ಷಕ್ಕೆ ಈಡಾಗಿ ಸಮರ್ಥ ವಿದ್ಯಾಲಯವು ಮುಚ್ಚಿಬಿಟ್ಟಿತು! ಶಿಕ್ಷಣ ಕ್ಷೇತ್ರದಲ್ಲಿಯೆ ದುಡಿಯಬೇಕೆಂದು ನಾನು ನಿರ್ಧರಿಸಿಬಿಟ್ಟಿದ್ದೆ. ಆದರೆ ರಾಜಕೀಯ ಕ್ಷೇತ್ರದಲ್ಲಿ ನಾನು ಮುಂದೆ ಸಾಗಬೇಕೆಂದು ನನ್ನ ಕೆಲವು ಜೀವದ ಗೆಳೆಯರ ಅಗ್ರಹವಾಗಿತ್ತು. ಆದರೂ ಅದನ್ನು ಗಮನಿಸದೆ ಶಿಕ್ಷಣ ಕ್ಷೇತ್ರವನ್ನೇ ಆರಿಸಿಕೊಳ್ಳಬೇಕೆಂದು ನಾನೂ ನನ್ನ ಮಿತ್ರರಾದ ಶ್ರೀ ತ್ರ್ಯಂ ಭಿ. ಹರ್ಡಿಕರ, ಶ್ರೀ ವಿ. ದ. ಗೋಖಲೆ ಮುಂತಾದವರೂ ನಿಶ್ಚಯಿಸಿದೆವು. ಶ್ರೀ ರಾಮುಭಾವು ಹುಕ್ಕೇರಿಕರರು ನ್ಯೂ. ಇಂಗ್ಲಿಷ ಸ್ಕೂಲಿನ ಹೋಳಕರವಾಡೆಯಲ್ಲಿಯ ವಿದ್ಯಾರ್ಥಿ ವಸತಿಗೃಹದಲ್ಲಿ ಕೆಲ ದಿನ ಉಳಿದರು. ನಂತರ ಅವರೂ ಶಿಕ್ಷಣ ಕ್ಷೇತ್ರವನ್ನು ಸೇರುವ ನಿರ್ಧಾರ ಮಾಡಿದರು.

ಡೆಕ್ಕನ ಎಜ್ಯುಕೇಶನ ಸೊಸಾಯಟಿಯಂಥ ಶಿಕ್ಷಣ ಸಂಸ್ಥೆಯೊಂದನ್ನು ಕರ್ನಾಟಕದಲ್ಲಿ ಕಟ್ಟಿ ನಡೆಸಿ ತೋರಿಸಬೇಕೆಂಬುದು ರಾಮುಭಾವು ಅವರ ಬಯಕೆಯಾಗಿತ್ತು. ಅದನ್ನವರು ಅನೇಕಸಲ ನಮ್ಮ ಚರ್ಚೆಯಲ್ಲಿ ಆಡಿತೋರಿಸಿದ್ದರು. ಅದ್ದರಿಂದ ಅವರು ಧಾರವಾಡದ ವಿಕ್ಟೋರಿಯಾ ಹಾಯಸ್ಕೂಲದಲ್ಲಿ ಕೆಲಸಕ್ಕೆ ಸೇರಿದರು. ಕೆಲವು ಬುದ್ಧಿವಂತ ಉತ್ಸಾಹಿ ತರುಣ ಪದವೀಧರರನ್ನು ಸೇರಿಸಿಕೊಂಡು ಧಾರವಾಡದಲ್ಲಿ ಕಾಲೇಜೊಂದನ್ನು ಪ್ರಾರಂಭಿಸುವ ಪ್ರಯತ್ನವನ್ನೂ ಮಾಡಿದರು. ಆಗ ರಾಮುಭಾವು ಅವರು ತಮ್ಮ ಈ ಕೆಲಸದಲ್ಲಿ ನೆರವಾಗಲೆಂದು ಶ್ರೀ ತ್ರ್ಯಂ. ಭಿ. ಹರ್ಡೀಕರರನ್ನು ಅತ್ಯಂತ ಅಗ್ರಹದಿಂದ ಕರೆಸಿಕೊಂಡರು. ಶ್ರೀ ಹರ್ಡಿಕರರಾದರೂ ಧಾರವಾಡಕ್ಕೆ ಹೋಗಿ ಕೆಲವು ತಿಂಗಳವರೆಗೆ ಕೆಲಸಮಾಡಿ ಹಿಂತಿರುಗಿದರು. ಶಿಕ್ಷಣ ಪ್ರಸಾರಕ ಮಂಡಳದ ಅಜೀವಸದಸ್ಯರಾಗಬೇಕೆಂದು ನಾವಿಬ್ಬರೂ ನಿರ್ಧರಿಸಿದ್ದರಿಂದ ಶ್ರೀ ಹರ್ಡಿಕರರನ್ನ ಧಾರವಾಡದಿಂದ ಕರೆಸಿಕೊಂಡು ನಾವಿಬ್ಬರೂ ಶಿಕ್ಷಣ ಪ್ರಸಾರಕ ಮಂಡಳಿಯನ್ನು ಸೇರಿದೆವು. ರಾಮುಭಾವು ಹುಕ್ಕೇರಿಕರರು ಮುಂದೆ ಅನೇಕ ವರ್ಷ ಶಿಕ್ಷಣ ಕ್ಷೇತ್ರದಲ್ಲಿಯೆ ಧಾರವಾಡದಲ್ಲಿಯೆ ದುಡಿಯುತ್ತಿದ್ದರು. ಅಂದಿನಿಂದ ಅವರು ತಮ್ಮ ಜೀವನವನ್ನೇ ಅದಕ್ಕೆ ಮೀಸಲಾಗಿಟ್ಟು ಏಕಭಾವದಿಂದ ಜನತೆಯ ಸೇವೆಮಾಡುತ್ತ ಬಂದಿದ್ದಾರೆ.

ಶ್ರೀ ಹುಕ್ಕೇರಿಕರರ ಮತ್ತು ಶಿಕ್ಷಣಕ್ಕೆಂದು ಪುಣೆಯಲ್ಲಿ ಉಳಿದಿದ್ದ ಇಂದಿನ ಪ್ರಸಿದ್ಧ ಕನ್ನಡ ಕವಿಶಿರೋಮಣಿ ಪ್ರೊ. ದತ್ತೋಪಂತ ಬೇಂದ್ರೆ ಹಾಗೂ ಅವರ 'ಗೆಳೆಯರಗುಂಪಿ'ನ ಕೆಲವರ ಸ್ನೇಹದಿಂದಾಗಿ ನಾನು ಅನೇಕಸಲ ಧಾರವಾಡಕ್ಕೆ ಹೋಗಿ ಬಂದಿದ್ದೇನೆ. ಆಗ ನನಗೆ ಶ್ರೀ ವೆಂಕಟರಾವ ಆಲೂರ, ಶ್ರೀ ಬಳವಂತರಾವ ಜಠಾರ ಶ್ರೀ ದತ್ತೋಪಂತ ಕರಮರಕರ ಮುಂತಾದವರ ಮಿತ್ರತ್ವಲಾಭವಾಯಿತು. ಧಾರವಾಡದ ಶ್ರಮಸಹಿಷ್ಣು ಸಂಶೋಧಕರಾದ ಶ್ರೀ ನಾರಾಯಣರಾವ ರಾಜಪುರೋಹಿತರ ಪರಿಚಯವು ನನಗೆ ಆವದ್ದು ಅದೇ ಕಾಲದಲ್ಲಿ ಶ್ರೀ ರಾಮುಭಾವು ಹುಕ್ಕೇರಿಕರರು ಈ ಎಲ್ಲ ವಿಷಯಗಳಲ್ಲಿ ನನ್ನ ದುಭಾಷಿಯಂತೆ ನಡೆದುಕೊಳ್ಳುತ್ತಿದ್ದರು. ಶ್ರೀ ರಾಮುಭಾವು ಅವರ ಮೊದಲನೆಯ ಹೆಂಡತಿ ಪುಣೆಯ ಪೇರುಗೇಟದ ಹತ್ತರ ಇರುವ ಕಾನಗೊ ಮನೆತನದವರು. ಈ ಕಾನಗೋ ಕುಟುಂಬದ ಮಕ್ಕಳೆಲ್ಲ ನಮ್ಮ ನೂತನ ಮರಾಠಿ ವಿದ್ಯಾಲಯದಲ್ಲಿಯೆ ಶಿಕ್ಷಣಪಡೆಯುತ್ತಿದ್ದದ್ದರಿಂದ ನಮ್ಮಿಬ್ಬರ ಸ್ನೇಹ ಸಂಬಂಧ ಇನ್ನೂ ಹೆಚ್ಚಿತು.

ಬೆಳಗಾಂವಿ–ಧಾರವಾಡದ ಕಡೆಯ ಪ್ರಸಿದ್ಧ ಮರಾಠಿ ನಾಟಕಕಾರರಲ್ಲೊಬ್ಬರಾದ ಕೈ. ಕೃಷ್ಣಾಜಿ ಹರಿ ದೀಕ್ಷಿತರು ನಮ್ಮ ಸ್ನೇಹಿತರು. ಈ ನಮ್ಮ ಮಿತ್ರವರ್ಗದಲ್ಲಿ ಶ್ರೀ ರಾಮುಭಾವು ಹುಕ್ಕೇರೀಕರರೂ ಇದ್ದರು. ಕೈ. ಕೃಷ್ಣಾಜಿಪಂತ ದೀಕ್ಷಿತರು ಅತ್ಯಂತ ಪ್ರಯತ್ನಶೀಲರು. ವೃತ್ತಪತ್ರಿಕೆಯೊಂದನ್ನು ಪ್ರಾರಂಭಿಸಬೇಕೆಂದು ಅವರೊಮ್ಮೆ ನಿರ್ಧರಿಸಿದರು. ಶ್ರೀ ರಾಮುಭಾವು ಅವರ ಅಗ್ರಹದಿಂದ ನಾವು 'ಪಂಚಮ ಜಾರ್ಜ ವಿಜಯ' ವೆಂಬ ಮರಾಠಿ ಸಾಪ್ತಾಹಿಕಕ್ಕೆ ಸಂಪಾದಕೀಯವನ್ನು ಬರೆದುಕೊಡಲು ಒಪ್ಪಿದೆವು. ಒಪ್ಪಿಕೊಂಡಂತೆ ಒಂದೆರಡು ಅಗ್ರಲೇಖಗಳನ್ನು ಬರೆದುಕಳಿಸಿರಬಹುದು. ಅದರಲ್ಲೊಂದು ಮದ್ಯಪಾನ ನಿಷೇಧದ ವಿಷಯಕ್ಕೆ ಬರೆದದ್ದು ತೀರ ಪ್ರಖರವಾಗಿತ್ತು. ಆದರೆ ಈ ನಮ್ಮ ಕಾರ್ಯವು ಪ್ರಾರಂಭದಲ್ಲಿಯೆ ನಿಂತು ಹೋಯಿತು.

ಬಳಿಕ ರಾಮುಭಾವು ಅವರು ಸಂಪೂರ್ಣವಾಗಿ ಕಾಂಗ್ರೆಸ ಚಳವಳಿಯನ್ನೇ ಸೇರಿದರು. ಆಗ ಮಾತ್ರ ಏನಾದರೊಂದು ಕಾರಣವಿಲ್ಲದೆ ನಮ್ಮ ಭೆಟ್ಟಿಯಾಗುತಿರ್ತಿ. ಹಾಗೆ ಭೆಟ್ಟಿಯದಾಗ ನಾವು ತೀರ ಬಿಚ್ಚು ಮನಸಿನಿಂದ ಚರ್ಚೆ ನಡೆಸುತ್ತಿದ್ದೆವು, ಶಾಂತಚಿತ್ತದಿಂ ಸಮಂಜಸವಾಗಿ ಆದರೂ ತೀರ ತೆರೆದ ಬಗೆಯಿಂದ ನಮ್ಮ ಮಾತುಕತೆ ನಡೆಯುತ್ತಿತ್ತು. ನಡೆಯುತ್ತಿದೆ. ನಮ್ಮ ಸ್ನೇಹಕ್ಕೆ ವಿಷಗಾಳಿಯು ಎಂದಿಗೂ ಸೋಂಕಿಲ್ಲ.

ಈ ದೀರ್ಘ ಕಾಲದ ಸ್ನೇಹದಲ್ಲಿ ರಾಮುಭಾವು ಅವರ ಅನೇಕ ಗುಣಗಳ ಪರಿಚಯವು ನನಗೆ ಆಗಿದೆ. ಯಾವದೇ ವಿಷಯವನ್ನಾದರೂ ಅವರು ತಾಳ್ಮೆಯಿಂದ ಶಾಂತ ಚಿತ್ತದಿಂದ ವಿಚಾರ ಮಾಡುತ್ತಾರೆ. ಸ್ವಭಾವತಃ ಅವರು ಉಗ್ರರಲ್ಲ. ವೃಥಾಭಿಮಾನ ಅಹ್ಮತೆಗಳೂ ಅವರಲ್ಲಿ ಕಂಡು ಬರುವದಿಲ್ಲ. ಅವರು ಸುಮ್ಮನೆ ಕಾವ್ಯಮಯವಾದ ಧ್ಯೇಯ ಸ್ವಪ್ನಗಳನ್ನೆಂದಿಗೂ ಬಣ್ಣಿಸುವದಿಲ್ಲ. ವ್ಯಾವಹಾರಿಕ ಶಕ್ಯಾಶಕ್ಯತೆಯ ಬಗ್ಗೆ ಬಹಳ ಲಕ್ಷ್ಯಪೂರ್ವಕವಾಗಿ ವಿಚಾರ ಮಾಡುತ್ತಾರೆ. ಪ್ರಯತ್ನವಾದಿಗಳವರು. ಆದ್ದರಿಂದ ಅವರೆಂದಿಗೂ ಹತಾಶರಾಗಲೀ ನಿರಾಶರಾಗಲೀ ಆದದ್ದು ಕಂಡು ಬರುವದಿಲ್ಲ. ದುಷ್ಟ ಪ್ರಸಂಗಗಳೆಂಥವನ್ನೂ ಯಾವ ರೀತಿಯಲ್ಲಿಯೆ ಎದುರಿಸಬೇಕಾಗಿ ಬಂದರೂ ಅವಕ್ಕೆ ತಲೆಕೊಟ್ಟು ಮುನ್ನುಗ್ಗಬೇಕೆನ್ನುವ ಅವರ ನಿಶ್ಚಯವೆಂದಿಗೂ ಕುಸಿದು ಬೀಳುವದಿಲ್ಲ. ಅವರ ಕರ್ಮನಿಷ್ಠೆಯು ಆಶೆ ನಿರಾಶೆಯ ಉಯ್ಯಾಲೆಯಲ್ಲಿಯು ದೃಢವಾಗಿರುತ್ತದೆ. ಜಂಬ ಕೊಚ್ಚಿಕೊಳ್ಳುವ ದುಷ್ಟ ಚಟವು ಅವರಿಗೆ ಅಂಟಿಕೊಂಡಿಲ್ಲ. ರಾಮುಭಾವು ಅವರು ಪ್ರಾಮಾಣಿಕರಾದ ದೇಶಸೇವಕರಾಗಿದ್ದಾರೆ. ಅವರ ತಾಳ್ಮೆ ಅತ್ಯಂತ ಪ್ರಶಂಸನೀಯವಾದದ್ದು. ಮಾನಾಪಮಾನವನ್ನು ಲೆಕ್ಕಿಸದೆ ಹಿಡಿದ ಕಾರ್ಯವೆಂತು ಸಾಧಿಸೀತು ಎಂಬುದನ್ನೇ ಅವರು ಚಿಂತಿಸುತ್ತಿರುತ್ತಾರೆ. ವೈಯಕ್ತಿಕ ಸ್ವಾರ್ಥದ ಲೋಭವನ್ನು ಅವರೆಂದಿಗೂ ಇಟ್ಟುಕೊಂಡಿಲ್ಲ. ಅವರು ತಮ್ಮ ಕರ್ತೃತ್ವದ, ಶೀಲದ, ಸೇವಾಬುದ್ಧಿಯ ಬಲದಿಂದಲೆ ಈ ೩೦ ವರ್ಷ ಅತ್ಯಂತ ನಿಷ್ಠೆಯಿಂದ ಕರ್ನಾಟಕಕ್ಕೆ ಸೇವೆ ಸಲ್ಲಿಸಿದ್ದಾರೆ. ಇಂದಿಗಾದರೂ ಅವರ ಉತ್ಸಾಹವು ತರುಣರನ್ನು ನಾಚಿಸುವದಷ್ಟು ಅಪಾರವಾಗಿರುತ್ತದೆ.

ಈಗ ಭಾರತದ ಅಂತರಿಕ್ಷದಲ್ಲಿ ಪಾರತಂತ್ರ್ಯದ ಕಾಳ ರಾತ್ರಿಯು ಕಳೆದು ಸ್ವಾತಂತ್ರ್ಯದ ಹೊಸ ಯುಗವು ಪ್ರಾರಂಭವಾಗಿದೆ. ನಮ್ಮ ಮನೆಯನ್ನು

ಶ್ರೀ. ಹುಕ್ಕೇರಿಕರ ರಾಮರಾಯರು

(ಲೇ:— ಶ್ರೀ ಆರ್. ವ್ಹಿ. ಜಠಾರ, ಬಿ. ಎ., ಎಲ್. ಎಲ್. ಬಿ, ಧಾರವಾಡ)

"ಅತ್ಯಂತ ಯೋಗ್ಯತಾಸಂಪನ್ನ ಹಾಗೂ ಒಣ ಹೆಮ್ಮೆಗೆ ಗುರಿಯಾಗದ ಓರ್ವ ಒಳ್ಳೆಯ ಸಾರ್ವಜನಿಕ ಕಾರ್ಯಕರ್ತರಾಗಿ ಅವರನ್ನು ನಾನು ಸದಾ ಕಂಡಿದ್ದೇನೆ. ಅವರ ಅನಾಡಂಬರ ಜೀವನ ಮತ್ತು ಮಧುರ ಸ್ವಭಾವ. ಇವುಗಳ ಮೂಲಕ ಅವರು ಜನಮೆಚ್ಚುಗೆಯ ಸಖನಾಗಬಲ್ಲರು; ಉಪಯುಕ್ತ ಸಂಗಾತಿಯಾಗಬಲ್ಲರು. ಸ್ವಾತಂತ್ರ್ಯಕ್ಕಾಗಿ ಸೇವೆ ಸಲ್ಲಿಸುವಾಗ ಅವರಿಗೆ ಇನ್ನುಳಿದುದೆಲ್ಲ ಹುಲ್ಲಿಗೆ ಸಮನಾಗಿ ಕಂಡಿದೆ. ಇಂತಹ ತ್ಯಾಗಿಗಳೆನಿಸಿ ನಮ್ಮ ಸ್ವಾತಂತ್ರ್ಯದ ತಳಹದಿಯನ್ನು ಭದ್ರವಾಗಿ ಕಟ್ಟಿ ನಿಲ್ಲಿಸಿದ್ದಾರೆ." ಇಂತು ಮುಂತಾಗಿ ಶ್ರೀ ಹುಕ್ಕೇರಿಕರ ರಾಮರಾಯರನ್ನು ಹೊಗಳಿ ಅವರ ೬೧ ನೆಯ ಹುಟ್ಟುಹಬ್ಬದ ಶುಭಮುಹೂರ್ತದಲ್ಲಿ ಮುಂಬಯಿಯ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲರು ಉದ್ಗಾರ ತೆಗೆದು ರಾಯರಿಗೆ ದೀರ್ಘಾಯುವನ್ನೂ ಅವರಿಂದ ಅವಿಶ್ರಾಂತ ಸೇವೆಯನ್ನು ಕೋರಿದರು.

ಕರ್ನಾಟಕದ ಪ್ರಮುಖ ಮುಂದಾಳಾದ ಶ್ರೀ ಹುಕ್ಕೇರಿಕರ ರಾಮರಾಯರಿಗೆ ಇಂದು (೨೨—೧೦—೧೯೪೭) ೬೦ ವರ್ಷಗಳು ತುಂಬುತ್ತವೆ. ಆಗ ಅವರು ಧಾರವಾಡದಲ್ಲಿ ಸಾರ್ವಜನಿಕವಾಗಿ ಮನ್ನಣೆ ಹೊಂದುವರಲ್ಲದೆ ಪ್ರೀತಿಯ ಉಡುಗರೆಯನ್ನು ನಾಡಿಗೆ ಸಲ್ಲಿಸಿದ ಅವರ ಸೇವೆಯ ಬಗ್ಗೆ ಗುಣಗಾನಪರ ವಾಕ್ಪ್ರಶಸ್ತಿಯನ್ನೂ ಪಡೆಯುವರು. ಮುಂಬಯಿಯ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲರು ಇಂದಿನ ಶುಭ ಸಮಾರಂಭಕ್ಕೆ ಸೂತ್ರಧಾರರಾಗಿದ್ದಾರೆ; ಮತ್ತು ನ್ಯಾ. ಲೋಕೂರ, ನ್ಯಾ. ಜಹಗೀರದಾರ, ಪ್ರೊ. ವ್ಹಿ. ಕೆ. ಆರ್. ವ್ಹಿ. ರಾವ, ಪ್ರಿನ್ಸಿಪಾಲ ಗೋಕಾಕ, ಶ್ರೀ ದಿವಾಕರ, ಡಾ. ಹರ್ಡೀಕರ ಹಾಗೂ ಇನ್ನೂ ಅನೇಕ ಗಣ್ಯವ್ಯಕ್ತಿಗಳು ಈ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದಾರೆ. ಅವರಿಗೆ ಅಭಿವೃದ್ಧಿಯನ್ನೂ ಆಯುರಾರೋಗ್ಯವನ್ನೂ ಕೋರಿ ಭಾರತವರ್ಷದ ಮೂಲೆಗಳಿಂದ ಈಗಾಗಲೇ ನೂರಾರು ಶುಭಸಂದೇಶಗಳು ಬಂದಿವೆ.

ಕೊಲ್ಹಾಪುರ ಸಂಸ್ಥಾನದ ಹಳ್ಳಿ ಚಿಂಚಲಿ ಎಂಬಲ್ಲಿ ಒಂದು ಸಾಮಾನ್ಯ ಕುಟುಂಬದಲ್ಲಿ ಶ್ರೀ ಹುಕ್ಕೇರಿಕರರ ಜನನ. ಅವರು ೮ ವರ್ಷದವರಿರುವಾಗಲೇ ಅವರ ತಂದೆ ತೀರಿಕೊಂಡರು ಮತ್ತು ಆ ಹಳ್ಳಿಯಲ್ಲಿಯೇ ಅವರು ಪ್ರಾಥಮಿಕ ಶಿಕ್ಷಣ ಪಡೆದರು. ನಿರ್ದಿಷ್ಟ ವಯವಾಗಿಲ್ಲವೆಂಬ ಕಾರಣದಿಂದ ಅವರಿಗೆ ಮುಲ್ಕೀ ಪರೀಕ್ಷೆಗೆ ಅವಕಾಶ ಸಿಕ್ಕಲಿಲ್ಲ. ಅವರಿಗೆ ಇಂಗ್ಲೀಷ ಕಲಿಯಬೇಕೆಂದು ಆಶೆಯಾಗಲು ಅವರ ತಾಯಿ ಅವರಿಗೆ [illegible] ಯನ್ನು ಬಿಡಗೊಡದಾದರು. [illegible] ಅವರು ತಾಯಿಯನ್ನು ವಿರೋಧಿಸಿ ಕೊಲ್ಹಾಪುರಕ್ಕೆ ಓಡಿಹೋದರು. ಅಲ್ಲಿ ಅವರಿಗೆ ಅನುಕೂಲವಾಗಲಿಲ್ಲವಾಗಿ ದೈವವನ್ನು ಪರೀಕ್ಷಿಸಿ ನೋಡಲೆಂದು ಸಾಂಗಲಿ ಸಾತಾರಗಳಿಗೆ ಹೋದರು ಆದರೆ ಅಲ್ಲಿಯೂ ಅವರಿಗೆ ನಿರಾಶೆಯಾಗಲು ತಮ್ಮ ಹಳ್ಳಿಗೆ ಮರಳಿ ತಾಯಿಗೆ ಇಂಗ್ಲೀಷ ಶಾಲೆ ಕಳಿಸುವಂತೆ ಮನಸ್ಸೊಲಿಸಿದರು. ತಾಯಿ ಆ ಮನದಿಂದಲೇ ಒಪ್ಪಿ ಬೆಳಗಾವಿಯ ಹತ್ತರ [illegible] ಪುರ ಎಂಬಲ್ಲಿಗೆ ಕರೆದೊಯ್ದು [illegible] ಅವರನ್ನು ಇಂಗ್ಲೀಷ ಶಾಲೆಯೊಂದಕ್ಕೆ ಕಳು[illegible]ದರು. ಜೀವನ ನಿರ್ವಾಹಕ್ಕೆ [illegible] ಆದಾಯವಿಲ್ಲದ್ದರಿಂದ ಚಿಕ್ಕಂದಿನಲ್ಲಿ [illegible] ತುಂಬ ಕಷ್ಟಪಡಬೇಕಾಯಿತು. ಮಾಧ್ಯಮಿಕ ಶಿಕ್ಷಣವನ್ನು ಅವರು ನಾಲ್ಕೇ ವರ್ಷಗಳಲ್ಲಿ ಪೂರೈಸಿ ೧೯೦೬ ರಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಉಚ್ಚ ಶಿಕ್ಷಣದ ವಿಚಾರ ಅವರ ತಲೆ ತಿನ್ನಹತ್ತಿತು. ಆದರೂ ಸೋಲಲಿಲ್ಲ. ಸೊಪ್ಪುಹಾಕದೆ ಪುಣೆಗೆ ಹೋಗಿ ಅಲ್ಲಿ ಸಾಹಸದಫಲವಾಗಿ ಸಹಾಯ ಕೇಳಿ ಫರ್ಗ್ಯೂಸನ್ ಕಾಲೇಜನ್ನು ಸೇರಿದರು, ೧೯೧೧ ರಲ್ಲಿ ಬಿ. ಎ. ಪರೀಕ್ಷೆಯಲ್ಲಿಯೂ ೧೯೧೩ ಕ್ಕೆ ಎಂ. ಎ. ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು. ಕಾಲೇಜಿನಲ್ಲಿದ್ದಾಗಲೇ ಸರಕಾರದ ಸೇವೆಯಲ್ಲಿ ಸೇರಕೂಡದೆಂದೂ ಕರ್ನಾಟಕದಲ್ಲಿ ಶಿಕ್ಷಣ ಪ್ರಸರಣದ ಮುಖಾಂತರ ಜನಸೇವೆಯನ್ನೇ ಕೈಕೊಳ್ಳತಕ್ಕದ್ದೆಂದೂ ರಾಯರು ನಿಶ್ಚಯಿಸಿಕೊಂಡಿದ್ದರು.

ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದುತ್ತಲೆ ಧಾರವಾಡದ ವಿಕ್ಟೋರಿಯಾ ಹಾಯಸ್ಕೂಲಿನ ಪ್ರಮುಖಾಧ್ಯಾಪಕರಾಗಿ ಕೆಲಸಮಾಡಲು ಅವರಿಗೆ ಕರೆಬಂತು. ದಿನದ ಓದಣದಲ್ಲಿ ತುಂಬ ದಿಗು ವಿದ್ದರೂ ವಿದ್ಯಾರ್ಥಿ ವರ್ಗಕ್ಕೆಲ್ಲ ಬೇಕಾಗಿಯೇ ಇದ್ದರು. ಇವರ ಬರವಿನಿಂದ ಓರ್ವ ಅತ್ಯುತ್ತಮ ಶಿಕ್ಷಕರೂ ನಿಷ್ಠಾತ ಪಾಮಪತ್ಯಗಾರರೂ ಸಂಸ್ಥೆಗೆ ಸಿಕ್ಕಂತಾಯ್ತು. ಸಂಸ್ಥೆಯ ಅಜೀವ ಸಭಾಸದರಾಗಿ ಅದರ ಆರ್ಥಿಕ ಸ್ಥಿತಿಯನ್ನು ಶಿಕ್ಷಣದ ಮಟ್ಟವನ್ನು ಎತ್ತರಿಸಲು ರಾಯರು ತುಂಬ ಪರಿಶ್ರಮಪಟ್ಟರು. ೧೯೩೦ ರಲ್ಲಿ ರ್‍ಯಾಂಗಲರ [illegible]

[illegible]

— [illegible]

ನಾವೀಗ ಸ್ವಚ್ಛ ಮಾಡಬೇಕಾಗಿವೆ. [illegible]ದಿಂದ ಕೂಡಿ ಬೀಳುತ್ತಿದ್ದ ಕೊಳೆ [illegible] ಹಾಕಬೇಕಾಗಿದೆ. ನಮ್ಮ ಈ ಹಳೆಯ ಮನೆಯಲ್ಲಿ ವರ್ಷಾನುವರ್ಷಗಳಿಂದ ಸ್ವಾರ್ಥದ ತೋರುಗಳನ್ನು ಮಾಡಿಕೊಂಡ. ನಮ್ಮ ಅನ್ನವನ್ನೇ ತಿಂದು ಕೊಬ್ಬಿ ವೆರೆಯುವ ಮೂಷಕ ಕುಲಕ್ಕೆ ಕೈ ತೋರಿಸಬೇಕಾಗಿದೆ. ಕುಸಿದು ಬೀಳುತ್ತಿರುವ ಗೋಡೆಗಳನ್ನು ಬಹಳ ಎಚ್ಚರದಿಂದ ಕೆಡಹಿ ಪುನಃ ಭದ್ರ ತಳಹದಿಯ ಮೇಲೆ ಹೊಸವಾಗಿ ಕಟ್ಟಬೇಕಾಗಿದೆ. ಉದುರಿ ಬೀಳುತ್ತಿರುವ ಮಣ್ಣನ್ನು ಕೆದರಿ ತೆಗೆದು ಗಚ್ಚನ್ನು ಸವರಬೇಕಾಗಿದೆ. ಪರಕೀಯರು ತಮ್ಮ ಅನುಕೂಲತೆಗಾಗಿ ಕಟ್ಟಿದ ಗೋಡೆಗಳನ್ನು ಕೆಡಹಿ ನಮ್ಮ ಅನುಕೂಲತೆಗೆ ತಕ್ಕಂತೆ ಹೊಸ ಗೋಡೆಗಳನ್ನ ಕಟ್ಟಬೇಕಾಗಿದೆ. ಹೊಸ ಅಂತಸ್ತುಗಳನ್ನು ಏರಿಸಬೇಕಾಗಿದೆ. ಅಂಗಳದಲ್ಲಿ ಉದುರಿಬಿದ್ದ ಎಲೆಗಳನ್ನೆಲ್ಲ ಕೂಡಿಸಿ ಸುಟ್ಟು ಗೊಬ್ಬರ [illegible] ಬೇಕಾಗಿದೆ. ಮುಳ್ಳು ಕಂಟಿಗಳನ್ನೆಲ್ಲ ಕಿತ್ತು ಒಗೆಯಬೇಕಾಗಿದೆ. ಹೊಸದಾಗಿ ಕಾಯಿಪಲ್ಲೆ ಬೀಜಗಳನ್ನು ಬಿತ್ತಬೇಕು ಅಂದ ಚಂದಕ್ಕಾಗಿ ನಾಲ್ಕು ಗಿಡಗಳನ್ನು ನಚ್ಚಬೇಕು ಅವುಗಳ ಜೊತೆಗೇ ದೇವರ ಪೂಜೆಗೆ ಬೇಕೆಂದು ಹೂ ಗಿಡಗಳನ್ನು ಮರೆಯದೆ ನಚ್ಚಬೇಕ ದ ದಕ್ಷತೆ ವಹಿಸಬೇಕು.

ನೀರಿನ ಹೊಸ ನಲ್ಲಿಯೊಂದನ್ನು ಪ್ರಾರಂಭಿಸುವದಿದ್ದರೆ ಮನೆಯ ಹಿರಿಯರ [illegible] ಜ್ಞಾನವಾಪಿಯಲ್ಲಿಯ ಹೊಲಸನ್ನೆಲ್ಲ ಬಳಿಸಿ ಮಲಿನ ನೀರನ್ನೆಲ್ಲ ಎತ್ತಿ ಹಾಕಿ ಸ್ವಚ್ಛ ಮಾಡಿ ಶುದ್ಧ ನೀರಿನ ಸೆಲೆ ತೆರೆಯುವಂತೆ ಪ್ರಯತ್ನ ಮಾಡಬೇಕಾಗಿದೆ. ಬಾಗಿಲಲ್ಲಿ ಬರಿ ಬೊಗಳುವ [illegible]

[illegible] ಹಾಕಬೇಕಾಗಿದೆ. ಹೀಗೆ [illegible] ನಮಗೆ ಕೆಲಸ ತುಳಿಯಬೇಕಾದೀತು, ನಮ್ಮ ನಮ್ಮ ವೈಯ್ಯಕ್ತಿಕ ಕಲಹ ಮಾದೀತು ಎಂಬುದನ್ನು ನಾವು ಅರಿತಿರತಕ್ಕದ್ದು. ಆದರೆ ಈ ಮುಕ್ತಿಸ್ನಾನದ ನಂತರ ನಾವು ತುದ್ಯೋದಕ ಸ್ನಾನವನ್ನು [illegible] ಎಲ್ಲೆಡೆಗೂ ಹರಡಿ ಪಾವಿತ್ರ್ಯದ ತೇಜದಿಂದ ದಶದಿಕ್ಕುಗಳು ತುಂಬದಿರವು. ಈ ನವಜನ್ಮವನ್ನ ಕಾಣುವ ಸೌಭಾಗ್ಯ ನಮಗೆ ದೊರೆಯಲಿ ಎಂಬುದಿಷ್ಟೇ ನಮ್ಮ ಮನದ ಬಯಕೆ.

ಇಂಥ ಮಂಗಲ ಅವ್ಯಾಹತವಾಗಿ ೩೦ ವರ್ಷ ತೊಡಗಿದ ನಮ್ಮ ಬಲ್ಲ ಮಿತ್ರನಿಗೆ ಕಾಲ್ಯದಲ್ಲಿ ೬೧ನೆ ವರ್ಷ ಪ್ರಾರಂಭವಾಗುವದೆಂಬ ವಿಷಯ ನನಗೆ ವರ್ಣನಾತೀತವಾದ ಆನಂದವಾಗಿದೆ; ಇಷ್ಟೇ [illegible] ಅನಿಸಿದೆ. [illegible] ಇದೇ ರೀತಿ ಸೇವೆ ಗೈದ ಸಾಮರ್ಥ್ಯವು ನನ್ನ ಮಿತ್ರನಿಗೊದಗಲಿ, ಅವರ ಯಶಸ್ಸನ್ನು ಕಾಣುವ ಸೌಭಾಗ್ಯ ನನಗುಂಟಾಗಲಿ ಎಂಬುದಿಷ್ಟೇ ನನ್ನ ಹಾರೈಕೆ.

ರಾ. ಶ್ರೀ. ಯವರ ಸಮರ್ಥ ಕಾರ್ಯದರ್ಶಿತ್ವ

(ಲೇ:—ಶ್ರೀ ಖುರ್ಲ ಬಿಂದುಮಾಧವಾಚಾರ್ಯರು)

ರಾಜಕೀಯ ರಂಗದ ಏರಿಳಿತಗಳ ಮಧ್ಯದಲ್ಲಿ ತಮ್ಮ ಕರ್ತೃತ್ವ ಶಕ್ತಿಯಿಂದಲೂ, ಬುದ್ಧಿಮತ್ತೆಯಿಂದಲೂ ಸ್ಥಿರವಾಗಿ, ಶಾಂತವಾಗಿ, ಅಚಲವಾಗಿ ನಿಂತ ಮಹಾವ್ಯಕ್ತಿಗಳೆಂದರೆ, ಶ್ರೀಮಾನ್ ರಾ. ಶ್ರೀ. ಹುಕ್ಕೇರಿಕರರು. ಅವರ ಜೀವನವು ಅನೇಕರಿಗೆ ಒಡೆಯಲಾರದ ಒಗಟು. ಅವರ ಅಂತರಂಗವನ್ನು ಅರಿಯುವದು ಕಷ್ಟವೆಂದು ಕೆಲವರೂ ಅವರಂತಹ ನಿಯೋಜಕರೂ ರಾಜಕಾರಣಿಗಳೂ ದುರ್ಲಭವೆಂದು ಹಲವರೂ ಕರ್ನಾಟಕದ ರಾಜಕಾರಣದಲ್ಲಿ ಕಲಕುಮಲಕು ಮಾಡುವ ಸಾಮರ್ಥ್ಯವಿದ್ದ ಮಹಾವ್ಯಕ್ತಿ ಎಂದು ಕೆಲವರು ಅವರೇನ್ರಿ ಮನಸ್ಸು ಮಾಡಿದರೆ ತಿಪ್ಪೆ ಒಯ್ದು ಉಪ್ಪರಿಗೆ ಮಾಡಬಲ್ಲರು, ಉಪ್ಪರಿಗೆ ಉರುಳಿಸಿ ಬೆಪ್ಪಮಾಡಬಲ್ಲರೆಂದು ಕೆಲವರು ರಾ. ಶ್ರೀ. ಯವರೆಂದರೆ ಕರ್ನಾಟಕದ ಚೇರರೆಂದು ಕೆಲವರೂ ಹೇಳುತ್ತಲಿದ್ದಾರೆ. ಅಂತೂ ಕನ್ನಡದ ಜನ ಅವರ ಬುದ್ಧಿಮತ್ತೆಯ ಬಗ್ಗೆ ಕೌತುಕಗೊಂಡಿದೆ. ಅವರ ಸಾಹಸ-ಯೋಜಕಶಕ್ತಿಗಳಿಗೆ ಮರುಳಾಗಿದೆ. ಇನ್ನು ಕೆಲವರಿಗೆ ಈ ಬುದ್ಧಿಶಕ್ತಿಯೇ ಭೀತಿಯನ್ನುಂಟು ಮಾಡಿದೆ, ಇವರ ಮುಂದೆ ನಮ್ಮ ಆಟ ನಡೆಯುವದೆಂತು? ಎಂದು ಯೋಚನಾಪರರಾಗಿದ್ದಾರೆ. ಅಂತೂ ರಾ. ಶ್ರೀ. ಯವರು ಇಂದು ಕರ್ನಾಟಕದ ರಾಜಕೀಯರಂಗದಲ್ಲಿ ತಮ್ಮ ಶಕ್ತಿ ಸಾಮರ್ಥ್ಯಗಳಿಂದ ವಿಶಿಷ್ಟ ಸ್ಥಾನವನ್ನು ಸಂಪಾದಿಸಿ ಸ್ಥಿರವಾಗಿ ನಿಂತು, ವೀರಯೋಧರಂತೆ ಹೋರಾಡುತ್ತಿದ್ದಾರೆ.

ರಾ. ಶ್ರೀ. ಯವರು ನವಕರ್ನಾಟಕದ ನಿರ್ಮಾಪಕರಲ್ಲೊಬ್ಬರು. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅನೇಕ ಪುಟಗಳನ್ನು ಅವರೇ ಸ್ಥಾಪಿಸುವರೆಂಬುದರಲ್ಲಿ ಸಂಶಯವಿಲ್ಲ. ಅವರ ಪಾತ್ರವೇ ಅಂತಹದಿದೆ. ಶ್ರೀಮಾನ್ ರಾ. ಶ್ರೀ. ಯವರ ಸಾರ್ವಜನಿಕ ಜೀವನವೇ ಕರ್ನಾಟಕದ ಉದಯಕಾಲದಲ್ಲಾಗಿದೆ. ಅವರು ರಾಜಕೀಯ ರಂಗದಲ್ಲಿ ಕಾಲಿಟ್ಟ ಕಾಲವಂತೂ ಭಾರತದ ಪುನರುತ್ಥಾನದ ಕಾಲ. ತನ್ನ ಜನಾಂಗ ತಾನು, ತನ್ನ ದೇಶ, ತನ್ನ ತನಗಳ ಬಗ್ಗೆ ಇನ್ನೂ ಮಬ್ಬಿನಲ್ಲಿರುವಾಗ ಅವರನ್ನು ಜೇತರಿಸಿ ಅವರಿಗೆ ಸ್ವಜ್ಞಾನವನ್ನು ಮಾಡಿಕೊಟ್ಟು ಅವರಲ್ಲಿ ಹುರುಪು ಹುಮ್ಮಸ್ಸುಗಳನ್ನು ತುಂಬಿ ರಾಷ್ಟ್ರಕಾರ್ಯಕ್ಕೆ [illegible] ಬಹು ಕಠಿಣ ಕಾರ್ಯವು [illegible] ನೆನೆವರೆ ಇವರ ಮಹತ್ವವು ನಮಗೆ ಚೆನ್ನಾಗಿ ಗೊತ್ತಾಗುವದು. ರಾಷ್ಟ್ರದ ಪುನರುಜ್ಜೀವನದ ಕಾರ್ಯದಲ್ಲಿ ಅದರ [illegible] ಅದರ ಭವಿಷ್ಯದ ಚಿತ್ರಗಳ [illegible] ಕನಸು ನನಸಾಗುವ ಭದ್ರವಾದ [illegible] ಹಾಕುವ ಕೆಲಸವು ಅಂಥಿಂಥದ್ದಲ್ಲ.

ದೇಶದ [illegible] ವಿಚಾರಿಸುವುದು, ಹೊಸ ಹೊಸ ಮಾರ್ಗಗಳನ್ನು ಕಂಡು ಹಿಡಿಯುವದು, ಜನತೆಗೆ ಮಾರ್ಗದರ್ಶನಮಾಡುವದು, ಇದೇ ಜೀವನವಾಗಿ ಉಳ್ಳ ಮುಖಂಡರಿಂದಲೇ ರಾಷ್ಟ್ರ ನಿರ್ಮಾಣವಾಗುವದು. ಕನ್ನಡ ನಾಡಿನಲ್ಲಿ ಈ ಬಗೆಯಾಗಿ ವಿಚಾರಮಾಡುವ, ನಾಡಿಗಾಗಿಯೇ ತಮ್ಮ ಆಯುಷ್ಯವನ್ನು ಮುಡುಪಿಟ್ಟ ಮುಖಂಡರು ಬಹು ಕಡಿಮೆ. ಇದ್ದ ಮುಖಂಡರಲ್ಲಿ ರಾ. ಶ್ರೀ. ಯವರು ಒಬ್ಬರೆಂದು ಹೇಳಲು ಹೆಮ್ಮೆ ಎನಿಸುತ್ತದೆ.

ಮಹಾತ್ಮರ ಅಸಹಕಾರ ಯುಗವು ಭಾರತವನ್ನೇ ಬಡಿದೆಬ್ಬಿಸಿತು. ಮೊದಲಿನಿಂದಲೂ ರಾಷ್ಟ್ರೀಯ ಜಾಗ್ರತೆಯನ್ನೇ ಕೈಕೊಂಡಿದ್ದ ರಾ. ಶ್ರೀ. ಯವರು ತಮ್ಮ ಸಹೋದ್ಯೋಗಿಗಳೊಡನೆಯೂ, ವಿದ್ಯಾರ್ಥಿವೃಂದದೊಡನೆಯೂ ಆಂದೋಲನದಲ್ಲಿ ಧುಮುಕಿದರು. ಈ ಗುಂಪಿನ ಬರುವಿಕೆಯು ಕರ್ನಾಟಕದ ಇತಿಹಾಸದಲ್ಲಿಯೇ ಒಂದು ಹೊಸ ಪ್ರಕರಣವನ್ನೇ ಪ್ರಾರಂಭಮಾಡಿತು. ತರುಣರೂ ಮೇಧಾವಿಗಳೂ ಆದ ಇವರ ಬರುವಿಕೆಯಿಂದ ಚಳವಳಿಗೆ ಒಂದು ಬಗೆಯ ಬಲ ಬಂದಿತು. ಇವರ ಶಿಷ್ಯವೃಂದವು ದೇಶದಲ್ಲೆಲ್ಲ ಹಬ್ಬಿದ್ದರಿಂದ ಸ್ವಾಭಾವಿಕವಾಗಿಯೇ ಶ್ರೀ ಹುಕ್ಕೇರಿಕರರಿಗೆ ನಾಡಿನ ಮುಖಂಡತ್ವವು ಬಂದುದರಲ್ಲಿ ಆಶ್ಚರ್ಯವಿಲ್ಲ.

ಈ ಗುಂಪು ರಾಜಕೀಯ ರಂಗದಲ್ಲಿ ಕಾಲಿಟ್ಟದ್ದೇ ತಡ, ಚಳವಳಿಯ ಸ್ವರೂಪವೇ ಬದಲಾಯಿತು. [illegible] ಬರಹ, ಶಿಸ್ತು, ಸಂಘಟನೆಗಳು, [illegible] ಇವರೇ ಮಾರ್ಗದರ್ಶನದ ಕೇಂದ್ರಸ್ಥಾನವಾದರು. ಕರ್ಮವೀರವು [illegible] ಕರ್ನಾಟಕದ ಆಂದೋಲನದ [illegible] ಯಿತು. ಹೀಗೆ, ಜನ, ಉತ್ಸಾಹ, ಮಾರ್ಗದರ್ಶನಗಳಿಂದ ನಾಡು ಮುನ್ನುಗ್ಗುತ್ತಿತು.

ಈ ಗುಂಪಿನ ಈ ಆವೇಗವನ್ನು ಸರಕಾರವು ಸಹಿಸದಾಯಿತು. ಈ ಗುಂಪಿನ ಮುಖಂಡರಾದ ಶ್ರೀ ರಾ. ಶ್ರೀ. ಯವರೂ ದಿವಾಕರ ರಂಗರಾಯರೂ ದಬ್ಬಾಳಿಕೆಗೆ ತುತ್ತಾದರು. ಆಗ ಇವರ ಜೀವನವು ಇನ್ನೂ ಅರಳದ ಮೊಗ್ಗೆ.

ಸೆರೆಮನೆಯಲ್ಲಿಯೂ ಈ ಇಬ್ಬರಿಗೆ ಇದೇ ವ್ಯವಸಾಯ. ತಾವು ಮುಂದೆ ಮಾಡಬೇಕಾದ ಕಾರ್ಯ, ಆ ಕಾರ್ಯಕ್ಕೆ ತಕ್ಕ ಯೋಜನೆ. ಅದರ ಸಿದ್ಧಿಗಾಗಿ ಅನುಸರಿಸುವ ಮಾರ್ಗ, ಇವೆಲ್ಲವುಗಳನ್ನು ದೀರ್ಘವಾಗಿ ಆಲೋಚಿಸಿ, ಚರ್ಚಿಸಿ, ನಿಶ್ಚಿತವಾದ ಧ್ಯೇಯ ಧೋರಣಗಳಿಂದ ಸಮರಸನ್ನದ್ಧರಾದಾಗ ಯೋಧರಂತೆ ಹೊರಬಿದ್ದರು.

ಈಗ ಈ ವೀರರ ದೃಢಸಂಕಲ್ಪ ಹೊಸ ಹೊಸ ಯೋಜನೆ, ಇವುಗಳನ್ನು ಕಾರ್ಯರೂಪಕ್ಕಿಳಿಸುವ ತೀವ್ರತರವಾದ ಲವಲವಿಕೆಗಳನ್ನು ಕಂಡು ಜನ ಕೌತುಕಗೊಂಡಿತು. ಕೆಲವರು ಇವರಿಗೆ ಹುಚ್ಚರೆನ್ನದೆಯೂ ಬಿಡಲಿಲ್ಲ. ನವಶಕ್ತಿಯು ಜನ್ಮ ತಾಳಿತು. ಇವರು ಕಾರ್ಯಮಾಡಬಯಸಿದರೂ ಅಳರಸರು ಮಾಡಗೊಡಲಿಲ್ಲ. ಶ್ರೀ ದಿವಾಕರರು ಮತ್ತೆ ಸರಕಾರದ ಅತಿಥಿಗಳಾದರು.

ಮರಳಿ ಬಂದು ಕಾರ್ಯೋನ್ಮುಖರಾಗುವಾಗ ನಾಡಿನ ರಾಷ್ಟ್ರೀಯ ಕುದಿಯು ತಣ್ಣಗಾಗಿದ್ದಿತು. ಕಾಂಗ್ರೆಸ ಕಮೀಟಿಗಳ ಕಡೆಗೆ, ಹಣಿಕಿ ಹಾಕುವವರೇ ಇಲ್ಲ. ರಾಷ್ಟ್ರೀಯ ಜಾಗೃತಿಯ ವಿವಿಧ ಕ್ಷೇತ್ರಗಳು ಸಾಯ ಹತ್ತಿಲ್ಲದೆ ಮಾಯವಾಗುತ್ತಲಿವೆ, ಜನತೆಯು ಉದಾಸೀನವಾಗಿದೆ. ಇಂತಹ ಸಮಯದಲ್ಲಿ ಈ ಇಬ್ಬರು ಧೀರರು, ನಾಡಿನ ನಾಯಕತ್ವವನ್ನು ವಹಿಸಿದರು. ಅಂತಃಶಕ್ತಿಯ ಪ್ರಭಾವವಿಲ್ಲದೆ, ಇಂತಹ ಸಮಯದ ಆ ಕಾರ್ಯಭಾರವನ್ನು ಹೊರುವ ಸಾಹಸವನ್ನಾರು ಮಾಡಬಲ್ಲರು?

ರಾ. ಶ್ರೀ. ಯವರು, ಪ್ರಾಂತಿಕ ಕಾಂಗ್ರೆಸ ಕಮೀಟಿಯ ಕಾರ್ಯದರ್ಶಿತ್ವವನ್ನು ವಹಿಸಿದರು. ಮುರಕಳಿಗೆ ಬಂದ ಕಾಂಗ್ರೆಸ ಸಂಘಟನೆಯನ್ನು ಬಲಪಡಿಸಿದರು. ಕಚೇರಿಯ ಅಂತರಿಕ ವ್ಯವಸ್ಥೆಯನ್ನು ಸುವ್ಯವಸ್ಥಿತ ಮಾಡಿದರು. ಪ್ರಾಂತದಲ್ಲೆಲ್ಲ ಸಂಚರಿಸಿ, ಕಾರ್ಯಕರ್ತರನ್ನು ಸಂಘಟಿಸಿದರು. [illegible] ಕ. ಪ್ರಾ. ಕಾಂಗ್ರೆಸ ಕಮಿಟಿಯನ್ನು ಪ್ರಬಲವಾದ ಪ್ರಭಾವಶಾಲಿಯಾದ, ಜನತೆಯನ್ನು ಅಧಿಕಾರವಾಣಿಯಿಂದ ನಡೆಯಿಸುವ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇವರ ಈ ಸಂಘಟನಾ ಚಾತುರ್ಯವು ಎಲ್ಲರನ್ನೂ ಬೆರಗುಗೊಳಿಸಿತು. ಪ್ರಾಂತದಲ್ಲೆಲ್ಲ ಏಕಸೂತ್ರತೆಯುಂಟಾಯಿತು, ಇಡೀ ಪ್ರಾಂತದಲ್ಲಿ ನವಚೈತನ್ಯವುಂಟಾಯಿತು. ಕಾಂಗ್ರೆಸ ಕಾರ್ಯಕರ್ತರಲ್ಲಿ ಸ್ನೇಹ ಸೌಹಾರ್ದಗಳು ಬೆಳೆದವು. ನಾಡಿನ ಸರ್ವತೋಮುಖ ಬೆಳವಣಿಗೆಯನ್ನು ಮಾಡಲು ಅಣಿಯಾದ ಈ ಗುಂಪು, ವಿವಿಧ ವಿಧಾಯಕ ಕಾರ್ಯಗಳಿಗೆ ಕೈಯಿಕ್ಕಿತು. ಖಾದಿಪ್ರಚಾರ ಗ್ರಾಮೋದ್ಯೋಗಗಳು ಕರ್ನಾಟಕದಲ್ಲಿ ನೆಲೆ ನಿಂತವು. ಬಹಿಷ್ಕಾರವು ಕಳೆಗೊಂಡಿತು. ಏಕೀಕರಣದ ಪ್ರಶ್ನೆಯು ಅಖಿಲ ಭಾರತದ ಮನ್ನಣೆ ಪಡೆಯಿತು. ಕಾಂಗ್ರೆಸ್ಸಿನಿಂದ ದೂರ ಸರಿದು ನಿಂತ ಬ್ರಾಹ್ಮಣೇತರ ಪಕ್ಷವು ಬಂದು ಸೇರುವಂತೆ ಪ್ರಯತ್ನಿಸಿ, ಯಶಸ್ವಿಯಾದರು. ಹೀಗೆ ವಿವಿಧ ಕ್ಷೇತ್ರಗಳು ಕಾರ್ಯೋನ್ಮುಖವಾದವು. ಈ ಎಲ್ಲ ಕ್ಷೇತ್ರಗಳಲ್ಲಿಯೂ ರಾ. ಶ್ರೀ ಯವರ ಕೈವಾಡವು ಇದ್ದೇ ಇದೆ. ಅಂತೂ, ೧೯೨೭ ರಿಂದ, ೧೯೩೭ ರ ವರೆಗೆ, ಕರ್ನಾಟಕದ ರಾಜ್ಯಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡು ರಾಜಕಾರಣಕ್ಕೂ ನಾಡಿನ ಬೆಳವಣಿಗೆಗೂ ರೂಪಗೊಟ್ಟ ಶ್ರೇಯಸ್ಸು ಈ ಗುಂಪಿಗೆ, ಅರ್ಥಾತ್ ಶ್ರೀ. ಹುಕ್ಕೇರಿಕರರಿಗೆ ಇದೆ ಎನ್ನುವದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಈ ಅವಧಿಯಲ್ಲಿ ಶ್ರೀ. ದಿವಾಕರ, ಹುಕ್ಕೇರಿಕರ ಕೌಜಲಗಿ, ಹನುಮಂತರಾವ, ಡಾ. ಹರ್ಡೀಕರ ಇವರೇ ಕರ್ನಾಟಕದ ಅಧಿನಾಯಕರಿದ್ದರೆಂದು ಇತಿಹಾಸವು ಸಾರುವದರಲ್ಲಿ ಅತಿಶಯೋಕ್ತಿಯಿಲ್ಲ. ರಾ. ಶ್ರೀ. ಯವರ ಕೀರ್ತಿಯು ಸಮರ್ಥ ಕಾರ್ಯದರ್ಶಿಗಳೆಂದು ನಾಡಿನಲ್ಲೆಲ್ಲ ಹೆಸರಾಯಿತು. ಅನೇಕಸಲ ಅ. ಭಾ. ಕಾಂಗ್ರೆಸ ಕಮೀಟಿಯ ಮೇಲೆ ತಮ್ಮ ಪ್ರಭಾವ ಬೀರಿದ ಅನೇಕ ಉದಾಹರಣೆಗಳು ನನಗೆ ಗೊತ್ತುಂಟು.

ಶ್ರೀ. ರಾ. ಶ್ರೀ. ಯವರು ಕಾರ್ಯದರ್ಶಿತ್ವವನ್ನು ಬಿಟ್ಟನಂತರವೂ ಕೂಡ, ಅನೇಕ ದಿನಗಳವರೆಗೆ ಅವರೇ ಅದರ ಮಾರ್ಗದರ್ಶನವನ್ನೂ ಕಾರ್ಯವನ್ನೂ ಮಾಡಿದ್ದ ಸಂಗತಿಯು ಎಲ್ಲರಿಗೂ ತಿಳಿದ ವಿಷಯ.

ಕಾಂಗ್ರೆಸ್ಸಿನಲ್ಲಿಯ ಆಯಾ ಸ್ಥಾನಗಳನ್ನು (ಯೋಗ್ಯತೆ ಇರಲಿ, ಇಲ್ಲದಿರಲಿ) ಅಲಂಕರಿಸಿ, ಕೇವಲ ಅಧಿಕಾರಲೋಲುಪರಾಗಿ, ಆತ್ಮಪ್ರಶಂಸೆಯಿಂದ ಮೆರೆಯುವ ಈ ಜನರಲ್ಲಿ ರಾ. ಶ್ರೀ. ಯವರ ಹೆಸರನ್ನು ಸೇರಿಸಕೂಡದು. ಜನರೆದುರಿಗೆ ಬಾರದೆ ಹಿಂದುಳಿದು ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮ ಪ್ರಭಾವವನ್ನು ಬೀರಿದ ಮಹಾವ್ಯಕ್ತಿಗಳಲ್ಲಿ ರಾ. ಶ್ರೀ. ಯವರು ಒಬ್ಬರೆಂದು ನನ್ನ ಅಭಿಪ್ರಾಯವಿದೆ. ಈ ಇಡೀ ಗುಂಪಿನ ರಾಜಕಾರಣದಲ್ಲಿ ಅದೃಶ್ಯತಪಸ್ವಿಗಾಗಿ ಬಯಸಿಕೊಳ್ಳುವ ಪಾತ್ರವನ್ನು ವಹಿಸಿದ ವಿಶ್ವಕಂಠರಿವರು. ಹೀಗೆ ರಾ. ಶ್ರೀ. ಯವರು ತಮ್ಮ ಕರ್ತೃತ್ವ ತ್ಯಾಗ, ಸಹನಶೀಲತೆ, ಸುಘಟನಾಸಾಮರ್ಥ್ಯ ಮೇಧಾಶಕ್ತಿಗಳಿಂದ ಕರ್ನಾಟಕದ ರಾಜಕೀಯ ರಂಗದಲ್ಲಿ ವಿಶಿಷ್ಟವಾದ ಸ್ಥಾನವನ್ನು ದೊರಕಿಸಿದ್ದಾರೆ. ಅದನ್ನು ಯಾರೂ ಕಸಿದುಕೊಳ್ಳಲಾರರು.

ಅವರ ಅಖಂಡವಾದ ಜನತೆಯ ಸೇವೆಯೇ ಈ ೩೦ ವರ್ಷದ ಹಣ್ಣಾದ ಅನುಭವಗಳಿಂದ ಇನ್ನೂ ಹೆಚ್ಚಾಗಿ ಆಗಲೆಂದೂ ದೇವರು ಅವರಿಗೆ ಆಯುರಾರೋಗ್ಯಗಳನ್ನಿತ್ತು ಅವರಿಂದ ಕಾರ್ಯಮಾಡಿಸಲೆಂದೂ ಪ್ರಾರ್ಥಿಸುತ್ತೇನೆ.

ಶ್ರೀ. ಹುಕ್ಕೇರಿಕರ ರಾಮರಾಯರು

(೧೭ ನೇ ಪುಟದಿಂದ)

ಯನ್ನು ಶ್ರೀ ಹುಕ್ಕೇರಿಕರರು ಹೊತ್ತರು. ಕರ್ನಾಟಕ ಏಕೀಕರಣ ಸಂಘದ ನೇತೃತ್ವದಲ್ಲಿ ಹೊರಟ "ಯುನಾಯ್ಟೆಡ್ ಕರ್ನಾಟಕ" ಎಂಬ ಇಂಗ್ಲೀಷ ವಾರಪತ್ರಿಕೆಯನ್ನು ಇವರು ಅನೇಕ ವರ್ಷ ನಡೆಯಿಸಿದರು.

ಕಾಂಗ್ರೆಸಿನ ಎಲ್ಲ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತಿದ್ದ ಕಾರಣ ೧೯೩೧ ರಿಂದ ಅನೇಕ ಸಲ ರಾಯರಿಗೆ ಕಾರಾವಾಸವನ್ನು ಭೋಗಿಸಬೇಕಾಯಿತು. ಶ್ರೀ. ದಿವಾಕರ ಮತ್ತು ಡಾ. ಹರ್ಡೀಕರರ ಜೊತೆಗೆ ಕರ್ನಾಟಕದ ರಾಜಕೀಯ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದವರಲ್ಲಿ ಶ್ರೀ. ಹುಕ್ಕೇರಿಕರರೂ ಒಬ್ಬರು. ಅವರ ಹಣವರಿಯದ ದುಡಿಮೆ, ಸಾರ್ವಜನಿಕ ತೊಂದರೆಗಳನ್ನು ನೀಗಿಸಲು ಹೋರಾಡುವ ಅವರ ಸಿದ್ಧತೆ, ಸ್ವದೇಶಿ ಮತ್ತು ಗ್ರಾಮೋದ್ಯೋಗಗಳ ಬಗ್ಗೆ ಇದ್ದ ಅವರ ತೀವ್ರ ಅಭಿಲಾಷೆ ಇವೆಲ್ಲವುಗಳ ಮೂಲಕ ಅವರಿಗೆ ಇಂದು ಕರ್ನಾಟಕದಲ್ಲಿ ಗಣ್ಯಸ್ಥಾನ ದೊರೆತಿದೆ. ಯಾವುದೇ ಬಗೆಯ ಸಾರ್ವಜನಿಕ ಪ್ರಮೇಯಗಳಿದ್ದರೂ ಅವನ್ನು ಹದವರಿತು ಬಿಡಿಸುವಲ್ಲಿ ಇವರದು ಎತ್ತಿದ ಕೈ. ಇದರಿಂದ ಸರಕಾರದ ಅಧಿಕಾರೀ ವರ್ಗದಲ್ಲಿಯೂ ಇವರ ಪ್ರತಿಷ್ಠೆ ತುಂಬ ಬೆಳೆದುಬಂದಿದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿರಲು ಕಾಂಗ್ರೆಸಿನ ಅಖಿಲಭಾರತ ನೇತಾರರ ಸಂಪರ್ಕ ಬೆಳೆದಿತು. ರಾಯರ ಚಾಣಾಕ್ಷ ಪಾರುಪತ್ಯಗಾರಿಕೆಗೂ ನಸುವೂ ಸಡಿಲರಿಯದ ಹಿರಣ ಅಚ್ಚುಕಟ್ಟುತನಕ್ಕೂ ಅವರು ಮೆಚ್ಚಿ ತಲೆದೂಗಿದ್ದಾರೆ. ರಾಯರ ಸಮಯೋಚಿತ ಮೇಲ್ಬುದ್ಧಿ, ವಸ್ತುಸ್ಥಿತಿಯ ಪರಿಜ್ಞಾನ, ಎಲ್ಲರೊಡನೆ ಬೆರೆತುಕೊಳ್ಳುವ ಸ್ವಭಾವ ಇವುಗಳು ಅವರ ಸಾರ್ವಜನಿಕ ಜೀವನದ ಊರುಗೋಲಾಗಿವೆ. ೧೯೪೬ ಮಾರ್ಚ ತಿಂಗಳಲ್ಲಿ ಜರಗಿದ ಮುಂಬಯಿ ಶಾಸನ ಸಭೆಯ ಆಯ್ಕೆಯ ಕಾಲಕ್ಕೆ ಅವರ ಲೋಕಪ್ರಿಯತೆಯು ಕಂಡು ಬಂದಿದೆ. ೫೭,೦೦೦ ಮತಗಳಿಂದ ಇವರು ಆರಿಸಿ ಬಂದರು.

ಶಾಸನಸಭೆಯಲ್ಲಿಯೂ ಅವರು ತಮ್ಮ ಕರ್ತೃತ್ವ ಶಕ್ತಿಯನ್ನು ಪ್ರದರ್ಶಿಸುತಿರುವರು. ದೇವರು ರಾಯರಿಗೆ ದೀರ್ಘಾಯುವನ್ನೂ, ನಿರಾಗುಯ ಆರೋಗ್ಯವನ್ನೂ ಉತ್ತರೋತ್ತರ ಅಭಿವೃದ್ಧಿಯನ್ನೂ ದಯಪಾಲಿಸಿ, ಭಾರತದ ಅದರಲ್ಲಿಯೂ ಕರ್ನಾಟಕದ ಸರ್ವಾಂಗೀಣ ಉನ್ನತಿಗೆ ಅವರನ್ನು ಇನ್ನೂ ಅಣಿಗೊಳಿಸಲೆಂದು ಬೇಡಿಕೊಳ್ಳುತ್ತೇನೆ.



ಸತ್ಯಾಹಿಂಸೆಗಳ ಬೆಳಕಿತ್ತ ಶಾಂತಿದೂತ ಗಾಂಧೀಜಿ

ಜಿನೀವಾದಲ್ಲಿ ಗಾಂಧಿ ಜಯಂತಿ- ಕರಮರಕರರ ಸ್ವಾಗತ ಭಾಷಣ- ಪ್ರಿವ್ಯಾಟರಿಂದ ಗಾಂಧಿಯವರ ಗುಣಗಾನ-

ಕರಮರಕರರ ಸ್ವಾಗತ ಭಾಷಣ

“ ಈ ಸಭೆಯೊಡನೆ ಸಂಬಂಧವಿಟ್ಟುಕೊಂಡು ಇದರಲ್ಲಿ ಭಾಗಿಯಾಗುವುದು ನನಗೊಂದು ಹೆಚ್ಚಿನ ಗೌರವವೆಂದು ನಾನು ತಿಳಿಯುತ್ತೇನೆ. ನಾನು ೩ ತಿಂಗಳಿಂದ ಜಿನೀವಾದಲ್ಲಿದ್ದರೂ ನಿಮ್ಮೊಡನಿರುವ ಸಂದರ್ಭವೊದಗಿಸಿಕೊಟ್ಟ ಈ ದಿನವೇ ಸುದಿನವೆನಿಸುತ್ತದೆ.

ಈ ಸಂಜೆ ನಿಮ್ಮೊಡನೆ ನಾನಿರುವುದು ನನಗೊಂದು ಹೆಮ್ಮೆಯ ಸಂಗತಿಯೆಂದು ಹೇಳಲು ಮೂರು ಕಾರಣಗಳಿವೆ. ಮೊದಲನೆಯದಾಗಿ, ಮಹಾತ್ಮರ ಹುಟ್ಟುಹಬ್ಬವನ್ನು ಆಚರಿಸಲು ನಾವಿಲ್ಲಿ ಸೇರಿದ್ದು ೧೯೩೧ ರಲ್ಲಿ ಅವರು ನಿಮ್ಮೊಡನಿದ್ದರು. “ವಿಕ್ಟೋರಿಯಾ ಹಾಲಿ”ನಲ್ಲಿ ನೀವೆಲ್ಲ ಆಗ ಸಾವಿರಗಟ್ಟಲೆಯಲ್ಲಿ ಅವರ ವಾಣಿಯನ್ನಾಲಿಸಲು ನೆರೆದಿದ್ದಿರಿ. ಅನಂತರ ಭಾರತದಲ್ಲಿ ಬಹಳ ಸಂಗತಿಗಳು ನಡೆದವು. ಬಹಳ ಹಿಂದೆಯೇ ಸಲ್ಲಬೇಕಾಗಿದ್ದ ಸ್ವಾತಂತ್ರ್ಯವನ್ನು ಹಿಂದುಸ್ಥಾನವು ಸುದೀರ್ಘವೂ ದುಷ್ಕರವೂ ಆದ ಅಹಿಂಸಾತ್ಮಕ ಚಳವಳದಿಂದ ಸಾಧಿಸಿತು. ಯಥಾಪೂರ್ವ ಆ ಕಾಲದಲ್ಲೆಲ್ಲ ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯಗಳಿಕೆಗೆ ನಮ್ಮನ್ನೊಯ್ದ ಉಜ್ವಲ ಪರ್ವತಾಗ್ನಿ ಪ್ರಕಾರವಾಗಿ ನಿಂತರು. ಮಹಾತ್ಮರ ಆ ಒಂದು ಜೀವದ ಸ್ಫೂರ್ತಿಯಿಂದ ಹಿಂದುಸ್ಥಾನದಂತಹ ವಿಶಾಲ ದೇಶವು ನಿಶ್ಶಸ್ತ್ರತೆಯಿಂದ ಸ್ವಾತಂತ್ರ್ಯವನ್ನು ಸಂಪಾದಿಸಿತೆಂಬುದನ್ನು ಇಂದು ನಂಬುವುದು ಕಷ್ಟವೆನಿಸಬಹುದಾದರೂ ಅದೊಂದು ನಿಜ ಸಂಗತಿಯೆನಿಸಿದೆ.

ಮಹಾತ್ಮರ ಸಂದೇಶ

ಭಾರತೀಯರಿಗೆ ಮಹಾತ್ಮರೆಂದರೆ ನವಭಾರತದ ವಿಶ್ವಕರ್ಮರು. ಭಾರತೀಯ ಸಂಸ್ಕೃತಿ ಪರಂಪರೆಗಳಲ್ಲಿಯ ಅತ್ಯುತ್ತಮಾಂಶಕ್ಕೆ ಅವರ ಪ್ರತೀಕಸ್ವರೂಪರಾಗಿದ್ದಾರೆ. ನನ್ನ ನಾಡಿಗರಿಗೆ ಅವರ ಜೀವನವೊಂದು ಸ್ಫೂರ್ತಿಯ ನಿರಂತರವಾದ ಚಿಲುಮೆಯಾಗಿದೆ. ಅವರು ಭಾರತಕ್ಕೆ [illegible] ಪಡೆವ ಶಕ್ತಿಯನ್ನಿತ್ತರು. ಸಂಯುಕ್ತ ರಾಷ್ಟ್ರ ಸಂಘವು ಇಷ್ಟಪಟ್ಟಂತೆ ನಿಜವಾದ ಶಾಂತಿಯನ್ನು ಮಾನವ ಕುಲ ಸಾಧಿಸಬೇಕಾಗಿದ್ದರೆ ಅವರ ಸತ್ಯಾಹಿಂಸೆಯ ಸಂದೇಶಕ್ಕೆ ಕಿವಿಗೊಡಬೇಕೆಂದು ನನ್ನ ನಮ್ರ ಅಭಿಪ್ರಾಯ.

ಇತ್ತೀಚಿನ ಸಂಗತಿಗಳಿಂದ ಭಾರತದಲ್ಲಿ ಅಹಿಂಸೆಯ ಪ್ರಭೆ ಮಂದವಾಗಿದೆಯೆಂದು ಎಣಿಸುವಂತಾಗುವುದು. ಒಂದು ತಪ್ಪು ಹೇಳಿಕೆಯ ಪ್ರಕಾರವಂತೂ ಗಾಂಧಿಯವರೇ ಸ್ವತಃ ಯುದ್ಧಕ್ಕೆ ಎದುರಾಗಿದ್ದಾರೆಂದು ಸುದ್ದಿಯಿದ್ದಿದೆ. ಅದು ಸ್ವತಃ ಸಿದ್ಧ ಮಿಥ್ಯಾಲಾಪವೆಂಬುದು ಹಿಂದೆ ಹೇಗಿದ್ದರೋ ಇಂದು ಹಾಗೇ ಗಾಂಧಿಯವರು ಸಂಗ್ರಾಮ ಹಿಂಸೆಗಳ ವಿರೋಧಿಗಳಾಗಿಯೇ ಇದ್ದಾರೆಂದು ಬಂದ ಅಧಿಕೃತ ವಾರ್ತೆಯಿಂದ ಗೊತ್ತಾಗುತ್ತದೆ. ಅನಪೇಕ್ಷಿತವಾದ ವಿಭಜನೆಯಿಂದುಂಟಾದ ಮನಃಕ್ಷೋಭೆಯು ಬಹುಬೇಗ ಇಲ್ಲದಂತಾಗಲೆಂದು ಆಶಿಸಿ ಭಾರತದಲ್ಲಿ ಗಾಂಧಿಭಾವವು ಪುನಃ ತುಂಬಿಕೊಳ್ಳುವಂತೆ ನಿಮ್ಮ ಸದಿಚ್ಛೆ ಶುಭಾಶಯಗಳನ್ನು ಆಮಂತ್ರಿಸುತ್ತೇನೆ.

ಈ ಸಂಜೆ ನನಗೆ ಉಂಟಾದ ಆನಂದಕ್ಕೆ ೩ನೆಯ ಕಾರಣವೇನೆಂದರೆ, ಇಂದಿನ ಭಾಷಣಕಾರರು. ೧೯೩೧ ರಲ್ಲಿ ಯುರೋಪಿನಿಂದ ಹಿಂದಿರುಗುವಾಗ ಅವರು ಗಾಂಧಿಯವರ ಜೊತೆಗೆ ಇದ್ದರು. ಗಾಂಧಿಯವರ ಹಾಗೂ ಗಾಂಧಿಯವರು ಸಾಧಿಸಲು ನಿಂತ ಸತ್ಯಾಹಿಂಸೆ ತತ್ವಗಳ ಗಂಭೀರಜ್ಞಾನ ಅವರಿಗಿರುವುದು ಸುಪ್ರಸಿದ್ಧವಿದೆ. ವಸ್ತುತಃ ಅವರು ಗಾಂಧಿಯವರನ್ನೂ ಗಾಂಧಿವಾದವನ್ನೂ ಪ್ರತಿನಿಧಿಸುತ್ತಾರೆ. ಅವರೊಡನೆ ಸಮೀಪಬಾಂಧವ್ಯದಿಂದಿರುವುದು ನನಗೊಂದು ಬಹುಮಾನದ ಸಂಗತಿಯಾಗಿದೆ. ಗಾಂಧಿಯವರನ್ನು ಚೆನ್ನಾಗಿ ಬಲ್ಲ ಅವರ ಭಾಷಣವನ್ನು ನಿಮ್ಮೊಡನೆ ಇಂದು ಕೇಳಲು ನನಗೆ ಬಹಳ ಸಂತೋಷವಾಗುತ್ತದೆ. ಭಾಷಣಕಾರರಾದ ಪ್ರೊ. ಪ್ರಿವ್ಯಾಟರನ್ನು ಕುರಿತು ಲೌಸನ್ನೆಯ ಮಹಿಳೆಯೊಬ್ಬಳು, ಅವರು ಸಂಪೂರ್ಣ “ನಿಷ್ಪಕ್ಷಪಾತಿಗಳು” ಪ್ರಲೋಭನಗಳಿಗೆ ದುರ್ಲಕ್ಷ್ಯರು ಎಂದು ಹೇಳಿರುವುದು ಯಾವ ಸಾರ್ವಜನಿಕ ಭಾಷಣಕಾರನಿಗೂ ಸಾಮಾನ್ಯವಾಗಿ ಸಿಗದ ಹೆಚ್ಚಿನ ಗೌರವವಾಗಿದೆ.

ಮೂರನೆಯದಾಗಿ, ಈ ಸಭೆಯು ಜಿನೀವಾನಗರದಲ್ಲಿ ಕೂಡಿರುವುದೂ ನನ್ನ ಹೆಮ್ಮೆಗೆ ಕಾರಣವಾಗಿದೆ. ನಿಮ್ಮ ಈ ನಗರವು ವಿಚಾರ ಸ್ವಾತಂತ್ರ್ಯವಿರುವ ನಗರವೆಂದು ಜಗತ್ಪ್ರಸಿದ್ಧವಾಗಿದೆ. ಈ ಮಾತಿಗೆ ನಗರದಲ್ಲಿಯ ಸ್ಮಾರಕಗಳೇ ಸಾಕ್ಷಿಯಾಗಿವೆ. ಇತ್ತೀಚಿನ ಇತಿಹಾಸದಲ್ಲಿ ನಿಮ್ಮ ನಗರವು ಅಂತರ್ರಾಷ್ಟ್ರೀಯ ಸಭೆ ಸಂಘಗಳ ಪೀಠವೆನಿಸಿದೆ. ಅವೆಂತಹ ಸಭೆಗಳು? ಜಗತ್ತಿನ ಪ್ರಸಿದ್ಧಪುರುಷರು ಅವುಗಳ ಸದಸ್ಯರು! ಅದರಿಂದ ಸರಿಯಾಗಿಯೇ ಜಿನಿವಾನಗರವನ್ನು “ಜಗತ್ತಿನ ಕಾವಲು ಮನೆಯೆಂದು” ಕರೆಯಲಾಗಿದೆ. ಈ ಶುಭಾವಸರದಲ್ಲಿ, ಐತಿಹಾಸಿಕ ಮಹತ್ವವುಳ್ಳ ಈ ನಗರದ ನಾಗರಿಕರಾದ ನಿಮ್ಮ ನಡುವೆ ಇರಲು ಅನುಗೊಟ್ಟ “ಇಂಡೋಸ್ವಿಸ್” ಸಂಘದವರಿಗೂ ಹಿಂದೀ ಸಂಘದವರಿಗೂ ನಾನು ಕೃತಜ್ಞನಾಗಿದ್ದೇನೆ.

ಬಂಧುಭಗಿನಿಯರೇ, ಈಗ ಪ್ರೊ. ಪ್ರಿವ್ಯಾಟರನ್ನು ನಿಮಗಾಗಿ ಭಾಷಣ ಮಾಡಲು ಸಂತೋಷದಿಂದ ಆಮಂತ್ರಿಸುತ್ತೇನೆ. ”

ಪ್ರೊ. ಪ್ರಿವ್ಯಾಟರ ಉಪನ್ಯಾಸದ ಸಾರ

“ ಅಗಸ್ಟ ೧೫ ರಲ್ಲಿ ಸ್ವಾತಂತ್ರ್ಯಪಡೆದ ಭಾರತವನ್ನು ನಾನು ಅಭಿನಂದಿಸುತ್ತೇನೆ. ಈ ಕಾರ್ಯವನ್ನು ರಕ್ತಪಾತವಿಲ್ಲದಂತೆ ಸಾಧಿಸಿದ್ದಕ್ಕಾಗಿ ಭಾರತ ಬ್ರಿಟನ್ನೆರಡಕ್ಕೂ ನಾನು ಧನ್ಯವಾದಗಳನ್ನರ್ಪಿಸುತ್ತೇನೆ.

ಕೆಲವು ದಿನಗಳ ಹಿಂದೆ ಪತ್ರಿಕೆಯಲ್ಲಿ ಒಂದು ಸಂಗತಿ ತಪ್ಪಾಗಿ ಪ್ರಕಟಿಸಲಾದುದು ನಿಮಗೆಲ್ಲರಿಗೂ ತಿಳಿದಿರಬಹುದು— ಅದು ಪಂಜಾಬಿನ ಗಲಭೆಗಳ ಬಗ್ಗೆ ಮಹಾತ್ಮರಾಡಿದ ಮಾತು. ಆ ಸಂದೇಶದಲ್ಲಿ ೬೦ ಪದಗಳನ್ನು ತೆಗೆದುಹಾಕಿ ವಿಭಜನಾಜನ್ಯ ಸಂಕಷ್ಟಗಳ ನಿವಾರಣೆಗೆ ಅವಶ್ಯಬಿದ್ದರೆ ಸೂಕ್ತಸಾಧನವಾದೀತೆಂದು ಹೇಳಿ ಯುದ್ಧವನ್ನು ಗಾಂಧಿಯವರು ಎತ್ತಿ ಹಿಡಿದರೆಂದು ಸುದ್ದಿ ಹರಡಿತು. ಜಗತ್ತಿಗೆ ಸಂದೇಶಗಳನ್ನು ಯಥಾವತ್ತಾಗಿ [illegible] ದೊಡ್ಡ ಹೊಣೆ ಪತ್ರಿಕಾಕರ್ತರದಿದೆ. ಗಾಂಧಿಯವರ ಸಾವಿರಾರು ತರುಣ ಅನುಯಾಯಿಗಳು ತಮ್ಮ ಮುಖಂಡರಾದ ಗಾಂಧಿಯವರು ಇಡೀ ಜೀವನ ಹಾಗೂ ಉಪದೇಶಗಳನ್ನು ಅಹಿಂಸೆಯ ಆಧಾರದ ಮೇಲಿಟ್ಟವರಾಗಿದ್ದು ಹೀಗೆ ಈಗ ಹಿಂಸಾಭಾವಕ್ಕೆ ಶರಣಾದರೆಂಬುವನ್ನು ಕೇಳಿ. ಆತ್ಮಹತ್ಯೆ ಮಾಡಿಕೊಂಡಾರೆಂಬ ಕಲ್ಪನೆಯಾದರೂ ಅವರಿಗಿರಬಾರದಾಗಿತ್ತೆ?

ಈಗ ಪಂಜಾಬಿನಲ್ಲಿ [illegible] ಯೆಂಬುದನ್ನು ನೀವೆಲ್ಲರೂ ಕೇಳಿ ಬಲ್ಲಿರಿ. ಭಾರತದಲ್ಲಿ ೨೨ ಕೋಟಿ ೬೦ ಲಕ್ಷ ಹಿಂದುಗಳು ೧೧ ಕೋಟಿ ಮುಸಲ್ಮಾನರೂ ೪ ಕೋಟಿ ಕ್ರಿಸ್ತರೂ ೨ ಕೋಟಿ ಪಾರಸಿ ಮುಂತಾದ ಇತರ ಜನರೂ ಭಾರತದಲ್ಲಿದ್ದಾರೆ. ಪಾಕಿಸ್ತಾನವು ಕೇವಲ ಧರ್ಮದ ಮೇಲೆ ರಚಿತವಾದುದು. ಭಾರತವು ಭೂಗೋಲಿಕ ಹಾಗೂ ರಾಷ್ಟ್ರೀಯ ಲಕ್ಷಣಗಳಿಂದ ಒಂದು ಸ್ವರೂಪವುಳ್ಳದ್ದಾಗಿದೆ. [illegible] ಸೀಮಾ ನಿರ್ಣಯ ಕಾಲದಲ್ಲಿ ನಿರ್ಣಯಕಾರರು ಮರೆತಂತೆ ತೋರುತ್ತದೆ. ಅವರ ಪುಣ್ಯಕ್ಷೇತ್ರಗಳಾದ ಅಮೃತಸರ ಲಾಹೋರುಗಳಲ್ಲಿ ಒಂದು ಸ್ಥಾನದಲ್ಲಿ ಇನ್ನೊಂದು ಪಾಕಿಸ್ತಾನದಲ್ಲಿ ಉಳಿವಂತಾಗಿದೆ. ಅದರಿಂದಲೆ ಗಲಭೆ ಪ್ರಾರಂಭವಾಗಿದ್ದು ಇಲ್ಲಿ ಬಿಯನ್ನ ಯ ಕ್ಯಾಂಟನ್ನನ್ನು ಒಮ್ಮೊದೊಮ್ಮೆ ಎರಡು ಹೋಳಾಗಿ ಮಾಡಿದರೆ ಹೇಗೋ ಇಲ್ಲವೆ ಒಟ್ಟಿಗಿರುವ ಜಿನೀವಾ ಮತ್ತು ಲೌಸನ್ನ ನಗರಗಳನ್ನು ಬೇರೆ ಬೇರೆ ರಾಜ್ಯಕ್ಕೆ ಸೇರಿಸಿ ಬಿಟ್ಟರೆ ಹೇಗೋ ಹಾಗಾಯಿತು ಭಾರತದ ವಿಭಜನ.

ಬಂಗಾಲದಲ್ಲಿ ಗಾಂಧಿಯವರ ಯಶಸ್ಸು

ಬಂಗಾಲದಲ್ಲಿ ಪಂಜಾಬಿನಲ್ಲಿಯಂತೆ ಗಲಭೆಯೇಳದಿರಲು ಗಾಂಧಿಯವರು ಅಲ್ಲಿದ್ದದ್ದೇ ಕಾರಣ. ಪಾಕಿಸ್ತಾನವು ರಚಿತವಾದೊಡನೆ ಗಾಂಧಿಯವರು ಎಚ್. ಎಸ್. ಸುಹ್ರವರ್ದಿಯೆಂಬ ಪ್ರಸಿದ್ಧ ಮುಸ್ಲಿಂ ಲೀಗ ಮುಖಂಡರನ್ನು ಕರೆಸಿಕೊಂಡು ಕಲಕತ್ತದಲ್ಲಿ ತಮ್ಮೊಡನೆ ಒಂದೇ ಮನೆಯಲ್ಲಿ ವಾಸಿಸಲು ಕೇಳಿಕೊಂಡರು. ಆ ಮನೆಯ ಸುತ್ತ ಗಲಭೆಯ ವಾತಾವರಣವಿದ್ದಿತ್ತು. ಕ್ರುದ್ಧರಾದ ಜನರು ನೋಡಗಾಗಿ ಒಂದು ದಿನ ಮನೆಯೊಳಗೆ ನುಗ್ಗಿದಾಗ ಅವರು ಹೊರಗೆ ನಿಂತು ಅವರಿಗೆಂದರು: “ಹೌದು, ನೀವು ನನ್ನನ್ನು ಕೊಲ್ಲಬೇಕೆನ್ನುವಿರಿ, ಆದರೆ ನಾನು ಹೇಳುವುದನ್ನು ಮೊದಲು ಕೇಳಿರಿ.” ಆಗ ಇಂತಹ ಸನ್ನಿವೇಶಗಳಲ್ಲಿ ಹಿಂದೆ ಎಷ್ಟೋ ಸಲ ಆದಹಾಗೆ, ದ. ಆಫ್ರಿಕದಲ್ಲಿ ಒಮ್ಮೆ ಗಾಂಧಿಯವರಿಗೆ ಸಂಭವಿಸಿದಂತೆ, ಕೋಪೋದ್ದೀಪಿತ ಜನರು ಅವರ ಮಾತುಗಳನ್ನಾಲಿಸಿದ ಬಳಿಕ ಶಾಂತರಾಗಿ ಮರಳಿದರು. ಶತ್ರುವಿನೊಳಗೆ ನಿರ್ಭಯದಿಂದ ನಡೆದು ಹೋಗಿಸಿಲ್ಲುವುದು, ತಾವು ತಿಳಿದಂತೆ ತೋರ್ಪಡಿಸುವುದು ಗಾಂಧಿಯವರು ಮಾನವರೊಡನೆ ಮಾಡುವ ವ್ಯವಹಾರದ ಕ್ರಮ.

ಇಂದು ಹೂವಾಲೆಗಳ ಹಾಗೂ ಶಂತಿಯ ಮೂಲಕ ಅಭಿನಂದನೆಗಳನ್ನು [illegible] ಮೇಲೆ ಮಳೆಗರೆಯುತ್ತಿದ್ದರೂ ತಮ್ಮ ಜನರೇ ತರತಮ್ಮೊಳಗೆ ಯುದ್ಧ ಹೂಡಿರುವದರಿಂದ ಅವರು ದುಃಖಭಾರದಿಂದ ತಲೆ ತಗ್ಗಿಸಬೇಕಾಗಿದೆ.

ತಮ್ಮ ಸಶ್ಯಾವಲೋಕನದ ದೃಷ್ಟಿಯಿಂದ ಪಾಶ್ಚಾತ್ಯರು ಈ ಗಲಭೆಗಳನ್ನು ನೋಡುತ್ತಾರೆ. ಹಿಂದುಸ್ಥಾನದ ಅಂತಃ ಕಲಹವನ್ನು ಹಳಿಯಲು ಯುರೋಪಿಗಾವ ಅಧಿಕಾರವಿದೆ? ಯುದ್ಧ ಪೂರ್ವದಲ್ಲಿ ಅದು ಲಕ್ಷೋಪಲಕ್ಷ ಯೆಹೂದಿಗಳ ಬಾಲ ವೃದ್ಧ ಸ್ತ್ರೀಯರ ಕಗ್ಗೊಲೆಯನ್ನು ಕ್ಷಮಿಸಿಲ್ಲವೆ? ಅಥವಾ ಯುರೋಪಿನ ೬೦ ವರ್ಷಗಳ ಯುದ್ಧವಾದರೂ ಹೆಮ್ಮೆ ಪಡತಕ್ಕಂಥದಲ್ಲ.

ಗಾಂಧಿಯವರು ತಮ್ಮ ಚಳವಳವನ್ನು ತಾವೇ ಕಟ್ಟಿದರು. ಭಾರತೀಯರ ರಾಷ್ಟ್ರೀಯತೆಯನ್ನು ಎಚ್ಚರಿಸಿದರು.

ಗಾಂಧಿಯವರ ಬೋಧನೆ

ಅವರು ಭಾರತದ ಪ್ರತಿಯೊಂದು ಹಳ್ಳಿ ಪಟ್ಟಣಗಳಿಗೂ ಹೋಗಿ ಸ್ವತಃ ಜನರಿಗೆ ತಿಳಿಯ ಹೇಳಿದರು. ಅವರು ರೂಢ ಮೂಲವಾದ ಜಾತಿ ಪದ್ಧತಿಯನ್ನು [illegible]

[illegible]

ಸೂಚಕವಾಗಿ ಅಂಜ [illegible] ಮಕ್ಕಳು ಮರಿಗಳೆಲ್ಲ ನಿಂತು ಕೇಳುವ [illegible] ನನ್ನ ಕಣ್ಣಿಗೆ ಕಟ್ಟಿದಂತಿವೆ. ಕೊನೆಯ ಪ್ರಯತ್ನಗಳು ನಡೆಯ ಕೂಡದೆಂದು ವೈಸರಾಯರ [illegible] ಮನೆಯಲ್ಲಿಯೇ ಅವರಿಗೊಂದು [illegible] ಮಾಡಿಕೊಡಲಾಯಿತು.

ಉಪವಾಸದ ಮಹತ್ವ

ಆದಿದಂತ ಆಚರಿಸುವ ಗಾಂಧಿಯವರ ಜೀವನದಲ್ಲಿ ಉಪವಾಸಗಳು ಬಹುದೊಡ್ಡ ವಿಶೇಷದ ಸಂಗತಿಗಳೆನಿಸಿವೆ. ಉಪವಾಸವು ಹಿಂದೂ ಧರ್ಮದೊಡನೆ ಅವಿಭಾಜ್ಯವಾಗಿ ಸೇರಿಕೊಂಡಿದೆ. ಗಾಂಧಿಯವರಿಗೆ ಉಪವಾಸವೆಂದರೆ ಬಹಳ ಅರ್ಥವುಳ್ಳದ್ದಾಗಿದೆ. ಉಪವಾಸವೆಂದರೆ ಅವರಿಗೆ

ಧ್ಯಾನಮನನಗಳ ಕಾಲವೆನಿಸಿತ್ತು; ತಮ್ಮ ದೇಶದವರು ಮಾಡಿದ ಯಾವುದಾದರೊಂದು [illegible] ಕೃತ್ಯವನ್ನು ತಾವು ಹೊತ್ತುಕೊಂಡು [illegible] ರ್ಜನ ಮಾಡುವ ಸಾಧನವಾಗಿತ್ತು; [illegible] ಆ ಹಿಂದುಗಾರಿಗಳು ಆ [illegible] ಸಂಭವಿಸಿತೆಂಬುದರ ಬಗ್ಗೆ ವಿಚಾರಮಾಡುವಂತಾಗಿ ಅವರು ತಮ್ಮ ತಪ್ಪನ್ನು ತಿಳಿದುಕೊಂಡು ಮುಂದೆ ಹಾಗೆ ಮಾಡದಂತಾಗುತ್ತಿತ್ತು. [illegible] ಯವರ ಉಪವಾಸಗಳ ಬಗ್ಗೆ ಯುರೋಪಿಯನ್ನರು [illegible] ಮಧ್ಯಯುಗದ ಯುರೋಪಿನಲ್ಲಿ [illegible] ಧರ್ಮವಲ್ಲಿಸುವಂತೆಯೇ [illegible] ಕ್ರಿಸ್ತ ಧರ್ಮದ ಒಂದು ಅಂಶವೇ ಆಗಿತ್ತು [illegible]

[illegible] ಪ್ರಕಾರವಾದ ವಚನಗಳು ಪೂರೈಸಲ್ಪಡುವುದಿಲ್ಲವೆಂದೂ ಲಾರ್ಡ ಮೌಂಟಬ್ಯಾಟನ್ನರಾದರೂ ತಮ್ಮ ಹಿಂದಿನ ವೈಸರಾಯರಂತೆಯೇ ಮತ್ತೊಬ್ಬ ವೈಸರಾಯರೆಂದೂ ಜನರು ಹೇಳುತ್ತಿದ್ದರು. ಆಸಮಯಲ್ಲಿ ತಪ್ಪು ಸಿದ್ಧವಾದ ಹೊರತು ಒಬ್ಬ ಮನುಷ್ಯನ ಬೆಲೆ [illegible]

ಅಹಿಂಸಾ ಸ್ವಾತಂತ್ರ್ಯದ [illegible]

[illegible]

ಇಂಥ ಬಲ ತಮ್ಮ ಕೊಟ್ಟ ಭಾರತ ಪ್ರಜಾನಾಗಿ [illegible] ಹೆಸರು ಮಾಡಿ ಕೂಗಿದೆ, ಆದರೆ [illegible] ರಾಗಿ ಬಾಳುವ ಕಲೆಯನ್ನರಿಗೆ ಇವೆಂದು ಬಹುವಾಗಿ [illegible] ಜಗತ್ತನ್ನು [illegible] ತೃಪ್ತ ಧನ್ಯರೇ ಸರಿ.”

ಕರ್ನಾಟಕ

ಧಾರವಾಡ

ಗದುಗಿನ ನಾಗರಿಕ ಹಿತಚಿಂತಕ ಸಂಘದ ಅಧ್ಯಕ್ಷರಾದ ಶ್ರೀ ಸವಳಿ ಗೋಪಾಲರಾಯರು [illegible] ನೇ ತಾರೀಕು ಎಂ. ಎಸ್. ಎಂ. [illegible] ಜನರಲ್ [illegible] ಕಂಡು [illegible] ಲೆವಲ್ [illegible] ಅವ [illegible] ಕೆಯನ್ನೂ ಅವರ ಮುಂದೆ ಇಟ್ಟರು.

ಮುಂಬಯಿ ಗವರ್ನರರು ಧಾರವಾಡಕ್ಕೆ ಭೆಟ್ಟಿ ಕೊಟ್ಟಾಗ ಕನ್ನಡ ಸಂಶೋಧನ ಸಂಸ್ಥೆಗೆ ಸಂದ [illegible] ನಕ್ಕಾಗ [illegible] ಪ್ರದರ್ಶಿಸಿದರು.

[illegible] ಭಾರತ ರೇಲ್ವೆ ಕೆಲಸಗಾರರ ಮಹಾ ಮಂಡಳದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್. ಗುರುಸ್ವಾಮಿಯವರು ಹುಬ್ಬಳ್ಳಿ [illegible] ಶ್ರೀ ಶಂಭುರಾವ ಜೋಶಿಯವರ ಮನೆಯಲ್ಲಿ ಕೂಡಿದ್ದ ಸುದ್ದಿಗಾರರ ಸಭೆಯಲ್ಲಿ ಮಾತಾಡುತ್ತ ಸಂಬಳ ಸಮಿತಿಯ ಸೂಚನೆ [illegible] ದರ [illegible] ಪಾಕಿಸ್ತಾನದ [illegible] ಸಿಕ್ಕ ಹೊರತು ಸಮಾ[illegible] ಮೈಸೂರ ರೇಲ್ವೆ [illegible] ಟಿನಲ್ಲಿರುವ [illegible] ಸರಕಾರವೇ [illegible] ಅವರು [illegible]

[illegible]

[illegible] ನಗರ ಶಿಕ್ಷೆ ವಿಧಿಸಲಾಯಿತು.

ರಾಣೆಬೆನ್ನೂರ ತಾಲೂಕ ಮೋಟೆಬೆನ್ನೂರ [illegible] ಜನ [illegible] ಇಲ್ಲ [illegible] ಅವರ [illegible] ದೊರೆತಿವೆ.

[illegible] ಲೋಕಶಿಕ್ಷಣ ಟ್ರಸ್ಟಿನ ಪರವಾಗಿ [illegible] ಸ್ಪರ್ಧೆಯು [illegible] ೧೫, ೧೯ ಕ್ಕೆ [illegible] ವಿದ್ಯಾವರ್ಧಕ ಸಂಘದಲ್ಲಿ ನಡೆಯಿತು. ಅಭ್ಯಸ್ತ ವಿಷಯದಲ್ಲಿ ೯ ವಿದ್ಯಾರ್ಥಿಗಳೂ ಆ[illegible] ಭಾಷಣದಲ್ಲಿ ೧೦ ವಿದ್ಯಾರ್ಥಿಗಳೂ ಭಾಗ ವಹಿಸಿದ್ದರು. ಅಭ್ಯಸ್ತ ವಿಷಯದಲ್ಲಿ ಎಂ. ಪಿ. ಜೋಶಿಯವರು ಮತ್ತು ಆಶುಭಾಷಣದಲ್ಲಿ ಶಂ. ರಾ. [illegible] ಪಾರಿತೋಷಕಕ್ಕೆ ಅರ್ಹ[illegible] ಫಳಿತಾಂಶವನ್ನು ಸಾರಿದರು.

೧೯೪೮ ನೇ ಜಾನೇವಾರಿ ಮೊದಲನೇ ವಾರದಲ್ಲಿ [illegible] ಧಾರವಾಡ ಜಿಲ್ಲಾ ಒಕ್ಕಲತನ ಪ್ರದರ್ಶನ ಮತ್ತು ಸಹಕಾರಿ ಪರಿಷತ್ತಿನ ಕಾರ್ಯಕಾರಿ ಸಮಿತಿಯು ಸಭೆ ಕೂಡಿ ಪ್ರದರ್ಶನಕ್ಕೆ ಮಾನ್ಯ ಮಲ್ಲನಗೌಡ ಪಾಟೀಲರನ್ನು, ಪರಿಷತ್ತಿಗೆ ಮಾನ್ಯ ವೈಕುಂಠಲಾಲ ಮೆಹತಾರವರನ್ನು [illegible] ಅಮಂತ್ರಿಸಬೇಕೆಂದೂ ಶ್ರೀ. [illegible] ಅಧ್ಯಕ್ಷರಾಗಲು [illegible] ನಿರ್ಣಯಿಸಲಾಯಿತು.

[illegible] ಗಟ್ಟಿಯ ತರುಣ ಕಾಂಗ್ರೆಸ ಕಾರ್ಯಕರ್ತನನ್ನು ಕೊಲೆ ಮಾಡಿದ್ದರ ಆರೋಪದ ಮೇಲೆ [illegible] ಇಡಲ್ಪಟ್ಟ ಮುಮ್ಮಿಗಟ್ಟಿ ದೇಸಾಯಿಯವರು ಕಾವಲಿದ್ದ ಪೋಲೀಸರಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದರು. ಹಾಜರಿ ತೆಗೆದುಕೊಳ್ಳಲು ಬಂದಾಗ ಕೈದಿಯಿಲ್ಲದ್ದನ್ನು [illegible] ಪರಾರಿಯಾದನೆಂದು ಬರೆದುಕೊಂಡು ಹೋದರು. ಆದರೆ ಮೂರು ತಾಸಿನಲ್ಲಿಯೆ ಕೈದಿಯು ತಿರುಗಿ ಬಂದುದು ಕಂಡುಬಂದಿತು. ಕಾವಲಿದ್ದ [illegible] ಬಂಧಿಸಿ ವಿಚಾರಣೆ ನಡೆಸಿದ್ದಾರೆ.

ಬೆಳಗಾವಿ

ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯವರು ಬೆಳಗಾವಿಯಲ್ಲಿ ನ್ಯಾಯಮೂರ್ತಿ ಲೋಕೂರರ ಅಧ್ಯಕ್ಷತೆಯಲ್ಲಿ ಸೇರಿ ಬೆಳಗಾವಿಯ ಮಹಾ ಜನಗಳ ಸಾಕ್ಷಿಹೇಳಿಕೆಗಳನ್ನು ತೆಗೆದುಕೊಂಡರು. ಕರ್ನಾಟಕದ ಮುಸಲ್ಮಾನರ ಭಾಷೆ ಕನ್ನಡವೇ ಆಗಿರಬೇಕೆಂದು ಅಡ್ಮಿನಿಸ್ಟ್ರೇಟಿವ ಆಫೀಸರ ಶ್ರೀ ಪಠಾಣರು ತಮ್ಮ ಸಾಕ್ಷಿಯಲ್ಲಿ ಹೇಳಿದರು.

ಕನ್ನಡ ಕಾರ್ಯಕರ್ತರ ಪರವಾಗಿ ವಿಶ್ವವಿದ್ಯಾಲಯ ಸಮಿತಿಯ ಸದಸ್ಯರಿಗೆ ಸಂತೋಷಕೂಟವನ್ನು ಏರ್ಪಡಿಸಲಾಗಿತ್ತು. ಆ ಕಾಲಕ್ಕೆ ಶ್ರೀ ಮಂತ್ರಾಲಿಕ ವೆಂಕಟರಾಯರು ಮತ್ತು ಚಿಕ್ಕೋಡಿ ಅನಂತರಾಯರು ಭಾಷಣಮಾಡಿ ಬೆಳಗಾವಿಯು ಕನ್ನಡ ಚಳವಳಿಗೆ ಯಾವಾಗಲೂ ಮುಂದಾಗಿದೆಯೆಂದು ಹೇಳಿದರು. ಸಮಿತಿಯ ಪರವಾಗಿ ಉತ್ತರ ಕೊಡುತ್ತ ನ್ಯಾಯಮೂರ್ತಿಗಳು ಬೆಳಗಾವಿಯ ಹಿರಿಮೆಯನ್ನು ಹೊಗಳಿದರು.

ನಾಡಹಬ್ಬದ ಪರವಾಗಿ ೧೮ ನೇ ತಾರೀಕ ರಾತ್ರಿ ೯॥ ಗಂಟೆಗೆ ಲಿಂಗರಾಜ ಕಾಲೇಜಿನಲ್ಲಿ ಭಾಷಣ ಮಾಡುತ್ತ ಶ್ರೀ ದಿವಾಕರ ರಂಗರಾಯರು ಕರ್ನಾಟಕದ ಭವಿತವ್ಯವನ್ನು ವಿವೇಚಿಸಿದರು. ತುರಮುರಿಯವರು ಅತಿಥಿಗಳಿಗೆ ಅಭಿನಂದನೆಗಳನ್ನು ಅರ್ಪಿಸಿದರು.

ಸವದತ್ತಿಯ ಕರ್ನಾಟಕ ಸಂಘದವರು ೧೫ ಕ್ಕೆ ನಾಡಹಬ್ಬದ ನಿಮಿತ್ತ ಕೂಡಿಸಿದ ಪ್ರಾರಂಭದ ಸಭೆಯಲ್ಲಿ ಜಾಗತಿಕ ರಾಜಕಾರಣದಲ್ಲಿ ಸ್ವತಂತ್ರ ಭಾರತದ ಸ್ಥಾನ ಎಂಬ ವಿಷಯವಾಗಿ ಶ್ರೀ ರಮಾಕಾಂತ ಗೋಕಾಕೇರಿಯವರು ವಿಚಾರಪರಿಪ್ಲುತ ಭಾಷಣ ಮಾಡಿದರು. ಅನಂತರ ಶ್ರೀ ವಿ. ಜಿ. ಕುಂಜಿಯವರು ಕರ್ನಾಟಕ ಏಕೀಕರಣದ ಬಗ್ಗೆ ಸ್ಫೂರ್ತಿದಾಯಕ ಭಾಷಣ ಮಾಡಿದರು.

ಬೆಳಗಾವಿಯಲ್ಲಿಯ ಚವ್ಹಾಣ ಗಲ್ಲಿಯ ಬಾವಿಯಲ್ಲಿ ಮುಸಲ್ಮಾನನೊಬ್ಬನು ವಿಷ ಹಾಕಿದ್ದಾನೆಂದು ಹಾರಿಕೆ ಸುದ್ದಿ ಹರಡಿ ಜನರಲ್ಲಿ ಕಳವಳ ಉಂಟಾಗಿತ್ತು. ಪೋಲೀಸರು ವಿಚಾರಣೆ ನಡೆಸಿ ಸುದ್ದಿ ನಿರಾಧಾರವೆಂದು ಕಂಡುಕೊಂಡರು. ಆದರೂ ಈ ಬಾವಿಯ ನೀರನ್ನು ಮುನಸಿಪಾಲಿಟಿಯವರು ರಸಾಯನ ಶಾಸ್ತ್ರಜ್ಞರ ಕಡೆಗೆ ಪೃಥಕ್ಕರಣಕ್ಕಾಗಿ ಕಳಿಸಿಕೊಟ್ಟಿದ್ದಾರೆ.

ಲಂಚ ನಿರ್ಮೂಲನ ಖಾತೆಯವರು ಕಿತ್ತೂರಿನ ಮೂವರು ಪೋಲೀಸರು ಹಾಗು ಒಬ್ಬ ಹಳಬ ಹೀಗೆ ನಾಲ್ಕು ಜನರ ಮೇಲೆ ೫೦ ರೂ. ಲಂಚ ತಿಂದ ಬಗ್ಗೆ ಖಟ್ಲೆ ಹಾಕಿದ್ದರು. ಇದರಲ್ಲಿ ಒಬ್ಬ ಪೋಲೀಸನ್ನು ನಿರ್ದೋಷಿಯೆಂದು ಬಿಡಲಾಯಿತು. ಉಳಿದವರಿಗೆ ಒಂದೊಂದು ವರ್ಷ ಶಿಕ್ಷೆ ವಿಧಿಸಲಾಯಿತು.

ವಿಜಾಪುರ

ಡಾ. ಹರ್ಡೀಕರರು ಸೇವಾದಲದ ಸಂಘಟನೆಯ ಬಗೆ ವಿಚಾರವಿನಿಮಯ ಮಾಡಲು ಬಾಗಲಕೋಟೆಗೆ ಹೋಗಿ ಬಂದರು ಅಲ್ಲಿ ಅವರು ಕಾರ್ಯಕರ್ತರೊಡನೆ ವಿಚಾರವಿನಿಮಯ ಮಾಡಿ ಸ್ವಯಂಸೇವಕರನ್ನು ಕಂಡು ಪ್ರಶಂಸಿಸಿದರು.

ಶ್ರೀ ಕೆ. ಎಂ. ಜೊನವಾಡ ಇವರು ಅಹಮ್ಮದಾಬಾದಕ್ಕೆ ಪರ್ಗವಾಗಿ ಹೋಗುವಾಗ ಬಡ ಹುಡುಗರ ಸಹಾಯಕ್ಕಾಗಿ ವಿಜಾಪುರದಲ್ಲಿಯ ಕುರುಬರ ಬೋರ್ಡಿಂಗಿಗೆ ೧೧೦೧ ರೂಪಾಯಿ ವಾಗ್ದಾನ ಮಾಡಿ ೧೦೧ ರೂಪಾಯಿ ರೋಖ ಕೊಟ್ಟರು.

ವಿಜಾಪುರ ಜಿಲ್ಲಾ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ರಾಜಾರಾಮ ದುಬೆ ಇವರು ೧೪—೧೦—೪೭ ನೇ ದಿನ ವಿಜಾಪುರದ ಡಾ. ನಾಗೂರ ಬಿ. ಕೆ. ಇವರನ್ನು ಕಾಲ್ಡೆಕ್ಟರ ಕಾರ್ಯಾಲಯದಲ್ಲಿ ಕರೆದುಕೊಂಡು ಹೋಗಿ ಥಳಿಸಿದರೆಂದೂ ಡಾ. ನಾಗೂರ ಇವರು ಶ್ರೀ ದುಬೆಯವರ ಮೇಲೆ ಮಾಮಲೇದಾರ ಕೋರ್ಟಿನಲ್ಲಿ ಪಿನಲ್ ಕೋಡಿನ ೩೨೩,೫೦೪ ಕಲಮುಗಳ ಪ್ರಕಾರ ಖಟ್ಲೆ ಹಾಕಿರುವರೆಂದೂ ತಿಳಿಯುತ್ತದೆ.

ಹುಣ್ಶೀರಿಯಲ್ಲಿ ಬೆಳೆಗಳು ೫—೬ ಆಡಿ ಎತ್ತರವಾಗಿ ಬೆಳೆದಾಗ ಕೊಡಲಿ ಮಿಡಚೆಗಳು ಬಂದು ಕುಳಿತು ಒಂದೂ ಕಾಳು ಉಳಿಯದಂತೆ ತಿಂದು ಹೋಗಿದ್ದರಿಂದ ಊರವರು ಬಹಳ ಗೋಳಿಗೀಡಾಗಿದ್ದಾರೆ.

ಬಳ್ಳಾರಿ

ನಾಡಹಬ್ಬಕ್ಕೆಂದು ಆಮಂತ್ರಿಸಲ್ಪಟ್ಟ ಮೈಸೂರ ಲಾವಣಿ ವಿದ್ವಾನ್ ಶ್ರೀ ವಿಷಕಂಠರಾವ ಇವರು ೧೫—೧೬—೧೭ ಈ ಮೂರುದಿನ ಹಂಪಸಾಗರದಲ್ಲಿ ಜನಮೆಚ್ಚುವಂತೆ ಲಾವಣಿ ಹಾಡಿದರು. ಡಾ. ಸಿದ್ದೇಶ್ವರ ಶಾಸ್ತ್ರಿಗಳ ಮತ್ತು ಇತರ ಪ್ರಮುಖರ ಭಾಷಣಗಳೂ ಆದವು. ೧೮ ಕ್ಕೆ ಹೂವಿನ ಹಡಗಲಿಯಲ್ಲಿ ಮತ್ತು ೧೯ ಕ್ಕೆ ತಾಂಬ್ರಹಳ್ಳಿಯಲ್ಲಿ ಅವರ ಕಾರ್ಯಕ್ರಮಗಳಾದವು.

ಬಳ್ಳಾರಿ ನಗರ ಸಭೆಗೆ ಶ್ರೀ ಮುಂಡ್ಲೂರು ಗಂಗಪ್ಪನವರು ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ದತ್ತಮಂಡಲ ಜಿಲ್ಹೆಗಳನ್ನು ಭಾಷಾನ್ವಯ ಗತಿ ನಿರ್ಣಯವಾಗುವ ವರೆಗೆ ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸಬಾರದು ಎಂದು ದೊಡ್ಡ ಹರಿವಾಣದಲ್ಲಿಯ ಗ್ರಾಮಕೇಂದ್ರ ಕರ್ನಾಟಕ ಏಕೀಕರಣ ಸಂಘದವರು ಒಮ್ಮತದಿಂದಲೂ ಆಗ್ರಹದಿಂದಲೂ ತಿಳಿಸುತ್ತಾರೆ.

ಮದ್ರಾಸ ಮಂತ್ರಿಗಳಾದ ಶ್ರೀ ಸೀತಾರಾಮರೆಡ್ಡಿ ಮತ್ತು ಮಾಧವ ಮೆನನ್‌ರು ಸಿರಗುಪ್ಪೆಗೆ ಭೆಟ್ಟಿ ಕೊಟ್ಟು ಅಲ್ಲಿಯ ವ್ಯವಸಾಯ ಪರಿಶೋಧನಾಲಯವನ್ನು ಸಂದರ್ಶಿಸಿದರು,

ಉತ್ತರ ಕನ್ನಡ

ಕೊಂಕಣಿಯು ಪ್ರಾಂತದ ಮಾನ್ಯ ಮಾಡಲ್ಪಟ್ಟ ಭಾಷೆಗಳಲ್ಲಿ ಬರುವದಿಲ್ಲವಾದ್ದರಿಂದ ಉತ್ತರ ಕನ್ನಡ ಜಿಲ್ಹೆಯಲ್ಲಿ ಅದನ್ನು ಕೋರ್ಟ ಭಾಷೆಯನ್ನಾಗಿ ಮಾಡಲು ತಮ್ಮ ಒಪ್ಪಿಗೆಯಿಲ್ಲೆಂದು ಮುಂಬಯಿ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶರು ಅವರ ಸಹೋದ್ಯೋಗಿಗಳೂ ಕಾರವಾರ ಕೊಂಕಣ ಪರಿಷತ್ತಿನ ಅಧ್ಯಕ್ಷ ಶ್ರೀ ಶಾನಭಾಗರಿಗೆ ತಿಳಿಸಿದ್ದಾರೆ.

ಮಳಗಿಯ ಹಾಗು ಸುತ್ತಲಿನ ಹಳ್ಳಿಯ ಜನರು ನಾರಾಯಣ ಸುಬ್ರಾವ ರಾಯಕರರ ಅಧ್ಯಕ್ಷತೆಯಲ್ಲಿ ಸಭೆಸೇರಿ ವಿಜಯಪಡೆದ ಮೈಸೂರ ಕಾಂಗ್ರೆಸ್ಸನ್ನು ಅಭಿನಂದಿಸುವ ಮತ್ತು ಕರ್ನಾಟಕ ಏಕೀಕರಣಕ್ಕೆ ಬೆಂಬಲಕೊಡುವ, ಕೊಂಕಣ ಪ್ರಾಂತ ನಿರ್ಮಾಣದ ಪ್ರಯತ್ನವನ್ನು ವಿರೋಧಿಸಬೇಕೆನ್ನುವ ಜಿಲ್ಹೆಯಲ್ಲಿ ಏಕೀಕರಣ ಪ್ರಚಾರವನ್ನು ಹೆಚ್ಚಾಗಿ ನಡೆಯಿಸಬೇಕೆನ್ನುವ ಠರಾವುಗಳನ್ನು ಪಾಸಮಾಡಲಾಯಿತು.

ಕನ್ನಡ ಸಂಸ್ಥಾನಗಳು

ಇದೇ ನವಂಬರ ೧ ಕ್ಕೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಸದಸ್ಯರಿಗೂ ಅಧ್ಯಕ್ಷರಿಗೂ ಸಂದರ್ಶನವನ್ನೀಯಲು ಸಿದ್ಧರಿರುವದಾಗಿ ಮೈಸೂರು ಮಹಾರಾಜರು ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರಿಗೆ ಬರೆದಿರುದಾಗಿ ವಿಶ್ವಸನೀಯವಾಗಿ ತಿಳಿಯುತ್ತದೆ.

ಘಟನಾಸಮಿತಿಯ ಸದಸ್ಯರಾದ ಶ್ರೀ ಬಿ. ಎಸ್. ಮುನವಳ್ಳಿಯವರು ೨೦ ಕ್ಕೆ ರಬಕವಿ ಮುನಿಸಿಪಾಲಿಟಿಯ ಆಶ್ರಯದಲ್ಲಿ ವಾಚನಾಲಯದ ಉದ್ಘಾಟನೆಮಾಡಿದರು. ಮುನಿಸಿಪಾಲಿಟಿಯವರು ಕೊಟ್ಟ ಮಾನಪತ್ರಕ್ಕೆ ಉತ್ತರಕೊಡುತ್ತ ಅದರ ಕಾರ್ಯವನ್ನು ಬಣ್ಣಿಸಿದರು.

ಕೊಲ್ಹಾಪುರ ಪ್ರಜಾಪರಿಷತ್ತು ಮತ್ತು ಮಹಾರಾಜರ ನಡುವೆ ನಡೆದ ದೀರ್ಘ ಮಾತುಕತೆಗಳು ನಿಷ್ಫಲವಾಗಿವೆಂದು ಪ್ರಕಟಿಸಲಾಗಿದೆ. ಮಹಾರಾಜರು ಕೆಲ ವಿಷಯಗಳನ್ನು ಕಾಯ್ದಿಟ್ಟುಕೊಂಡು ಘಟನಾಸಮಿತಿಯನ್ನು ಜಾತೀಯ ತಳಹದಿಯ ಮೇಲೆ ರಚಿಸಲಿಚ್ಛಿಸಿದರೆ ಭಿನ್ನಾಭಿಪ್ರಾಯಕ್ಕೆ ಕಾರಣವೆಂದು ಪ್ರಕಟಿಸಲಾಗಿದೆ,

ಸಂಸ್ಥಾನಗಳು

ಹದಿನೈದು ದಿನಗಳ ಹಿಂದೆ ಮುಸಿರಾಬಾದ ತುಂಗಭದ್ರಾ ಅಣೆಕಟ್ಟಿನ ಶಿಬಿರಕ್ಕೆ ಸುಮಾರು ೬೦೦ ಜನ ಮುಸಲ್ಮಾನರು ನಿರಾಶ್ರಿತರೆಂದು ಬಂದಿರುವರು. ಇಲ್ಲಿನ ಅಧಿಕಾರಿಗಳೆಲ್ಲ ಮುಸಲ್ಮಾನರೇ ಇದ್ದುದರಿಂದ ಅವರ ವಸತಿ ಊಟ ಸಾಕರ್ಯಗಳ ವ್ಯವಸ್ಥೆಯಲ್ಲ ತ್ವರ್ಯಟಿಯಾಗಿದೆ. ಈಗಾಗಲೆ ಇವರೇ ಆಯುಧ ಮುಂತಾದವುಗಳನ್ನು ಹಿಡಿದುಕೊಂಡು ನಿರ್ಭೀತಿಯಿಂದ ತಿರುಗಹತ್ತಿದ್ದಾರೆ. ಇವರ ಪುಂಡಾಟಕೆ ಪ್ರಾರಂಭವಾಗುವ ಮೊದಲೆ ಜಾಗ್ರತೆ ವಹಿಸುವದು ಅವಶ್ಯವೆಂದು ಹಿಸ್ಸರು ತಿಳಿಸುತ್ತಾರೆ.

ಉದೆಪುರದ ಮಹಾರಾಜರು ಸಂಸ್ಥಾನದ ಘಟನೆಯಲ್ಲಿ ಮಾಡಿದ ಬದಲಾವಣೆಗಳ ವಿಷಯದಲ್ಲಿ ಮತಭೇದವಾದ್ದರಿಂದ ಮಹಾರಾಜರ ಘಟನಾ ಸಲಹೆಗಾರರಾದ ಶ್ರೀ ಕೆ, ಎಂ, ಮುನಶಿಯವರು ರಾಜೀನಾಮೆ ಕೊಟ್ಟಿದ್ದಾರೆ.

ಯುಕ್ತ ರಾಷ್ಟ್ರ ಸಂಘವು ದಕ್ಷಿಣ ಅಫ್ರಿಕೆ ಹಿಂದೀಯರ ಪ್ರಶ್ನೆಯನ್ನು ನ್ಯಾಯ ಸಮ್ಮತವಾದ ರೀತಿಯಲ್ಲಿ ಬಿಡಿಸದಿದ್ದರೆ ಅದರ ಪ್ರತಿಷ್ಠೆಗೆ ಕುಂದು ಬರುವದು.

ನಮ್ಮ ಹುಕ್ಕೇರಿಕರ ಮಾಸ್ತರರು

(೬ ನೇ ಪುಟದಿಂದ)

ಮಾಸ್ತರರನ್ನು ಕಂಡರೆ ಅತ್ಯಂತ ಪ್ರೀತಿಯಿಂದ ಮುಂದೆ ಬರುತ್ತಿದ್ದರು. ೧೯೩೭ ರಲ್ಲಿ ಆದ ಪ್ರಾಂತಿಕ ಚುನಾವಣೆಯಲ್ಲಿ ಪಾರ್ಲಮೆಂಟ ಬೋರ್ಡಿನ ಕಾರ್ಯದರ್ಶಿಗಳು ನಮ್ಮ ಮಾಸ್ತರರೆ.

'ನವಶಕ್ತಿ'ಯನ್ನು ಆರ್ಥಿಕ ಬಿಕ್ಕಟ್ಟಿನ ಮೂಲಕ ೧೯೩೯ ರಲ್ಲಿ ಬಂದ ಮಾಡಲಾಗಿತ್ತು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ಇಂಗ್ಲೀಷ ಪತ್ರಿಕೆಯ ಅವಶ್ಯಕತೆಯು ಬಹಳಿತ್ತು. ದಿವಾಕರರ ಸಹಾಯದೊಂದಿಗೆ ಮಾಸ್ತರರು ಮತ್ತೆ "ಯುನಾಯಟೆಡ್ ಕರ್ನಾಟಕ" ಎಂಬ ಇಂಗ್ಲೀಷ ವಾರ ಪತ್ರಿಕೆಯನ್ನು ೧೯೩೭ ರಲ್ಲಿ ಮತ್ತೆ ಸುರು ಮಾಡಿದರು. ಆದರೆ ಮುಂದೆ ಮತ್ತೆ ೧೯೪೧ ರಲ್ಲಿ ವೈಯಕ್ತಿಕ ಸತ್ಯಾಗ್ರಹದಲ್ಲಿ ಜೇಲಿಗೆ ಹೋಗಬೇಕಾದ್ದರಿಂದ ಎಲ್ಲ ಚಟುವಟಿಕೆಗಳು ಸ್ಥಗಿತವಾದವು. ಅದಾದ ಕೂಡಲೇ ೧೯೪೨ ರ ಕರೆಯು ಬಂದದ್ದರಿಂದ ಮಾಸ್ತರರಿಗೆ ಭೂಮಿಗತರಾಗಿ ಕರ್ನಾಟಕದ ಹೋರಾಟ ಸಾಗಿಸುವ ಹೊಣೆ ಬಿದ್ದಿತು. ೯ ತಿಂಗಳ ನಂತರ ಪೋಲೀಸರಿಗೆ ಸಿಕ್ಕು ಸ್ಥಾನಬದ್ಧರಾದರು.

ಎಲ್ಲರಿಗೂ "ಮಾಸ್ತರರು"

ಆದರೆ ಮುಂದೆ ಎಂಟೇ ತಿಂಗಳು ಸ್ಥಾನ ಬದ್ಧತೆಯಲ್ಲಿರುವಾಗ ಹಿಂದುಸ್ಥಾನದ ಪರಿಸ್ಥಿತಿಯೇ ಬದಲಾಗಿಬಿಟ್ಟಿತು. ಗಾಂಧೀಜಿಯವರು ಯುಕ್ತತೆ ಹೊಸ ಕಾಂಗ್ರೆಸಿನ ಬೇಡಿಕೆಗಳ ಬಗ್ಗೆ ಸರಕಾರದವರಿಂದ ಆಮಂತ್ರಿಸಲ್ಪಟ್ಟದ್ದರು. ಅನೇಕ ಘಟನಾತ್ಮಕ ಬದಲಾವಣೆಗಳಾಗಹತ್ತಿದವು. ಪ್ರಾಂತದಲ್ಲಿ ಮತ್ತೆ ಕಾಂಗ್ರೆಸ ರಾಜ್ಯಗಳು ತಲೆ ಸುತ್ತುವ ಲಕ್ಷಣ ತೋರಹತ್ತಿದವು. ಅದಲ್ಲದೆ ಎಷ್ಟೋ ವರ್ಷಗಳ ವರೆಗೆ ಬದಲಾಗದೆ ಇದ್ದ ಕೇಂದ್ರ ಶಾಸನ ಮಂಡಲವೂ ಈಗ ಹೊಸದಾಗಿ ಚುನಾವಣೆ ಹೊರಡುವದಿತ್ತು. ರಾಜಕೀಯ ಕೈದಿಗಳೆಲ್ಲರೂ ಬಿಡುಗಡೆ ಹೊಂದಿದ್ದರು. ಚುನಾವಣೆಗೆ ಹೋರಾಡುವದಕ್ಕಾಗಿ ಈಗ ಕಾಂಗ್ರೆಸ ಸಿದ್ಧವಾಯ್ತು. ಮೊದಲು ಕೇಂದ್ರದ ಚುನಾವಣೆಗಳಾದಲ್ಲಿ ಕರ್ನಾಟಕದ ಚುನಾವಣೆಯ ಸೂತ್ರವು ಮಾಸ್ತರರ ಕೈಗೆ ಬಂದಿತು. ಕಾಂಗ್ರೆಸಿಗೇ ಅಪೂರ್ವ ವಿಜಯವನ್ನು ದೊರಕಿಸಿಕೊಟ್ಟರು. ಕೇಂದ್ರದಲ್ಲಿಯೂ ಸಹ ಮುಂದೆ ಕಾಂಗ್ರೆಸ ರಾಜ್ಯವಾಯಿತು. ನಂತರ ಪ್ರಾಂತಿಕ ಚುನಾವಣೆಗಳು ಪ್ರಾರಂಭವಾದವು. ಕರ್ನಾಟಕವು ಮಾಸ್ತರರ ಈವರೆಗಿನ ಸೇವೆ ತ್ಯಾಗವನ್ನು ಅನುಲಕ್ಷಿಸಿ ಅವರನ್ನು ಧಾರವಾಡದ ಉತ್ತರ ಭಾಗದ ಪರವಾಗಿ ಆರಿಸಿ ತಂದು ಕೊಟ್ಟಿತು. ಶಾಸನ ಸಭೆಯ ಸದಸ್ಯರಾದಾಗಲಂತೂ ಮಾಸ್ತರರು ಎಲ್ಲರಿಗೂ ಮಾಸ್ತರರಾಗಿಬಿಟ್ಟಿದ್ದಾರೆ. ಪ್ರಾರಂಭಕ್ಕೆ ಹೇಳಿದಂತೆ ಹದಿನೆಂಟು ಜನರು ಹದಿನೆಂಟು ಕೆಲಸಕ್ಕಾಗಿ ಅವರನ್ನು ಎಳೆಯುತ್ತಿರುತ್ತಾರೆ. ಅವರಿಗೆ ಬರೀ ಉತ್ತರಕೊಟ್ಟು ಕಳಿಸುವದಕ್ಕೆ ಸಾದಾ ಮನುಷ್ಯನ ತಾಳ್ಮೆ ಸಹಜವಾಗಿ ಮೀರಬಹುದು. ಇನ್ನು ಅವರ ಕೆಲಸ ಮಾಡಿ ಕೊಡುವದಂತೂ ಬೇರೆ ಉಳಿಯಿತು. ಆದರೆ ಮಾಸ್ತರರು ಇಂದು ೬೦ ವರ್ಷ ತರುಣರಾದರೂ, ಇವರೆಲ್ಲರನ್ನೂ ಕಟ್ಟಿಕೊಂಡು ಈಸುತ್ತಿದ್ದಾರೆ. ಅವರ ಮನೆಗೆ ಬಂದು "ಇಲ್ಲ" ಅಂತ ಅನಿಸಿಕೊಂಡ ಜನರೇ ಇಲ್ಲ. ಮಾಸ್ತರರ ಸಹನಶಕ್ತಿಯ ಕಲ್ಪನೆ ಕೊಡಲು ಒಂದೇ ಒಂದು ಉದಾಹರಣೆ ಕೊಡಬಹುದು ಮೊನ್ನೆ ಅವರ ೧೬ ವರ್ಷದ ಪ್ರೀತಿಯ ಮಗಳೊಬ್ಬಳು ತೀರಿಕೊಂಡಳು. ನಾವೆಲ್ಲರೂ ಮಾಸ್ತರರಿಗೆ ಭೆಟ್ಟಿಯಾಗಲು ಹೋಗಿದ್ದೆವು. ಮಾಸ್ತರರು ದುಃಖವನ್ನು ವಿಶ್ವಪ್ರಯತ್ನದಿಂದ ಒಳಗೆ ನುಂಗುತ್ತ ನೀಲಕಂಠರಂತೆ ಕಾಣುತ್ತಿದ್ದರು. ಮೃತದೇಹವು ಇಟ್ಟದ ಮೇಲೆಯೇ ಇತ್ತು. ಕೆಳಗೆ ತಮ್ಮ ವಾಸಖಾನೆಯಲ್ಲಿ ಮಾಸ್ತರರು ಕೆಲ ಜನರೊಡನೆ ಕುಳಿತು ಮಾತಾಡುತ್ತಿದ್ದರು. ತಮ್ಮ ದುಃಖದ ಬಗ್ಗೆ ಒಂದು ಶಬ್ದವೂ ಒಂದು ಹನಿ ಕಣ್ಣೀರನ್ನು ಸಹ ಅವರು ತೋರಿಕೊಡಲಿಲ್ಲ. ಇದರಿಂದ ಕೆಲ ಜನರಿಗೆ ಏನೂ ಕಲ್ಪನೆಬಂದೆ, ತಮ್ಮ ತಮ್ಮ ಕೆಲಸದ ಸಲುವಾಗಿಯೇ ಅವರು ನಿತ್ಯದಂತೆ ಕೇಳುತ್ತಿದ್ದರು. ಮಾಸ್ತರರು ಅವರ ಕೆಲಸವನ್ನು ತೀರಿಸಿಕೊಡುತ್ತಿದ್ದರು. ಆ ಜನರಿಗೆ ಕಡೆಯ ವರೆಗೆ ಇವರ ಮಗಳು ಆದೇ ತೀರಿಕೊಂಡಿದ್ದಳೆಂಬುದರ ಕಲ್ಪನೆ ಬರಲಿಲ್ಲ! ಮಾಸ್ತರರ ಜೀವನವೆಲ್ಲ ಕಷ್ಟನಷ್ಟಗಳನ್ನೆಲ್ಲ ಎದುರಿಸುವದಕ್ಕಾಗಿ ಮೀಸಲಿದ್ದಂತೆ ತೋರುತ್ತದೆ. ಕರ್ನಾಟಕವನ್ನು ಕಟ್ಟಿದ ಶ್ರೇಯಸ್ಸು ಅವರಿಗೆ ಬಹುಮಟ್ಟಿಗೆ ಸೇರುವದು. ಅವರಿಂದ ತಮ್ಮ ವಯದಿಂದ ಜ್ಞಾನದಿಂದ ಹಾಗೂ ಅನುಭವದಿಂದ ನಮ್ಮೆಲ್ಲರಿಗೆ ನಿಜವಾಗಿಯೂ ಮಾಸ್ತರರಾಗಿರುವರು.

ಮುಂಬಯಿ

೧೯೪೪ರಲ್ಲಿ ಆದ ನೌಕಾಸ್ಫೋಟದಲ್ಲಿ ಹಾರಿ ಹೋದ ಬಂಗಾರದ ಗಟ್ಟಿಗಳಲ್ಲಿ ೧೩೦೦೦೦ ರೂಪಾಯಿ ಬೆಲೆಬಾಳುವ ಮತ್ತೊಂದು ಗಟ್ಟಿಯು ಮುಂಬಯಿ ಪೋರ್ಟ ಟ್ರಸ್ಟ ಅಧಿಕಾರಿಗಳಿಗೆ ೧೮ನೇ ತಾರೀಕು ಸಮುದ್ರದಲ್ಲಿ ಸಿಕ್ಕಿತು. ಹೀಗೆ ದೊರೆತ ೧೭ನೇ ಗಟ್ಟಿಯಿದು. ಇನ್ನೂ ಎಷ್ಟೋ ಗಟ್ಟಿಗಳು ದೊರೆಯಬಹುದೆಂದು ಶೋಧಕರ ಮುಖ್ಯಸ್ಥರ ಅಭಿಪ್ರಾಯ.

ಅಖಿಲಭಾರತ ಉದ್ದಿಮೆದಾರರ ಸಂಘದ ಕೇಂದ್ರಸಮಿತಿಯು ಸರ್ ಎಂ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ದೇಶದಲ್ಲಿ ಬಟ್ಟೆ ಮತ್ತು ಆಹಾರ ಉತ್ಪಾದನೆಯೂ ಕಡಮೆಯಾಗುತ್ತ ನಡೆದಿರುವದರಿಂದ ಆರ್ಥಿಕ ಬಿಕ್ಕಟ್ಟು ಉಂಟಾಗುವದಾದ್ದರಿಂದ ಪ್ರಾಥಮಿಕ ಮತ್ತು ಕೇಂದ್ರ ಸರಕಾರಗಳು ಈ ಬಗ್ಗೆ ಸಾರ್ವತ್ರಿಕ ಉಪಾಯಗಳನ್ನು ಯೋಜಿಸಬೇಕೆಂದು ಕೇಳಿಕೊಂಡಿತು.

ಅಹಮದಾಬಾದದ ಇನ್‌ಕಿಲಾಬ ಗುಜರಾಥ ಪತ್ರದ ಮೇಲೆ ನಿರ್ಬಂಧ ಹೇರಿ ಒಂದು ಪಕ್ಷ ಜಾತೀಯ ವಿಷಯದ ಮೇಲೆ ಬರೆಯಬಾರದೆಂದು ವಿಧಿಸಿದ್ದಾರೆ.

ಅಕ್ಟೋಬರ ತಿಂಗಳಿನ ಪ್ರಥಮಾರ್ಧದಲ್ಲಿ ಮುಂಬಯಿ ಬಂದರಕ್ಕೆ ವಿದೇಶಗಳಿಂದ ದಿನಾಲು ಸರಾಸರಿ ಎರಡು ಸಾವಿರ ಟನ್ ಆಹಾರ ಸಾಮಗ್ರಿ ಬರುತಿದೆ. ಈ ಆಹಾರ ಧಾನ್ಯವು ಮುಂಬಯಿ ಮಧ್ಯಪ್ರಾಂತಗಳಿಗೂ ಕಾಠೇವಾಡ ಗುಜರಾಥ ಸಂಸ್ಥಾನಗಳಿಗೂ ಹೋಗತಕ್ಕದ್ದಿದೆ. ಬಂದ ಆಹಾರ ಸಾಮಗ್ರಿಯಲ್ಲಿ ಗೋದಿ ಗೋದಿಹಿಟ್ಟು ಜೋಳ ಸಜ್ಜಿ ಮತ್ತು ಗೋವಿನಜೋಳಗಳಿವೆ.

ಮುಂಬಯಿ ವೃತ್ತಪತ್ರ ಸಲಹೆ ಸಮಿತಿಯಲ್ಲಿ ಕೆ. ಶ್ರೀನಿವಾಸನ ಮತ್ತು ಸೋಶಲ್ ರಿಫಾರ್ಮರ ಪತ್ರಿಕೆಯ ಸಂಪಾದಕರು ರಾಜೀನಾಮೆ ಕೊಟ್ಟದ್ದರಿಂದ ಶ್ರೀ ಸದಾನಂದ ಮತ್ತು ಇಂಡಿಯನ್ ಪಾರ್ಲಮೆಂಟಿನ ಸಂಪಾದಕರಾದ ಶ್ರೀನಿವಾಸನ್‌ರನ್ನು ಹೊಸ ಸದಸ್ಯರನ್ನಾಗಿ ನೇಮಿಸಿಕೊಳ್ಳಲಾಗಿದೆ.

ಮುಂಬಯಿಯಲ್ಲಿ ಮಂಗ್ರೋಲ ಸಂಸ್ಥಾನದ ಪ್ರಜೆಗಳ ಸಭೆಸೇರಿ ಮಂಗ್ರೋಲದ ಶೇಖರು ಹಿಂದುಸ್ಥಾನದ ಒಕ್ಕೂಟದಿಂದ ಹೊರಗುಳಿಯುವ ನಿರ್ಧಾರ ಖಂಡಿಸಿದರು. ಜುನಾಗಡದ ಒತ್ತಾಯದಿಂದ ಶೇಖರು ಹಾಗೆ ಮಾಡಿರುವರೆಂದು ಸಂಸ್ಥಾನವು ಹಿಂದುಸ್ಥಾನ ಒಕ್ಕೂಟವನ್ನು ಸೇರಬೇಕೆಂದು ನಿರ್ಣಯಿಸಲಾಯಿತು.

ಪೂರ್ವ ಖಾನದೇಶ ಜಿಲ್ಹಾ ಬೋರ್ಡಿನ ಗೊತ್ತುವಳಿಗನುಸಾರವಾಗಿ ಮುಂಬಯಿ ಸರಕಾರದವರು ಭೂಕಂದಾಯದ ಒಂದು ರೂಪಾಯಿಗೆ ಮೂರಾಣೆಯಂತೆ ಲೋಕಲ್‌ಫಂಡ ಹೇರುವದಾಗಿ ವಿಧಿಸಿದ್ದಾರೆ.

ಪ್ರಾಂತಿಕ ಶಿಕ್ಷಣ ಸಮಿತಿಯು ಸಭೆಯ ಮುಖ್ಯಮಂತ್ರಿ ಶ್ರೀ ಖೇರರ ಅಧ್ಯಕ್ಷತೆಯಲ್ಲಿ ಸೇರಿ ೧೯೪೮ರಿಂದ ಮಾಧ್ಯಮಿಕ ಶಾಲೆಗಳಲ್ಲಿ ೧ ನೇ ಇಯತ್ತೆಯಲ್ಲಿ ಇಂಗ್ಲೀಶ ಕಲಿಸುವದನ್ನು ನಿಲ್ಲಿಸಬೇಕೆಂದೂ ೧೯೪೯ರಲ್ಲಿ ಜೂನಕ್ಕೆ ೨ ನೇ ಇಯತ್ತೆಯಲ್ಲಿ ೧೯೫೦ರ ಜೂನದಲ್ಲಿ ೩ ನೇ ಇಯತ್ತೆಯಲ್ಲಿ ಹೀಗೆ ಮೂರುವರ್ಷಗಳಲ್ಲಿ ಮೊದಲಿನ ಮೂರುಇಯತ್ತೆಗಳಲ್ಲಿ ಇಂಗ್ಲೀಶ ನಿಲ್ಲಿಸುವದನ್ನು ನಿರ್ಧರಿಸಲಾಗಿದೆ. ಯುರೋಪಿಯನ್ ಶಾಲೆಗಳಿಗೆ ಈ ನಿಯಮ ಹತ್ತುವದಿಲ್ಲ.


ಪಶ್ಚಿಮ ಬಂಗಾಲ

ಕಲಕತ್ತೆಯ ಹಿಂದಿನ ಉಪಮೇಯರರಾದ ಶಮಸುಲ್ ಹಕ್ ಹಾಗು ರಾಷ್ಟ್ರೀಯ ಮುಸಲ್ಮಾನ ಧುರೀಣರಾದ ಸಯ್ಯದರು ಪ್ರಕಟನೆಯೊಂದನ್ನು ಹೊರಡಿಸಿ ಹಿಂದೀ ಒಕ್ಕೂಟದಲ್ಲಿಯ ಮುಸಲ್ಮಾನ ಅಲ್ಪಸಂಖ್ಯಾಕರು ಇನ್ನು ದ್ವಿರಾಷ್ಟ್ರ ತತ್ವವನ್ನು ಬಿಟ್ಟುಗೊಟ್ಟು ಮುಸ್ಲಿಂ ಲೀಗಿನೊಡನೆ ಯಾವದೇ ಸಂಬಂಧ ಇಟ್ಟುಕೊಳ್ಳತಕ್ಕದ್ದಲ್ಲವೆಂದೂ ಹಿಂದೀ ಒಕ್ಕೂಟನಲ್ಲಿ ಮುಸ್ಲಿಂಲೀಗನ್ನು ಕೂಡಲೆ ವಿಸರ್ಜಿಸಬೇಕೆಂದೂ ಮುಂತಾಗಿ ಸೂಚಿಸಿದ್ದಾರೆ.

ಕಚೇರಿಗಳಲ್ಲಿ ಉಪಯೋಗಿಸುವ ಇಂಗ್ಲಿಶ ಶಬ್ದಗಳಿಗೆ ಪ್ರತಿಯಾಗಿ ಬಂಗಾಲಿ ಶಬ್ದಗಳನ್ನು ಗೊತ್ತುಪಡಿಸಲು ಪಶ್ಚಿಮ ಬಂಗಾಲ ಸರಕಾರವು ಸಮಿತಿಯೊಂದನ್ನು ನೇಮಿಸಿದೆ.

ನಾಗರಿಕ ಪೂರೈಕೆ ಶಾಖೆಯ ಮೋಟರ ಸಾರಿಗೆಯ ಸಂಪು ಹೂಡಿದ ೬೭೮ ಕೆಲಸಗಾರರಿಗೆ ಸರಕಾರದವರು ನೌಕರಿ ಮುಕ್ತತೆಯ ನೋಟೀಸ ಕೊಟ್ಟಿದ್ದಾರೆ.

ಹೌರಾ ಜಿಲ್ಹೆಯ ಬನ್ಸಬೆಂಖೂ ಎಂಬ ಹಳ್ಳಿಯಲ್ಲಿ ಬಂಗಾಲಿ ಹಿಂದೂ ಹೆಣ್ಣುಮಗಳು ಒಂದೇ ಕಾಲಕ್ಕೆ ನಾಲ್ಕು ಮಕ್ಕಳನ್ನು ಹೆತ್ತಿರುವಳು. ಈ ಮೊದಲು ಅವಳು ಮೂರುಸಾರೆ ಅವಳಿಜವಳಿ ಕೂಸುಗಳನ್ನು ಹಡೆದಿದ್ದಳು.



ಹೊಸದಿಲ್ಲಿ

ಹಳ್ಳಿಗರ ಸಂಘ ಸಂಸ್ಥೆಗಳ ಮಹಾಮಂಡಳದ ಕಾರ್ಯಕಾರಿ ಮಂಡಳವು ಪ್ರೊ. ಎನ್. ಜಿ ರಂಗ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಆಹಾರ ಮತ್ತು ಬಟ್ಟೆಯ ಮೇಲಿನ ನಿಯಂತ್ರಣಗಳನ್ನು ತೆಗೆದೊಗೆಯಬೇಕೆಂಬ ಮಹತ್ವದ ಸೂಚನೆಗೆ ತನ್ನ ಬೆಂಬಲವನ್ನು ಕೊಟ್ಟಿತು. ನವಂಬರ ೭ಕ್ಕೆ ನಿಯಂತ್ರಣ ವಿರೋಧಿ ದಿನವನ್ನಾಗಿ ಆಚರಿಸಬೇಕೆಂದು ಗೊತ್ತುಪಡಿಸಿತು. ಕಳ್ಳಪೇಟೆಯಿಂದ ಜನಸಾಮಾನ್ಯರ ಆರ್ಥಿಕ ಮತ್ತು ನೈತಿಕ ಹಾನಿಯಾಗುತ್ತದೆಂದೂ ಅಭಿಪ್ರಾಯ ಪಡಲಾಯಿತು.

ಹಿಂದುಸ್ಥಾನದ ಸೈನ್ಯಾಧಿಕಾರಿಗಳಾದ ಮೇಜರ ಜನರಲ್ ಕರಿಯಪ್ಪನವರು ಮತ್ತು ಪಾಕಿಸ್ತಾನದ ಸೇನಾಪತಿಗಳಾದ ಫ್ರಾಂಕ ಮೇಸರ್ವಿಯವರು ಸರಕಾರೀ ಕೆಲಸಕ್ಕಾಗಿ ಲಂಡನಿಗೆ ಪ್ರಯಾಣ ಬೆಳೆಸಿರುವರು.

ಸಂರಕ್ಷಣ ಶಾಖೆಯು ಸಂಜ್ಞಾ ಆವಾರದಲ್ಲಿಯ ಶಸ್ತ್ರಾಸ್ತ್ರಗಳ ಕಳವಿನ ಬಗ್ಗೆ ಮೂವರನ್ನು ಬಂಧಿಸಲಾಗಿದೆ.

ಹಿಂದುಸ್ಥಾನ ಘಟನಾ ಸಮಿತಿಯ ಘಟನಾ ಸಲಹೆಗಾರರಾದ ಸರ್ ಬಿ. ಎನ್. ರಾಯರು ಅಮೇರಿಕೆ ಮತ್ತು ಆಯರ್ಲಂಡದ ಘಟನೆಗಳನ್ನು ಅಭ್ಯಸಿಸಲು ಮುಂದಿನವಾರ ಅಲ್ಲಿಗೆ ಹೋಗಲಿರುವರು.

ಕಲ್ಲಿದ್ದಲಿ ಉದ್ಯೋಗವು ಇಂಡಸ್ಟ್ರಿಯಲ್ ಡಿಸ್ಪ್ಯುಟ ಕಾಯದೆಯಲ್ಲಿ ಸಾರ್ವಜನಿಕ ಉದ್ಯೋಗವೆಂದು ಪರಿಗಣಿಸಲ್ಪಡಬಾರದೆಂದು ಭಾರತ ಸರಕಾರದ ಗೆಜೆಟ್ಟಿನಲ್ಲಿ ಪ್ರಸಿದ್ಧವಾಗಿದೆ.

ಪಾಕಿಸ್ತಾನ ಸಂಸ್ಥಾನಗಳನ್ನೊಳಗೊಂಡ ಇಡೀ ಭಾರತದಲ್ಲಿ ಯುರೋಪಿಯನ್‌ರ ಸಂಖ್ಯೆ ಸುಮಾರು ೩೪೦೦೦ ಎಂದು ಜನಗಣನೆಯಿಂದ ಗೊತ್ತಾಗುತ್ತದೆ.

ಸರೋಜಿನಿ ನಾಯಡು ಇವರ ಸಹೋದರರಾದ ವಿರೇಂದ್ರನಾಥ ಚಟ್ಟೋಪಾಧ್ಯಾಯರು ಕಳೆದ ೪೦ ವರುಷಗಳಿಂದ ಗಡಿಪಾರಾಗಿ ಯುರೋಪಿನಲ್ಲಿದ್ದು ಇತ್ತೀಚೆ ಅವರ ಪತ್ತೆ ಇದ್ದಿಲ್ಲವಾದ್ದರಿಂದ ಸರಕಾರದವರು ಆ ಬಗ್ಗೆ ತಪಾಸು ನಡೆಸಿದ್ದರು. ೧೯೪೧ ಡಿಸೆಂಬರ ೨ನೇ ತಾರೀಖಿಗೆ ಅವರು ಹೃದಯರೋಗದಿಂದ ಮರಣ ಹೊಂದಿದರೆಂದು ಈ ತಪಾಸಣೆಯಲ್ಲಿ ತಿಳಿದುಬಂದಿದೆ.

ಮದ್ರಾಸ

ಜಮೀನ್ದಾರಿ ಪದ್ಧತಿಯ ನಿರ್ಮೂಲನೆ ಮಸೂದೆಯಿಂದ ಉದ್ಭವಿಸಿದ ಮುದ್ದೆಗಳ ಬಗ್ಗೆ ಕಾಂಗ್ರೆಸವರಿಷ್ಠರ ಸಲಹೆ ಕೇಳಲು ಮದ್ರಾಸಿನ ಮುಖ್ಯಮಂತ್ರಿಗಳಾದ ಶ್ರೀ ಓಮಂಡೂರ ರಾಮಸ್ವಾಮಿ ಮುದಲಿಯಾರರು ಗೃಹಮಂತ್ರಿ ಡಾ. ಪಿ. ಸುಬ್ಬರಾಯನ್ ಹಾಗು ಕಂದಾಯ ಮಂತ್ರಿ ಶ್ರೀ ವೆಂಕಟರಾಯರೊಡನೆ ದಿಲ್ಲಿಗೆ ತೆರಳಿದ್ದಾರೆ.

ಮದ್ರಾಸ ಪ್ರಾಂತದಲ್ಲಿ ಕಾಗದ ಕಾರಖಾನೆ ಸ್ಥಾಪಿಸಲು ಬಂದ ೫ ಅರ್ಜಿಗಳಲ್ಲಿ ಒಂದಕ್ಕೆ ಅಪ್ಪಣೆ ಕೊಡಲಾಗಿದೆಂದು ಮಂತ್ರಿಗಳು ಹೇಳಿದರು.

ಮದ್ರಾಸ ಉಪನಗರವಾದ ನಂಗಬಕದ ಓರ್ವ ವರ್ತಕನ ಮನೆಯ ಕಿಡಕಿಯನ್ನು ಮುರಿದು ಕಳ್ಳರು ೧೫೦ ಸಾವಿರ ರೂಪಾಯಿಗಳ ಹಣ ಮತ್ತು ಚಿನ್ನದಿಂದ ತುಂಬಿದ ಪೆಟ್ಟಿಗೆಯನ್ನು ದೋಚಿಕೊಂಡು ಹೋದರು.

ಕೇರಳ ಸೋಶಾಲಿಸ್ಟ ಕಾರ್ಯಕರ್ತರಾದ ಎಂ ಸಿ ಮೆನನ್ನರು ಕ್ರಿಮಿನಲ್ ತಿದ್ದುಪಡಿಯ ಮಸೂದೆಯ ವಿರುದ್ಧವಾಗಿ ಕೌನ್ಸಿಲ ಮುಂದೆ ನಿಷೇಧ ಪ್ರದರ್ಶಿಸಿದ್ದಕ್ಕಾಗಿ ಸೆರೆಹಿಡಿಯಲ್ಪಟ್ಟಿದ್ದಾರೆ.

ಮದ್ರಾಸ ಸರಕಾರವು ರಾಮಪಾದಸಾಗರ ಅಣೆಕಟ್ಟಿನ ಯೋಜನೆಯನ್ನು ಕೈಕೊಳ್ಳಲು ನಿರ್ಧರಿಸಿರುವದು. ಗೋದಾವರಿ ನದಿಗೆ ಕಟ್ಟಲಿರುವ ಈ ಅಣೆಕಟ್ಟು ಜಗತ್ತಿನಲ್ಲಿ ದೊಡ್ಡದಾದ ಯೋಜನೆಗಳಲ್ಲೊಂದಾಗುವದು. ಇದಕ್ಕೆ ೮೬ಕೋಟಿ ರೂ. ವೆಚ್ಚವಾಗುವದು. ೧೨ ವರುಷ ಕೆಲಸ ನಡೆಯುವದು. ೨೩ ಲಕ್ಷ ಎಕರೆ ಭೂಮಿ ಇದರಿಂದ ನೀರು ಉಣ್ಣುತ್ತದೆ. ೧೦೦ಲಕ್ಷ ಟನ್ ಅಕ್ಕಿ ಉತ್ಪನ್ನವಾಗುತ್ತದೆ. ಅಲ್ಲದೆ ಲಕ್ಷಗಟ್ಟಲೆ ಕಿಲೊವ್ಯಾಟದಷ್ಟು ಜಲವಿದ್ಯುಚ್ಛಕ್ತಿ ಉತ್ಪನ್ನವಾಗುತ್ತದೆ.

ಸಿಂಧ

ಸಿಂಧದ ಅಲ್ಪಸಂಖ್ಯಾಕರನ್ನು ಕೊನೆಯ ವರೆಗೂ ಸಂರಕ್ಷಿಸಲು ಮತ್ತು ಅವರು ಶಾಂತಿಮಯ ಹಾಗು ಗೌರವಯುಕ್ತ ಜೀವನವನ್ನು ಸಾಗಿಸುವಂತೆ ಅವಕಾಶವನ್ನು ಕಲ್ಪಿಸಿಕೊಡಲು ಸಿಂಧ ಪ್ರಾಂತೀಯ ಮುಸ್ಲಿಂ ಲೀಗ ಸಭೆ ನಿರ್ಣಯಿಸಿದೆ.

ಪಾಕಿಸ್ತಾನವನ್ನು ಸಾರಿದ ಜುನಾಗಡ ಸಂಸ್ಥಾನದಲ್ಲಿಯ ಆಹಾರ ಕೊರತೆಯನ್ನು ಹಿಂಗಿಸಲು ಪಾಕಿಸ್ತಾನ ಸರಕಾರದವರು ಕರಾಚಿಯಿಂದ ೭೦೦೦ ಟನ್ ಅಕ್ಕಿ ಮತ್ತು ಗೋದಿಯನ್ನು ಅಲ್ಲಿಗೆ ಕಳಿಸಲಿರುವರು. ಜುನಾಗಡದೊಡನೆ ನಿತ್ಯವೂ ವ್ಯವಹಾರ ನಡೆಯುವಂತೆ ಜುನಾಗಡ ಕರಾಚಿ ವಿಮಾನ ಪಯಣದ ಏರ್ಪಾಡು ಮಾಡಲಾಗಿದೆ.

ಸಿಂಧದ ಉಗಿಬಂಡೆಗಳಲ್ಲಿ ಪ್ರವಾಸ ಮಾಡುತ್ತಿರುವ ಮುಸಲ್ಮಾನೇತರ ಪ್ರವಾಸಿಕರ ಸುರಕ್ಷಿತತೆಗಾಗಿ ಎಲ್ಲ ಪ್ರವಾಸಿಕರನ್ನೂ ಒಂದೇ ಡಬ್ಬಿಯಲ್ಲಿ ಕೂಡ್ರಿಸಿ ಆ ಡಬ್ಬಿಯನ್ನು ಸ್ಪೇಶಲ್ ಪೋಲೀಸರು ರಕ್ಷಿಸುವ ಯೋಜನೆಯನ್ನು ಮಾಡಲಾಗಿಯೆಂದು ತಿಳಿಯುತ್ತದೆ.

ಇಜಿಪ್ತದಲ್ಲಿ ಪಾಕಿಸ್ತಾನ ಸರಕಾರ ತನ್ನ ರಾಯಭಾರ ಕಚೇರಿಯನ್ನು ಸ್ಥಾಪಿಸುವದು. ಜಿ. ಎ. ರಹಿಮರು ಇಜಿಪ್ತದ ರಾಯಭಾರಿಗಳು.

ನಿರಾಶ್ರಿತರು ಗಾಡಿಗಳಲ್ಲಿ ಟಿಕೆಟ್ಟಿಲ್ಲದೆ ಪ್ರಯಾಣ ಮಾಡಿರುವದರಿಂದ ಪಾಕಿಸ್ತಾನಕ್ಕೆ ಅಗಸ್ಟ ೧೫ರಿಂದ ಇಲ್ಲಿಯವರೆಗೆ ಕೋಟ್ಯಾವಧಿ ರೂಪಾಯಿಗಳ ಹಾನಿತಟ್ಟಿದೆಂದು ಪಾಕಿಸ್ತಾನದ ಸಂಪರ್ಕ ಶಾಖೆಯ ಮಂತ್ರಿಗಳಾದ ಸರದಾರ ಅಬ್ದುರ್ ರಬ ನಿಶ್ತಾರರು ಹೇಳಿದರು.

ಪಾಕಿಸ್ತಾನದ ರೇಲ್ವೆ ನೌಕರಿಗಾಗಿ ಹೆಸರು ಕೊಟ್ಟವರಲ್ಲಿ ಎಷ್ಟೋ ಜನರು ಇನ್ನೂ ಹಿಂದುಸ್ಥಾನದಿಂದ ಬಂದಿಲ್ಲವೆಂದು ಅಬ್ದುರ್ ರಾಬರು ಮತ್ತೊಂದು ಪ್ರಶ್ನೆಗೆ ಉತ್ತರ ಕೊಡುತ್ತ ಹೇಳಿದರು.

ಸಂಯುಕ್ತಪ್ರಾಂತ

ಮುಂಬಯಿ ದಿಲ್ಲಿ ಪ್ಯಾಸೆಂಜರದ ವೇಲೆ ೧೪ನೇ ತಾರೀಕು ಪುಂಡರ ತಂಡವು ಏರಿ ಬಂದಾಗ ಒಂದು ಕೋಮಿನವರ ಮೇಲೆ ಗುಂಡು ಹಾರಿಸಿದರೆಂಬ ಆರೋಪದ ಮೇಲೆ ಝಾಂಸಿ ವಿಭಾಗದ ಅಸಿಸ್ಟಂಟ ಟ್ರಾನ್ಸ್‌ಪೋರ್ಟ ಸುಪರಿಂಟೆಂಡೆಂಟರು ಬಂಧಿಸಲ್ಪಟ್ಟಿರುವರು. ಪುಂಡರ ದಾಳಿಯ ಪರಿಣಾಮವಾಗಿ ೧೫ ಜನರು ಸತ್ತರಲ್ಲದೆ ೫೦ ಜನರಿಗೆ ಗಾಯಗಳಾಗಿವೆ.

ಈಗ ದೇಶದಲ್ಲಿ ಅರಾಜಕತೆಯನ್ನು ಹಬ್ಬಿಸುವವರು ಭಾರತದ ನವೀನ ಸ್ವಾತಂತ್ರ್ಯದ ಅಡಿಗಲ್ಲನ್ನು ಅದುರಿಸಿ ಪಾಕಿಸ್ತಾನ ಇಲ್ಲವೆ ಬೇರೆ ಯಾವದೇ ಅಕ್ರಮಣವನ್ನು ಪ್ರತಿಭಟಿಸಲು ವಿಘ್ನವನ್ನು ತಂದೊಡ್ಡುವರು. ಯಾವ ಉದ್ದೇಶದಿಂದಲೆ ಆಗಲಿ ದೇಶದಲ್ಲಿಯ ಶಾಂತತೆಯನ್ನು ಕೆಡಿಸುವವರು ದೇಶದ ವೈರಿಗಳು ಎಂದು ಪಂಡಿತ ಜವಾಹರಲಾಲರು ಲಖನೌದಲ್ಲಿ ೧೯ಕ್ಕೆ ಸೇರಿದ್ದ ಸಭೆಯಲ್ಲಿ ಮಾತಾಡುತ್ತ ಹೇಳಿದರು.

ವರಿಷ್ಠರಿಂದ ಕನಿಷ್ಠರವರೆಗೂ ಎಲ್ಲ ಕಾಂಗ್ರೆಸ್ಸಿಗರು ತಮ್ಮ ಪ್ರಾಂತಿಕ ಮತ್ತು ಕೇಂದ್ರ ಸರಕಾರಗಳೊಡನೆ ಸಹಕರಿಸಿ ದೇಶದಲ್ಲಿ ಶಾಂತಿ ಸಮೃದ್ಧಿಯನ್ನು ಸಾಧಿಸಬೇಕೆಂದು ಕಾಂಗ್ರೆಸ್ಸಿನ ಕಾಯಂ ಕಾರ್ಯದರ್ಶಿಗಳು ಬಿನ್ನವಿಸಿಕೊಂಡಿದ್ದಾರೆ.

ಅಗ್ರಾ ಮಣಿಪುರ ಮತ್ತು ಏಟಾ ಈ ಮೂರು ಜಿಲ್ಹೆಗಳು ಜಾತೀಯ ದೊಂಬಿಗಳ ಮೂಲಕ ಮೂರು ತಿಂಗಳಗಳ ವರೆಗೆ ಪ್ರಕ್ಷುಬ್ಧ ಪ್ರದೇಶಗಳೆಂದು ಎಣಿಸಬೇಕೆಂದು ಸಾರಲಾಗಿದೆ.


ಪಶ್ಚಿಮ ಪಂಜಾಬ

ಜವಳಿಗಿರಣಿ ಒಡೆಯರಿಗೆ ಅರಳಿಯನ್ನು ಕೊಳ್ಳುವ ಕಾರ್ಯದಲ್ಲಿ ಸಹಾಯ ಮಾಡಲು ಪಾಕಿಸ್ತಾನ ಮತ್ತು ಪ್ರಾಂತಿಕ ಸರಕಾರಗಳು ೩ ಕೋಟಿ ರೂಪಾಯಿ ಸಹಾಯ ಧನದ ವ್ಯವಸ್ಥೆ ಮಾಡಿದ್ದಾರೆ.

ಒತ್ತಾಯದ ಗಲಭೆ ವಿನಿಯೋಜನೆಯನ್ನು ಪಾಕಿಸ್ತಾನ ಸರಕಾರ ಜಾರಿಯಲ್ಲಿ ತರಲಿದೆ.

ದಾನಶೂರ

ಶ್ರೀ. ವೀರಪ್ಪನವರು ಬಸರೀಗಿಡದ



ಕರ್ನಾಟಕದಲ್ಲಿ ದಾನಶೂರರೆಂದು ಕೀರ್ತಿವೆತ್ತ ಶ್ರೀ. ಬಸರೀಗಿಡದ ವೀರಪ್ಪನವರು ಇವರು. ಇವರು ಮೂಲ ರೋಣದವರು. ಈಗ ಗದುಗಿನಲ್ಲಿ ಮೋಟರ ಉದ್ಯೋಗ ಇಟ್ಟಿರುವರು. ಬಾಲ್ಯ ಮತ್ತು ಯೌವನವನ್ನು ಬಡತನದಲ್ಲಿ ಕಳೆದು, ನಂತರ ಆರಾಣೆ ದಿನಗೂಲಿಯಿಂದ ಜೀವನ ಪ್ರಾರಂಭಿಸಿ ಸತತೋದ್ಯೋಗದಿಂದ ಶ್ರೀಮಂತರಾಗಿ, ಕುಬೇರರಾಗಿ, ಸಂಚಿತ ಹಣವನ್ನು ಕೊಡುಗೈಯಿಂದ ನೀರಿನಂತೆ ದಾನ ಮಾಡಿದವರಲ್ಲಿ ಶ್ರೀ ವೀರಪ್ಪನವರ ಹಾಗಿರುವವರು ವಿರಳ. ಇವರು ಇದುವರೆಗೆ ೧೫೫೦೦೦ ರೂ. ದಾನ ಮಾಡಿದ್ದಾರೆ. ಆಜೆ ವಾರ ಇಲ್ಲಿಯ ಪೋಲಿಟೆಕ್ನಿಕ್ ಶಾಲೆಗೆ ಮಾನ್ಯಮಂತ್ರಿ ಶ್ರೀ ಮೋಥಾರು ಸಂದರ್ಶನವಿತ್ತಾಗ, ಸ್ವಯಂಸ್ಫೂರ್ತಿಯಿಂದ ೫೫೫೫೫ ರೂ ದೇಣಿಗೆಯನ್ನು ಜಾಹೀರ ಮಾಡಿ ೧೧೧೧೧ ರೂ. ಅಲ್ಲಿಯೇ ರೋಖ ಎಣಿಸಿ ಅತಿಥಿಗಳನ್ನೂ ಸಭಿಕರನ್ನೂ ಚಕಿತಗೊಳಿಸಿದರು. ಬಸವೇಶ್ವರ ಕಾಲೇಜ, ಮತ್ತು ವಿಜಯ ಕಾಲೇಜುಗಳೂ ಇವರಿಂದ ಸಹಾಯ ಪಡೆದಿರುತ್ತವೆ. ಇನ್ನೂ ಇವರು ಒಂದು ಕೈಯಿಂದ ಗಳಿಸಿ ಇನ್ನೊಂದು ಕೈಯಿಂದ ದಾನ ಮಾಡುತ್ತಿದ್ದಾರೆ. ಬಡವರಲ್ಲಿ ಇವರಿಗಿದ್ದ ಕಳಕಳಿ ೧೯೪೩ರ ಬರಗಾಲದಲ್ಲಿ ಗುಳೇಕಾರರಿಗೆ ತೋರಿದ ಅನುಪಮ ಔದಾರ್ಯದಿಂದ ವ್ಯಕ್ತವಾಗಿರುವದು. ಕರ್ನಾಟಕದ ಲಕ್ಷಾಧೀಶರು ಇವರ ಅನುಕರಣ ಮಾಡಿದರೆ, ಕರ್ನಾಟಕದ ಭಾಗ್ಯ ಅಂದೇ ತೆರೆಯುವದು. ಪರಮಾತ್ಮನು ಶ್ರೀ ಮಾನ್ ವೀರಪ್ಪನವರಿಗೆ ಆಯುರಾರೋಗ್ಯ ಮತ್ತು ಸಂಪತ್ತನ್ನು ದಯಪಾಲಿಸಿ ಕನ್ನಡ ಜನತೆಗೆ ಅವರಿಂದ ಇದರಂತೆಯೇ ಸಹಾಯವಾಗುವಂತೆ ಕರುಣಿಸಲಿ.

ನಿವೃತ್ತ ಸೈನಿಕರಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ಶಿಕ್ಷಣವನ್ನು ಕೊಡುವದಕ್ಕಾಗಿ ಭಾರತದ ಕೇಂದ್ರ ಸರಕಾರದವರು ಸಂಯುಕ್ತಪ್ರಾಂತದಲ್ಲಿ ಶಿಕ್ಷಣ ಕೇಂದ್ರಗಳನ್ನು ತೆರೆಯಲಿದ್ದಾರೆ. ಉಮೇದವಾರರಿಗೆ ಶಿಕ್ಷಣ ಸಮಯದಲ್ಲಿ ತಿಂಗಳಿಗೆ ೨೦ ರೂ. ವೇತನ ಕೊಡಲಾಗುವದು.

ಬೆಂಗಳೂರು—ಮೈಸೂರು

ಅಕ್ಟೋಬರ ೧೯ ರ ಬೆಳಗ್ಗೆ ಹಲವು ಯುವಕರೂ ವಿದ್ಯಾರ್ಥಿಗಳೂ ಬೆಂಗಳೂರು ಕಾಂಗ್ರೆಸ ಭವನದ ಆವರಣದಲ್ಲಿ ಧ್ವಜವನ್ನು ಕಿತ್ತಿಟ್ಟು ಗಗನವನ್ನು ಬಿರಿಯುವಂತೆ ಘೋಷಣೆ ಮಾಡುತ್ತ ಪ್ರದರ್ಶನ ಮಾಡಿದರು. "ದೇಶದ್ರೋಹಿಗಳಿಗೆ ಕೋಡಿನಂತಾದ ಕಾಂಗ್ರೆಸಿಗರಿಗೆ ಮಂತ್ರಿ ಸ್ಥಾನ ಬೇಡ" ಎಂದು ಅವರು ಕೂಗುತ್ತಿದ್ದರು. ಶ್ರೀ. ಕೆ. ಟಿ. ಭಾಷ್ಯಂ ಹಾಗೂ ಸುಬ್ರಹ್ಮಣ್ಯರು ಮುಂತಾದ ಪ್ರಮುಖರ ಆಶ್ವಾಸನ ಪಡೆದು ಅನಂತರ ಅವರೆಲ್ಲ ಚದರಿದರು.

ಮೈಸೂರಿನಲ್ಲಿ ಹಾಕಲಾಗಿದ್ದ ವಿವಿಧ ಪ್ರತಿಬಂಧಕಾಜ್ಞೆಗಳನ್ನೆಲ್ಲ ಜಿಲ್ಹಾ ಮ್ಯಾಜಿಸ್ಟ್ರೇಟರು ವಾಪಸು ತೆಗೆದುಕೊಂಡಿದ್ದಾರೆ.

ಅ. ಭಾ. ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಮಹೇಂದ್ರ ವರ್ಮರವರು ತಾ ೧೭ ರ ಸಂಜೆ ಮೈಸೂರಿನ ರಂಗಾಚಾರ್ಯ ಸ್ಮಾರಕ ಭವನದಲ್ಲಿ ಭಾಷಣ ಮಾಡುತ್ತ ಮೈಸೂರಿನ ಸ್ವಾತಂತ್ರ್ಯ ಸಮರದಲ್ಲಿ ವಿದ್ಯಾರ್ಥಿಗಳು ವಹಿಸಿದ್ದ ಸ್ತುತ್ಯ ಭಾಗವನ್ನು ಪ್ರಶಂಸಿಸಿದರು.

ಬೆಂಗಳೂರು ವಿ. ವಿ. ಸಂಘದ ಘಟನೆಯ ಸಂಬಂಧದಲ್ಲಿ ೮ ಜನ ವಿ. ವಿ. ದ ವಿದ್ಯಾರ್ಥಿಗಳ ಮೇಲೆ ತೆಗೆದುಕೊಂಡಿದ್ದ ಶಿಸ್ತಿನ ಕ್ರಮವನ್ನು ವಿ. ವಿ. ನಿಲಯದ ಕೌನ್ಸಿಲ್ಲಿನಲ್ಲಿ ರದ್ದುಗೊಳಿಸಬೇಕೆಂದು ಠೀವರ್ಮಾನಿಸಲಾಗಿದೆಂದು ತಿಳಿಯುತ್ತದೆ.

ಮೈಸೂರು ಸರಕಾರದ ನಡುಗಾಲ ಸರಕಾರಕ್ಕೆ ಈ ಕೆಳಗಿನವರನ್ನು ಮೈಸೂರು ಕಾಂಗ್ರೆಸು ಆರಿಸಿದೆ. ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿ; ಮೈ. ಕಾಂ. ಹಿಂದಿನ ಅಧ್ಯಕ್ಷರಾದ ಶ್ರೀ ಕೆ. ಟಿ. ಭಾಷ್ಯಂ, ಎಚ್. ಸಿ. ದಾಸಪ್ಪ, ಎಚ್. ಸಿದ್ಧಯ್ಯ; ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಉಪನಾಯಕರಾದ ಶ್ರೀ ಟಿ. ಮರಿಯಪ್ಪ, ಹರಿಜನ ಸದಸ್ಯರಾದ ಶ್ರೀ ಆರ್. ಚೆನ್ನಿಗರಾಮಯ್ಯ; ಕಾಂಗ್ರೆಸ್ಸೇತರರಾದ-- ಮೈ. ಮು. ಲೀಗಿನ ಶ್ರೀ ಮಹಮ್ಮದ್ ಶರೀಫ್, ಶಾಸನ ಸಭೆಯ ಹಿಂದಿನ ಅಧ್ಯಕ್ಷರಾದ ಶ್ರೀ ಡಿ. ಎಚ್. ಚಂದ್ರಶೇಖರಯ್ಯ, ಬೆಂಗಳೂರು ಪೌರಸಭೆಯ ಹಿಂದಿನ ಅಧ್ಯಕ್ಷರಾದ ಶ್ರೀ ಪಿ. ಸುಬ್ಬರಾಮಚೆಟ್ಟಿ.

ಮೈಸೂರಿನ ನಗರ ಭವನದಲ್ಲಿ ತಾ. ೧೫ ರ ಸಂಜೆ ಭಾಷಣ ಮಾಡುತ್ತ ಮೈ. ನಗರ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ಎಚ್ ಚೆನ್ನಯ್ಯನವರು ಹೋರಾಟದ ವಿವರಗಳನ್ನು ಸಭಿಕರಿಗೆ ತಿಳಿಸಿ, ಜನರ ಹೊಣೆಗಾರಿಕೆಯನ್ನು ವಿವರಿಸಿ, ಒಪ್ಪಂದದ ವಿಷಯವನ್ನೆತ್ತಿದರು. ಒಪ್ಪಂದದಲ್ಲಿ ದಿವಾನರು ದಿವಾನರಾಗಿ ಇರುವಂತೆ ಒಪ್ಪಿಕೊಂಡಿದ್ದರೂ ಅದು ತಾತ್ಕಾಲಿಕವೆಂದೂ ಅವರ್ಯಾವ ಅಡೆತಡೆಯೂ ಉಂಟಾಗದೆಂದೂ ಅವರು ಜನತೆಗೆ ತಿಳಿಸಿದರು.


ಬೆಂಗಳೂರಿನ ಲೋಕಮಾನ್ಯ ತಿಲಕ ಸಂಘದ ಆಶ್ರಯದಲ್ಲಿ ತಾ ೧೭ ರ ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಮೈ. ಕಾಂ. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ ಆರ್ ಮಾಧವರಾಯರು ಉತ್ತಮ ಭಾಷಣದಲ್ಲಿ ಹಿಂದು ಧರ್ಮದ ಪರಂಪರಾಗತ ರಕ್ಷಕತ್ವದ ಪ್ರಕಾರ, ಮೈಸೂರು ಕಾಂಗ್ರೆಸ್ಸಿನ ಗೆಳೆಯರಾಗಿ ಪ್ರಜಾ ವಿಶ್ವಾಸಗಳಿಸುವ ರೀತಿಯಲ್ಲಿ ಮಂತ್ರಿ ಮಂಡಲದಲ್ಲಿ ಕೆಲಸ ಮಾಡುವೆವೆಂದು ಮಾತು ಕೊಟ್ಟುದರಿಂದ ದಿವಾನರನ್ನು ಅಧಿಕಾರದಲ್ಲಿ ಉಳಿಸಿಕೊಳ್ಳಲಾಗಿದೆಯೆಂದು ಹೇಳಿದರು.

ಬೆಂಗಳೂರಿನ ಅಕ್ಕಿ ಪೇಟೆ ಮಿತ್ರ ಮಂಡಲಿಯವರು ತಾ ೧೫ ರಲ್ಲಿ ಮೈ. ಕಾಂ. ಅಧ್ಯಕ್ಷರನ್ನೂ ಮುತ್ತಿತರ ಮುಖಂಡರನ್ನೂ ಅರಳೆ ಪೇಟೆಯಲ್ಲಿರುವ ತಮ್ಮ ಸಂಘಕ್ಕೆ ಆಹ್ವಾನಿಸಿ ಸತ್ಕರಿಸಿದರು.

ಬೆಂಗಳೂರು ನಗರದ ಸ್ಕೌಟ್ ಕ್ಲಬ್ಬಿನವರು ಕೋಟೆ ಸ್ಕೌಟ್ ಕಾರ್ಯಾಲಯದಲ್ಲಿ ಮೈಸೂರು ಸ್ಕೌಟ್ ಚೀಫ್ ಕಮಿಶನರಾಗಿ ದಿವಂಗತರಾದ ರಾಜ ಧರ್ಮಪ್ರಸಕ್ತ ಜಸ್ಟಿಸ್ ಕೆ. ಶಂಕರ ನಾರಾಯಣರಾಯರ ಸ್ಮಾರಕ ದಿನವನ್ನು ಶ್ರೀ. ಎಸ್. ರಾಮಚಂದ್ರ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು.

ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಪದ್ಧತಿಯ ಶಾಲೆಯಲ್ಲಿ ಮೆಡಿಕಲ್ ಆಫೀಸರರಾಗಿರುವ ಡಾ. ಸಿ. ದ್ವಾರಕಾನಾಥರನ್ನು ಭಾರತ ಸರಕಾರದಿಂದ ನಿಯುಕ್ತವಾದ ಚೋಪ್ರಾ ಸಮಿತಿಯಲ್ಲಿ ಕೆಲಸಮಾಡಲು ಆಹ್ವಾನಿಸಲಾಗಿದೆಯೆಂದು ಗೊತ್ತಾಗಿದೆ.

ಬೆಂಗಳೂರು ಅನೇಕಲ್ಲು ರಸ್ತೆಯಲ್ಲಿರುವ ಗೊಟ್ಟಿಗೆರೆಯಲ್ಲಿರುವ ತಾ. ೧೬ ರಲ್ಲಿ ಗಾಂಧೀ ಜಯಂತಿಯು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.



ಮುಂಬಯಿ ಶೇರ ಪೇಟೆ

ಆಕ್ಟೋಬರ ತಾ ೨೦—ಪ್ರಾರಂಭಕ್ಕೆ ಟಾಟಾ ಸ್ಟೀಲ ಡೆಫರ್ಡ ಶೇರುಗಳು ರೂ. ೧೭೩೦ ಕ್ಕೆ ಇದ್ದು ರೂ. ೧೭೨೦ ಕ್ಕೆ ಇಳಿದು ೧೭೪೭ ರವರೆಗೂ ಸಾವಕಾಶವಾಗಿ ಏರಿದವು. ಈ ಮುಂದೆ ಏರದಂತೆ ತಡೆಗಟ್ಟಲ್ಪಟ್ಟ ಪೇಟೆಯ ಚಟುವಟಿಕೆ ರೂ. ೧೭೩೭ ಕ್ಕೆ ಪರಿದಾಡಿತು. ಸಿವಾ ರೂ. ೩೫೨ ರಲ್ಲಿ ಪ್ರಾರಂಭಿಸಿ ರೂ. ೩೪೮ ಕ್ಕೆ ಇಳಿದು ಮತ್ತೆ ರೂ ೩೫೨ ರ ಮನೆ ಮುಟ್ಟಿ ರೂ. ೩೫೦ ಕ್ಕೆ ನೆಲೆಗೊಂಡಿತು. ಮುಂಬಯಿ ಡಾಯಿಂಗ ರೂ. ೧೮೫೦ ರಲ್ಲಿ ತೆರೆದು ರೂ. ೧೭೪೦ ಕ್ಕೆ ಇಳಿದು ಮುಂದೆ ರೂ. ೧೮೫೭ ರ ವರೆಗೂ ಏರಿತು. ಕೋಹಿನೂರ ರೂ. ೫೪೫ ರಲ್ಲಿ ಪ್ರಾರಂಭವಾಗಿ ರೂ. ೫೪೩ ರ ಮನೆಗಿಳಿದು ರೂ ೬೪೮ ಕ್ಕೆ ಏರಿದವು.

ಬಂಗಾರ ಬೆಳ್ಳಿ

ಆಕ್ಟೋಬರ ೨೦-ವಾಯಿದೆ ಬೆಳ್ಳಿಯು ಇಂದು ರೂ. ೧೫೩/೪ ರಲ್ಲಿ ತೆರೆದು ರೂ ೧೫೪ ಕ್ಕೆ ಏರಿಕೊಂಡಿತು. ಸಿದ್ಧ ಬೆಳ್ಳಿಗೆ ರೂ. ೧೫೩/೦೪ ಬೆಲೆಯಿತ್ತು. ವಾಯಿದೆ ಬಂಗಾರವು ರೂ ೧೧೮/೪ ಕ್ಕೆ ತೆರೆದು ರೂ- ೧೧೦/೮ ಕ್ಕೆ ನಿಂತಿತು. ಸಿದ್ಧ ಬಂಗಾರದ ಬೆಲೆಯು ರೂ. ೧೧೮/೧೪ ಇತ್ತು. ಸಾವರಿನ ಮುಟ್ಟ ರೂ. ೬೭ ಕ್ಕಿತ್ತು.

ಬೈಗಿನ ಹೊತ್ತಿಗೆ ಪೇಟೆಯಲ್ಲಿ ಹೊಯ್ದಾಟವಿರಲಿಲ್ಲ ಹಾಗೂ ಕೆಳಗಿನ ಬೆಲೆಗಳಿಂದ ಪೇಟೆ ಮುಚ್ಚಿಕೊಂಡಿತು.

ಸಿದ್ಧ ಬೆಳ್ಳಿ	೧೫೪—೧೨—೦
ವಾಯಿದೆ ಬೆಳ್ಳಿ	೧೫೪—೧೪—೦
ಸಿದ್ಧ ಬಂಗಾರ	೧೧೧—೧೦—೦
ವಾಯಿದೆ ಬಂಗಾರ	೧೧೧—೪—೦

ಅರಳೆ

ಆಕ್ಟೋಬರ ೨೦

ಅರಳೆ ಪೇಟೆ ಇಂದು ನಿಧಾನವಾಗಿತ್ತು. ವ್ಯವಹಾರ ಹಠೋಟಿಯಲ್ಲಿತ್ತು. ಬಟ್ಟೆಯ ಬೆಲೆಗಳ ಏರಿಕೆಯ ಬಗ್ಗೆ ಬಂದ ವಾರ್ತೆಯ ಮೂಲಕ ಈ ಪೇಟೆ ಮಂದವಾಗಿ ಪ್ರಾರಂಭವಾಯ್ತು. ಜನವರಿ ಹರಿಚಿಕೆಯ ಪೇಟೆ ರೂ. ೪೬೫ ರಿಂದ ಪ್ರಾರಂಭವಾಗಬಹುದೆಂದು ನಿರೀಕ್ಷೆ ಇತ್ತು; ಆದರೆ ಈ ಪೇಟೆ ರೂ ೪೬೩ ರಿಂದ ಮೊದಲಿಸಿ ರೂ. ೪೬೨/೮ ಕ್ಕೆ ಇಳಿದಿತು. ಮುಂದೆ ಹೊಯ್ದಾಟ ತಗ್ಗಿ ರೂ. ೪೬೨/೧೨ ಕ್ಕೆ ನಿಂತಿತು. ಮಾರ್ಚದ ಮುಟ್ಟ ರೂ. ೪೬೬ ಕ್ಕೆ ಇತ್ತು.

ಸ್ವಲ್ಪ ತರುವಾಯದಲ್ಲಿ ಕೊಳ್ಳುವದು ತುಸು ಹೆಚ್ಚಿ ಜನವರಿ ಹಂಚಿಕೆಯು ರೂ. ೪೬೩/೪ ಕ್ಕೆ ಮುಟ್ಟಿತು. ಮತ್ತು ಮಾರ್ಚ ರೂ. ೪೬೭/೪ ಕ್ಕೆ ತಲುಪಿತು.

ಮುಂದೆ ಕೊಳ್ಳುವದು ಇನ್ನೂ ಹೆಚ್ಚಲು ಜನವರಿಯು ರೂ ೪೬೫ ಕ್ಕೆ ಏರಿ ಬೈಗಿನ ೪—೩೦ ಕ್ಕೆ ಪೇಟೆ ಈ ಕೆಳಗಿನಂತೆ ಮುಚ್ಚಿಕೊಂಡಿತು.

ಐ. ಸಿ. ಸಿ. ಜನವರಿ	೪೬೪—೮—೦
ಐ. ಸಿ. ಸಿ. ಮಾರ್ಚ	೪೬೮—೦—೦
ಐ. ಸಿ. ಸಿ. ಮೇ	೪೭೪—೧೨—೦
ಐ. ಸಿ. ಸಿ. ಜುಲೈ	೪೮೨—೮—೦
ಐ. ಸಿ. ಸಿ. ಸೆಪ್ಟಂಬರ	೪೮೭—೮—೦

ಶಿವಮೊಗ್ಗೆ ಅಡಿಕೆ

ದೇಶಾವರ	ನಂ ೧	ಮಣ ೧ ಕ್ಕೆ	೫೫-೫೮
,,	,, ೨	,, ,,	೫೪-೫೫
,,	,, ೩	,, ,,	೫೦-೫೩
ರಾಜಾ ಅಲವು			೪೭-೫೦
ತೊರಸಾಲು			೪೭-೫೧
ಚೆಟ್ಟಿ ಮಂತಿ			೩೦-೩೨
ಚೆಟ್ಟಿ			೨೫-೩೦

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ.	೧	೨೭೦-೨೮೦
,,	೨	೨೫೫-೨೬೫
,,	೩	೨೪೦-೨೫೦
ಹಳೇ ಜಯವಂತ ಹತ್ತಿ		೨೯೦-೩೦೨
ಜಿನ ಹೊಸದು		೧೮೫-೧೯೫
ಜಿನ ಹಳೇದು		೨೦೦-೨೧೧
ಡಬಲರೋಲ		೧೮೫-೧೯೫
ಸಾಜಿನ		೧೯೦-೧೯೨
ಅಪಲಂಡ ಹತ್ತಿ		೨೮೦-೨೯೦

ಬೆಂಗಳೂರು ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ಜಿ, ಪಿ, ಕೃಷ್ಣರಾಯರು ಒಂದು ಪ್ರಕಟನೆಯಲ್ಲಿ ಹೋರಾಟದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳನ್ನಭಿನಂದಿಸಿ ಸತ್ತವರಿಗೆ ಸಂತಾಪ ವ್ಯಕ್ತಪಡಿಸಿ ಉಳಿದವರ ಅನುಕೂಲಕ್ಕಾಗಿ ಪರೀಕ್ಷೆಗಳು ಮುಂದೆ ಹೋಗಬೇಕೆಂದೂ ಗೋಲಿಬಾರು ನಡೆಸಿದ ಪೋಲೀಸರನ್ನು ವಿಚಾರಣೆಗೆ ಗುರಿಪಡಿಸಬೇಕೆಂದೂ ಹೇಳಿದ್ದಾರೆ.

ಬೆಂಗಳೂರಿನ ಚಾಮರಾಜಪೇಟೆಯ ಪ್ರಸಿದ್ಧ ಗಂಧಿಗೆ ಅಂಗಡಿಕಾರರಾದ ಶ್ರೀ. ಬಿ. ರಾಯಪ್ಪ ಶೆಟ್ಟರು ನಿಧನ ಹೊಂದಿದರೆಂದು ತಿಳಿಯುತ್ತದೆ. ಇವರು ಬಹಳ ಜನಪ್ರಿಯರೂ ಜನಹಿತೈಷಿಗಳೂ ಆಗಿದ್ದರಿಂದ ಜನರು ಇವರ ನಿಧನದ ಬಗ್ಗೆ ವಿಷಾದ ಪಟ್ಟರು.

ತಾ. ೧೬ ರ ಸಂಜೆ ಬೆಂಗಳೂರಿನ ಬಸವನಗುಡಿ ಕಾಂಗ್ರೆಸ ಸಮಿತಿಯ ಸದಸ್ಯರಾದ ಶ್ರೀ ಮುನಿಸಲೋಜಮ್ಮರವರ ಅಧ್ಯಕ್ಷತೆಯಲ್ಲಿ ಕಮ್ಯೂನಿಸ್ಟರ ಸಭೆ ಸೇರಿ ಅನೇಕರ ಭಾಷಣ ನಡೆದು ಕಾಂಗ್ರೆಸ ಸರಕಾರಕ್ಕೆ ಪೂರ್ಣ ಬೆಂಬಲ ನೀಡಬೇಕೆಂದು ಠೀವರ್ಮಾನಿಸಿತು.

ಶ್ರೀ ಕೆ ಶ್ಯಾಮರಾಜ ಅಯ್ಯಂಗಾರ್ಯರು ತಾ. ೧೮ ರಲ್ಲಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಶ್ರೀ ಮಾಧ್ವಸಂಘದ ಹಿಂಭಾಗದ ಮೈದಾನದಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿ ದುಡಿಮೆಯ ಕರ್ತವ್ಯವನ್ನು ವಿವರಿಸಿದರು.

ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಸಿಸಿಕ ಸರ್ಕಲ್ಲಿಗೆ ತಿಲಕ್ ಸರ್ಕಲ್ ಎಂದು ಜನರು ನಾಮಕರಣ ಮಾಡಿದ್ದಾರೆ. ತಾ. ೧೯ ರ ಬೆಳಗ್ಗೆ ಅಚೌಕದಲ್ಲಿ ಶ್ರೀ ಕೆ. ಟಿ. ಭಾಷ್ಯಂರವರು ರಾಷ್ಟ್ರಧ್ವಜಾರೋಹಣ ಮಾಡಿ ಲೋಕಮಾನ್ಯರ ಆದರ್ಶವನ್ನು ವಿವರಿಸಿದರು.

ಬೆಂಗಳೂರು ನಗರದ ವಿವಿಧ ವ್ಯಾಪಾರಸಂಸ್ಥೆಗಳು ಅಕ್ಟೋಬರ ೧೪ ರಲ್ಲಿ ಚಿಂತಪಲ್ಲಿ ವೆಂಕಟರಾಮಯ್ಯನವರ ಛತ್ರದಲ್ಲಿ ಸೇರಿ ಶ್ರೀಮನ್ಮಹಾರಾಜರು ಜವಾಬ್ದಾರ ಸರಕಾರವನ್ನು ದಯಪಾಲಿಸಿದ್ದಕ್ಕಾಗಿ ಕೃತಜ್ಞತೆಯನ್ನರ್ಪಿಸುವ ನಿರ್ಣಯವನ್ನು ಸ್ವೀಕರಿಸಿದರು.

ಮೈಸೂರು ಸಂಸ್ಥಾನಕ್ಕೆ ಈ ತಿಂಗಳು ಗೋಧಿ ನಿಗದಿ ಮಾಡಲಾಗಿದೆಯೆಂದೂ ೧೫ ದಿನಗಳೊಳಗಾಗಿ ಸಂಪೂರ್ಣವಾಗಿ ಪೂರಯಿಸಲ್ಪಡುವದೆಂದೂ ತಿಳಿದುಬಂದಿದೆ.

ಸಿಂಧ ಪ್ರಾಂತದಿಂದ ಈಗಾಗಲೆ ಸುಮಾರು ಮುನ್ನೂರು ಮಂದಿ ಮುಸ್ಲಿಮೇತರ ನಿರಾಶ್ರಿತರು ಮೈಸೂರು ಸಂಸ್ಥಾನದಲ್ಲಿ ನೆಲೆಸುವ ಉದ್ದೇಶದಿಂದ ಬೆಂಗಳೂರಿಗೆ ಬಂದಿದ್ದಾರೆ. ಆಹಾರ ಬಟ್ಟೆ ಮತ್ತು ಇತರ ಯಾವ ಅನುಕೂಲತೆಯೂ ಅವರಿಗಿಲ್ಲದೆ ಅವರ ಸ್ಥಿತಿಯು ಶೋಚನೀಯವಾಗಿದೆಯೆಂಬ ಅಂಶವನ್ನು ತಿಳಿದು ಮೈ. ಸಂ. ರೆಡ್ ಕ್ರಾಸ್ ಸಂಸ್ಥೆಯವರು ಅವರಿಗೆ ಅವನ್ನೆಲ್ಲ ಒದಗಿಸಲು ನೆರವಾದರು.

ಸಂಸ್ಥಾನದಲ್ಲಿ ಸಂಪೂರ್ಣ ಜವಾಬುದಾರಿ ಸರಕಾರ ಸ್ಥಾಪಿಸಲು ಮಹಾರಾಜರು ಅವಕಾಶವಿತ್ತುದಕ್ಕಾಗಿ ಅಭಿನಂದನೆ ಸೂಚಿಸುವ ನಿರ್ಣಯವನ್ನು ಬೆಂಗಳೂರಿನಲ್ಲಿರುವ ಮೈಸೂರು ಚೇಂಬರ್ ಅಫ್ ಕಾಮರ್ಸಿನ ಸಭೆಯಲ್ಲಿ ಅಂಗೀಕರಿಸಲಾಯಿತು.

ಮಂಗಳೂರ ಮುನಸಿಪಾಲಟಿಯ ಚುನಾಯಿತ ಸದಸ್ಯರಸಭೆಯು ತಾ ೧೪ ರಿಂದ ಹಂಗಾಮಿ ಕಲೆಕ್ಟರಾದ ಶ್ರೀ ಎಸ್. ಬಾಲಾಜಿರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಆಗ ಸದಸ್ಯರೆಲ್ಲರ ಪ್ರಮಾಣ ಸ್ವೀಕಾರ ನಡೆದಿತು.

ಉಡಪಿಯ ಶ್ರೀ ಕೃಷ್ಣಮಠದಲ್ಲಿ ಪರ್ಯಾಯ ಪೀಠಸ್ಥರಾದ ಶಿರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಸ್ವಾಮಿಗಳವರು ತಮ್ಮ ಗುರುಗಳ, ಆರಾಧನೆಯನ್ನು ತಾ ೨೫ ರಲ್ಲಿ ಸಾಂಗವಾಗಿ ನೆರವೇರಿಸಿದರು.

ಉಡುಪಿ ತಾಲೂಕಿನ ಸಹಕಾರಿಗಳ ಪರಿಷತ್ತು ಸಂಘ ಕೂಟದ ಆಫೀಸಿನಲ್ಲಿ ತಾ೧೧ ರಲ್ಲಿ ವಕೀಲ ಶ್ರೀ ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರುಗಿತು. ಇಂದಿನ ಆಹಾರ ಪ್ರಶ್ನೆ ಅಕ್ಕಿ ಭತ್ತ ಸಂಗ್ರಹ ಮತ್ತು ವಿವರಣೆಗಳ ರೀತಿನೀತಿಗಳು ಸುಗಮವಾಗಿ ರೈತರಿಗೂ ಗ್ರಾಹಕ ಜನತೆಗಳ ಹೆಚ್ಚಿನ ಅನುಕೂಲವು ವ್ಯವಹಾರ್ಯವೂ ಆಗಬೇಕೆಂಬ ಗೊತ್ತುವಳಿಗಳು ಪಾಸಾದವು.

ದಕ್ಷಿಣ ಕನ್ನಡ

ಜಿಲ್ಹಾ ಸ್ಕೌಟ ಪರಿಷತ್ತು ತಾ ೧೨ ರಲ್ಲಿ ಉಡುಪಿಯ ಮುಕುಂದನಿವಾಸದಲ್ಲಿ ಶ್ರೀ ಎಂ. ರಾಜಗೋಪಾಲನ್ನರ ಅಧ್ಯಕ್ಷತೆಯಲ್ಲಿ ಜರುಗಿತು.

ತಾ ೧೬ ರಂದು ಕುಂದಾಪುರ ಸಬ್ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರುಗಿದ ಉಡುಪಿಯ ನಗರಸಭೆಯ ಹೊಸ ಸದಸ್ಯರ ಸಭೆಯಲ್ಲಿ ಶ್ರೀ ಪಿ. ಉಪೇಂದ್ರ ನಾಯಕರು ನಗರ ಸಭಾಧ್ಯಕ್ಷರಾಗಿ ಆರಿಸಲ್ಪಟ್ಟರು.

ತಾ ೨ ಮತ್ತು ೯ ರಲ್ಲಿ ಮಹಾತ್ಮಾ ಗಾಂಧಿಯವರ ಜನ್ಮದಿನೋತ್ಸವವನ್ನು ಹಾಲಾಡಿ ರಾಷ್ಟ್ರೀಯ ಸೇವಾದಲದ ಮುಂದಾಳ್ತನದಲ್ಲಿ ಆಚರಿಸಲಾಯಿತು.

ಮೂಡಬಿದ್ರೆಯ ಸರಸ್ವತಿ ಸೇವಾಸಂಘದ ಆಶ್ರಯದಲ್ಲಿ ದಸರಾ ಮಹೋತ್ಸವ ಪ್ರಾರಂಭವಾಗಿ ತಾ ೧೫ ರಂದು ಪ್ರಾತಃಕಾಲ ಧ್ವಜಾರೋಹಣ ವಂದನಗಳು ನಡೆದವು. ಪ್ರತಿದಿನ ಒಂದೊಂದು ವಿಷಯದ ಬಗ್ಗೆ ನುರಿತವರ ಭಾಷಣ, ವಿವಿಧ ವಿನೋದಾವಳಿ ನಡೆದವು.

ತಾ ೧೧-೧೦-೪೭ ನೇ ಶನಿವಾರ ಮೂಡಬಿದ್ರೆಯ ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯ ವಿದ್ಯಾರ್ಥಿಗಳು ಗುರುಗಳೊಂದಿಗೆ ಗ್ರಾಮಸೇವಾ ಕಾರ್ಯರ್ಥವಾಗಿ ಸಿದ್ಧಕಟ್ಟೆಗೆ ಪ್ರವಾಸಮಾಡಿದರು. ತರಬೇತಿ ಶಾಲಾ ವಿದ್ಯಾರ್ಥಿಗಳೂ ಸಿದ್ಧಕಟ್ಟೆ ಶಾಲೆಯ ಮಕ್ಕಳೂ ಹಲವಾರು ಚಟುವಟಿಕೆಗಳನ್ನು ಪ್ರದರ್ಶಿಸಿದರು. ಶಾಲೆಯ ಅಧ್ಯಾಪಕರೂ ಊರ ಮಹನೀಯರೂ ಗ್ರಾಮಸೇವಾಕಾರ್ಯದಲ್ಲಿ ತುಂಬ ನೆರವಾದರು. ಬುನಾದಿ ಶಿಕ್ಷಣ ಶಾಲೆಯವರ ರಚನಾತ್ಮಕ ಕಾರ್ಯಕಲಾಪಗಳು ಇದೇರೀತಿ ಮುಂದುವರಿಯಲಿರುವವೆಂದು ತಿಳಿದು ಬರುತ್ತದೆ.

ಸಿಂಡಿಕೇಟ್ ಬ್ಯಾಂಕಿನ ಶಾಖೆಯನ್ನು ತೆರೆಯುವ ನಿಮಿತ್ತ ಕಳೆದ ತಿಂಗಳು ತಾ ೨೪ ರಲ್ಲಿ ಪುತ್ತೂರಿನ ಸ್ಥಳೀಯ ಕೋಆಪರೆಟಿವ್ ಕಟ್ಟಡದಲ್ಲಿ ಶ್ರೀ ವಕೀಲ ಪುಂಡಲೀಕ ಭಟ್ಟರು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಮಾನ್ಯ ಡಿ. ಮುನ್ಸಿಫ್ ಶಿಮಿಕುಲಾಸೊ ಇವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮಗಳೆಲ್ಲ ಸಾಂಗವಾಗಿ ನೆರವೇರಿಸಲ್ಪಟ್ಟವು.


ಪುತ್ತೂರ ಸ್ಥಳೀಯ ಪಂಚಾಯತ ಬೋರ್ಡಿಗೆ ಓರ್ವ ಸೆನಿಟರಿ ಇನ್‌ಸ್ಪೆಕ್ಟರರ ಅವಶ್ಯಕತೆ ಒದೆದು ಕಾಣುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಹೆಲ್ತ ಇನ್‌ಸ್ಪೆಕ್ಟರರೊಬ್ಬರಿಂದಲೆ ಕೆಲಸ ಸಾಗದು. ವರ್ಷದಿಂದ ವರ್ಷಕ್ಕೆ ಕಟ್ಟಡಗಳು ಹೆಚ್ಚುತ್ತಿದ್ದು ಪಟ್ಟಣದ ಬಳಕೆ ಬಸಳವಾಗುತ್ತಿದೆ. ನಗರದ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಪಟ್ಟಣದ ಹೊಸ ಕಟ್ಟಡಗಳು ಶಾಸ್ತ್ರೋಕ್ತವಾಗಿ ರಚಿತವಾಗುವಂತೆ ನೋಡಿಕೊಳ್ಳಲು ಇನ್ನೋರ್ವ ಸೆನಿಟರಿ ಇನ್‌ಸ್ಪೆಕ್ಟರರು ಬೇಕೇಬೇಕೆಂಬುದು ಹೊಳೆಯುತ್ತದೆ.

ಮಾನ್ಯಮಂತ್ರಿ ಶ್ರೀ ಸಿತಾರಾಮರೆಡ್ಡಿಯವರು ತಾ ೧ ರಂದು ಪುತ್ತೂರ ತಾಲೂಕ ಆಫೀಸಿಗೆ ಆಗಮಿಸಿ ಮದ್ಯಪಾನ ನಿರೋಧ ಚಟುವಟಿಕೆಯ ಬಗ್ಗೆ ಜರುಗಿದ ಕಾರ್ಯಕ್ರಮದಲ್ಲಿ ಭಾಗವಹಿಸಿ ಭಾಷಣವಿತ್ತರು.

ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಳುಕುಂದದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು ೧೯೪೭ ನೆಯ ನವೆಂಬರ ತಾ ೨೮ ರಿಂದ ಡಿಶಂಬರ ತಾ ೧೨ ರ ತನಕ ಜರುಗುವದು. ಎಂದರೆ ಸಂತೆಯು ಕಾರ್ತಿಕ ಪೌರ್ಣಿಮೆಯ ದಿನ ಪ್ರಾರಂಭವಾಗಿ ಕಾರ್ತಿಕ ಅಮಾವಾಸ್ಯೆಯ ದಿನ ಸುಬ್ರಹ್ಮಣ್ಯ ದೀಪೋತ್ಸವದ ಪರಿಯಂತ ಜರುಗುವದು. ಈ ಸಂತೆಗೆ ಮೈಸೂರು ಪ್ರಾಂತದಿಂದ ದನಗಳನ್ನು ತಂದು ಮಾರಬಯಸುವ ವ್ಯಾಪಾರಿಗಳು ಮೈಸೂರ ಪ್ರಾಂತ್ಯಕ್ಕೆ ಸಂಬಂಧಪಟ್ಟ ಜಿಲ್ಹಾ ಮ್ಯಾಜಿಸ್ಟ್ರೇಟರಿಂದ ಅವಶ್ಯವುಳ್ಳ ರಹದಾರಿಗಳನ್ನು ಮುಂಚಿತವಾಗಿಯೇ ಪಡಕೊಳ್ಳತಕ್ಕದ್ದೆಂದು ಪುತ್ತೂರು ಗಡಿ ಆಫೀಸರರು ಪ್ರಕಟಿಸುತ್ತಾರೆ.

ಪುತ್ತೂರ ತಾಲೂಕಿನ ವಿಟ್ಲ ಎಂಬಲ್ಲಿಂದ ೨ ಮೈಲು ದೂರದಲ್ಲಿದ್ದ ಕಂಬಳಿ ಮರೆಯಲ್ಲಿ ತಾ ೧೦ ರಂದು ಶ್ರೀ ವರುಂಬಡಿ ಕೃಷ್ಣಭಟ್ಟರು ಗುಂಡಿಟ್ಟು ಒಂದು ಹುಲಿಯನ್ನು ಕೊಂದಿರುತ್ತಾರೆ.

ಕಾಸರಗೋಡದಲ್ಲಿ ಶ್ರೀ ಮಲ್ಲಿಕಾರ್ಜುನ ಪಾಂಡುರಂಗ ಮತ್ತು ವೆಂಕಟರಮಣ ದೇವಸ್ಥಾನಗಳಿಗೆ ತಾ.೬-೧೦-೪೭ ರಂದು ಸೋಮವಾರ ಹರಿಜನ ಪ್ರವೇಶವಾಯಿತು. ಊರ ಪ್ರಮುಖ ಮಹನೀಯರೂ ಮಹಿಳೆಯರೂ ಆ ಕಾಲಕ್ಕೆ ಬಂದಿದ್ದರು.



ಭಾರತದಿಂದ ತೊಲಗಿರಿ

ಗ್ರಂಥಕರ್ತರು ಗಾಂಧೀಜಿ. ಸಂಪಾದಕರು ಶ್ರೀಗಳಾದ ಆರ್. ಕೆ. ಪ್ರಭು ಮತ್ತು ಯು. ಆರ್. ರಾವ್ ಅವರು, ಪ್ರಕಾಶಕರು ಶ್ರೀ. ರಂಗರಾವ ದಿವಾಕರರು, ಕರ್ನಾಟಕ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳು, ಹುಬ್ಬಳ್ಳಿ ಪುಟ ೧೪೦ ಬೆಲೆ ರೂ. ೧।.

ಪದ್ಮಾ ಪ್ರಕಟನಾಲಯದ "ಕ್ವಿಟ್ ಇಂಡಿಯಾ" ಗ್ರಂಥದ ಭಾಷಾಂತರವಿದು. ಇದರೊಟ್ಟಿಗೆ "ಭಾರತದಿಂದ ತೊಲಗಿರಿ" ಎಂಬ ಗೊತ್ತುವಳಿಯನ್ನೂ ಗಾಂಧೀಜಿಯ ಮುಕ್ತಾಯ ಭಾಷಣವನ್ನೂ ಕೊಡಲಾಗಿದೆ. ಪುಸ್ತಕದಲ್ಲಿ ೧೧ ಪ್ರಕರಣ ಹಾಗೂ ೩ ಪರಿಶಿಷ್ಟಗಳಿವೆ. ಮೂಲ ಗ್ರಂಥವು ಗಾಂಧೀಜಿ ವಿಶಿಷ್ಟ ಸಂದರ್ಭಗಳಲ್ಲಿ ಸ್ವಾತಂತ್ರ್ಯ ಸಮರದ ನಾನಾ ಮುಖಗಳನ್ನು ಸಮರ್ಥಿಸಿ ಮಾತಾಡಿದುದರ ಸಂಗ್ರಹರೂಪದ್ದಾಗಿದೆ. ಅದನ್ನು ಯಥಾವತ್ತಾಗಿ ಪ್ರಸ್ತುತ ಗ್ರಂಥದಲ್ಲಿ ಅನುವಾದಿಸಲಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಮುಖ್ಯ ವಿವರಗಳನ್ನೂ ಅದರಲ್ಲಿ ಗಾಂಧೀಜಿ ವಹಿಸಿದ ಪಾತ್ರವನ್ನೂ ಗ್ರಂಥಾವಲೋಕನದಿಂದ ತಿಳಿಯಬಹುದು. ಇಂಥ ಐತಿಹಾಸಿಕವೂ ಚರಿತ್ರಾರ್ಹವೂ ಆದ ಕೃತಿಯನ್ನು ಕನ್ನಡಿಗರು ಸ್ವಾಗತಿಸದಿರಲಾರರೆಂದು ನಮ್ಮ ದೃಢ ವಿಶ್ವಾಸ.

ಸೊಹ್ರಾಬ್ ಮತ್ತು ರುಸ್ತುಮ್

ಅನುವಾದಕರು ಶ್ರೀ ಎಲ್. ಗುಂಡಪ್ಪ, ಎಂ. ಎ. ಪ್ರಕಾಶಕರು ಎಸ್. ಎಸ್. ಎನ್ ಬುಕ್ ಡಿಪೋ, ಬೆಂಗಳೂರ ನಗರ. ಪುಟ ೪೨. ಬೆಲೆ ರೂ. ೧।.

ಸೊಹ್ರಾಬ್ ಮತ್ತು ರುಸ್ತುಮರ ಕರುಣ ಕಥೆ, ವೀರಕಥೆ, ವಾತ್ಸಲ್ಯಕಥೆ 'ಷಹನಾಮ'ವೆಂಬ ಪಾರಸಿ ಗ್ರಂಥದಲ್ಲಿದೆ. ಅದರ ಆಂಗ್ಲಾನುವಾದವನ್ನು ಆಧರಿಸಿ ಪ್ರಸ್ತುತ ಕಥನ ಕವನವನ್ನು ರಚಿಸಲಾಗಿದೆ. ಈ ಹೊಸಗನ್ನಡದ ಹೊಸಕೃತಿ ಆಗಲೇ ತಕ್ಕಮಟ್ಟಿಗೆ ಜನಪ್ರಿಯವಾಗಿದೆ. ಅಚ್ಚುಕಟ್ಟಾಗಿ ಗದ್ಯ ವಿವರಣ ಪೂರ್ವಕ ಪ್ರಕಾಶಿತವಾದ ಈ ಕಥನ ಕವನವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ.

ಗಾಜಿನ ಬಳೆ ಮತ್ತು ಇತರ ಕಥೆಗಳು

ಬರೆದವರು ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಪ್ರಕಾಶಕರು ವಸಂತಪ್ರೇಮಿ ಮಂಡಲಿ, ಮಂಗಳೂರು ಪುಟ ೧೦೪. ಬೆಲೆ ರೂ. ೧-೬-೦.

ಈ ಕಥಾ ಸಂಗ್ರಹದಲ್ಲಿ ೫ ಕಥೆಗಳಿವೆ. ಮೊದಲನೆಯದಾದ 'ಗಾಜಿನ ಬಳೆ' ಯಲ್ಲಿ ಸ್ತ್ರೀ ಪ್ರೇಮಕ್ಕಾಗಿ ಸತ್ಯಾಗ್ರಹ ಮಾಡಲು ಧುಮುಕಿದ ಪ್ರೊಫೆಸರರೊಬ್ಬರ ಮೋಹಭ್ರಂಶನ ವರ್ಣಿತವಾಗಿದೆ. ಎರಡನೆಯ 'ಶ್ಯಾಮರಾಯರ ಪಕ್ಷೋಕ್ತಿ' ನಲ್ಲಿ ಶ್ಯಾಮರಾಯರು ಸ್ಫುರದ್ರೂಪಿಯೊಬ್ಬಳ ಪತಿತಳಾದ ಪತಿಪ್ರೇಮದ ಪುನರುದ್ಧಾರ ಮಾಡಿದ ಕಥೆಯಿದೆ. 'ಒಂದು ನಾಟಕ' ದಲ್ಲಿ ತರುಣ ತರುಣಿಯರಿಬ್ಬರ ಮದುವೆಗೆ ನಾಟಕವೊಂದದರಲ್ಲಿ ಅವರಿಬ್ಬರಿಗೂ ಪಾತ್ರ ವಹಿಸುವದೇ ಕಾರಣವಾಗುವುದನ್ನು ಚಿತ್ರಿಸಲಾಗಿದೆ. 'ನನ್ನ ಪತ್ರ' ದಲ್ಲಿ ಪ್ರಮಾದಜನ್ಯ ಪ್ರಣಯಕಲಹ ಮತ್ತು ಪುನಃ ಸಂಧಾನಗಳು ವಿವರಿಸಲ್ಪಟ್ಟಿವೆ. 'ಸಂದೇಹ'ದಲ್ಲಿ ವೃಥಾ ಸಂದೇಹದಿಂದ ಪತ್ನಿಯ ಆತ್ಮಹತ್ಯೆಗೆ ಕಾರಣನಾಗಿ, ಅದರಿಂದ ಸಂದೇಹನಷ್ಟವುಂಟಾದ ಕೂಡಲೆ ವಿರಾಗಿಯಾಗಿ ಪಶ್ಚಾತ್ತಾಪ ಹೊಂದಿದ ಕಥಾನಾಯಕನು ತೀರ್ಥಯಾತ್ರೆಗೆ ಹೊರಟ ಕಥೆಯಿದೆ. ಈ ಲಘುಕತೆಗಳಲ್ಲಿ ಶ್ರೀ ಶಂಕರ ಭಟ್ಟರು ಕೆಲವು ಸಾಮಾನ್ಯ ಜೀವನ ಚಿತ್ರಗಳನ್ನು ಕೊಟ್ಟಿದ್ದಾರೆ. ಪ್ರಬುದ್ಧ ಲೇಖಕರಾದ ಇವರು ಬರೆದುದರಿಂದ ಮಾತ್ರ ಈ ಕಥೆಗಳು ಇನ್ನೂ ರಸವತ್ತಾಗಿರಬೇಕಾಗಿತ್ತು ಎಂದು ಹೇಳಬೇಕೆನಿಸುತ್ತವೆ. ಆದರೂ ಒಟ್ಟಿನ ಮೇಲೆ ಕಥೆಗಳು ಓದುಗರಿಗೆ ಬೇಸರವುಂಟುಮಾಡುವಂತಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಕ್ಷಾಮ ನಿವಾರಣಾ ವರದಿ

ಪ್ರಕಾಶಕರು ಚಿತ್ರದುರ್ಗ ಜಿಲ್ಹಾ ಕ್ಷಾಮ ನಿವಾರಣಾ ಸಮಿತಿಯವರು. ಪುಟಗಳು ೬೮.

ಚಿತ್ರದುರ್ಗ ಜಿಲ್ಹೆಯಲ್ಲಿ ಕ್ಷಾಮ ಕಾಲಬಂದಿದ್ದಾಗ ಮೈಸೂರಿನ ಅಧಿಕಾರಿಗಳೂ ಅಧಿಕಾರೇತರರೂ ಸಹಕಾರದಿಂದ ಕ್ಷಾಮ ನಿವಾರಣೆಗಾಗಿ ಮಾಡಿದ ನಾನಾ ಮುಖದ ಸತ್ಪ್ರಯತ್ನಗಳ ವಿವರವನ್ನು ಈ ವರದಿಯಲ್ಲಿ ಕಾಣಬಹುದು.

ನಿರಾಶ್ರಿತರಿಗೆ ಅನ್ನ ಬಟ್ಟೆ ಒದಗಿಸಲು ಮತ್ತು ಸಂಕಷ್ಟಕ್ಕೆ ತುತ್ತಾದ ರೈತವರ್ಗಕ್ಕೆ ಸಹಾಯ ಮಾಡಲು ಕೈಕೊಳ್ಳಲಾದ ಅನೇಕ ವಿವಿಧ ಕಾರ್ಯಗಳಲ್ಲಿ ಕಂದಾಯ ಮಾಫಿ ಮಾಡಿದ್ದು, ಹವಸದ ಹಂಚಿಕೆ, ದನಗಳ ರಕ್ಷಣೆ, ಪರಿಹಾರ ಕಾಮಗಾರಿಗಳು ಮುಂತಾದುವು ಬಹು ಮುಖ್ಯವಾದುವು. ಇದರ ವಾಚನದಿಂದ ಉಳಿದ ಕ್ಷಾಮ ನಿವಾರಣಾ ಸಮಿತಿಗಳು ಅನೇಕ ಉತ್ತಮ ಪಾಠಗಳನ್ನು ಕಲಿಯಬಹುದಾಗಿದೆ.

ಗಣೇಶದರ್ಶನ

ಬರೆದವರು ಶ್ರೀ ಪು. ತಿ. ನರಸಿಂಹಾಚಾರ್ಯರು; ಪ್ರಕಾಶಕರು ಕಾವ್ಯಾಲಯ ಮೈಸೂರು. ಪುಟ ೮೩. ಬೆಲೆ ರೂ. ೨॥

"ಗಣೇಶದರ್ಶನ"ವೆಂಬ ಕವನ ಸಂಗ್ರಹದಲ್ಲಿ ೩೩ ಪದ್ಯಗಳಿವೆ. ಶ್ರೀ. ನರಸಿಂಹಾಚಾರ್ಯರ "ಅಹಲ್ಯೆ"ಯನ್ನು ಕಂಡವರು "ಗಣೇಶದರ್ಶನ"ದಿಂದ ನಿರಾಶರಾಗಬೇಕಾಗಿದೆ. ಅಲ್ಲಿರುವ ಪದ ವೈಚಿತ್ರಿ, ಬಂಧೂರ್ಜಿತ ಮತ್ತು ಭಾವಾವೇಶಗಳು ಇಲ್ಲಿರುವ ಒಂದು ಪದ್ಯದಲ್ಲೂ ಬಂದಿಲ್ಲ. ಇಲ್ಲಿಯ ಪ್ರಾಸದಲ್ಲಿ ಕೃತಕತೆ ಕಾಣುತ್ತದೆ, ಅರ್ಥಸ್ಫೂರ್ತಿಯ ಇಳಿಗಾಲವನ್ನು ಸೂಚಿಸುತ್ತದೆ. ಗದ್ಯತ್ವ ಬಹಳ ಕಡೆ ತಲೆಹಾಕಿದೆ, ಛಂದೋಭಂಗ ಮಿತಿಮೀರಿದೆ; ಇವು ಅಜ್ಞಾನಜನ್ಯಗಳಲ್ಲ, ಕುಜ್ಞಾನ ಜನ್ಯಗಳಾಗಿವೆ. ಶಕ್ತ ಕವಿಗಳಿಂದು ಹೀಗೇಕೆ ವಿವೇಕಭ್ರಷ್ಟರಾಗುತ್ತಿದ್ದಾರೋ ತಿಳಿಯದು. ಓದಲು ಬಾರದಂತೆ ಪದ್ಯ ಅನೇಕ ಕಡೆ ಕುಂಟುತ್ತದೆ. ವಾಕ್ಯರಚನೆಯ ಮಿತಾಕ್ಷರಿತ್ವ ಹೆಚ್ಚಾಗಿ ಸಂಶಯಪದಸಂಹತಿಗಳುಳಿದಿವೆ. ಕೆಲವು ಲಲಿತ ಹಾಸ್ಯ ಸಂದರ್ಭಗಳುಳ್ಳ ಹಗುರು ಭಾವಗಳು ಅಲ್ಲಲ್ಲಿ ಕಂಡು ಬಂದು ಓದುಗರಿಗೆ ಉಲ್ಲಾಸ ಕೊಡುತ್ತವೆ. 'ಗಣೇಶದರ್ಶನ', 'ಜುಟ್ಟು' ಎಂಬಲ್ಲಿ ಇಂಥವನ್ನು ಕಾಣಬಹುದು. ಛಂದೋವಿಕ್ಷೇಪವನ್ನು ಬದಿಗಿಟ್ಟರೆ 'ಚಿಕುಹೂ', 'ಮೂಡತುಹ ನದಿಯ' 'ಇರುಳು ಚಂದ್ರೋದಯ' ಮುಂತಾದ ವರ್ಣನಾಪ್ರಧಾನ ಪದ್ಯಗಳೆಲ್ಲ ಚೆನ್ನಾಗಿವೆ. ವಿಮರ್ಶಕನ ಕಷ್ಟವನ್ನು 'ಕಲ್ಪನೆ ಲಘು, ನುಡಿ ತುಸು ಬಿಗು, ಛಂದಸ್ಸೆಡವಟ್ಟು; ಜಲ್ಪನೆ ಬರಿ, ನೋಡಲದೆಂತಯ್ಯೋ ಬರಿಹೊಟ್ಟು!' ಎಂದು ಬಣ್ಣಿಸಬೇಕಾಗಿ ಬರುತ್ತದೆ.

ಚಂದ್ರಗುಪ್ತ

ಬರೆದವರು ಶ್ರೀ ಮಾ. ನಾ. ಚೌಡಪ್ಪನವರು. ಪ್ರಕಾಶಕರು ಚಿತ್ರಾ ಏಜೆನ್ಸೀಸ್, ೧೨೦ ಸುಲ್ತಾನಪೇಟೆ, ಬೆಂಗಳೂರು ನಗರ. ಪುಟ ೯೦ ಬೆಲೆ ರೂ. ೧

'ಚಂದ್ರಗುಪ್ತ' ವೆಂಬುದು ಹಿಂದುಸ್ತಾನದ ಸುಪ್ರಸಿದ್ಧ ಚಕ್ರವರ್ತಿಯಾದ ಚಂದ್ರಗುಪ್ತ ಮೌರ್ಯನ ಚರಿತ್ರೆಯನ್ನು ಬಳಸಿ ಬರೆದ ನಾಟಕ. 'ಸಂಸ್ಕೃತ'ದಲ್ಲಿ 'ಮುದ್ರಾರಾಕ್ಷಸ'ವೆಂಬ ಹೆಸರಿನಿಂದ ವಿಶಾಖದತ್ತನ ಕೃತಿಯು ಚಕ್ರವರ್ತಿಯಷ್ಟೇ ಪ್ರಸಿದ್ಧವಾಗಿ ಅವನ ಚರಿತ್ರೆಯನ್ನು ವಿವರಿಸುವ ಚಮತ್ಕಾರ ಪ್ರಧಾನವಾದ ನಾಟಕವಾಗಿ ಜಗತ್ತಿಗೆ ಪರಿಚಿತವಾಗಿದೆ ಅದರ ಗೌರವವನ್ನು ಕಾಯ್ದುಕೊಂಡು ಅದಕ್ಕೆ ವಿರೋಧವುಂಟಾಗದಂತೆ ಆಧುನಿಕ ರೀತಿಯಿಂದ ಪ್ರಸ್ತುತ ನಾಟಕವನ್ನು ರಚಿಸಲಾಗಿದೆ. 'ಮುದ್ರಾರಾಕ್ಷಸ'ವು ಸಂಸ್ಕೃತದಲ್ಲಿ ಹೇಗೆ ಅಭಿಜಾತವಾಙ್ಮಯವೆನಿಸಿದೆಯೋ ಅದೇ ರೀತಿಯಲ್ಲಿ ಸಾಗಿರುವ ಇದೂ ಕನ್ನಡದಲ್ಲಿ ಅಭಿಜಾತ (Classical) ವರ್ಗಕ್ಕೆ ಸೇರುವಂಥದಿದೆ. ಇಂತಹ ಕೃತಿಗಳಿಗೆ ಸದಾ ಸ್ವಾಗತವೆನ್ನುತ್ತೇವೆ.

ಕತೆಗಾರ್ತಿ

ಬರೆದವರು ವಿವಿಧ ಲೇಖಕರು ಪ್ರಕಾಶಕರು ಭಾಗ್ಯೋದಯ ಗ್ರಂಥಮಾಲೆ, ಕೇಂದ್ರ ಕಾರ್ಯಾಲಯ, ಗದ್ವಾಲ. ಪುಟ ೭೯ ಬೆಲೆ ರೂ. ೧।

'ಕತೆಗಾರ್ತಿ'ಯಲ್ಲಿ ಹತ್ತು ಕಥೆಗಳಿವೆ. ಮೊದಲನೆಯದಾದ 'ಕತೆಗಾರ್ತಿ'ಯ ಕತೆಗಾರ್ತಿ ಶ್ರೀ ಜಯಾ. ಇದರಲ್ಲಿ ಕಥಾನಾಯಕ ನಾಯಿಕೆಯ ಹೆಸರಿನ ಮರೆಯಲ್ಲಿ ಲೇಖನ ಕಳುಹಿ, ಪ್ರಕಟಿಸಿ ಧನ್ಯವಾದ ಒಂದು ಲಘು ಚಿತ್ರವಿದೆ. 'ದಸರೆ' ಯಲ್ಲಿ ಕತೆಗಾರ ಪಂ. ಡಿ. ಎಂ. ಸೂಗವೀರಶರ್ಮರು ದಸರೆಯ ಕಾಲದಲ್ಲಿ ಬನ್ನಿ ಮುಡಿಯುವುದರ ವಿವರವನ್ನು ಕೊಟ್ಟಿದ್ದಾರೆ. 'ಬಾಡಿದ ಕುಸುಮ'ದಲ್ಲಿ ಒಬ್ಬಳು ತರುಣಿಯ ವೈರಾಗ್ಯದ ವರ್ಣನೆಯಿದೆ. 'ನನ್ನ ಮುತ್ತು' ಎಂಬುದರಲ್ಲಿ ಮುತ್ತುವಿನ ಮಾಹಾತ್ಮ್ಯದ ವರ್ಣನೆಯಿದೆ. 'ಸಾಹಿತಿಯ ಜೀವನ'ದಲ್ಲಿ ದರಿದ್ರ ಚಾರುದತ್ತನಾದ ಸಾಹಿತಿಯ ದಾರಿದ್ರ್ಯದ ಭೀಕರ ಚಿತ್ರವಿದೆ. 'ಸಾವೆಲ್ಲರೂ ಒಂದೆ' ಎಂಬುದರಲ್ಲಿ ಜಾತೀಯ ಐಕ್ಯದ ಭಾವನೆಯ ಹೊಳಹಿದೆ. 'ನನ್ನ ಟ್ವೀಡ್ ಕೋಟು' ಎಂಬುದರಲ್ಲಿ ದರಿದ್ರ ನಾರಾಯಣನೊಬ್ಬನ ಹೊಡತಿಯ ಪತಿಪ್ರೇಮವಿದೆ. 'ಪ್ರಿಯದರ್ಶಿಯ ಪ್ರಿಯದರ್ಶನ'ದಲ್ಲಿ ಅಶೋಕಚಕ್ರವರ್ತಿಯ ಪ್ರಣಯಪ್ರಕರಣದ ದುರಂತ ಚಿತ್ರವಿದೆ. 'ಸೊಸೆಯ ಕಾಲಗುಣ'ದಲ್ಲಿ ಸನಾತನಿಗಳ ಅಂಧವಿಶ್ವಾಸದ ಟೀಕೆಯಿದೆ. 'ಜೀವನಾಧಾರ'ದಲ್ಲಿ ಒಬ್ಬಳು ಜೀವನ ನಿರ್ವಹಣಕ್ಕಾಗಿ ಮಾಸ್ತರಿಕೆ ಮಾಡ ಹೋದ ಅಸಹಾಯ ಸ್ಥಿತಿಯ ವಿವರವಿದೆ.

ಈ ಕತೆಗಳೆಲ್ಲ ಲೇಖನಕಲೆಯಲ್ಲಿ ವಿದ್ಯಾರ್ಥಿ ದಶೆಯಲ್ಲಿರುವವರು ಬರೆದಂತಿವೆ. ಕಥಾಸೂತ್ರದ ಲಕ್ಷಣ, ಗುರಿ, ರಸ ದೃಷ್ಟಿಗಳು ಲೇಖಕರಲ್ಲಿ ಮಿತಪ್ರಮಾಣದಲ್ಲವೆ 'ಅಭ್ಯಾಸಕಾಗಿ ಬರೆದೀ ಕತೆಗಳ ಚ್ಯಾಗಿ ಸಭ್ಯರಿಗೆ ಕೆಲವೊಮ್ಮೆ ತತಿನೋಯಿಸುವವು' ಎಂದು ಹೇಳಲವಕಾಶವುಂಟಾಗದಂತೆ ಲೇಖಕರು ಮುಂದಿನ ಪ್ರಯತ್ನದಲ್ಲಿ ನೋಡಿಕೊಂಡರೊಳಿತು.

ತೊಟ್ಟಿಲು ತೂಗಿತು

ಬರೆದವರು ಶ್ರೀ ತ. ರಾ. ಸು. ಪ್ರಕಾಶಕರು ಪದ್ಮ ಪ್ರಕಟನಾಲಯ, ಹೈದರಾಬಾದು (ದಕ್ಷಿಣ) ಪುಟ ೭೪ ಬೆಲೆ ರೂ. ೧

ಮೇಲಿನ ಕಥಾಸಂಗ್ರಹದಲ್ಲಿ ೬ ಕಥೆಗಳಿವೆ. ಮೊದಲ 'ತೊಟ್ಟಿಲು ತೂಗಿತು' ಎಂಬುದರಲ್ಲಿ ಬಡತನದ ಭೀಕರ ದೃಶ್ಯದ ವರ್ಣನೆಯಿದೆ; ಗುಮಾಸ್ತನೊಬ್ಬನ ಕಾಮುಕತೆಯ ಚಿತ್ರವಿದೆ. 'ಲೂಸಿಯ ಪ್ರಯಾಣ'ದಲ್ಲಿ ಲೂಸಿಯ ಪಿತಾಮಹ ಪ್ರೇಮದ ದುರಂತ ಕಥೆಯಿದೆ. 'ಆ ದಿನದ ಬೇಟೆ'ಯಲ್ಲಿ ಪೋಲೀಸನ ಲಂಚಗುಳಿತನದ ವರ್ಣನೆಯಿದೆ. 'ಕಲಾವಿದ'ದಲ್ಲಿ ಕಲಾವಿದನ ದಾರಿದ್ರ್ಯದ ಚಿತ್ರವನ್ನು ಕೊಡಲಾಗಿದೆ. 'ಮಗ ಮನೆಗೆ ಬಂದ'ದಲ್ಲಿ ಮಿಲಿಟರಿಗೆ ಸೇರಿದವನ ಕರುಣಾಜನಕ ಜೀವನದ ವಿಸ್ತಾರವಿದೆ. 'ಹೆಣ್ಣು ಮಣ್ಣ'ನಲ್ಲಿ ಹೆಣ್ಣಿಗಾಗಿ ಮನೆ ಮಾರು ತಂದೆತಾಯಿ ಎಲ್ಲವನ್ನೂ ತ್ಯಜಿಸಿದ ಅವಿದ್ಧವೃತ್ತಾಂತವಿದೆ. ಒಟ್ಟಿನ ಮೇಲೆ ಕತೆಗಳು ಸಾಧಾರಣ ಚೆನ್ನಾಗಿವೆಯೆನ್ನಬಹುದು. ಆದುದರಿಂದ ಈ ಕಥಾಸಂಗ್ರಹಕ್ಕೆ ಸ್ವಾಗತ.

ಶಿವರಾತ್ರಿ

ಲೇಖಕರು:- ಗೋರೂರು ರಾಮಸ್ವಾಮಿ ಅಯ್ಯಂಗಾರರು. ಪ್ರಕಾಶಕರು- ಕಾವ್ಯಾಲಯ ಮೈಸೂರು. ಬೆಲೆ ರೂ. ೨-೪-೦ ಪುಟ ೧೫೪.

ಗೋರೂರು ಅವರು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಹೊಸಬರೇನೂ ಅಲ್ಲ. ಶಬ್ದ ಚಿತ್ರಗಳನ್ನು (pen pictures) ರೇಖಿಸುವಲ್ಲಿ ಅವರದು ಪಳಗಿದ ಕೈ; "ಹಳ್ಳಿಯ ಚಿತ್ರಗಳು" "ಗರುಡಗಂಬದ ದಾಸಯ್ಯ" ಮುಂತಾದ ಸಾಹಿತ್ಯ ಚಿತ್ರಗಳಿಂದ ಅವರು ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಒಂದು ಸ್ಥಾನವನ್ನು ಮಾಡಿಕೊಂಡಿರುವರೆಂದು ಹೇಳಲು ಅಡ್ಡಿ ಇಲ್ಲ. ಶಿವರಾತ್ರಿ ಎಂಬದೂ ಅದೇ ಕುಲಕ್ಕೆ ಸೇರಿದ್ದು. ಈ ಸಂಗ್ರಹದಲ್ಲಿ ಒಟ್ಟು ೧೨ ಚಿತ್ರಗಳು ಸೇರಿಸಲ್ಪಟ್ಟಿವೆ. "ಇಬ್ಬರು ಹೆಂಡಿರು" ಎಂಬ ಕಥೆಯಲ್ಲಿ ಆಸ್ತಿ ಬೆಳೆದಂತೆ ಆಸೆ ಬೆಳೆಯುವದು ಆಸೆ ಬೆಳೆದಂತೆ ಅವಿವೇಕ ಹೆಚ್ಚುಗುವದು; ಕಡೆಗೆ ಸುಖವೆಂದು ಭಾವಿಸಿದ್ದು ದುಃಖಾಂತಿಕವಾಗಿ ಪರಿಣಮಿಸುವದು ಎಂಬ ಮಾತನ್ನು ಉದಾಹರಿಸಿದ್ದಾರೆ. "ಹೆಂಡತಿ ಎಂಬುದನ್ನು ಮರೆತರೆ" "ರೋಡ ಎಂಜಿನ್" ಮುಂತಾದ ಕತೆಗಳಲ್ಲಿ ಮನೋವಿಶ್ಲೇಷಣ (Psycholojical analysis) ಕುಶಲತೆಯನ್ನು ತೋರಿಸಿದ್ದಾರೆ. ಗಂಡಹೆಂಡಿರಲ್ಲಿ ಸಂಕುಚಿತ ಮನೋವೃತ್ತಿಯಿಂದ ಶಾಶಂಕತೆಯು ತಲೆದೋರಿದಾಗ ವಿವೇಕದಿಂದ ಹೇಗೆ ತಿದ್ದಿಕೊಳ್ಳಬಹುದು, ವಿವೇಕವನ್ನು ಕಳಕೊಂಡರೆ ಸಂಸಾರ ಹೇಗೆ ಹಾಳಾಗುವದು ಎಂಬ ಮಾತನ್ನು ಬಲು ಸೊಗಸಾಗಿ ತೋರಿಸಿದ್ದಾರೆ. "ಬಿಸಿಲು ಗುದುರೆ"ಯಲ್ಲಿ ಗಂಡನ ಮನಸ್ಸು ಯುವತಿಯರ ಸಲುವಾಗಿ ವಯೋಮಾನಕ್ಕನುಸರಿಸಿ ಹೇಗೆ ಕುಣಿಯುವದು ಎಂಬುದನ್ನು ಕಾಣಬಹುದು. "ಕನ್ಯಾಕುಮಾರಿ"ಯಲ್ಲಿ ಮನಸ್ಸನ್ನು ಬಿಗಿಹಿಡಿಯುವ ಕಾರ್ಯದಲ್ಲಿ ಕೇವಲ ವೇದಾಂತ ವೈರಾಗ್ಯ ವಿಚಾರ ಸಾಲದು. ಈಶಕೃಪೆಬೇಕೆಂಬ ಮಾತನ್ನು ನಿರ್ದೇಶಿಸಿರುವರು.

ಒಂದನೆ ... ಸ್ವಲ್ಪ ಆಳವಾಗಿ ... ಹಿಂದಿನ ಭೂಮಿಕೆ ... ಮೊದಲನೆಯದೆಂದರೆ ... ಯವಾಗಿ ನೂರರಲ್ಲಿ ೯೯ ... ಳ್ಳವರಾಗಿಲ್ಲ. ಅಷ್ಟೆ ಯ... ಆಳವಾಗಿ ವಿಚಾರ ... ಸುವ ಪ್ರಯತ್ನ ... ಮೇಲೆ ಎಚ... ಇಲ್ಲೋ ... ಯಿ... ... ? ಇಂತಹ ... ದರ್ಜೆಯು ಇಳಿಮುಖವಾ... ಅಶ್ಚರ್ಯ ಪಡಬೇಕಾದದ್ದೇನೂ ಇಲ್ಲ. ಜಗತ್ತಿನಲ್ಲಿ ವ್ಯವಹಾರವು ಕಾರ್ಯ ಕಾರಣ ಸಂಬಂಧವುಳ್ಳದ್ದಾಗಿದೆ. ಈ ಇಳಿಮುಖದ ಕಾರಣಗಳನ್ನು ಕಂಡು ಹಿಡಿದು ಅವನ್ನು ತಿದ್ದಿಯಾಗಲಿ, ಇಲ್ಲದಂತೆಯಾಗಲಿ ಮಾಡಿದರೆ ಕಾರ್ಯದ ರೂಪವಾದರೂ ಬದಲಾಗುವದು. ಆದರೆ ಇಷ್ಟೆಲ್ಲ ಮಾಡುವವರಾರು? ಅದೇನು ಮಾಕಾಡಿ ಮಂದಿಯ ಮೇಲೆ ತಪ್ಪು ಹೊರಿಸುವಷ್ಟು ಸುಲಭವಾದ ಕೆಲಸವೇ? ಅದೂ ಹೋಗಲಿ. "ಶಿಕ್ಷಣ ಕೆಟ್ಟು ಹೋಗಿದೆ. ಹುಡುಗರು ಅಶಿಕ್ಷಿತರಾಗಿರುವರು" ಎಂಬ ಕೂಗು ಎಲ್ಲೆಡೆಯಲ್ಲಿಯೂ ಕೇಳಬರುತ್ತದಷ್ಟೆ. ಒಳ್ಳೇದು ನಾವು ಮಾಡುವದರ ಅರ್ಥವಾದರೂ ಎಷ್ಟು ಜನರಿಗಿರುವದು? "ಶಿಕ್ಷಣ" ವೆಂದರೇನು? ಅದು ಕೆಟ್ಟು ಹೋಗಿದೆಯೆಂದರೇನು? ಕೆಡುವ ಪೂರ್ವದಲ್ಲಿ ಅದು ಯಾವ ತರದ್ದಿತ್ತು? ನಮ್ಮ ಅಭಿಪ್ರಾಯದಂತೆ ಒಳ್ಳೆಯ ಶಿಕ್ಷಣವು ಹೇಗಿರಬೇಕು? ಎಂಬ ಮಾತುಗಳನ್ನು ವಿಚಾರ ಮಾಡಲು ಮನಸ್ಸುಳ್ಳವರು ಎಷ್ಟು ಜನರಿರುವರು? ಇದೇನು ಅಷ್ಟು ಸುಲಭದ ಕೆಲಸವಲ್ಲ. ಯಾಕೆಂದರೆ ವಿಚಾರ ಮಾಡುತ್ತ ಹೋದಂತೆ ಪ್ರಸಂಗ ಮೈ ಮೇಲೆ ಬರುವದು. ಅದರಿಂದ ಅಂತಹ ವಿಚಾರದ ಗೊಡವೆಗೆ ಯಾರೂ ಹೋಗುವದಿಲ್ಲ. ಈಗಿನ ಕಾಲದಲ್ಲಿ ಪಾಂಡಿತ್ಯ, ಮುಖಂಡತ್ವ ಸ್ಥಿತಿವಂತಿಕೆ, ಗೌರವಗಳನ್ನು ಪಡೆಯಲು ಅನೇಕಾನೇಕ ಸುಲಭತಮ ಉಪಾಯಗಳಿರಲು "ಶಿಕ್ಷಣ" — "ಮಕ್ಕಳ ಓದು" ಇಂತಹ ಗೊಡ್ಡು ಮಾತು ಯಾರಿಗೆ ಬೇಕು? ಅದರಿಂದ ಏನು ಲಾಭ? ವಿಚಾರ ಮಾಡದಿದ್ದಲ್ಲಿ ಆಗುವ ಹಾನಿಯಾದರೂ ಏನು? ಮೇಲಾಗಿ ಶಿಕ್ಷಣದ ಕೆಲಸ ಮಾಸ್ತರರದು. ಶಿಕ್ಷಣ ಸರಿಯಾಗಿಲ್ಲ ಹಾಗಾದರೆ "ಮಾಸ್ತರರನ್ನು ಹಿಡಿಕೊಳ್ಳಿರಿ" ಎಂದು ಹಿರಿಯರೂ ಹುಡುಗರೂ ಕೂಡಿಯೇ ಮಾಸ್ತರರನ್ನು ಬಯ್ಯಲು ಸುರುವು. "ಸೂಳೆಯ ಪಾಪ ಸನ್ಯಾಸಿ ಸುತ್ತ" ಅನ್ನುವಂತೆ ಬಡಮಾಸ್ತರನ ಗತಿಯಾಗಿರುವದು. ಶಿಕ್ಷಣ"ದ ಇಳಿಮುಖದ ಕಾರಣವನ್ನು ಹುಡುಕ ಹೋದಂತೆ ಅದರ ಜವಾಬದಾರಿಯು ಎಲ್ಲರ ತಲೆಯ ಮೇಲೆ ಗೂಗೆಯಂತೆ ಬಂದು ಕೂಡುವದು. ಅದಕ್ಕೆ ಅಂಜಿಯೇ ಯಾರೂ ಅದರ ವಿಚಾರ ಮಾಡುವದಿಲ್ಲ. ಸುಮ್ಮನೆ ಕಂಡ ಕಂಡವರ ಮೇಲೆ ಅದರ ಹೊಣೆಯನ್ನು ಹೊರಿಸುವದು ಸುಲಭ ಉಪಾಯ. ಅವರು ತಿರುಗಿ ಹಾತ್ತಿದರೆ "ಶಿಕ್ಷಕರ ಉದಾತ್ತ ವ್ಯವಸಾಯ" ದ ಮೇಲೆ ಸುದೀರ್ಘ ಉಪನ್ಯಾಸ ಹೊಡೆದು ಪಾರಾಗುವದು ಅದಕ್ಕೂ ಸುಲಭ. ರಾಜಕೀಯ ಮುಖಂಡರು ಧರ್ಮವು ಗಂಡಾಂತರದಲ್ಲಿದೆ" ಎಂದು ಹೇಳಿ ತಮ್ಮ ಕೀಳು ಸ್ವಾರ್ಥವನ್ನು ಮುಚ್ಚಿಕೊಳ್ಳುವಂತೆ ಶಿಕ್ಷಣಕ್ಕೆ ಸಂಬಂಧಿಸಿದ ಜನರೆಲ್ಲ ಶಿಕ್ಷಕನನ್ನು ಬಯ್ದು ತಮ್ಮ ಬೇಜವಾಬ್ದಾರಿಯನ್ನು ಮುಚ್ಚಿಕೊಳ್ಳುವರು.

ಈ ಮನೋವೃತ್ತಿಯನ್ನು ಭೇದಿಸಿ ಒಳಹೊಕ್ಕು ನೋಡಿದರೆ ಅದರ ಕಾರಣವು ಗೊತ್ತಾಗುವದು— ಭಯ! ತಪ್ಪು. ತಮ್ಮ ಮೈಮೇಲೆಯೇ ಬರುವದೆಂಬ ಅಂಜಿಕೆ, ತಪ್ಪು ಒಪ್ಪಾಗುವಂತೆ ತಿದ್ದಿಕೊಳ್ಳ ಬೇಕಾದ ಮನೋಧೈರ್ಯದ ಅಭಾವ—ಹೇಡಿತನ! ಇದಕ್ಕೇ ಹೊಣೆಗೇಡಿತನವೆನ್ನುವರು. ಇದೇ ಜಗತ್ತಿನಲ್ಲಿ ಎಲ್ಲ ಅನರ್ಥಕ್ಕೂ ಕಾರಣ, ಈ ಮನೋವೃತ್ತಿಯನ್ನು ಓರ್ವ ಸಂಸ್ಕೃತ ಕವಿಯು ಮನೋಹರವಾಗಿ ಸಾರ ಭೂತವಾಗಿ ಹೇಳಿರುವನು.

"ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂನೇಚ್ಛಂತಿ ಮಾನವಾಃ। ನ ಪಾಪ ಫಲಮಿಚ್ಛಂತಿ ಪಾಪಂ ಕುರ್ವಂತಿ ಯತ್ನತಃ॥

ಪುಣ್ಯ ಬೇಡ; ಪುಣ್ಯದ ಫಲಮಾತ್ರಬೇಕು. ಪಾಪದ ಫಲವು ಎಂದಿಗೂಬೇಡ! ಆದರೆ ಮಾಡುವದೆಲ್ಲ ಪಾಪವೇ!

ಇವು ಚಿತ್ರಗಳ ವೈಶಿಷ್ಟ್ಯವೆಂದರೇಮ್ಮದುಹಾಸ್ಯ ಸೂಕ್ಷ್ಮವಾದ ಹಾಸ್ಯ. ಒಟ್ಟಿನಲ್ಲಿ ಎಲ್ಲರೂ ಅವಶ್ಯವಾಗಿ ಓದಿ ನಲಿಯಬೇಕಾದ ಪುಸ್ತಕ.

Reg. No. B. 3148

LICENCE No. 3
Licenced to Post without Prepayment

KARMVEER 27-10-47



ಜ್ಯೋತಿಷಿ:— ಸ್ವಪ್ನಶಾಸ್ತ್ರಿ ಭಿಡೆ, ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ

ಆಕ್ಟೋಬರ ೨೭ ರಿಂದ ನವಂಬರ ೨ ರ ವರೆಗೆ

ಮೇಷ

ಪ್ರಕೃತಿಗೆ ಪ್ರಮಾಣಶೀರತನ್ನ ಯೋಗ್ಯ. ಆದರೆ ಪ್ರಾರ… ವ್ರಕ್ಷ ಬತರಿಗೆ ಕಾಯಿಲೆ, ಸ್ತ್ರೀಸುಖ … ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೆ. ಅಂತೊತರ್ವವರಲ್ಲಿ ಅಕ್ಕತಿ ಮತ್ತು ಶಿವ್ನಗೂಡ ಅವರ ವಿಶೇಷ ತಲೆಯಿಂದ ವರ್ತನೆ. ಉದ್ಯೋಗದಲ್ಲಿ ಪ್ರಗತಿ ಸಾಧಾರಣ ಲಾಭ ಅಷ್ಟಕ್ಕಷ್ಟೆ ಆದರೆ ಪ್ರತಿಷ್ಠೆ ಉತ್ತಮ. ಮಿತ್ರರಲ್ಲಿ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಅಶ್ವಿನಿಯ ಕೊನೆಯ ೪ ಮತ್ತು ಭರಣಿಯ ೧ನೇ ಚರಣಕ್ಕೆ ತೊಂದರೆಯಿಂದಲೆ ಯುಶಸ್ಸು. ತಾ. ೨೯, ೩೦, ೨ ಅನುಕೂಲ.

ವೃಷಭ

ಪ್ರಕೃತಿ ಬಹಳ ಕೆಡುವದು. ಹೆಂಡತಿಗೂಡ ಮೇಲಿಂದ ಮೇಲೆ ವಿರೋಧ. ಮಕ್ಕಳಿಂದ ಮನಸ್ಸಿಗೆ ಖಾರದಂತಹ ತಕ್ಕತೆ. ಅವರಂತೆಯೇ ಮಾತಿಯಲ್ಲಿಯು ಪ್ರತಿಯೊಬ್ಬರು ಒಬ್ಬೊಬ್ಬರಲ್ಲಿಯು ತಪ್ಪು ತೆಗೆಯುವದರಲ್ಲಿ ತತ್ಪರ. ಮಿತ್ರ ಸುಖ ಉತ್ತಮ. ಉದ್ಯೋಗದಲ್ಲಿ ಎಲ್ಲಬಗೆಯು ಉನ್ನತಿ ಆದರೆ ಸುಪ್ತ ಶತ್ರುಗಳ ತೊಂದರೆಯು ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಹೆಂಡತಿಯು ಬಂಧುಗಳಿಗೆ ಕ್ಲೇಶ. ಪತ್ರವ್ಯವಹಾರ ಕಳ್ಳೆ, ಭೆಟ್ಟಿ ಮತ್ತು ಪ್ರವಾಸ ಮಧ್ಯಮ ಅನುಕೂಲ. ರೋಹಿಣಿಯು ಕೊನೆಯ ೪ ಮತ್ತು ಮೃಗದ ೧ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೨೮, ೨೯, ೧. ಅನುಕೂಲ.

ಮಿಥುನ

ತಿಮ್ಮ ಪ್ರಕೃತಿ ಉತ್ತಮ. ಆದರೆ ಹೆಂಡತಿಗೆ ಕಾಯಿಲೆ ಆತ್ತ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಅತ್ಯಂತ ತೊಂದರೆ ಯಿಸುವು. ಮಕ್ಕಳ ಮೊರತು ಉಳಿದವರೆಲ್ಲರೂ ದಿನದಿನವೂ ಮನಸ್ಸಿಗೆ ಬಂಡಂಕೆ ವರ್ತಿಸಹತ್ತುವರು ಮತ್ತು ಉಪ ನ್ಯಾಸ ಛಡಸುವರು. ಮಾತಯಲ್ಲಿಯು ಒಬ್ಬರು ಕೆಲ ಚತ್ತುಗಳ ಅಭದಾತಶಾ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಮಾನ್ಯ. ಸಾಲ ತೆಗೆದು ಉಪ್ಯಮವುಟುವ ಕೆಲ ಅಪರಿಹಾರ್ಯ ಪಟ್ಟ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವಿಕೆ. ಮಿತ್ರರಲ್ಲಿ ಕ್ಲೇಶ ಇಲ್ಲವೆ ತಿಮ್ಮ ತಿಮ್ಮಲ್ಲಿ ವಿರೋಧ. ಪ್ರವಾಸ ಮತ್ತು ಭೆಟ್ಟಿ ತೊಂದರೆಯುದು ಆದರೆ ಪತ್ರವ್ಯವಹಾರ ಅನುಕೂಲ. ಆರಿದ್ರೆಯು ಕೊನೆಯ ೪ ಮತ್ತು ಪುನರ್ವಸುವಿನ ೧ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೨೮, ೨೯, ೩೧ ಅನುಕೂಲ.

ಕರ್ಕ

ಪ್ರಕೃತಿ ಅನುಕೂಲ. ಪ್ರಾಪಂಚಿಕ ಸುಖ ಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ವೆಚ್ಚವೂ ಬಹಳ. ಮನಸ್ಸಿನ ವಿರುದ್ಧ ನಡೆಯಬೇಕಾದ ಪ್ರಸಂಗ. ದೇವಧರ್ಮದ ಕೆಲ ಕೃತ್ಯಗಳು. ಸ್ತ್ರೀವರದಲ್ಲಿ ಕೆಲ ವೆಚ್ಚಳ ವಾಹನ ಸುಖದ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ. ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಬಹಳ ದೂರದ್ದು ಮತ್ತು ಸುಖದ್ದು. ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಪುಷ್ಯದ ಕೊನೆಯ ೪ ಮತ್ತು ಆಶ್ಲೇಷಾದ ೧ನೇ ಚರಣಕ್ಕೆ ತೊಂದರೆಯಿಂದಲೆ ಯುಶಸ್ಸು. ತಾ. ೨೮, ೨೯, ೩೧, ೩೦ ಅನುಕೂಲ.

ಸಿಂಹ

ಪ್ರಕೃತಿ ಅನುಕೂಲ ಪ್ರಾಪಂಚಿಕ ಸುಖ ಮನಸ್ಸಿನಂತೆ. ಆದರೆ ಹೆಂಡತಿಯು ವರ್ತನ ಬಹಳ. ಮನಸ್ಸಿನ ವಿರುದ್ಧ ಅತ್ತರು ತಿಮ್ಮ ಹಿಂದೆಯುಸ್ಸು ತಿರಸ್ಕಾರವಾಗಿ ಮಾಡುವರು ಮತ್ತು ಚೇಷ್ಟೆ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಬಹಳ ಕಡಿಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಸ್ಥಿರವಾಗಿ ಉಳಿಯುವಂತಹದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅಪಯಶಸ್ಸು ಅಲ್ಲದೆ ಶತ್ರುಗಳು ಗುಪ್ತರೀತಿಯಿಂದ ಬಹಳ ತೊಂದರೆ ಕೊಡುವರು. ಪ್ರವಾಸ ತೊಂದರೆಯುದು ಮತ್ತು ಸುಖಕಾರಕ, ಭೆಟ್ಟಿಯು ಕೆಲತ ಸ್ವಲ್ಪ ವಿರಸ ಮತ್ತು ವಿಲಂಬ ತೋರಿಸುವಂತಹದು. ಆದರೆ ಪತ್ರವ್ಯವಹಾರ ಉತ್ತಮ. ಮಘಾದ ಕೊನೆಯ ೪ ಮತ್ತು ಪೂರ್ವಾದ ೧ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೨೯, ೩೦, ೨ ಅನುಕೂಲ.

ಕನ್ಯಾ

ಪ್ರಕೃತಿ ಉತ್ತಮ. ಹೆಂಡತಿಗೂಡ ಸ್ವಲ್ಪ ಕಲಹ ಆದರೆ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ. ಆದರೆ ಮನಿಷ್ಕರ ಇಲ್ಲದ ಅತ್ರಯಂಜಾತರು ದುಃಖದ ಇರುವಂತ ವಾಕ್ಯ ವ್ಯವಹಾರ ನಡಸುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಮಿತ್ರರಲ್ಲಿ ಒಬ್ಬರ ಉನ್ನತಿ ಆದರೆ ಮನಿಷ್ಕರ ಅವನತಿ. ಒಂದೇ ಕಾರಣದಿಂದ ಆಗುವ ವಿಶ್ವಯು ಕಾರಕ ಪ್ರಸಂಗ. ಗತಿಸಿದ ಚಕ್ಕ್ಯಗಳಲ್ಲಿ ಮತ್ತೆ ಒಂದು ಚಕ್ಕ್ಯ ಪ್ರಾಪ್ತವಾಗುವದು. ಪ್ರವಾಸಾದಿ ಕೆಲಸ ಹಿತಸ್ಸು: ಹಸ್ತಾದ ಕೊನೆಯ ೪ ಮತ್ತು ಚಿತ್ರಾದ ಮೊದ ಅನೆಯ ಚರಣಕ್ಕೆ ಹೆಚ್ಚು ಅನುಕೂಲ. ತಾ. ೨೭, ೨೮, ೩೦, ೧ ಅನುಕೂಲ.

ತುಲಾ

ಪ್ರಕೃತಿ ಉತ್ತಮ ಆದರೆ ಹೆಂಡತಿ ಮತ್ತು ಮಕ್ಕಳು ಚಳತವಿಕಾಸ್ಯ ಆಗುವರು. ಪ್ರಿಯು ಅಸ್ತರ ನಡೆವಾಸ. ಸ್ವಪ್ನ ಭಾವೀಸೂಚಕ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ಅವುಗಳ ಭಾವೀ ಕಾಶ್ಯಕ ಸಾತಿ ಮತ್ತು ಬಹಳ ಶಂಕಿತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಸ್ವಾತಿಯು ಕೊನೆಯ ೩ ಮತ್ತು ವಿಶಾಖಾದ ಮೊದ ಲನೆ ಚರಣಕ್ಕೆ ತೊಂದರೆ ಕಡಮೆ. ತಾ. ೨೯, ೩೦, ೨ ಅನುಕೂಲ.

ವೃಶ್ಚಿಕ

ತಿಮ್ಮ ಪ್ರಕೃತಿ ಅನುಕೂಲ. ಮಕ್ಕಳದು ವಿಶೇಷ ಉತ್ತಮ ಆದರೆ ಹೆಂಡತಿಯು ಆರೋಗ್ಯ ಮಾತ್ರ ಖರೆ ಇಲ್ಲವೆ ಸುಳ್ಳುಕಲ್ಪನೆಯಿಂದ ಕಿಂಚಿತಕೆಡುವದು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಬಹಳ ಹಾನಿ. ಉದ್ಯೋಗದಲ್ಲಿ ಪ್ರಗತಿ ಅನುಕೂಲ ಆದರೆ ಪ್ರತಿಷ್ಠೆ ಮತ್ತು ಲಾಭ ಕಡಮೆ. ತಿರ್ಥಕ ಬಹಳ ವೆಚ್ಚ. ಪ್ರವಾಸಾದಿ ಕೆಲಸ ತೊಂದರೆಯುದು. ಅನುರಾಧೆಯು ಕೊನೆಯ ೪ ಮತ್ತು ಜೇಷ್ಠಾದ ೧ ನೇ ಚರಣಕ್ಕೆ ತೊಂದರೆ ತಾ. ೨೭, ೨೮, ೩೦, ೧ ಅನುಕೂಲ.

ಧನು

ಪ್ರಕೃತಿ ಮತ್ತು ಪ್ರಾಪಂಚಿಕ ಸುಖಸಾಧಾರಣವೇ ಆದರೆ ಸ್ತ್ರೀ ಸುಖ ಉತ್ತಮ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಒಂದಕ್ಕಿಂತ ಒಂದು ಬೆಳೆಯುವ ಪ್ರಮಾಣ ದಲ್ಲಿ. ಆದರೆ ಕೆಲವೊಂದು ಮಾತಿನ ಉರ್ಜೆಗಾಗಿ ಬಹಳ ವೆಚ್ಚ ಸ್ವಲ್ಪ ಅವಚಿತ ಲಾಭದ ಸಂಭವ ಬಹಳ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರಸುಖ ಉತ್ತಮ. ಪ್ರವಾಸಾದಿ ಕೆಲಸ ಹಿತದ್ದು. ಮೂಲಾದ ಕೊನೆಯ ೪ ಮತ್ತು ಪೂರ್ವಾಷಾಢಾದ ೧ ನೆ ಚರಣಕ್ಕೆ ತೊಂದರೆಯಿಂದಲೆ ಯುಶಸ್ಸು. ತಾ. ೨೮, ೨೯, ೩೦, ೨ ಅನುಕೂಲ.

ಮಕರ

ಪ್ರಕೃತಿ ಸಾಧಾರಣವೆ ಹೆಂಡತಿ ಮತ್ತು ಮಕ್ಕಳಿಗೆ ಕಿರ ಕಳ ಕ್ಲೇಶ ಆದರೆ ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮವೆ ಮತ್ತು ಪ್ರತಿಷ್ಠೆ ಮಾತ್ರ ಉಚ್ಚಾಂಕವನ್ನು ಮುಟ್ಟುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಆದರೆ ಪ್ರತಿಸ್ಪರ್ಧಿಗಳಿಂದ ಮೋರಿಯು ಮೇಲೆಯು ವಾಗ್ವಾದದ ಇಲ್ಲವೆ ಕೈಗೆ ಕೈ ಹತ್ತುವ ಪ್ರಸಂ ಗದ ಸಂಭವ ಪ್ರವಾಸಾದಿ ಕೆಲಸ ಹಿತದ್ದು. ಶ್ರವಣಾದ ಕೊನೆಯ ೪ ಮತ್ತು ಧನಿಷ್ಠಾದ ೧ ನೇ ಚರಣಕ್ಕೆ ಹೆಚ್ಚು ಅನುಕೂಲ. ತಾ. ೨೭, ೨೮, ೧ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ ಪ್ರಾಪಂಚಿಕ ಸುಖ ಅನುಕೂಲ. ಮಕ್ಕಳು ಮತ್ತು ಹೆಂಡತಿಯು ಕಡೆಯಿಂದ ಹಿತವರ್ಧಕ ಅನೇಕ ಮಾತುಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಒಳ್ಳೆ ಯುಶಸ್ಸು. ಮಿತ್ರಸುಖ ಅನುಕೂಲ. ಪ್ರವಾ ಸಾದಿ ಕೆಲಸ ಹಿತದ್ದು. ಶತತಾರಿಕೆಯು ಕೊನೆಯ ೪ ಮತ್ತು ಪೂರ್ವಾಭಾದ್ರಪದದ ೧ ನೇ ಚರಣಕ್ಕೆ ತೊಂದರೆ ಯಿಂದಲೆ ಯುಶಸ್ಸು. ತಾ. ೨೭, ೨೮, ೨೯, ೩೦ ಅನು ಕೂಲ.

ಮೀನ

ಪ್ರಕೃತಿ ಉತ್ತಮ ಸ್ತ್ರೀ ಸುಖ ಅನುಕೂಲ. ಆದರೆ ಮಕ್ಕಳಲ್ಲಿ ಒಬ್ಬರಿಂದ ಪ್ರಮಾದದ ಕೆಲ ಸಂಗತಿಗಳು ಸಂಭ ವಿಸುವದರಿಂದ ಬಹಳ ಮನಸ್ತಾಪ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮಿತ್ರಸುಖ ಉತ್ತಮ. ಕೆಲ ಕೆಲಸಗಳಲ್ಲಿ ಇವ್ಯಾದಿ ವೆಚ್ಚ. ಪರಸ್ತ್ರೀ ಬಗ್ಗೆ ಕುಬುದ್ಧಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸ ಮತ್ತು ಪತ್ರ ವ್ಯವಹಾರಕ್ಕಿಂತ ಭೆಟ್ಟಿಯು ಕೆಲಸ ಉತ್ತಮ ಉತ್ತರಾ ಭಾದ್ರಪದದ ಕೊನೆಯ ೪ ಮತ್ತು ರೇವತಿಯು ೧ ನೇ ಚರಣಕ್ಕೆ ತೊಂದರೆಯಿಂದಲೆ ಯುಶಸ್ಸು ತಾ. ೨೭, ೨೮, ೨೯, ೩೦ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ— ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣ ಟ್ರಸ್ಟ್' ದ ಪರವಾಗಿ ಹ. ರಾ. ಪೋಹರೆಯವ ರಿಂದ ಮುದ್ರಿತವಾಗಿ ಪ್ರಕಟವಾಯಿತು.

ಈ ವಾರದ ಕತೆ

[೨ನೇ ಪುಟದಿಂದ]

"ಥೊಕ್ಕ! ಇಲ್ಲ ಇವು ಬರಿ ಪಾಸುಗಳು"

"ಇವನ ಕೈಯಲ್ಲಿ ಹಣವನ್ನು ಕೊಡುವದು ಯೋಗ್ಯವಲ್ಲ. ಜೂಜಿಗೆ ಹಾಕಿ ಹಾಳುಮಾಡು ತ್ತಾನೆ."

"ಹೀಗೊ, ಸರಿ. ಹಾಗಾದರೆ ಇವನು ಇವನ್ನು ಮಾರಲೂ ಬಹುದು. ಬುಧವಾರದ ವರೆಗೆ ನಾವೇ ಇಟ್ಟುಕೊಳ್ಳುವೆವು" ಆಹ್‌ಲಂ ಮಾತನಾಡಲಿಲ್ಲ. ತನ್ನ ಕೊರತೆಯನ್ನು ಒಪ್ಪಿಕೊಂಡು ನಮಸ್ಕರಿಸಿದ. ಉಪಕಾರಕ್ಕೆ ಅವರೆದುರು ಕೃತಜ್ಞತೆಯ ಮಳೆಗ ರೆಯಲಿಲ್ಲ. ನೀವು ಬಹಳ ಒಳ್ಳೆಯವರು ಎಂದ ನಿಷ್ಟೇ. ಅವನ ಮುಖ ಕಲ್ಲಿನ ಮೂರ್ತಿಯಂತೆ ನಿರ್ವಿಕಾರವಾಗಿತ್ತು. ಮುಖವು ನಿರ್ವಿಕಸಿತವಾಗಿ ದ್ದರೂ ಅದರ ಹಿಂದೆ ಭಾವನೆಗಳ ಉಕ್ಕು ಎಷ್ಟೆಂ ಬುದು ಫಾನಿಗೆ ಚೆನ್ನಾಗಿ ಗೊತ್ತಾಗುತ್ತಿತ್ತು. ಅವನ ದೂರದೃಷ್ಟಿಯನ್ನು ನೋಡುತ್ತಿರುವಂತಿ ರುವ ಕಣ್ಣುಗಳು ಮತ್ತು ಅವಳ ಕಣ್ಣುಗಳು ಕೂಡಿದಾಗ, ಮಾತಿನಿಂದ ಅಥವಾ ಮುಖ ಚರ್ಯೆಯಿಂದ ತಿಳಿಯಲಸಾಧ್ಯವಾದ ಕೆಲವು ಸಂಗತಿಗಳು ಸಂಭವಿಸುತ್ತಿದ್ದವು. ಆತ ಮನೆಗೆ ಹೊರಟದ್ದ-ಕಟ್ಟಕಡೆಗೊಮ್ಮೆ ಮನೆಗೆ ಹೊರಟಿದ್ದ.

ಆದಿನ ಸಂಜೆ ಸುದ್ದಿಯು ಸುತ್ತಲೂ ಹಸರಿ ಸಿತು. ಕಳಲೂಟದ ಕರೆಗಳಿಗೆ ಎಣೆಕೆಯೇ ಇರ ಲಿಲ್ಲ. ಕೆಲವು ದಿನ ಆಹ್‌ಲಂನು ಎಷ್ಟೋ ಟೇಬ ಲ್ಲುಗಳು ಮಧ್ಯೆ ಅಲಂಕರಿಸಿದನೋ! ಎಲ್ಲರ ಬಾಯಲ್ಲೂ ಅವನ ಮಾತೇಮಾತು. ಚಹದ ಅಂಗಡಿಯ ಬೀದಿಯಲ್ಲಿ ಜನರು ಹೋಗಿ ಬರು ವದು ಇದ್ದೇಇತ್ತು. ಬುಧವಾರ ಸಂಜೆ, ಅವನು ಟ್ರೇನಿನಿಂದ ಟಿಲ್‌ಬರಿಗೆ ಹೋಗುವ ದಿನದವರೆಗೂ ಅವನಿಗೆ ಕಳವೂಟದ ಕರೆಗಳು ಇದ್ದೇ ಇದ್ದವು. ಅವನು ಹೊರಡುವ ಮುನ್ನ ಒಂದು ತಾಸು ಆ ಬೀದಿಯಲ್ಲಿ ಜನರು ತುಂಬಿದ್ದರು. ಚಹದ ಅಂಗ ಡಿಯ ಬಾಗಿಲನ್ನು ಮುಟ್ಟುವದೇ ಅಸಾಧ್ಯವಾ ಗಿತ್ತು. ಫಾನಿ ಅಲ್ಲಿಯೇ ಇದ್ದಳು. ಅವಳ ತಂದೆ ಮೇಲಧಿಕಾರಿಗಳು ಮತ್ತು ಅವರ ಮೂವರು ಗೆಳೆಯರು, ಬಹಳ ಹೆಸರಾದ ಈ ಹಳ್ಳಿಗ ಕೊಂಪೆ ಯನ್ನು ನೋಡಲು ಬಂದಿದ್ದರು. ರೈಲುಗಳು ಸೀಳು ಹಾಕುತ್ತಿದ್ದವು. ಒಂದು ಚಕ್ಕಡಿಯು ಆ ಜನಸಂದಣಿಯನ್ನು ಸೂಕುತ್ತ ಬಂದಿತು. ಕಾಂಗ ಲಿಯು ಇನ್ನೂ ತನ್ನ ರಾಜಕೀಯ ಉಡುಪನ್ನೇ ಧರಿಸಿ ತನ್ನ ಕಿಟಕಿಯಲ್ಲಿ ಏನನ್ನೋ ಶೂನ್ಯ ಮನಸ್ಸಿನಿಂದ ನೋಡುತ್ತಿದ್ದ. ಯಾವನೋ ಒಬ್ಬ ನಡುವೆಯೇ ಆಹ್‌ಲಂನ ಹಾಡನ್ನು ಹಾಡುತ್ತ ಅವನ ದನಿಯನ್ನೇ ಅನುಕರಿಸಲು ಪ್ರಯತ್ನಿಸಿದ.

ಅಮೇಲೆ ನಮ್ಮ ಕಥಾನಾಯಕ ಪಾವಟಿಣಿಗೆಗ ಳನ್ನು ಇಳಿದು ನಿಂತ. ತನ್ನ ಪ್ರವಾಸದ ಪದಾರ್ಥ ಗಳನ್ನೆಲ್ಲ ಒಂದು ಸಣ್ಣ ಚೀಲದಲ್ಲಿ ಹಾಕಿ ಅದನ್ನು ಭುಜಕ್ಕೆ ತೂಗು ಹಾಕಿದ್ದನು. ಅವನ ಹಿಂದಿನಿಂ ದಲೇ ಹಿಂಗಪೂ ಬಂದ. ಇಬ್ಬರೂ ಬೀಳ್ಕೊಡುವ ರೀತಿಯಲ್ಲಿ ತಲೆಯಲ್ಲಾಡಿಸಿದರು. ಆಹ್‌ಲಂ ಜನರ ಕಡೆಗೊಮ್ಮೆ ದೃಷ್ಟಿ ಹಸರಿಸಿದ ಆ ಮೇಲೆ ಅಂಗಡಿಗಳ ಕಡೆಗೆ-ಚಪ್ಪರಗಳ ಕಡೆಗೆ ನೋಡಿ ಅದನ್ನು ಬೀಳ್ಕೊಟ್ಟನು. ಮೇಲಧಿಕಾರಿಗಳು ಕಾಗದಗಳನ್ನು ಅವನಿಗೆ ಕೊಟ್ಟರು. ಆಹ್‌ಲಂ ಬಾಗಿ ನಮಸ್ಕರಿಸಿ "ಇದು ನಿಮ್ಮ ಕೃಪೆ. ಬಹಳ ಉಪಕಾರ ಮಾಡಿದ್ದೀರಿ" ಎಂದು ಕಾಗದಗಳನ್ನು ಜೇಬಿನಲ್ಲಿ ಸಿಕ್ಕಿಸಿದ. "ಕ್ಷಮಿಸಿರಿ ಈಗ ಒಂದು ನಿಮಿಷದಲ್ಲಿ ನನ್ನ ಒಬ್ಬ ಗೆಳೆಯನಿಗೆ ಭೆಟ್ಟಿ ಕೊಟ್ಟು ಬರುವೆನು" ಎಂದು ಹೇಳಿ ಜನಸಂದಣಿಯನ್ನು ಸರಿಸಿ ಏನೇನೊ ಗುಣಿಗುಣಿಸುತ್ತ ಅಂಗಡಿ ಹೊಕ್ಕ. ಜನರು ಮತ್ತೆ ತಮ್ಮತಮ್ಮೊಳಗೆ ಮಾತ ನಾಡಹತ್ತಿದರು. ಫಾನಿ ಮತ್ತು ಅವಳ ತಂದೆ ಚಹದ ಅಂಗಡಿಯ ಒಳಭಾಗವನ್ನು ಸುತ್ತಲಿನ ಅಂಗಡಿಗಳನ್ನು ತೋರಿಸಿದರು. ಅಮೇಲೆ ಮೇಲ ಧಿಕಾರಿ ತನ್ನ ಗಡಿಯಾರದ ಕಡೆಗೆ ನೋಡಿ "ಇವನು ಗಡಿಬಿಡಿ ಮಾಡದಿದ್ದರೆ, ರೈಲು ಸಿಗು ವದು ಅಸಾಧ್ಯ. ಯಾರಾದರೂ ಹೋಗಿ ಅವ ನನ್ನು ಕರೆದು ತನ್ನಿ" ಫಾನಿಯು ತಂದೆ ಕಾಂಗ ಲಿಯ ಅಂಗಡಿಯ ಕಡೆಗೆ ಧಾವಿಸಿದ. ಅಲ್ಲಿ ಕಾಂ ಗಲಿಯೊಬ್ಬನೇ ಇದ್ದನು. "ಎಲ್ಲಿದ್ದಾನವ? ಅವನೀಗ ಹೊರಡದಿದ್ದರೆ ರೈಲು ತಪ್ಪುತ್ತದೆ. ಏನುಮಾಡುತ್ತಿದ್ದಾನವ? ಹುಚ್ಚ ಈಗ ಸಂಗೀತ ಶುರುಮಾಡಿಲ್ಲ ಸ್ಟೆ?"

"ನಾನು ನೋಡುವೆ" ಕಾಂಗಲಿಯು ತನ್ನ ಸ್ಟೂಲಮೇಲಿಂದ ಎದ್ದು ಹಿಂಬಡಿಯ ಖೋಲಿಗೆ ಹೋದ. "ಇಲ್ಲಿಯೇ ಇದ್ದಾನೆ!" "ಏನದು ಮಾಡುತ್ತಿರುವದು?" "ನೋಡಿಬನ್ನಿ" ವ… ವರು ಹೊಸಬರು ಮತ್ತು ಫಾನಿಯು ಏನೋ ವಿಚಿತ್ರ ವಿರಬಹುದೆಂದು ನೋಡಬಂದರು. ಕಾಂಗಲಿಯು ಬಾಗಿ,ಒಮ್ಮೆಲೇ ಎದ್ದು, "ಇವನು ಸತ್ತಿದ್ದಾನೆ." ಅವರು ಹೇಳಿದರು- "ಇವನು ಸತ್ತ" ಎಂದು ಅವರೂ ಅರ್ಥ ಮುಗಿದ ವಾಕ್ಯಗಳನ್ನೇ ಹೇಳಹ ತ್ತಿದರು.

"ಆದರೆ… ಏನು…?" "ಹಾಗೇಕೆ……?" "ಏನದು ಅವನನ್ನು…?" "ಯಾರಾದರೂ ಹೀಗೆ…!" "ಎಂಥ ರಾಕ್ಷಸೀ-ಕೃ…!" ಎಲ್ಲರೂ ಕಾಂಗಲಿಯ ಕಡೆಗೆ ತಿರುಗಿದರು. ಮೇಲಧಿಕಾರಿ ಗಳು ಉದ್ಗಾರವನ್ನು ತೆಗೆದರು "ನಾವಿಷ್ಟು ಉಪ ಕಾರ ಮಾಡಿದಾಗ್ಯೂ ಹೀಗೇಕೆ ಮಾಡಿದೆ?"

"ಮಹಾಸ್ವಾಮಿ ಅದಕ್ಕೆ ನೀವೇ ಕಾರಣರು"

"ನಾವೇ?"

"ಹೌದು. ನನಗೆ ಈಗಲೇ ಆತ ಹೇಳಿದ್ದ. ನೀವು ಅವನಿಗೆ ವಿಪರೀತ ಕರುಣೆಯನ್ನು ತೋರಿ ದಿರಿ ಎಂದು."

"ಮನೆಗೆ ಕಳಿಸಬೇಕೆಂದು ಇಷ್ಟೆಲ್ಲ ಕಷ್ಟಪಟ್ಟೆ ವಲ್ಲ! ನನಗೇನೂ ತಿಳಿಯದು."

"ಇದು ಸ್ಪಷ್ಟವಿದೆ. ಅವನಿಗೆ ಮನೆಯೇ ಇಲ್ಲ. ಹುಟ್ಟಾ ಚೀನವನ್ನು ನೋಡಿಲ್ಲ, ಅವನು ಹುಟ್ಟಿದ್ದು ಇಲ್ಲಿಯೇ-ಸ್ಟೆಪ್‌ನೀಯಲ್ಲಿ. ಅವನು ಇಂಗ್ಲಂಡ ಪ್ರೀತಿಸಿದ, ಲಂಡನ ಪ್ರೀತಿಸಿದ. ನೀವು ಪರದೇಶಕ್ಕೆ ಚೀನಕ್ಕೆ ಕಳಿಸುವಿರೆಂದು ಗಾಬರಿಪಟ್ಟ ಅಲ್ಲಿ ಅವನಿಗೆ ಮನೆ ಇಲ್ಲ, ಮಾರಿಲ್ಲ, ಗೆಳೆಯರಿಲ್ಲ, ದಾರಿಗೊತ್ತಿಲ್ಲ, ಓಡಿಹೋಗಬೇಕೆಂದು ಪ್ರಯತ್ನಿ ಸಿದ. ಆದರೆ…ಅವನು ಎಲ್ಲಿ ಮತ್ತು ಹೇಗೆ ಹೋಗಬೇಕು? ಚೀನಕ್ಕೆ ಹೋಗಲಾರ ಅದ್ದರಿಂ ದಲೆ ಸತ್ತ."

"ಆದರೆ ಅವನು ಸದಾ ಚೀನಕ್ಕೆ ಹೋಗಲು ತವಕ ಪಡುತ್ತಿದ್ದ. ಅದನ್ನೇ ಹಾಡುತ್ತಿದ್ದ. ಮನೆಗೆ ಹೋಗಲಾರೆನೆಂದು ದುಃಖಿಸುತ್ತಿದ್ದ."

"ಇಲ್ಲಿ ಅವನು ಯಾವಗಲೂ ಸುಖಿ ಇದ್ದ."

"ಹಾಗಾದರೆ ಅವನ ಹಾಡುಗಳಲ್ಲಿಯ ಚೀನದ ಮತ್ತು ಅವನ ಮನೆಯ ವಿಷಯಗಳೆಲ್ಲವೂ ಸುಳ್ಳೋ?"

"ಅಲ್ಲ ಸ್ವಾಮೀ, ಅವನೊಬ್ಬ ಕವಿ!"

(ಥಾಮಸ್ ಬರ್ಕನೆಂಬ ವಿಖ್ಯಾತ ಕತೆಗಾರನ ಕತೆಯನ್ನು ಆಧರಿಸಿ ಬರೆದುದು.)

ಸಾದರ ಸ್ವೀಕಾರ

೧. ಗಾಂಧಿವಾದ

ಲೇಖಕರು ವಿ. ಎಸ್. ನಾರಾಯಣರಾವ. ಪ್ರಕಾಶರು ವಿಚಾರ ಸಾಹಿತ್ಯ ಲಿಮಿಟೆಡ್ ಬೆಂಗ ಳೂರು. ಪುಟಗಳು ೧೪೦ ಬೆಲೆ ೧—೧೨—೦

೨. ಅಕ್ಷರವ ನೀವ್ ಕಲಿಯರಿ

ಲೇಖಕರು ದೇಶಹಳ್ಳಿ ಜಿ. ನಾರಾಯಣ ಪುಟಗಳು ೨೬ ಬೆಲೆ ೦—೩—೦

'ಸುಲಿದ ಬಾಳೆಯ ಹಣ್ಣಿನಂದದಿ'

ಎಂಬ ಕನ್ನಡದ ಸರಳತೆಯನ್ನು ತಮ್ಮ ಸರಸ ಶೈಲಿಯಿಂದ ಸರ್ವರಿಗೂ ತಿಳಿಸಲಾಗಿದೆ.

ಅಕ್ಷರಾಭ್ಯಾಸದ ಮಹತ್ವವನ್ನು ತೋರಿಸಿದ್ದಾರೆ. ಒಟ್ಟಿದಮು ಎಲ್ಲರೂ ಓದಿ ಅರಿಯತಕ್ಕ ಪುಸ್ತ ಕವಿದೆ. ಚಿಕ್ಕದಾದರೂ—ಚೊಕ್ಕಟವಾಗಿದೆ.

Hind kitabs Bombay

1. The Ayah and other Stories
By Gertrude Marry.
Pages 140 Price Rs. 2—0—0
2. Three Stories
By Humayan Kabir
Pages 80 Price Rs. 1—4—0
3. Gandhi Tagore and Nehru
By K. R. Kripalani
Pages 110 Price Rs. 1—8—0
4. Christian Prayer and Approach to Christian Mysticism.
By W. Q. Losh
Pages 60 Price Re. 1—0—0
5. Leaves in the August Wind.
By N. S. Phadke
Pages 180 Price Rs. 1—12—0
6. To High Kailas
By Will Quinlan
Pages 80 Price Rs. 1—12—0
7. On Education
By Mulk Raj Anand
Pages 60 Price Rs. 1—8—0
8. Frontier Speaks
By Mohammad Yunus.
Pages 210 Price Rs. 4—8—0